ಶುಕ್ರವಾರ, ಸೆಪ್ಟೆಂಬರ್ 1, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮೆರವಣಿಗೆ

ಕೇರಳದ ಆಲುವಾದಲ್ಲಿ ನಾರಾಯಣ ಗುರು ಜಯಂತಿ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಕಲಾವಿದ

ತರಕಾರಿಗಳ ಚೀಲಗಳನ್ನು ಎಲ್ಲೆಂದರಲ್ಲಿ ಇರಿಸಿರುವ ವ್ಯಾಪಾರಿಗಳು

ಗ್ರಾಹಕರು ತರಕಾರಿ ಕೊಳ್ಳುವ ಸ್ಥಳದಲ್ಲಿ ಸಂಗ್ರಹವಾಗಿರುವ ತರಕಾರಿ ಮತ್ತು ಸೊಪ್ಪಿನ ತ್ಯಾಜ್ಯ. – ಪ್ರಜಾವಾಣಿ ಚಿತ್ರಗಳು

ಯಲಹಂಕ: ರೈತರಲ್ಲದ ವ್ಯಾಪಾರಿಗಳ ಹಾವಳಿ, ಸಂಚಾರ ಸಮಸ್ಯೆ, ಸ್ವಚ್ಛತೆ ಮರೀಚಿಕೆ

ರೈತರ ಸಂತೆ: ಬಗೆಹರಿಯದ ಸಮಸ್ಯೆಗಳ ಕಂತೆ

• ಡಿ. ಸುರೇಶ್

ಯಲಹಂಕ: ಅಲ್ಲಲ್ಲಿ ಹರಡಿಕೊಂಡಿರುವ ತರಕಾರಿ ತ್ಯಾಜ್ಯ, ಸಂಚಾರ ದಟ್ಟಣೆಯಿಂದ ವಾಹನ ಸವಾರರಿಗೆ ಕಿರಿಕಿರಿ, ಪಾರ್ಕಿಂಗ್ ಸಮಸ್ಯೆಯಿಂದ ಗ್ರಾಹಕರಿಗೆ ಬೇಸರ, ರೈತರಲ್ಲದ ವ್ಯಾಪಾರಿಗಳ ಹಾವಳಿ...

ಯಲಹಂಕದ ರೈತರ ಸಂತೆಯಲ್ಲಿ ಕಂಡುಬಂದ ದೃಶ್ಯಗಳಿವು. ಅಂತ-ರರಾಷ್ಟ್ರೀಯ ವಿಮಾನನಿಲ್ದಾಣದ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಈ ಸಂತೆಗೆ ದೇವನಹಳ್ಳಿ, ದೊಡ್ಡಬ-ಳ್ಳಾಪುರ, ಹೆಸರಘಟ್ಟ, ಯಲಹಂಕ, ವಿಜಯಪುರ, ರಾಜಾನುಕುಂಟೆ ಮತ್ತಿತರ ಪ್ರದೇಶಗಳಿಂದ ತರಕಾರಿ ಮತ್ತಿತರ ಉತ್ಪನ್ನಗಳನ್ನು ತಂದು ಮಾರಾಟ ಮಾಡುತ್ತಾರೆ. ಸಂತೆಯಲ್ಲಿ 180 ಮಳಿಗೆಗಳಿದ್ದು, ಬೆಳಿಗ್ಗೆ 4 ಗಂಟೆಯಿಂದ ರಾತ್ರಿ 8ರವರೆಗೆ ವ್ಯಾಪಾರ ನಡೆಯುತ್ತದೆ. ಪ್ರತಿದಿನ ಸುತ್ತಮುತ್ತ ಗ್ರಾಮಗಳ ಸಾವಿರಾರು ಗ್ರಾಹಕರು ತರಕಾರಿ, ಹಣ್ಣುಗಳು, ಸೊಪ್ಪು ಸೇರಿ ಇತರೆ ಪದಾರ್ಥಗಳನ್ನು ಖರೀದಿಸಲು ಇಲ್ಲಿಗೆ ಬರುತ್ತಾರೆ.

ಮಾರುಕಟ್ಟೆ ಕಷ್ಟ ಸಿಕ್ಕಾಪಟ್ಟೆ

ಆದರೆ, ಸಂತೆಯ ಮುಂಭಾಗದಲ್ಲಿ ಗ್ರಾಹಕರ ವಾಹನಗಳ ನಿಲುಗಡೆಗೆ ಅವಕಾಶವಿಲ್ಲ. ಪಾರ್ಕಿಂಗ್‌ಗಾಗಿ ಅನತಿ ದೂರದಲ್ಲಿ ನಿಗದಿಪಡಿಸಿರುವ ಜಾಗದಲ್ಲಿ ವಾಹನಗಳನ್ನು ನಿಲ್ಲಿಸಿ, ಇಲ್ಲಿಗೆ ಖರೀದಿಸಲು ಬರಬೇಕಾ-ಗಿರುವುದರಿಂದ ಗ್ರಾಹಕರ ಸಂಖ್ಯೆ ಕಡಿಮೆಯಾಗಿದೆ. ಇದರಿಂದ, ನಿರೀಕ್ಷಿ-ಸಿದಷ್ಟು ವ್ಯಾಪಾರವಾಗುತ್ತಿಲ್ಲ ಎಂಬುದು ಇಲ್ಲಿನ ವ್ಯಾಪಾರಿಗಳ ಅಳಲು.

ರೈತರ ಸಂತೆ ಮುಂಭಾಗದ ರಸ್ತೆಯಲ್ಲಿ ಬೆಳಿಗ್ಗೆ 4ರಿಂದ 8ರವರೆಗೆ ತರಕಾರಿಗಳನ್ನು ಹೊತ್ತು ತರುವ ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ. ಅಲ್ಲದೆ ಹಲವಾರು ಶಾಲಾ-ವಾಹನಗಳು ಇದೇ ರಸ್ತೆಯಲ್ಲಿ ಸಂಚರಿಸುವುದರಿಂದ ಸಂಚಾರ ದಟ್ಟಣೆ ಉಂಟಾಗುತ್ತದೆ. ಇದರಿಂದ ಈ ಭಾಗದಲ್ಲಿ ತೆರಳುವ ವಾಹನ ಸವಾರರು ಕಿರಿಕಿರಿ ಅನುಭವಿ-ಸಬೇಕಾಗಿದೆ. ಈ ವೇಳೆ ಸಂತೆಗೆ ಬರುವ ಗ್ರಾಹಕರು ತಮ್ಮ ವಾಹನಗಳನ್ನು ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿ ಬರಲು ಪರದಾಡಬೇಕಾಗಿದೆ.

'ರೈತರ ಸಂತೆಯಲ್ಲಿ ಶೇ70ರಷ್ಟು ನಕಲಿ ವ್ಯಾಪಾರಿಗಳಿದ್ದು, ಇಲ್ಲಿ ನೈಜ ರೈತರು ವ್ಯಾಪಾರ ಮಾಡುವುದು ತೀರಾ ಕಡಿಮೆಯಾಗಿದೆ. ಜತೆಗೆ ದಲ್ಲಾಳಿಗಳ ಹಾವಳಿಯೂ ಇದೆ' ಎಂದು ಗ್ರಾಹಕಿ ಶಕುಂತಲಾ ದೂರುತ್ತಾರೆ.

'ಸಂತೆಯ ಸಮೀಪದ ಮೇಲ್ಸೇತುವೆ ಪಕ್ಕದ ಸರ್ವಿಸ್ ರಸ್ತೆ, ಯಲಹಂಕ ಹಾಗೂ ಜಕ್ಕೂರು ಕಡೆಯಿಂದ ಬರುವ ವಾಹನಗಳು ಸಂತೆಯ ಮುಂಭಾಗದ ರಸ್ತೆಯ ಮೂಲಕ ಹಾದುಹೋಗುವುದ-ರಿಂದ ಕೆಲವೊಮ್ಮೆ ಸಂಚಾರದ ದಟ್ಟಣೆ ಉಂಟಾಗುತ್ತದೆ. ಈ ಸಂದರ್ಭದಲ್ಲಿ ಗ್ರಾಹಕರು, ಅದರಲ್ಲೂ ವಯೋವೃದ್ಧರು ಮತ್ತು ಮಹಿಳೆಯರು ದಟ್ಟಣೆಯಲ್ಲಿ ಸಿಲುಕುವ ಜತೆಗೆ ದೂರದಲ್ಲಿ ತಮ್ಮ ವಾಹನಗಳನ್ನು ನಿಲ್ಲಿಸಿ ಬಂದು ತರಕಾರಿ-ಗಳನ್ನು ಖರೀದಿಸಲು ತೊಂದರೆಯಾಗು-ತ್ತಿದೆ' ಎಂದು ಹೇಳುತ್ತಾರೆ.

ಸಂತೆಯ ಆವರಣದ ಸೊಪ್ಪಿನ ಮಳಿಗೆಗಳ ಹಿಂಭಾಗ ಸೇರಿ ಹಲವು ಕಡೆಗಳಲ್ಲಿ ವ್ಯಾಪಾರಿಗಳು ತರಕಾರಿ ಮತ್ತು ಸೊಪ್ಪಿನ ತ್ಯಾಜ್ಯವನ್ನು ಹಾಕುತ್ತಾರೆ. ಇದರಿಂದ, ಸ್ವಚ್ಛತೆಯೇ ಇಲ್ಲದಂತಾಗಿ ಈ ಪ್ರದೇಶದಲ್ಲಿ ತ್ಯಾಜ್ಯ ಕೊಳೆಯುತ್ತದೆ. ಇದನ್ನು ತಿನ್ನಲು ಹಸುಗಳ ಹಿಂಡು ಆಗಮಿಸುತ್ತದೆ. ಇನ್ನು ಮಳೆಯಾದರೆ ಈ ಸ್ಥಳವು ಗಬ್ಬೆದ್ದು ನಾರುವುದರಿಂದ ದುರ್ವಾಸನೆ ಜತೆಗೆ ಸೊಳ್ಳೆಗಳ ಕಾಟವೂ ಹೆಚ್ಚಾಗಿ, ವ್ಯಾಪಾರಿಗಳು ಮತ್ತು ಗ್ರಾಹಕರು ತೊಂದರೆ ಅನುಭವಿಸಬೇಕಾಗಿದೆ.

'ಮಾರುಕಟ್ಟೆಯಲ್ಲಿ ಸ್ವಚ್ಛತೆ ಬಗ್ಗೆ ಕಾಳಜಿ ವಹಿಸುವುದು ಅಗತ್ಯ. ಇಲ್ಲಿ ಸಂಗ್ರಹವಾಗುವ ಕಸದ ಸಮರ್ಪಕ ವಿಲೇವಾರಿಯಾಗಬೇಕು. ಎಲ್ಲೆಂದರಲ್ಲಿ ಕಸ ಬಿಸಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಸ್ಥಳೀಯರು ಒತ್ತಾಯಿಸುತ್ತಾರೆ.

ಸಂತೆಯ ಮುಂಭಾಗದ ಮುಖ್ಯರಸ್ತೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರ ಹಾಗೂ ಶಾಲಾ ವಾಹನಗಳು ಸಂಚರಿಸುವುದರಿಂದ ಬೆಳಗಿನ ವೇಳೆ ಸಂಚಾರದಟ್ಟಣೆ ಉಂಟಾಗುತ್ತಿದ್ದ ಕಾರಣ, ಸ್ವಲ್ಪ ದೂರದಲ್ಲೇ ಗ್ರಾಹಕರ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ಸಂತೆ ನಡೆಯುತ್ತಿರುವ ಜಾಗ ಸ್ವಲ್ಪ ಕಿರಿದಾಗಿದ್ದು, ಕೆರೆ ಸಮೀಪ ಅಥವಾ ಇತರೆಡೆ ಬಿಡಿಎ ಅನುಮೋದಿತ ಸಿಎ ಬಡಾವಣೆಗಳು ನಿರ್ಮಾಣವಾದರೆ ಅಂತಹ ಕಡೆಗಳಲ್ಲಿ ವಿಶಾಲವಾದ ಸಂತೆ ಮಾಡಬಹುದೆಂಬ ನಿರೀಕ್ಷೆಯಲ್ಲಿದ್ದೇನೆ. ಉಳಿದಂತೆ ಎಲ್ಲೂ ಸರ್ಕಾರಿ ಜಾಗವಿಲ್ಲ.

ಎಸ್.ಆರ್.ವಿಶ್ವನಾಥ್, ಶಾಸಕ, ಯಲಹಂಕ ಕ್ಷೇತ್ರ

'ಸಂಚಾರ ದಟ್ಟಣೆಯೇ ಪ್ರಮುಖ ಸಮಸ್ಯೆ'

ಸಂತೆ ನಡೆಯುವ ಜಾಗವು ಕಿರಿದಾಗಿದೆ. ತರಕಾರಿಗಳನ್ನು ಹೊತ್ತ, ಶಾಲಾವಾಹನ ಮತ್ತು ಗ್ರಾಹಕರ ವಾಹನಗಳು ಏಕಕಾಲದಲ್ಲಿ ಸಂತೆಯ ಮುಂಭಾಗದ ಮುಖ್ಯರಸ್ತೆಯಲ್ಲಿ ಸಂಚರಿಸುವು-ದರಿಂದ ಬೆಳಿಗ್ಗೆ 6ರಿಂದ 8ರವರೆಗೆ ಸಂಚಾರ ದಟ್ಟಣೆ ಉಂಟಾಗುತ್ತದೆ. ನಂತರ ಸಂಚಾರ ಪೊಲೀಸಲು ಆಗಮಿಸಿ ಪರಿಸ್ಥಿತಿಯನ್ನು ನಿಯಂತ್ರಿಸುತ್ತಾರೆ

ಸುರೇಶ್, ವ್ಯಾಪಾರಿ

'ವಾಹನಗಳಿಗೆ ಸಮರ್ಪಕ ವ್ಯವಸ್ಥೆಯಾಗಲಿ'

ಸಂತೆಗೆ ತರಕಾರಿ ಹಣ್ಣುಗಳನ್ನು ಖರೀದಿಸಲು ಬರುವ ವಾಹನ ಸವಾರರಿಗೆ ಸಂತೆಯ ಮುಂಭಾಗದ ರಸ್ತೆಯಲ್ಲಿ ತಮ್ಮ ವಾಹನಗಳ ನಿಲುಗಡೆಗೆ ಅವಕಾಶ ಇಲ್ಲ. ವಾಹನಗಳ ನಿಲುಗಡೆಗೆ ಸಮೀಪದಲ್ಲೆ ಅವಕಾಶ ನೀಡಿದ್ದರೆ ಅನುಕೂಲವಾಗುತ್ತಿತ್ತು.

ಗೌರಮ್ಮ, ವ್ಯಾಪಾರಿ

ಸಮಸ್ಯೆ ನಿವಾರಣೆಗೆ ತಂಡಗಳ ರಚನೆ

ಸಂತೆಯ ಮುಂಭಾಗದ ಮುಖ್ಯರಸ್ತೆಯಲ್ಲಿ ಬೆಳಗಿನ ವೇಳೆ ವಾಹನ ದಟ್ಟಣೆ ಉಂಟಾಗುತ್ತಿದ್ದು, ಇದನ್ನು ನಿಯಂತ್ರಿಸಲು ಸಂಚಾರ ಪೊಲೀಸರ ಜೊತೆಗೆ 5 ಮಂದಿ ಒಳಗೊಂಡ ರೈತರ ತಂಡಗಳನ್ನು ರಚಿಸಲಾಗಿದೆ. ಪ್ರತಿದಿನ ಸಂಚಾರ ದಟ್ಟಣೆ ಉಂಟಾಗದಂತೆ ಮತ್ತು ಸಂತೆಯಲ್ಲಿ ಯಾವುದೇ ಸಮಸ್ಯೆಗಳಾಗದಂತೆ ನಿಗಾವಹಿಸಲು ಸೂಚಿಸಲಾಗಿದೆ. ವ್ಯಾಪಾರಿಗಳು ಮತ್ತು ಗ್ರಾಹಕರ ಸಂಖ್ಯೆಗನುಗುಣವಾಗಿ ಇನ್ನೂ ವಿಶಾಲವಾದ ಜಾಗವಿದ್ದಿದ್ದರೆ ಹೆಚ್ಚಿನ ಅನುಕೂಲವಾಗುತ್ತಿತ್ತು. ಆದರೆ, ಜಾಗ ಕಿರಿದಾಗಿರುವುದರಿಂದ ಸ್ವಲ್ಪ ಇಕ್ಕಟ್ಟಾಗಿದೆ.

ಶ್ರೀಧರ್.ಸಿ.ವಿ., ಮಾರುಕಟ್ಟೆ ಅಧಿಕಾರಿ, ರೈತರ ಸಂತೆ

ಸುದ್ದಿ 2 ನಿಮಿಷ

ಡಿಸೆಂಬರ್‌ನಲ್ಲಿ ಹಲ್ಲೆಗೆರೆಗೆ ಒಬಾಮ ದಂಪತಿ ಭೇಟಿ

ಬೆಂಗಳೂರು: ಭೂತಾಯಿ ಟ್ರಸ್ಟ್ ವತಿಯಿಂದ ಮಂಡ್ಯ ತಾಲ್ಲೂಕಿನ ಹಲ್ಲೆಗೆರೆಯಲ್ಲಿ ನಿರ್ಮಾಣ ಗೊಳ್ಳಲಿರುವ ಅಂತರರಾಷ್ಟ್ರೀಯ ಯೋಗ ಮತ್ತು ಧ್ಯಾನ ಕೇಂದ್ರಕ್ಕೆ ಡಿಸೆಂಬರ್‌ನಲ್ಲಿ ಶಂಕುಸ್ಥಾಪನೆ ನಡೆಯಲಿದ್ದು, ಈ ಕಾರ್ಯಕ್ರಮ-ದಲ್ಲಿ ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ದಂಪತಿ ಮತ್ತು ಟಿಬೆಟಿಯನ್ ಧರ್ಮಗುರು ದಲೈ ಲಾಮಾ ಭಾಗವಹಿಸಲಿದ್ದಾರೆ.

ಈ ಹಿನ್ನೆಲೆಯಲ್ಲಿ ಟ್ರಸ್ಟ್ ಅಧ್ಯಕ್ಷ, ಅಮೆರಿಕದ ವೈದ್ಯರಾಗಿರುವ ಲಕ್ಷ್ಮಿನರಸಿಂಹ ಮೂರ್ತಿ, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ನೇತೃತ್ವದ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರುವಾರ ಭೇಟಿ ಮಾಡಿ, ಹಲ್ಲೆಗೆರೆಯಲ್ಲಿ ಹೆಲಿಪ್ಯಾಡ್, ರಸ್ತೆ, ಚರಂಡಿ, ವಿದ್ಯುದ್ದೀಪ, ಕುಡಿಯುವ ನೀರು ಮತ್ತಿತರ ಸೌಕರ್ಯಗಳನ್ನು ಸರ್ಕಾರದ ವತಿಯಿಂದ ಒದಗಿಸಿ-ಕೊಡುವಂತೆ ಮನವಿ ಮಾಡಿತು.

ಸಕಾರಾತ್ಮಕವಾಗಿ ಸ್ಪಂದಿಸಿದ ಮುಖ್ಯಮಂತ್ರಿ, 'ಶೀಘ್ರದಲ್ಲೇ ಅಧಿಕಾರಿಗಳ ಸಭೆ ಕರೆದು ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚೆ ನಡೆಸುತ್ತೇನೆ' ಎಂದರು.

ನಿಯೋಗದಲ್ಲಿ ಶಾಸಕರಾದ ರವಿಕುಮಾರ್ ಗಣಿಗ, ರಮೇಶ್‌ಬಾಬು ಬಂಡಿಸಿದ್ದೇಗೌಡ ಮತ್ತು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಇದ್ದರು.

₹ 80 ಕೋಟಿ ವೆಚ್ಚ: ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ವೈದ್ಯಕೀಯ ಸಲಹೆಗಾರ ವಿವೇಕ್ ಮೂರ್ತಿ ಅವರ ತಂದೆ, ಅನಿವಾಸಿ ಭಾರತೀಯ ಡಾ. ಲಕ್ಷ್ಮಿನರಸಿಂಹ ಮೂರ್ತಿ (ಎಲ್.ಎನ್.ಮೂರ್ತಿ) ಹಲ್ಲೆಗೆರೆಯವರು. ಅಮೆರಿಕದ ಹಿಂದಿನ ಅಧ್ಯಕ್ಷ ಬರಾಕ್ ಒಬಾಮ ಅವರಿಗೂ ವಿವೇಕ ಮೂರ್ತಿ ವೈದ್ಯಕೀಯ ಸಲಹೆಗಾರರಾಗಿದ್ದರು. ವಿವೇಕ್ ಮೂರ್ತಿ ಇಲ್ಲಿ 13 ಎಕರೆ ಪಿತ್ರಾರ್ಜಿತ ಜಮೀನಿ ನಲ್ಲಿ ಭೂತಾಯಿ ಟ್ರಸ್ಟ್‌ನಿಂದ ₹ 80 ಕೋಟಿ ವೆಚ್ಚದಲ್ಲಿ ಅಂತರ ರಾಷ್ಟ್ರೀಯ ಮಟ್ಟದ ಯೋಗ ಮತ್ತು ಧ್ಯಾನ ಕೇಂದ್ರ ತೆರೆಯಲು ಅವರು ಮುಂದಾಗಿದ್ದಾರೆ.

ಟಿ–2: ಸೆ.12ರಿಂದ ಅಂತರರಾಷ್ಟ್ರೀಯ ವಿಮಾನ ಸಂಚಾರಕ್ಕೆ ಮುಕ್ತ

ದೇವನಹಳ್ಳಿ: ಕೆಂಪೇಗೌಡ ಅಂತರರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2ರಿಂದ ಸೆ. 12 ರಿಂದ ಅಂತಾರಾಷ್ಟ್ರೀಯ ವಿಮಾನ ಸಂಚಾರ ಆರಂಭವಾಗಲಿದೆ.

ಟರ್ಮಿನಲ್ –2ರಲ್ಲಿ ತಾಂತ್ರಿಕ ಕಾರ್ಯಕ್ಷಮತೆ ಮತ್ತು ಪ್ರಯಾಣಿಕರ ಸುರಕ್ಷತೆ ಖಚಿತಪಡಿಸಿಕೊಂಡು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸೆ.12ರ-ವರೆಗೂ ಟರ್ಮಿನಲ್–1ರಲ್ಲಿಯೇ ಅಂತರರಾಷ್ಟ್ರೀಯ ವಿಮಾನಗಳ ಸಂಚಾರ ಮುಂದುವರೆಯಲಿದೆ ಎಂದು ಬಿಐಎಎಲ್ ಪ್ರಕಟಣೆ ತಿಳಿಸಿದೆ. ಬುಧವಾರದಿಂದ ಟಿ–2ರಲ್ಲಿ ಆರಂಭವಾಗಬೇಕಿದ್ದ ಅಂತರ-ರಾಷ್ಟ್ರೀಯ ವಿಮಾನ ಸಂಚಾರವನ್ನು ಕಾರಣಾಂತರಗಳಿಂದ ಕೊನೆಯ ಕ್ಷಣದಲ್ಲಿ ಮುಂದೂಡಲಾಗಿತ್ತು. ಒಟ್ಟು 27 ವಿದೇಶಿ ಹಾಗೂ ಎರಡು ದೇಶಿ ವಿಮಾನಯಾನ ಸಂಸ್ಥೆಗಳು ಟಿ–2ರಿಂದ ಕಾರ್ಯಾಚರಣೆ ನಡೆಸಲಿವೆ. ಟಿ-1 ದೇಶೀಯ ವಿಮಾನ ಹಾರಾಟಕ್ಕೆ ಮಾತ್ರ ಸೀಮತವಾಗಲಿದೆ. ಕಸ್ಟಮ್ಸ್ ಕಚೇರಿ, ಡ್ಯೂಟಿ ಫ್ರೀ ಅಂಗಡಿಗಳು, ಚಿಲ್ಲರೆ ಮಳಿಗೆ, ಆಹಾರ ಮಾರಾಟ ಕೇಂದ್ರಗಳನ್ನು ಟಿ–2ರಲ್ಲಿ ಈಗಾಗಲೇ ತೆರೆಯಲಾಗಿದೆ.

ಸಿಡಿಲಿನ ಅಬ್ಬರ: ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ ರಾತ್ರಿ ಸಿಡಿಲು-ಗುಡುಗು ಸಹಿತ ಧಾರಾಕಾರವಾಗಿ ಮಳೆ ಸುರಿದಿದ್ದು, ಕೆಲವೆಡೆ ಮನೆಗಳಿಗೆ ನೀರು ನುಗ್ಗಿತ್ತು. ಪ್ರಮುಖ ರಸ್ತೆಗಳಲ್ಲಿ ಹೊಳೆಯಂತೆ ನೀರು ಹರಿಯಿತು.

ನಗರದಲ್ಲಿ ಹಲವು ದಿನಗಳಿಂದ ಮಳೆ ಆಗಿರಲಿಲ್ಲ. ಇದರಿಂದಾಗಿ ಸೆಕೆ ಹೆಚ್ಚಾಗಿತ್ತು. ಆಗಾಗ ಮೋಡ ಮುಸುಕಿದ ವಾತಾವರಣ ಕಂಡುಬಂದರೂ ಮಳೆ ಸುರಿದಿರಲಿಲ್ಲ.

ಗುರುವಾರವೂ ಸೆಕೆ ಹೆಚ್ಚಿತ್ತು. ಬಹುತೇಕ ಮಧ್ಯಾಹ್ನದಿಂದ ಸಂಜೆಯವರೆಗೆ ಮೋಡ ಕವಿದ ವಾತಾವರಣವಿತ್ತು. ರಾತ್ರಿ 8 ಗಂಟೆಯ ನಂತರ ಹಲವೆಡೆವು ಮಳೆ ಸುರಿ-ಯಲಾರಂಭಿಸಿತ್ತು. ವಿದ್ಯಾರಣ್ಯಪುರ, ಕೊಡಿಗೇಹಳ್ಳಿ, ವಿ.ನಾಗೇನಹಳ್ಳಿ, ಯಲಹಂಕ ಸೇರಿದಂತೆ ಬೆಂಗಳೂರು ಉತ್ತರ ಭಾಗದಲ್ಲಿ ಜೋರು ಮಳೆ ಆಯಿತು. ಸಿಡಿಲು ಹಾಗೂ ಗುಡುಗಿನ ಅಬ್ಬರವೂ ಹೆಚ್ಚಿತ್ತು.

ಬೊಮ್ಮಸಂದ್ರ, ಎಲೆಕ್ಟ್ರಾನಿಕ್ ಸಿಟಿ, ಹುಳಿಮಾವು, ಗೊಟ್ಟಿಗೆರೆ, ಬಿಟಿಎಂ ಲೇಔಟ್, ಎಚ್‌ಎಸ್‌ಆರ್ ಲೇಔಟ್, ಜೆ.ಪಿ.ನಗರ, ಸರ್ಜಾಪುರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಮಳೆ ಸುರಿಯಿತು.

ಕೆಂಗೇರಿ, ರಾಜರಾಜೇಶ್ವರಿನಗರ, ನಾಯಂಡನಹಳ್ಳಿ, ದೀಪಾಂಜಲಿನಗರ, ಗಿರಿನಗರ, ಹನುಮಂತನಗರ, ಬಸವನಗುಡಿ, ಬನಶಂಕರಿ, ಜಯನಗರ, ಮಡಿವಾಳ, ಚಿಕ್ಕಪೇಟೆ, ಗಾಂಧಿನಗರ, ಮೆಜೆಸ್ಟಿಕ್, ಶೇಷಾದ್ರಿಪುರ, ಮಲ್ಲೇಶ್ವರ, ರಾಜಾಜಿನಗರ, ವಿಜಯನಗರ, ಬಸವೇಶ್ವರನಗರ, ಯಶವಂತಪುರ, ಪೀಣ್ಯ, ಜಾಲಹಳ್ಳಿ, ನಂದಿನಿ ಲೇಔಟ್, ಮಹಾಲಕ್ಷ್ಮಿ ಲೇಔಟ್, ಸಂಜಯನಗರ, ಹೆಬ್ಬಾಳ, ಆರ್.ಟಿ.ನಗರ, ವಸಂತ ನಗರ, ಶಿವಾಜಿನಗರ, ಎಂ.ಜಿ.ರಸ್ತೆ, ಅಶೋಕನಗರ, ವಿವೇಕನಗರ, ಕೋರಮಂಗಲ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಸುರಿಯಿತು.

ಮನೆಗಳಿಗೆ ನೀರು: ಯಲಹಂಕ ಬಳಿಯ ಭದ್ರಪ್ಪ ಲೇಔಟ್‌ನ ಕೆಲ ಮನೆಗಳಿಗೆ ನೀರು ನುಗ್ಗಿತ್ತು. 3 ರಿಂದ 4 ಅಡಿಯಷ್ಟು ನೀರು ನಿಂತಿದ್ದು, ನಿವಾಸಿಗಳು ಮನೆಗಳಿಂದ ನೀರು ಹೊರಹಾಕುವುದರಲ್ಲಿ ನಿರತರಾಗಿದ್ದರೆಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ಮನೆಯ ಸಾಮಗ್ರಿ ಹಾಗೂ ಪೀಠೋ-ಪಕರಣಗಳು ನೀರಿನಲ್ಲಿದ್ದವು. ವೃದ್ಧರು, ಮಕ್ಕಳು ನೀರಿನಲ್ಲಿ ಸಾಗಿ ಸುರಕ್ಷಿತ ಸ್ಥಳಕ್ಕೆ ತಲುಪಿದರು. 'ಕಾಲುವೆಗಳಲ್ಲಿ ಹೂಳು ತುಂಬಿಕೊಂಡಿವೆ. ಇದರಿಂದಾಗಿ ನೀರು ಮನೆಗಳಿಗೆ ನುಗ್ಗಿದೆ' ಎಂದು ನಿವಾಸಿಗಳು ಹೇಳಿದರು.

'ಕೆಲ ಮನೆಗಳಿಂದ ದೂರು ಬರುತ್ತಿದ್ದಂತೆ ಸಿಬ್ಬಂದಿ ಕಳಹಿಸಲಾಗಿದೆ' ಎಂದು ಬಿಬಿಎಂಪಿ ಸಹಾಯವಾಣಿಯ ಸಿಬ್ಬಂದಿ ಹೇಳಿದರು.

ಕೋರಮಂಗಲದಲ್ಲಿ ಮರವೊಂದು ಉರುಳಿಬಿದ್ದಿತ್ತು. ಇದರಿಂದಾಗಿ ವಾಹನಗಳ ಸಂಚಾರ ಕೆಲ ಹೊತ್ತು ಬಂದ್ ಆಗಿತ್ತು. ಸ್ಥಳೀಯರು ಹಾಗೂ ಬಿಬಿಎಂಪಿ ಸಿಬ್ಬಂದಿ, ಮರವನ್ನು ತೆರವು ಮಾಡಿದ ನಂತರ ವಾಹನಗಳ ಸಂಚಾರ ಯಥಾಸ್ಥಿತಿಗೆ ಮರಳಿತು.

ರಸ್ತೆಯಲ್ಲಿ ನೀರು ಹರಿದಿದ್ದರಿಂದ, ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಯಿತು. ಹೆಬ್ಬಾಳ ಮೇಲ್ಸೇತುವೆ, ಜಯಮಹಲ್ ರಸ್ತೆ, ಅನಿಲ್ ಕುಂಬ್ಳೆ ವೃತ್ತ, ಚಾಲುಕ್ಯ ವೃತ್ತ ಹಾಗೂ ಸುತ್ತಮುತ್ತ ವಾಹನಗಳ ದಟ್ಟಣೆ ಉಂಟಾಯಿತು

ಮಾರುಕಟ್ಟೆಯಲ್ಲೂ ನೀರು: ಚಿಕ್ಕಪೇಟೆ, ಕಾಟನ್‌ಪೇಟೆ, ಗಾಂಧಿನಗರ, ಮೆಜೆಸ್ಟಿಕ್, ಉಪ್ಪಾರಪೇಟೆ, ಓಕಳೀಪುರ, ಮಲ್ಲೇಶ್ವರ, ಯಶವಂತಪುರ ಹಾಗೂ ಸುತ್ತಮುತ್ತಲಿನ ಮಾರುಕಟ್ಟೆ ಪ್ರದೇಶಗಳ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು. 'ನಗರದ ಬಹುತೇಕ ಕಡೆಗಳಲ್ಲಿ ಉತ್ತಮ ಮಳೆಯಾಗಿದೆ. ಮಳೆ ಮುಂದುವರಿಯುವ ಸಾಧ್ಯತೆ ಇದೆ' ಎಂದು ಹವಾಮಾನ ಇಲಾಖೆ ತಿಳಿಸಿವೆ.

ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿ ಗುರುವಾರ ರಾತ್ರಿ ಮಳೆಯಲ್ಲಿ ವಾಹನಗಳು ಸಂಚರಿಸಿದವು – ಪ್ರಜಾವಾಣಿ ಚಿತ್ರ

ಬೋಟ್ ಸೇವೆ: ವ್ಯಂಗ್ಯದ ಟ್ವೀಟ್

ಗರದಲ್ಲಿ ಜೋರು ಮಳೆ ಸುರಿಯುತ್ತಿದ್ದಂತೆ ವ್ಯಂಗ್ಯವಾಗಿ ಟ್ವೀಟ್ ಮಾಡಿರುವ ಕೆಲ ಸಾರ್ವಜನಿಕರು, 'ಬೆಂಗಳೂರಿನಲ್ಲಿ ಬೋಟ್ ಸೇವೆ ಆರಂಭವಾಗುವ ಲಕ್ಷಣ ಕಾಣಿಸುತ್ತಿದೆ. ಯಾವುದಕ್ಕೂ ಸಿದ್ಧ ಇರಿ' ಎಂದಿದ್ದಾರೆ.

ಉಬರ್ ಕಂಪನಿ ಆ್ಯಪ್‌ನ ಸ್ಕ್ರೀನ್‌ಶಾರ್ಟ್ ಮಾರ್ಪಾಡು ಮಾಡಿರುವ ಕೆಲವರು, ಬೋಟ್‌ಗಳ ಚಿತ್ರ ಹಾಗೂ ಪ್ರಯಾಣ ದರ ನಮೂದು ಮಾಡಿದ್ದಾರೆ. ಈ ಚಿತ್ರವನ್ನು ಹಲವರು ಹಂಚಿಕೊಂಡಿದ್ದಾರೆ.

ಮಳೆ ಸುರಿದ ವಿವರ (ಸೆಂ.ಮೀ.ಗಳಲ್ಲಿ)

ಪ್ರದೇಶ	ಮಳೆ ಪ್ರಮಾಣ
ರಾಜಮಹಲ್‌ಗುಟ್ಟಹಳ್ಳಿ	11.05
ವಿದ್ಯಾರಣ್ಯಪುರ	8.85
ಕೋಣನಕುಂಟೆ	5.5
ಕೊಡಿಗೇಹಳ್ಳಿ	6.7
ಅಟ್ಟೂರು	6.05
ವಿ.ನಾಗೇನಹಳ್ಳಿ	6.75
ಚೌಡೇಶ್ವರಿ ವಾರ್ಡ್	4.8
ಸಂಪಂಗಿರಾಮನಗರ	6.55
ನಂದಿನಿ ಲೇಔಟ್	3.75
ಎಚ್‌ಎಎಲ್ ಏರ್‌ಪೋರ್ಟ್	6.65
ರಾಜಾಜಿನಗರ	2.80
ರಾಜರಾಜೇಶ್ವರಿನಗರ	3.55

ಲಾರಿ ಮಾಲೀಕರ ಮುಷ್ಕರ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವಿತಾವಧಿ ತೆರಿಗೆ ವಿಧಿಸುವುದನ್ನು ವಿರೋಧಿಸಿ ಬುಧವಾರ ರಾತ್ರಿ ಆರಂಭವಾಗಿದ್ದ ಲಾರಿ ಮಾಲೀಕರ ಮುಷ್ಕರವು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಧ್ಯಪ್ರವೇಶಿಸಿ ಮಾತುಕತೆ ನಡೆಸಿದ್ದರಿಂದ ಗುರುವಾರ ರಾತ್ರಿ ಅಂತ್ಯಗೊಂಡಿದೆ.

ಕರ್ನಾಟಕ ರಾಜ್ಯ ಲಾರಿ ಮಾಲಿಕರ ಹಾಗೂ ಏಜೆಂಟರ ಸಂಘದ ದಿಢೀರ್ ಕರೆಯಂತೆ ರಾಜ್ಯದಲ್ಲಿ 6,000 ಲಾರಿಗಳ ಮಾಲೀಕರು ಮುಷ್ಕರ ಹೂಡಿದ್ದರು. ಇದರಿಂದ, ಬೆಂಗಳೂರಿನಲ್ಲಿಯೇ 1,100 ಲಾರಿಗಳ ಸಂಚಾರ ಸ್ಥಗಿತಗೊಂಡಿತ್ತು. ನೂರಾರು ಲಾರಿಗಳನ್ನು ಶಾಂತಿನಗರದಲ್ಲಿರುವ ಸಾರಿಗೆ ಆಯುಕ್ತರ ಕಚೇರಿಯ ಸುತ್ತಮುತ್ತಲಿನ ರಸ್ತೆಗಳಲ್ಲಿ ತಂದು ನಿಲ್ಲಿಸಲಾಗಿತ್ತು. ಇದರಿಂದ ಕೆಂಗಲ್ ಹನುಮಂತರಾಯ ರಸ್ತೆ, ಬಿಎಂಟಿಸಿ ಎದುರಿನ ರಸ್ತೆ ಸಹಿತ ಸುತ್ತಲಿನ ಎಲ್ಲ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಗುರುವಾರ ಸಂಜೆ ಸಾರಿಗೆ ಸಚಿವರು ಲಾರಿ ಮಾಲೀಕರ ಹಾಗೂ ಏಜೆಂಟರ ಸಂಘದ ಪದಾಧಿಕಾರಿಗಳು ಮತ್ತು ಅಧಿಕಾರಿ ಗಳೊಂದಿಗೆ ಸಭೆ ನಡೆಸಿದರು.

'ಒಮ್ಮೆಲೆ ತೆರಿಗೆ ಕಟ್ಟಬೇಕು ಎಂಬ ಆದೇಶದಿಂದ ಲಾರಿ ಮಾಲೀಕರು ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಈಗಿರುವಂತೆ ಮೂರು ತಿಂಗಳಿಗೆ, ಆರು ತಿಂಗಳಿಗೆ, ವರ್ಷಕ್ಕೆ ಒಮ್ಮೆ ತೆರಿಗೆ ಕಟ್ಟುವ ಪದ್ಧತಿಯನ್ನೇ ಮುಂದುವರಿಸಬೇಕು' ಎಂದು ಲಾರಿ ಮಾಲೀಕರು ಆಗ್ರಹಿಸಿದರು. ಡಿಸೆಂಬರ್‌ವರೆಗೆ ಈಗಿರುವ ಪದ್ಧತಿಯನ್ನೇ ಮುಂದುವರಿಸಲಾಗುವುದು. ಅಲ್ಲಿವರೆಗೆ ತೆರಿಗೆ ಪಾವತಿ ಮಾಡಿ ಎಂದು ಸಚಿವರು ಸೂಚಿಸಿದರು.

'ಈಗ ತೆರಿಗೆ ಬಾಕಿ ಇರುವುದನ್ನು ಇನ್ನೆರಡು ದಿನಗಳಲ್ಲಿ ಪಾವತಿ ಮಾಡಲಾಗುವುದು. ಜೀವಿತಾವಧಿ ತೆರಿಗೆ ಕಟ್ಟುವುದನ್ನು ಡಿಸೆಂಬರ್‌ವರೆಗೆ ಮುಂದೂಡಿದ್ದನ್ನು ಸದ್ಯಕ್ಕೆ ಒಪ್ಪಿ ಮುಷ್ಕರವನ್ನು ಹಿಂಪಡೆಯುತ್ತೇವೆ. ಡಿಸೆಂಬರ್ 29ಕ್ಕೆ ಮತ್ತೆ ಸಭೆ ನಡೆಸಿ ಈ ಆದೇಶವನ್ನು ಇನ್ನೂ ಒಂದು ವರ್ಷ ಮುಂದೂಡುವಂತೆ ಒತ್ತಾಯಿಸುತ್ತೇವೆ. ಒಂದು ವರ್ಷ ಮುಂದೂಡಲು ಅವಕಾಶ ಇದೆ' ಎಂದು ಸಂಘದ ಅಧ್ಯಕ್ಷ ಜಿ.ಆರ್. ಷಣ್ಮುಖಪ್ಪ ತಿಳಿಸಿದರು. ಸಚಿವರು ಮತ್ತು ಅಧಿಕಾರಿಗಳು ಸಮ್ಮತಿ ಸೂಚಿಸಿದ್ದರಿಂದ ಮುಷ್ಕರವನ್ನು ಹಿಂಪಡೆಯಲಾಯಿತು.

ಹೋರಾಟದ ಎಚ್ಚರಿಕೆ ನೀಡಿದ ರಾಜ್ಯ ಒಕ್ಕಲಿಗರ ಸಂಘ

'ಕಾಂತರಾಜು ಆಯೋಗದ ವರದಿ ತಿರಸ್ಕರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಚ್. ಕಾಂತರಾಜು ಆಯೋಗ ಸಿದ್ಧಪಡಿಸಿರುವ ಜಾತಿ ಗಣತಿಯ ಅಸಮರ್ಪಕ ಮತ್ತು ಅವೈಜ್ಞಾನಿಕ ವರದಿಯನ್ನು ರಾಜ್ಯ ಸರ್ಕಾರ ತಿರಸ್ಕರಿಸಬೇಕು. ಇಲ್ಲವಾದಲ್ಲಿ ರಾಜ್ಯದಾದ್ಯಂತ ಹೋರಾಟ ನಡೆಸಲಾಗುವುದು' ಎಂದು ರಾಜ್ಯ ಒಕ್ಕಲಿಗರ ಸಂಘ ಎಚ್ಚರಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿ-ಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಡಿ. ಹನುಮಂತಯ್ಯ, 'ಕಾಂತರಾಜು ಆಯೋಗ 2015ರಲ್ಲಿ ಸಮೀಕ್ಷೆಗಾಗಿ ತಯಾರಿಸಿದ್ದ 55 ಅಂಶಗಳ ಸ್ವರೂಪ ಅವೈಜ್ಞಾನಿಕವಾಗಿದೆ. ಇದು ಜನಾಂಗ ವನ್ನು ಒಡೆಯಲು ಮಾಡಿದ ಹುನ್ನಾರ. ಈ ಆಯೋಗವು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಸೋಗಿನಲ್ಲಿ ಜಾತಿ ಗಣತಿ ನಡೆಸಿದೆ. ಅಷ್ಟಕ್ಕೂ ಜಾತಿ ಗಣತಿ ಕೇಂದ್ರ ಸರ್ಕಾರದ ಹಕ್ಕಾಗಿದ್ದು, ರಾಜ್ಯ ಸರ್ಕಾರಕ್ಕೆ ಜಾತಿ ಗಣತಿ ನಡೆಸುವ ಅಧಿಕಾರವಿಲ್ಲ. ಆದ್ದರಿಂದ, ಕಾಂತರಾಜು ಆಯೋಗದ ವರದಿ ಕಾನೂನುಬಾಹಿರ' ಎಂದರು.

'ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರು ಕಾಂತರಾಜು ಆಯೋಗ ತಯಾರಿಸಿರುವ ವರದಿಯನ್ನು ಸರ್ಕಾರಕ್ಕೆ ಶೀಘ್ರದಲ್ಲೇ ಸಲ್ಲಿಸುವುದಾಗಿ ಹೇಳಿದ್ದಾರೆ. ವರದಿಯನ್ನು ಸರ್ಕಾರ ಅಂಗೀಕ-ರಿಸಿದಲ್ಲಿ ರಾಜ್ಯದ ಎಲ್ಲಾ ಒಕ್ಕಲಿಗರ ಸಂಘ–ಸಂಸ್ಥೆಗಳು ಹಾಗೂ ಜನಾಂಗವು ಹೋರಾಟ ನಡೆಸುವುದು ಅನಿವಾರ್ಯ' ಎಂದು ಎಚ್ಚರಿಸಿದರು.

ಒಕ್ಕಲಿಗರ ಸಂಘ: ಅರ್ಜಿ ಸಲ್ಲಿಕೆಗೆ ಅವಧಿ ವಿಸ್ತರಣೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ಸದಸ್ಯತ್ವ ನೋಂದಣಿ ಅರ್ಜಿ ಸಲ್ಲಿಕೆ ಅವಧಿಯನ್ನು ಮೂರು ತಿಂಗಳು ವಿಸ್ತರಣೆ ಮಾಡಲಾಗಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಖಜಾಂಚಿ ಮಾರೇಗೌಡ, 'ಕಳೆದ ಫೆ.17 ರಿಂದ ಆ.31ರವರೆಗೆ ಹೊಸ ಸದಸ್ಯತ್ವ ನೋಂದಣಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಸಮುದಾಯದವರು ಅರ್ಜಿ ಸಲ್ಲಿಕೆ ಅವಧಿಯನ್ನು ವಿಸ್ತರಣೆ ಮಾಡುವಂತೆ ಮನವಿ ಮಾಡಿಕೊಂಡಿದ್ದರು. ಹೀಗಾಗಿ, ಮತ್ತೆ 3 ತಿಂಗಳು ಕಾಲಾವಕಾಶ ನೀಡಲಾಗಿದೆ' ಎಂದು ಹೇಳಿದರು.

'ಹೊಸದಾಗಿ ಆಫ್‌ಲೈನ್ ಮೂಲಕ 49,522 ಮತ್ತು ಆನ್‌ಲೈನ್ ಮೂಲಕ 736 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಎರಡೂ ವಿಧಾನದ ಮೂಲಕ ಸಲ್ಲಿಕೆಯಾಗಿರುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಅರ್ಹರಿಗೆಲ್ಲ ಸಂಘದ ಸದಸ್ಯತ್ವ ನೀಡಲಾಗುತ್ತಿದೆ. 18 ವರ್ಷ ತುಂಬಿದ ಸಮುದಾಯದವರು ಅರ್ಜಿ ಸಲ್ಲಿಸಬಹುದಾಗಿದ್ದು, ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಅರ್ಜಿ ದೊರೆಯಲಿವೆ' ಎಂದು ತಿಳಿಸಿದರು.

'ನ.30 ಅರ್ಜಿ ಸಲ್ಲಿಕೆ ಕಡೆಯ ದಿನಾಂಕವಾಗಿದ್ದು, ₹ 1,650 ಶುಲ್ಕ ನಿಗದಿಪಡಿಸಲಾಗಿದೆ. ವಿವರಕ್ಕೆ www. rvsmembership.inಗೆ ಭೇಟಿ ನೀಡಿ' ಎಂದು ಹೇಳಿದರು. ಸಂಪರ್ಕಕ್ಕೆ: 080 26611031

ಸಂಕ್ಷಿಪ್ತ ಸುದ್ದಿ

ಜಲಮಂಡಳಿ ಫೋನ್ ಇನ್ ನಾಳೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಇದೇ ಸೆ. 2ರಂದು ಬೆಳಿಗ್ಗೆ 9ರಿಂದ 10.30ರವರೆಗೆ ನೇರ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಂಡಿದೆ.

ಜಲಮಂಡಳಿ ಅಧ್ಯಕ್ಷ ಎನ್. ಜಯರಾಂ ಅವರು ಅಹವಾಲು ಆಲಿಸಲಿದ್ದಾರೆ. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆ ತಿಳಿಸಿ ದೂರು ನೀಡಬಹುದು. ದೂರವಾಣಿ ಸಂಖ್ಯೆ: 080-22945119.

ಪರಿಷತ್ ನೂತನ ಸದಸ್ಯರ ಪ್ರಮಾಣ ವಚನ

ಬೆಂಗಳೂರು: ವಿಧಾನ ಪರಿಷತ್ ನೂತನ ಸದಸ್ಯರಾದ ಉಮಾಶ್ರೀ, ಎಂ.ಆರ್. ಸೀತಾರಾಂ ಹಾಗೂ ಎಚ್.ಪಿ. ಸುಧಾಮ ದಾಸ್ ಅವರು ಗುರುವಾರ ಪ್ರಮಾಣವಚನ ಸ್ವೀಕರಿಸಿದರು. ಉಮಾಶ್ರೀ, ಸೀತಾರಾಂ ಭಗವಂತನ ಹೆಸರಲ್ಲಿ, ಸುಧಾಮ ದಾಸ್ ಬುದ್ಧ, ಬಸವ, ಅಂಬೇಡ್ಕರ್ ಹೆಸರಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ವಿಧಾನಸೌಧದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮ-ದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತಿತರರು ಉಪಸ್ಥಿತರಿದ್ದರು.

'ಚರ್ಚಿಸಿ ದಿನ ನಿಗದಿ'

ಬೆಂಗಳೂರು: 'ಇಸ್ರೊ ವಿಜ್ಞಾನಿಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವತಿಯಿಂದ ಸನ್ಮಾನಿಸಲು ನಿರ್ಧರಿಸಿದ್ದು, ಇಸ್ರೊ ಮುಖ್ಯಸ್ಥರು ಮತ್ತು ಮುಖ್ಯಮಂತ್ರಿ ಜೊತೆ ಚರ್ಚಿಸಿ ದಿನ ನಿಗದಿಪಡಿಸಲಾ-ಗುವುದು' ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ತಿಳಿಸಿದರು.

'ಚಂದ್ರಯಾನ – 3ರ ಯಶಸ್ಸಿಗೆ ಕಾರಣರಾದ ವಿಜ್ಞಾನಿಗಳನ್ನು ಸರ್ಕಾರದ ವತಿಯಿಂದ ಸನ್ಮಾನಿಸುವ ಕಾರ್ಯಕ್ರಮವನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಆಯೋಜಿಸಲು ಮುಖ್ಯಮಂತ್ರಿ ಸೂಚಿಸಿದ್ದಾರೆ' ಎಂದು ತಿಳಿಸಿದರು.

ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

'ದಲಿತ ಸಂಘಟನೆಗಳು ಒಗ್ಗೂಡಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತ ಸಂಘಟನೆಗಳು ಒಗ್ಗೂಡಬೇಕು. ನಮ್ಮ ಒಡಕುಗಳನ್ನೇ ಬೇರೆಯವರು ದುರ್ಬಳಕೆ ಮಾಡಿಕೊ-ಳ್ಳುತ್ತಾರೆ. ಹೀಗಾಗಿ, ಎಲ್ಲರೂ ಒಗ್ಗ-ಟ್ಟಾಗಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ಗುರುವಾರ ಹಮ್ಮಿಕೊಂಡಿದ್ದ ದೇವರಾಜ ಅರಸು ಜಯಂತ್ಯುತ್ಸವ, ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳ ಏಕತೆಗಾಗಿ ರಾಜ್ಯಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಎಲ್ಲ ದಲಿತ ನಾಯಕರು ಒಂದಾಗಿ ವಿಷಯವಾರು ಹೋರಾಟ ಮಾಡಬೇಕು. ಒಟ್ಟಾದರೆ ಸಮಾಜಕ್ಕೂ ಒಳ್ಳೆಯದು. ಸಂವಿಧಾನದ ಬಗ್ಗೆ ಗೌರವ ಇಲ್ಲದ, ಬದ್ಧತೆ ಇಲ್ಲದವರ ಕೈಗೆ ಅಧಿಕಾರ ನೀಡಿ ನ್ಯಾಯ ಕೇಳಿದರೆ ನ್ಯಾಯ ಸಿಗುವುದೇ? ಮುಂದಿನ ಲೋಕಸಭೆ ಚುನಾವಣೆಯಲ್ಲಿ ಅಂಥವರನ್ನು ದೂರ ಇಟ್ಟು, ಸಂವಿಧಾ-ನಬದ್ಧವಾಗಿ ಆಡಳಿತ ನಡೆಸುವವರಿಗೆ ಅಧಿಕಾರ ನೀಡಿ' ಎಂದು ಮನವಿ ಮಾಡಿದರು.

'ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನದಲ್ಲಿ ಸ್ವಲ್ಪ ಹಣ ಗ್ಯಾರಂಟಿ ಯೋಜನೆಗಳಿಗೆ ಪಡೆಯಲಾಗಿದೆ. ಆದರೆ, ₹ 11 ಸಾವಿರ ಕೋಟಿ ಹೋಗಿದೆ ಎಂದು ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ' ಎಂದರು.

'ದಲಿತ ಲೋಕದ ಧ್ರುವತಾರೆ ಡಿ.ಜಿ. ಸಾಗರ್' ಹಿಂದಿ ಅನುವಾದಿತ ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು, 'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿರಬಹುದು. ನಿಮ್ಮ ಧ್ವನಿಯಾಗಿ ಕೆಲಸ ಮಾಡುತ್ತಿ-ರಬಹುದು. ಆದರೆ, ಮನುವಾದಿಗಳು ನಮಗಿಂತ ಬಲಿಷ್ಠರಾಗಿದ್ದಾರೆ ಎಂಬುದನ್ನು ಮರೆಯಬಾರದು. ಬುದ್ಧ, ಬಸವ, ಅಂಬೇಡ್ಕರ್ ಆಶಯಗಳನ್ನು ಪ್ರತಿ ಮನೆಗೆ ತಲುಪಿಸಬೇಕು' ಎಂದು ಹೇಳಿದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಡಿ.ಜಿ. ಸಾಗರ್ ಅಧ್ಯಕ್ಷತೆ ವಹಿಸಿದ್ದರು. ಡಿ. ದೇವರಾಜ ಅರಸು ಕುರಿತು ಎಚ್.ಎಂ. ರುದ್ರಸ್ವಾಮಿ ಉಪನ್ಯಾಸ ನೀಡಿದರು. ಪಿಚ್ಚಳ್ಳಿ ಶ್ರೀನಿವಾಸ ತಂಡದವರು ಕ್ರಾಂತಿ ಗೀತೆಗಳನ್ನು ನಡೆಸಿಕೊಟ್ಟರು.

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ನಗರದಲ್ಲಿ ಗುರುವಾರ ಆಯೋಜಿಸಿದ್ದ ರಾಜ್ಯಮಟ್ಟದ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂಬೇಡ್ಕರ್ ಹಾಗೂ ದೇವರಾಜ ಅರಸು ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿದರು. ಸಚಿವ ಸತೀಶ್ ಜಾರಕಿಹೊಳಿ, ಡಿಎಸ್‌ಎಸ್ ರಾಜ್ಯ ಸಂಚಾಲಕ ಡಿ.ಜಿ. ಸಾಗರ್ ಇದ್ದರು —ಪ್ರಜಾವಾಣಿ ಚಿತ್ರ

ಶುಕ್ರವಾರ, ಸೆಪ್ಟೆಂಬರ್ 1, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 243 | ಪುಟ 14

● www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ನಾಯಕಿ ರುಕ್ಮಿಣಿ ವಸಂತ್ ಸಂದರ್ಶನ

ಜಿಡಿಪಿ ಶೇ 7.8ರಷ್ಟು ಬೆಳವಣಿಗೆ 10

ಆಳ-ಅಗಲ
ಬರದ ಕರಿ ನೆರಳು

ಹಾದಿ ತಪ್ಪಿ ಗಿರಕಿ ಹೊಡೆದ ಪ್ರಜ್ಞಾನ್ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
64,381 ▼	19,253 ▼	₹61,250 (ಬೆಂಗಳೂರು) ▲	₹76,600 (ಬೆಂಗಳೂರು) ▼	82.70 ▼

ಕಾಡಾನೆ ದಾಳಿ ಶಾರ್ಪ್‌ಶೂಟರ್ ಸಾವು

ಪ್ರಜಾವಾಣಿ ವಾರ್ತೆ

ಆಲೂರು (ಹಾಸನ): ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಗಾಯಾಳು ಕಾಡಾನೆ 'ಭೀಮ'ನ ದಾಳಿಗೆ ಸಿಲುಕಿದ್ದ ಅರಣ್ಯ ಇಲಾಖೆಯ ಶಾರ್ಪ್ ಶೂಟರ್ ವೆಂಕಟೇಶ್ (65) ಆಸ್ಪತ್ರೆಯಲ್ಲಿ ಮೃತಪಟ್ಟರು.



ವೆಂಕಟೇಶ್

ತಾಲ್ಲೂಕಿನ ಹಳ್ಳಿಯೂರು ಗ್ರಾಮದಲ್ಲಿ ಗುರುವಾರ ಕಾರ್ಯಾಚರಣೆ ವೇಳೆ ಅರಿವಳಿಕೆ ಚುಚ್ಚುಮದ್ದು ಶೂಟ್ ಮಾಡಿದ ಕೂಡಲೇ ಅವರ ಮೇಲೆ ದಾಳಿ ಮಾಡಿದ ಆನೆ ಸೊಂಡಿಲಿಂದ ನೆಲಕ್ಕೆ ಅಪ್ಪಳಿಸಿ, ಕಾಲಿನಿಂದ ತುಳಿದಿತ್ತು. ತೀವ್ರವಾಗಿ ಗಾಯಗೊಂಡ ಅವರನ್ನು ತಕ್ಷಣ ಜೀರೋ ಟ್ರಾಫಿಕ್‌ನಲ್ಲಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು.

6ನೇ ಪುಟ ನೋಡಿ

ಪರಿಸ್ಥಿತಿ ಹೀಗೆ ಮುಂದುವರಿದರೆ ಲೋಡ್‌ಶೆಡ್ಡಿಂಗ್‌ನತ್ತ ಸಾಗಲಿದೆ ರಾಜ್ಯ

ಕರೆಂಟ್ ಬೇಡಿಕೆ ದುಪ್ಪಟ್ಟು

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಮಳೆ ಕೊರತೆಯಿಂದಾಗಿ ರಾಜ್ಯದಲ್ಲಿ ಶ್ರಾವಣದಲ್ಲೇ ಬೇಸಿಗೆಯ ವಾತಾವರಣ ನಿರ್ಮಾಣವಾಗಿದ್ದು, ವಿದ್ಯುತ್ ಬೇಡಿಕೆ ದುಪ್ಪಟ್ಟಾಗಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಲೋಡ್ ಶೆಡ್ಡಿಂಗ್‌ನತ್ತ ರಾಜ್ಯ ಸಾಗಲಿದೆ.

ಬೇಸಿಗೆ ಆರಂಭಕ್ಕೂ ಆರೇಳು ತಿಂಗಳ ಮೊದಲೇ ವಿದ್ಯುತ್ ಬೇಡಿಕೆ ಗಣನೀಯವಾಗಿ ಹೆಚ್ಚಳವಾಗಿದೆ. ಕೊರತೆ ಸರಿದೂಗಿಸಲು ಹರಸಾಹಸ ಮಾಡುತ್ತಿರುವ ಇಂಧನ ಇಲಾಖೆ ಪ್ರತಿ ಯೂನಿಟ್‌ಗೆ ₹8.45 ನೀಡಿ ಖರೀದಿಸುತ್ತಿದೆ. ಆದರೂ, ಕೊರತೆಯ ಪ್ರಮಾಣ ಪ್ರತಿ ದಿನವೂ ಹೆಚ್ಚುತ್ತಲೇ ಸಾಗಿದೆ.

ಜುಲೈನಲ್ಲಿ ಒಂದು ದಿನ ಗರಿಷ್ಠ 8 ಸಾವಿರ ಮೆಗಾವಾಟ್ ವಿದ್ಯುತ್ ಬಳಕೆ ಆಗಿತ್ತು. ಆಗಸ್ಟ್ ಅಂತ್ಯದ ವೇಳೆಗೆ ದಿನದ ಗರಿಷ್ಠ ಬೇಡಿಕೆ 16 ಸಾವಿರ ಮೆಗಾವಾಟ್ ದಾಟಿದೆ. ಏಪ್ರಿಲ್‌ನಲ್ಲಿ ಪ್ರಸಕ್ತ ವರ್ಷದಲ್ಲೇ ಅತ್ಯಧಿಕ ಅಂದರೆ 16,180 ಮೆಗಾವಾಟ್‌ಗೆ ಬೇಡಿಕೆ ಬಂದಿತ್ತು. ಸಾಮಾನ್ಯವಾಗಿ ಫೆಬ್ರುವರಿ ಕಳೆದ ನಂತರವೇ ಮತ್ತೆ ಅಧಿಕ ಪ್ರಮಾಣದ ವಿದ್ಯುತ್ ಬಳಕೆ ಆರಂಭವಾಗುತ್ತಿತ್ತು. ಆದರೆ, ಆ.30 ರಂದು ಒಂದೇ ದಿನ 16,932 ಮೆಗಾವಾಟ್ ವಿದ್ಯುತ್ ಬಳಕೆಯಾಗಿದೆ.

6ನೇ ಪುಟ ನೋಡಿ

ಕಲ್ಲಿದ್ದಲು ಕೊರತೆ

ಶಾಖೋತ್ಪನ್ನ ಕೇಂದ್ರಗಳಲ್ಲಿ ವಿದ್ಯುತ್ ಉತ್ಪಾದನೆಗೆ ಅಗತ್ಯವಾದ ಕಲ್ಲಿದ್ದಲು ಪೂರೈಕೆಯಾಗುತ್ತಿಲ್ಲ. ಹಾಗಾಗಿ, ಉತ್ಪಾದನೆ ಕುಂಠಿತವಾಗಿದೆ.

ರಾಯಚೂರು ಆರ್‌ಟಿಪಿಎಸ್‌ನ ಒಟ್ಟು 8 ವಿದ್ಯುತ್ ಘಟಕಗಳಲ್ಲಿ 4 ವಿದ್ಯುತ್ ಘಟಕಗಳಲ್ಲಿ ಉತ್ಪಾದನೆ ಆಗುತ್ತಿದೆ. 1,720 ಮೆಗಾವಾಟ್ ಸಾಮರ್ಥ್ಯದಲ್ಲಿ ಕೇವಲ 450 ಮೆಗಾವಾಟ್ ಲಭಿಸುತ್ತಿದೆ. ಕಲ್ಲಿದ್ದಲು ವಿಭಾಗದಲ್ಲಿ ಒಂದು ಲಕ್ಷ ಟನ್ ಕಲ್ಲಿದ್ದಲು ಸಂಗ್ರಹ ಇದೆ. ವಿವಿಧ ಕಲ್ಲಿದ್ದಲು ಗಣಿಗಳಿಂದ ಪ್ರತಿದಿನ ಎಂಟು ರೇಕ್‌ಗಳು ಬರುತ್ತಿವೆ.

6ನೇ ಪುಟ ನೋಡಿ

ವಿದ್ಯುತ್ ಮೂಲ	ಉತ್ಪಾದನಾ ಸಾಮರ್ಥ್ಯ (ಮೆಗಾವಾಟ್‌ಗಳಲ್ಲಿ)
ಜಲಶಕ್ತಿ	3,679
ಶಾಖೋತ್ಪನ್ನ	5,020
ಸೌರ, ಪವನಶಕ್ತಿ	39
ಒಟ್ಟು	8738

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಾಗ ಸೌರವಿದ್ಯುತ್ ಉತ್ಪಾದನೆಗೆ ಒತ್ತು ನೀಡಿತ್ತು, ಕಳೆದ ಐದು ವರ್ಷಗಳಲ್ಲಿ ಪ್ರಯತ್ನಗಳು ಸ್ಥಗಿತವಾಗಿದ್ದೇ ಕೊರತೆಗೆ ಕಾರಣ

ಕೆ.ಜೆ.ಜಾರ್ಜ್
ಇಂಧನ ಸಚಿವ

'10 ದಿನಗಳಲ್ಲಿ ಬೆಳೆ ನಷ್ಟದ ವರದಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಳೆ ಕೊರತೆಯಾಗಿರುವುದರಿಂದ ರಾಜ್ಯದಲ್ಲಿ ಈ ಬಾರಿ ಕೆಟ್ಟ ಪರಿಸ್ಥಿತಿ ತಲೆದೋರಿದ್ದು, ಬೆಳೆ ಕೈಸೇರುವ ಪರಿಸ್ಥಿತಿಯೂ ಇಲ್ಲ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಪ್ರೆಸ್‌ಕ್ಲಬ್ ವತಿಯಿಂದ ಗುರುವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಬೆಳೆಯ ಸಂಪೂರ್ಣ ನಷ್ಟದ ಕುರಿತಾದ ವಾಸ್ತವ ವರದಿ 10 ದಿನಗಳಲ್ಲಿ ದೊರೆಯಲಿದೆ. ರಾಜ್ಯದ 14 ಅಣೆಕಟ್ಟುಗಳಲ್ಲಿ ಶೇ 60ಕ್ಕಿಂತಲೂ ಕಡಿಮೆ ನೀರು ಸಂಗ್ರಹವಾಗಿದೆ. ಜೂನ್ 1ರಿಂದ ಆಗಸ್ಟ್ 30ರವರೆಗೆ 660 ಮಿ.ಮೀ. ಮಳೆಯಾಗಬೇಕಾಗಿತ್ತು. ಆದರೆ, 488 ಮಿ.ಮೀ. ಮಾತ್ರ ಮಳೆಯಾಗಿದ್ದು, ಶೇ 26ರಷ್ಟು ಕೊರತೆಯಾಗಿದೆ' ಎಂದು ವಿವರಿಸಿದರು.

6ನೇ ಪುಟ ನೋಡಿ

'ಅದಾನಿ ಕಂಪನಿಗಳಲ್ಲಿ ಅಕ್ರಮ, ರಹಸ್ಯ ಹೂಡಿಕೆ'

ಸಂಘಟಿತ ಅಪರಾಧ, ಭ್ರಷ್ಟಾಚಾರ ವರದಿ ಯೋಜನೆ

ನವದೆಹಲಿ (ಪಿಟಿಐ): ಅದಾನಿ ಕುಟುಂಬವು ತನ್ನದೇ ಕಂಪನಿಗಳ ಷೇರುಗಳಲ್ಲಿ ರಹಸ್ಯವಾಗಿ ಹೂಡಿಕೆ ಮಾಡುವ ಮೂಲಕ 2013ರಿಂದ 2018ರ ಅವಧಿಯಲ್ಲಿ ಸಮೂಹದ ಷೇರುಗಳ ಮೌಲ್ಯದಲ್ಲಿ ಭಾರಿ ಏರಿಕೆ ಕಾಣುವಂತೆ ಮಾಡಿದೆ ಎಂದು ತನಿಖಾ ಪತ್ರಕರ್ತರ ಸಂಘಟನೆಯಾದ 'ಸಂಘಟಿತ ಅಪರಾಧ ಮತ್ತು ಭ್ರಷ್ಟಾಚಾರ ವರದಿ ಯೋಜನೆ' (ಒಸಿಸಿಆರ್‌ಪಿ) ಆರೋಪ ಮಾಡಿದೆ.

ಪಾರದರ್ಶಕ ಅಲ್ಲದ (opaque), ಮಾರಿಷಸ್ ಮೂಲದ ಫಂಡ್‌ಗಳ ಮೂಲಕ ಅದಾನಿ ಸಮೂಹದ ಕಂಪನಿಗಳಲ್ಲಿ ₹8,269 ಕೋಟಿ ಹೂಡಿಕೆ ಮಾಡಲಾಗಿದೆ ಎಂದು ವರದಿಯಲ್ಲಿ ತಿಳಿಸಿದೆ.

ಪಾರದರ್ಶಕ ಅಲ್ಲದ ಫಂಡ್ ಎಂದರೆ ಯಾವೆಲ್ಲಾ ಕಂಪನಿಗಳ ಷೇರುಗಳಲ್ಲಿ ಹೂಡಿಕೆ ಮಾಡಲಾಗಿದೆ ಎನ್ನುವ ಮಾಹಿತಿಯು ಹೂಡಿಕೆದಾರರಿಗೆ ತಿಳಿದಿರುವುದಿಲ್ಲ.

ಅದಾನಿ ಸಮೂಹದ ವಿರುದ್ಧ ಅಮೆರಿಕದ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ರಿಸರ್ಚ್ ಆರು ತಿಂಗಳ ಹಿಂದಷ್ಟೇ ಇದೇ ರೀತಿಯ ಆರೋಪ ಮಾಡಿತ್ತು.

11ನೇ ಪುಟ ನೋಡಿ

ಜಿ20 ಸಭೆಗೂ ಮುನ್ನ ಭಾರತದ ಪ್ರಸಿದ್ಧಿಗೆ ಕಳಂಕದ ಅಪಾಯ ಎದುರಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಕ್ರಮ ಕೈಗೊಂಡು, ಅದಾನಿ ವಿರುದ್ಧ ತನಿಖೆ ನಡೆಸಬೇಕು

ರಾಹುಲ್ ಗಾಂಧಿ
ಕಾಂಗ್ರೆಸ್ ಸಂಸದ

ಜಾರ್ಜ್ ಸೊರೊಸ್‌ನಂತಹ ಕೆಲವು ಶಕ್ತಿಗಳು ಇವೆ. ಸೌಮ್ಯ ದೇಶವಾಗಿದ್ದ ಭಾರತ ಈಗ ಶಕ್ತಿಶಾಲಿಯಾಗಿ ಹೊರಹೊಮ್ಮಿದೆ. ಇದು ಬಹಳ ಜನರಿಗೆ ಕಣ್ಣುರಿಯಾಗಿದೆ

ಸಯ್ಯದ್ ಜಫರ್ ಇಸ್ಲಾಂ
ಬಿಜೆಪಿ ವಕ್ತಾರ

ಆರೋಪ ಅಲ್ಲಗಳೆದ ಸಮೂಹ

ಒಸಿಸಿಆರ್‌ಪಿ ಮಾಡಿರುವ ಆರೋಪವನ್ನು ಅದಾನಿ ಸಮೂಹವು ಅಲ್ಲಗಳೆದಿದ್ದು, ಇವು 'ಪುನರಾವರ್ತಿತ ಆರೋಪಗಳಾಗಿವೆ' ಎಂದು ಹೇಳಿದೆ.

ಉದ್ಯಮಿ ಸೊರೋಸ್ ಬೆಂಬಲಿತ ಕೆಲವು ವಿದೇಶಿ ಮಾಧ್ಯಮಗಳು ಆಧಾರರಹಿತವಾದ ಹಿಂಡನ್‌ಬರ್ಗ್ ವರದಿಗೆ ಮತ್ತೆ ಜೀವಕೊಡುವ ಕೆಲಸ ಮಾಡುತ್ತಿವೆ ಎಂದು ಸಮೂಹವು ಪ್ರಕಟಣೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದೆ.

11ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಶಾಂತ್ ತಿಮ್ಮಯ್ಯ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಶಾಂತ್ ತಿಮ್ಮಯ್ಯ ಅವರ ಹುದ್ದೆಯ ಅವಧಿ 2022ರಲ್ಲೇ ಮುಗಿದಿದ್ದು, ಅವರನ್ನು ವಜಾ ಮಾಡಿ ರಾಜ್ಯ ಸರ್ಕಾರ ಗುರುವಾರ ಅಧಿಸೂಚನೆ ಹೊರಡಿಸಿದೆ.

ಜಲ ಕಾಯ್ದೆ ಹಾಗೂ ಅಧ್ಯಕ್ಷರ ನೇಮಕಾತಿಯ ನಿಯಮಾವಳಿಗಳ ಪ್ರಕಾರ ಶಾಂತ್ ತಿಮ್ಮಯ್ಯ ಅವರ ಅವಧಿ ಮುಗಿದಿರುವುದರಿಂದ ತತ್‌ಕ್ಷಣದಿಂದ ಜಾರಿಗೆ ಬರುವಂತೆ ಅವರನ್ನು

ಶಾಂತ್ ತಿಮ್ಮಯ್ಯ

ಹುದ್ದೆಯಿಂದ ಬಿಡುಗಡೆ ಮಾಡಲಾಗಿದೆ. ಹೊಸ ಅಧ್ಯಕ್ಷರು ಆಯ್ಕೆಯಾಗುವವರೆಗೂ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರಿಗೆ ಅಧ್ಯಕ್ಷ ಹುದ್ದೆಯನ್ನು ಹೆಚ್ಚುವರಿಯಾಗಿ ವಹಿಸಿ ಆದೇಶಿಸಲಾಗಿದೆ.

ಜಲ ಕಾಯ್ದೆ ಸೆಕ್ಷನ್ 5(6) ಪ್ರಕಾರ ಮಂಡಳಿಯ ಅಧ್ಯಕ್ಷ ಹುದ್ದೆಯ ಅವಧಿ ಮೂರು ವರ್ಷ. ಅಧ್ಯಕ್ಷರ ಆಯ್ಕೆಯ ನಿಯಮಾವಳಿಯಂತೆ 2021 ನವೆಂಬರ್ 15ರಂದು ಹೊರಡಿಸಿರುವ ನೇಮಕ ಆದೇಶಕ್ಕೆ (ಎಫ್‌ಇಇ 143 ಇಪಿಸಿ 2020) ತಿದ್ದುಪಡಿ ಮಾಡಿರುವುದರಿಂದ, ಈಗಿನ ಅಧ್ಯಕ್ಷರ ಅವಧಿ 2022ರ ಮಾರ್ಚ್ 4ರಂದೇ ಮುಗಿದಿದೆ ಎಂದು ತಿಳಿಸಲಾಗಿದೆ. ಶಾಂತ್ ಎ. ತಿಮ್ಮಯ್ಯ 2021ರ ನವೆಂಬರ್ 15ರಿಂದ ಅಧ್ಯಕ್ಷ ಹುದ್ದೆ ವಹಿಸಿಕೊಂಡಿದ್ದು, ಅವರ ಅವಧಿ 2022ರ ಮಾರ್ಚ್ 3ರವರೆಗಿತ್ತು.

6ನೇ ಪುಟ ನೋಡಿ

ತಮಿಳುನಾಡಿಗೆ 13.32 ಟಿಎಂಸಿ ಅಡಿ ನೀರು: ಪ್ರಮಾಣಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಿಂದ ತಮಿಳುನಾಡಿಗೆ ಈ ವರ್ಷ ಹರಿಸಿರುವ ರುವ ಕಾವೇರಿ ನೀರಿನ ಪ್ರಮಾಣದ ಕುರಿತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಸುಪ್ರೀಂ ಕೋರ್ಟ್‌ಗೆ ಗುರುವಾರ ಪ್ರಮಾಣಪತ್ರ ಸಲ್ಲಿಸಿದೆ.

'ಕಾವೇರಿ ನೀರು ಬಿಡುಗಡೆಗೆ ಸಂಬಂಧಿಸಿದಂತೆ ಪ್ರಾಧಿಕಾರದ ಆದೇಶವನ್ನು ಕರ್ನಾಟಕ ಪಾಲಿಸಿದೆ. ತಮಿಳುನಾಡಿಗೆ ಪ್ರತಿದಿನ 10 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಪ್ರಾಧಿಕಾರವು ಆಗಸ್ಟ್ 11ರಂದು ಆದೇಶಿಸಿತ್ತು. ಕರ್ನಾಟಕವು ಆಗಸ್ಟ್ 12ರಿಂದ 27ರ ವರೆಗೆ ಒಟ್ಟು 13.32 ಟಿಎಂಸಿ ಅಡಿ ನೀರು ಹರಿಸಿದೆ. ಇನ್ನೊಂದೆಡೆ, ಕರ್ನಾಟಕದಲ್ಲಿ ಶೇ 51.22ರಷ್ಟು ಮಳೆ ಕೊರತೆಯಾಗಿದೆ' ಎಂದು ಪ್ರಮಾಣಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಕರ್ನಾಟಕವು ಕಾವೇರಿ ನೀರು ಬಿಡುಗಡೆ ಮಾಡಿರುವ ಪ್ರಮಾಣದ ಕುರಿತು ವರದಿ ಸಲ್ಲಿಸು ವಂತೆ ಪ್ರಾಧಿಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿತ್ತು.

ಶ್ರೀರಂಗಪಟ್ಟಣ ಸ್ನಾನಘಟ್ಟದ ಬಳಿ ಕಾವೇರಿ ನದಿಗೆ ಇಳಿದ ಭೂಮಿತಾಯಿ ರೈತ ಹೋರಾಟ ಸಮಿತಿ ಸದಸ್ಯರು ನೀರು ಹರಿಸುವುದನ್ನು ನಿಲ್ಲಿಸುವವರೆಗೂ ಹೋರಾಟ ಮುಂದುವರಿಸುತ್ತೇವೆ ಎಂದು ನದಿ ನೀರು ಮುಟ್ಟಿ ಪ್ರಮಾಣ ಮಾಡಿದರು

ಸುಧಾ, ಮಯೂರ ಓದಿರಿ

ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/ಸಿ.ಎ./ ಸಹಕಾರಿ ವಸತಿ ಬಡಾವಣೆ,
ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ, ಕನಕಪುರ ತಾ||, ರಾಮನಗರ ಜಿಲ್ಲೆ.
ದೂ.: 080–29762005, 29762006, ಇ–ಮೇಲ್: kkpaplan@gmail.com

ಸಂಖ್ಯೆ : ಕೆ.ಪಿ.ಎ./ಇ.ಎಸ್.ಟಿ./ಎಫ್.ಡಿ./2023–24/869 ದಿನಾಂಕ : 31–08–2023

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕನಕಪುರ ಯೋಜನಾ ಪ್ರಾಧಿಕಾರದಲ್ಲಿ ಲಭ್ಯವಿರುವ ಹೆಚ್ಚುವರಿ ನಿಧಿ ಒಟ್ಟು ರೂ. 40.00 ಕೋಟಿಗಳನ್ನು ಒಂದು ವರ್ಷದ ಅವಧಿಗೆ ಮೀರದಂತೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡುವ ಸಲುವಾಗಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ರಲ್ಲಿ TPA/2023-24/AUCTION7 ಇ–ಹರಾಜು ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಆಸಕ್ತಿಯುಳ್ಳ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ನವರು ದಿನಾಂಕ : 13–09–2023 ರ ಸಂಜೆ 4.00 ಗಂಟೆಯೊಳಗೆ ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದು. ಹಾಗೂ ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ ವಿಳಾಸ : https://www.kppp.karnataka.gov.in ನಲ್ಲಿ ಪರಿಶೀಲಿಸಿಕೊಳ್ಳಬಹುದು.

ಸಹಿ/– ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ,
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ.

ಡಿಐಪಿಆರ್/ರಾಮನಗರ/145/ಮಣಿಪಾಲ್/2023–24

ಸೌಜನ್ಯಾ ಪ್ರಕರಣ: ಕೋರ್ಟ್ ಆದೇಶ ಪಾಲಿಸಲು ಸೂಚನೆ

ಬೆಂಗಳೂರು: 'ಸೌಜನ್ಯಾ ಕೊಲೆ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯ ನೀಡಿರುವ ಆದೇಶವನ್ನು ಮಹೇಶ್ ಶೆಟ್ಟಿ ತಿಮರೋಡಿ ಕಟ್ಟುನಿಟ್ಟಾಗಿ ಪಾಲಿಸಬೇಕು. ಅಂತೆಯೇ, ನ್ಯಾಯಾಲಯ ನೀಡಿರುವ ಪ್ರತಿಬಂಧಕ ಆದೇಶವನ್ನು ಮಹೇಶ್ ಶೆಟ್ಟಿ ತಿಮರೋಡಿ ಉಲ್ಲಂಘಿಸದಂತೆ ನೋಡಿಕೊಳ್ಳಬೇಕು' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ.

ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ, ಅವರ ಕುಟುಂಬದ ಸದಸ್ಯರು ಮತ್ತು ನ್ಯಾಯಾಂಗದ ವಿರುದ್ಧ ಹೇಳಿಕೆ ನೀಡದಂತೆ ವಿಚಾರಣಾ ನ್ಯಾಯಾಲಯ ಆದೇಶಿಸಿತ್ತು.

ಈ ಕುರಿತಂತೆ, 'ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ'ಯ ಪ್ರಾದೇಶಿಕ ನಿರ್ದೇಶಕ ಶೀನಪ್ಪ ಮತ್ತು ನಂದೀಶ್ ಕುಮಾರ್ ಜೈನ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ನ್ಯಾಯಪೀಠವು, ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಮಹೇಶ್ ತಿಮರೋಡಿ ಸೇರಿದಂತೆ ಒಂಬತ್ತು ಜನ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಪುರಾವೆ ಇದ್ದಷ್ಟೇ ನಂಬುವುದು ವೈಜ್ಞಾನಿಕತೆ: ಪ್ರಜ್ವಲ್ ಶಾಸ್ತ್ರಿ

ಪ್ರಜಾವಾಣಿ ವಾರ್ತೆ

ಸಂವಾದ ಕಾರ್ಯಕ್ರಮದಲ್ಲಿ ಪ್ರೊ. ಪ್ರಜ್ವಲ್ ಶಾಸ್ತ್ರಿ ಮಾತನಾಡಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: 'ಪುರಾವೆ ಇದ್ದಷ್ಟೇ ನಂಬುವುದೇ ವೈಜ್ಞಾನಿಕತೆ. ಹೊಸ ಪುರಾವೆ ಮುಖಾಮುಖಿಯಾದಾಗ ಹಿಂದಿನ ತೀರ್ಮಾನಗಳನ್ನು ಬದಲಾಯಿಸುವ ಕೆಚ್ಚು ವಿಜ್ಞಾನಕ್ಕಿದೆ' ಎಂದು ಆಸ್ಟ್ರೇಲಿಯಾದ ಅಂತರ ರಾಷ್ಟ್ರೀಯ ರೇಡಿಯೊ ಖಗೋಳ ವಿಜ್ಞಾನ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಪ್ರಜ್ವಲ್ ಶಾಸ್ತ್ರಿ ಹೇಳಿದರು.

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಗುರುವಾರ ನಡೆದ 'ವೈಜ್ಞಾನಿಕತೆ ಎಲ್ಲರಿಗಲ್ಲವೇ?' ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವೈಜ್ಞಾನಿಕ ವಿಧಾನಗಳಿಂದ ನಮ್ಮ ಸುತ್ತಮುತ್ತಲಿನ ಆಗುಹೋಗುಗಳನ್ನು ಅರ್ಥೈಸಲು ಸಾಧ್ಯವಾಗಿದೆ. ತನ್ನನ್ನು ತಾನು ತಿದ್ದಿಕೊಳ್ಳುವ ಶಕ್ತಿ ವಿಜ್ಞಾನಕ್ಕೆ, ವೈಜ್ಞಾನಿಕ ಮನೋಭಾವಕ್ಕೆ ಇದೆ. ಹಾಗಾಗಿ, ವೈಜ್ಞಾನಿಕತೆಯೇ ನಮ್ಮ ಪ್ರತಿ ಹೆಜ್ಜೆಗೂ ದಾರಿ ತೋರುವ ಪುಸ್ತಕ' ಎಂದು ಬಣ್ಣಿಸಿದರು.

'ವಿಜ್ಞಾನಿಗಳಿಗಷ್ಟೇ ಅಲ್ಲ, ಕ್ರೀಡಾಪಟು, ರೈತ, ಕಲಾವಿದ, ಕಾರ್ಮಿಕ, ರಾಜಕಾರಣಿ, ವಿದ್ಯಾರ್ಥಿ, ಯಾವುದೇ ಸಂಸ್ಥೆಯ ನಿರ್ವಾಹಕ ಎಲ್ಲರಿಗೂ ವೈಜ್ಞಾನಿಕ ಮನೋಭಾವ ಅಗತ್ಯ. ಮಕ್ಕಳಲ್ಲಿ ಈ ಮನೋಭಾವ ಸಹಜವಾಗಿ ಇರುತ್ತದೆ. ಆದರೆ, ಸಮಾಜವು ತಾರತಮ್ಯ, ಶೋಷಣೆ, ಭಯಗಳನ್ನು ಮಕ್ಕಳ ಮೇಲೆ ಹೇರಿ ಅವರ ಪ್ರಶ್ನಿಸುವ ಸ್ವಭಾವವನ್ನು ಹತ್ತಿಕ್ಕುತ್ತದೆ. ಇದರಿಂದ, ಅವರು ಹಿಂದುಳಿಯುವಂತೆ ಮಾಡುತ್ತಿದೆ' ಎಂದು ವಿಷಾದಿಸಿದರು.

'ಯುವಜನರು ಆಧುನಿಕ ತಂತ್ರಜ್ಞಾನದ ಫಲಗಳನ್ನು ತಮ್ಮದನ್ನಾಗಿಸಿಕೊಂಡರೂ, ಅದೇ ತಂತ್ರಜ್ಞಾನಕ್ಕೆ ಮೂಲಾಧಾರವಾಗಿರುವ ವೈಜ್ಞಾನಿಕತೆಯನ್ನು ತಿರಸ್ಕರಿಸುತ್ತಿದ್ದಾರೆ. ಇದು ಶಿಕ್ಷಣ ವ್ಯವಸ್ಥೆಯ ಕೊರತೆ ಮಾತ್ರವಲ್ಲ, ವಿಜ್ಞಾನಿಗಳಲ್ಲಿರುವ ಅವೈಜ್ಞಾನಿಕ ಭಾವ ಕೂಡ ಕಾರಣ' ಎಂದು ಬೇಸರಿಸಿದರು.

'ದೇವರು ಇದ್ದನಾ ಇಲ್ವ ಎಂಬ ಪ್ರಶ್ನೆ ವಿಜ್ಞಾನಕ್ಕೆ ಸಂಬಂಧಿಸಿದ್ದಲ್ಲ. ಅದೇ ಪ್ರಶ್ನೆಗಳು ಎದುರಾಗುತ್ತ ಇರುತ್ತವೆ. ವಿಜ್ಞಾನಿಗಳು ವೈಯಕ್ತಿಕವಾಗಿ ದೇವರನ್ನು ನಂಬುವುದು, ಪೂಜಿಸುವುದು ಅವರಿಗೆ ಸಂಬಂಧಿಸಿದ್ದು, ಆದರೆ, ಸಾರ್ವಜನಿಕವಾಗಿ ಆ ರೀತಿ ನಡೆದುಕೊಳ್ಳುವುದು ಸರಿಯಾದ ಕ್ರಮವಲ್ಲ. ಇಸ್ರೊ ವಿಜ್ಞಾನಿಗಳು ತಿರುಪತಿಗೆ ಹೋಗಿ ಪೂಜೆ ಮಾಡಿರುವುದು ಈ ಕಾರಣಕ್ಕೆ ಆಕ್ಷೇಪಾರ್ಹ. ಎಲ್ಲ ಧರ್ಮ, ಸಮುದಾಯಗಳ ಜನರು ಸೇರಿ ತಿಂಗಳಾನುಗಟ್ಟಲೆ ಶ್ರಮವಹಿಸಿರುತ್ತಾರೆ. ಕೆಲವರ ನಂಬಿಕೆ ಎಲ್ಲರ ನಂಬಿಕೆಯಾಗಿರುವುದಿಲ್ಲ. ಆದರೂ ಅಲ್ಲಿನ ಕೆಲವು ವಿಜ್ಞಾನಿಗಳು ಈ ರೀತಿಯ ನಡವಳಿಕೆ ತೋರಿದಾಗ ಉಳಿದ ವಿಜ್ಞಾನಿಗಳು ಮೌನ ವಹಿಸಬಾರದಿತ್ತು' ಎಂದರು.

'ನಾಸ್ತಿಕತೆಯ ಭಾವ, ಮೌಢ್ಯಗಳ ವಿರುದ್ಧದ ಮನೋಭಾವಗಳು ವಿಜ್ಞಾನಿಗಳಿಗಿಂತ ಹೊರಗೆಯೇ ಹೆಚ್ಚಿದೆ. ಹೊರಗೆಯೇ ಹೆಚ್ಚಿನ ಚರ್ಚೆಗಳು ನಡೆಯುತ್ತಿವೆ. ವಿಜ್ಞಾನಿಗಳಲ್ಲಿಯೂ ಈ ಭಾವ ಬರಬೇಕು' ಎಂದು ಹೇಳಿದರು.

ಪುರಸಭಾ ಕಾರ್ಯಾಲಯ, ಬೊಮ್ಮಸಂದ್ರ

ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560 099
ದೂರವಾಣಿ ಸಂಖ್ಯೆ: 080 – 2783 4655, ಇ–ಮೇಲ್: itstaff_ulb_bommasandra@yahoo.com

ಸಂಖ್ಯೆ:ಪು.ಕಾ.ಬೊ./ಆ.ಶಾ./05/2023–24 ದಿನಾಂಕ: 29.08.2023

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ)

ಮುಖ್ಯಾಧಿಕಾರಿ, ಪುರಸಭೆ, ಬೊಮ್ಮಸಂದ್ರ ರವರಿಂದ ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 & 2000 ರ ಪ್ರಕಾರ 15ನೇ ಹಣಕಾಸು ಅನುದಾನ, ಎಸ್.ಬಿ.ಎಂ ಅನುದಾನ ಮತ್ತು ಪುರಸಭಾ ನಿಧಿ ಅನುದಾನದಡಿ ಈ ಕೆಳಕಂಡ ವಿವರಗಳಂತೆ ಟೆಂಡರ್ ಕರೆಯಲಾಗಿರುತ್ತದೆ. ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇಚ್ಛೆಯುಳ್ಳ ಗುತ್ತಿಗೆದಾರರು/ಸರಬರಾಜುದಾರರು ಕೆಪಿಪಿಪಿ ಪೋರ್ಟಲ್‌ನ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. **"ಹೆಚ್ಚಿನ ವಿವರಗಳನ್ನು ಆರೋಗ್ಯ ಶಾಖೆಯಿಂದ ಮತ್ತು ಕಛೇರಿ ವೆಬ್‌ಸೈಟ್ www.bommasandratown.mrc.gov.in ನಲ್ಲಿ ಪಡೆಯಬಹುದಾಗಿರುತ್ತದೆ".**

ಕ್ರ ಸಂ	ವಿವರ	ಟೆಂಡರಿಗಿಟ್ಟ ಮೊತ್ತ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1	ಬೊಮ್ಮಸಂದ್ರ ಪುರಸಭೆಯ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಬೇಲಿಂಗ್‌ಯಂತ್ರ (Bailing Machine) ವನ್ನು ಖರೀದಿಸುವ ಕುರಿತು Indent No.DMA/2023-24/IND0293	ರೂ. 10,00,000/–	ರೂ. 25,000/–
2	ಬೊಮ್ಮಸಂದ್ರ ಪುರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ, ನೇರ ವೇತನ ಪಾವತಿ ಪೌರಕಾರ್ಮಿಕರು ಹಾಗೂ ಸ್ವಚ್ಛತಾ ಕೆಲಸ ನಿರ್ವಹಿಸುವ ಹೊರಗುತ್ತಿಗೆ ಕಾರ್ಮಿಕರಿಗೆ ಪ್ರತಿ ದಿನ ಬೆಳಗಿನ ಉಪಹಾರದ ಜೊತೆಗೆ ಮೊಟ್ಟೆಯನ್ನು ಪೂರೈಸುವುದು. Indent no. DMA/2023-24/SE0534	ರೂ. 9,20,000/–	ರೂ. 23,000/–
3	ಬೊಮ್ಮಸಂದ್ರ ಪುರಸಭೆಯ ಘನತ್ಯಾಜ್ಯ ವಸ್ತು ನಿರ್ವಹಣೆಯ ವಿವಿಧ ವಾಹನಗಳಿಗೆ ಚಾಲಕರು, ಆಪರೇಟರ್‌ಗಳು, ಲೋಡರ್ಸ್, ಹೆಲ್ಪರ್ಸ್, ಹಾಗೂ ಮೇಲ್ವಿಚಾರಕರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳವುದು. Indent no. DMA/2023-24/SE0540	ರೂ. 83,61,000/–	ರೂ. 1,67,220/–
4	ಬೊಮ್ಮಸಂದ್ರ ಪುರಸಭೆಯ ವ್ಯಾಪ್ತಿಯಲ್ಲಿರುವ ಒಳಚರಂಡಿಗಳ ನಿರ್ವಹಣೆಗಾಗಿ ಡಿ–ಸೆಲ್ಟಿಂಗ್ ಯಂತ್ರವನ್ನು ಖರೀದಿಸುವ ಕುರಿತು Indent no. DMA/2023-24/IND0292	ರೂ. 14,00,000/–	ರೂ. 35,000/–
5	ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಹಸಿತ್ಯಾಜ್ಯದಿಂದ ವಿದ್ಯುತ್ ಉತ್ಪಾದನಾ ಘಟಕವನ್ನು (Bio-gas plant) ನಿರ್ಮಿಸುವುದು. Indent no. DMA/2023-24/IND0295	ರೂ. 99,00,000/–	ರೂ. 1,98,000/–
6	ಬೊಮ್ಮಸಂದ್ರ ಪುರಸಭೆಯ ಮುಖ್ಯಾಧಿಕಾರಿಗಳು/ಪರಿಸರ ಅಭಿಯಂತರರ ಕಛೇರಿಯ ಉಪಯೋಗಕ್ಕಾಗಿ ಬಾಡಿಗೆ ಆಧಾರದ ಮೇರೆಗೆ ವಾಹನವನ್ನು ಪೂರೈಸುವುದು. Indent no. DMA/2023-24/SE0531	ರೂ. 4,80,000/–	ರೂ. 12,000/–

ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1. ಕೆಪಿಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 14.09.2023 ರ 16:00 ಘಂಟೆವರೆಗೆ.
2. ಕೆಪಿಪಿಪಿ ಪೋರ್ಟಲ್‌ನಲ್ಲಿ ಟೆಂಡರ್‌ನ್ನು ತೆರೆಯುವ ದಿನಾಂಕ: 15.09.2023. ರ 16.30 ಘಂಟೆಗೆ.

ಸಹಿ/– ಅಧ್ಯಕ್ಷರು ಪುರಸಭೆ, ಬೊಮ್ಮಸಂದ್ರ | ಸಹಿ/– ಉಪಾಧ್ಯಕ್ಷರು ಪುರಸಭೆ, ಬೊಮ್ಮಸಂದ್ರ | ಸಹಿ/– ಮುಖ್ಯಾಧಿಕಾರಿ ಪುರಸಭೆ, ಬೊಮ್ಮಸಂದ್ರ

ವಾಸಸಂಇ/ವಾ.ಪ್ರ/ಶಿರಡಿ ಸಾಯಿ/1118/2023–24

ದಕ್ಷಿಣ ವಲಯದಲ್ಲಿ ಟ್ರೇಡ್ ಲೈಸೆನ್ಸ್ ಅರ್ಜಿ ಪೂರ್ಣ ವಿಲೇವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಬಾಕಿ ಉಳಿದಿದ್ದ ವ್ಯಾಪಾರ ಪರವಾನಗಿ (ಟ್ರೇಡ್ ಲೈಸೆನ್ಸ್) ಅರ್ಜಿಗಳೆಲ್ಲವನ್ನೂ ವಿಲೇವಾರಿ ಮಾಡಲಾಗಿದೆ ಎಂದು ವಲಯ ಆಯುಕ್ತ ಜಯರಾಂ ರಾಯಪುರ ತಿಳಿಸಿದ್ದಾರೆ.

'ಸಕಾಲ'ದಲ್ಲೇ ಉಳಿದ ಟ್ರೇಡ್ ಲೈಸೆನ್ಸ್ ಅರ್ಜಿ' ಶೀರ್ಷಿಕೆಯಡಿ 'ಪ್ರಜಾವಾಣಿ' ಗುರುವಾರ ವರದಿ ಪ್ರಕಟಿಸಿತ್ತು. ಇದಕ್ಕೆ ಸ್ಪಂದಿಸಿದ ಜಯರಾಂ ರಾಯಪುರ, ವಲಯದಲ್ಲಿ ಬಾಕಿ ಉಳಿದಿದ್ದ 79 ಅರ್ಜಿಗಳು ವಿಲೇವಾರಿ ಮಾಡಲು ಅಧಿಕಾರಿಗಳಿಗೆ ಸೂಚಿಸಿದ್ದರು. ಗುರುವಾರ ಸಂಜೆಯೊಳಗೆ ಎಲ್ಲವನ್ನೂ ವಿಲೇವಾರಿ ಮಾಡಿ, 'ಶೂನ್ಯ' ದಾಖಲೆ ಮಾಡಿದ್ದಾರೆ.

ವಿಜಯನಗರದಲ್ಲಿ 23, ಬಸವನಗುಡಿ– 20, ಚಿಕ್ಕಪೇಟೆ– 14, ಜಯನಗರ– 14, ಬಿಟಿಎಂ ಲೇಔಟ್– 6, ಪದ್ಮನಾಭನಗರದಲ್ಲಿ 2 ಅರ್ಜಿಗಳು ಬಾಕಿ ಉಳಿದಿದ್ದವು. ಅವುಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಲಾಗಿದೆ. ಇನ್ನು ಮುಂದೆ ಯಾವುದೇ ರೀತಿ ಬಾಕಿ ಉಳಿಸಿಕೊಳ್ಳುವಂತಿಲ್ಲ. ಟ್ರೇಡ್ ಲೈಸೆನ್ಸ್ ಅರ್ಜಿಯ ಮೇಲೆ ಕ್ರಮ ಅವಧಿಯೊಳಗೆ ಕೈಗೊಳ್ಳಲೇಬೇಕು ಎಂದು ಸೂಚಿಸಲಾಗಿದೆ ಎಂದು ಜಯರಾಂ ತಿಳಿಸಿದರು.

ಬಿಬಿಎಂಪಿಯ ಇತರೆ ವಲಯಗಳಲ್ಲಿ ಟ್ರೇಡ್ ಲೈಸೆನ್ಸ್ ಬಾಕಿ ಇರುವ ಬಗ್ಗೆ ಕೆಲವು ಆರೋಗ್ಯ ಅಧಿಕಾರಿಗಳು ಪ್ರತಿಕ್ರಿಯಿಸಿದ್ದು, 'ಮುಖ್ಯ ಆರೋಗ್ಯಾಧಿಕಾರಿಗಳಿಗೆ ಕ್ರಮಕ್ಕಾಗಿ ಕಳುಹಿಸಿದ್ದೇವೆ. ಅಲ್ಲಿಂದಲೇ ಬಾಕಿ ತೀರುವಳಿಯಾಗಬೇಕು' ಎಂದು ಹೇಳಿದರು. ಈ ಬಗ್ಗೆ ಮುಖ್ಯ ಆರೋಗ್ಯಾಧಿಕಾರಿ ಬಾಲಸುಂದರ್ ಅವರು ಪ್ರತಿಕ್ರಿಯೆ ನೀಡಲಿಲ್ಲ.

'ಬರ ನಿರ್ವಹಣೆಗೆ ಸಣ್ಣ ನೀರಾವರಿ ಇಲಾಖೆ ಸಜ್ಜು'

ಬೆಂಗಳೂರು: 'ಬರ ಪರಿಸ್ಥಿತಿ ನಿಭಾಯಿಸಲು ಸಣ್ಣ ನೀರಾವರಿ ಇಲಾಖೆ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು, ಕೆ.ಸಿ. ವ್ಯಾಲಿ ಮತ್ತು ಎಚ್.ಎನ್. ವ್ಯಾಲಿಯಂಥ ಯೋಜನೆಗಳಿಂದ ಬಯಲು ಸೀಮೆಯ 164 ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಗಣನೀಯವಾಗಿ ಏರಿಕೆಯಾಗಿದೆ' ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಿಧನ ವಾರ್ತೆ

ಜೋಸೆಫ್ ಶಾಂತರಾಜ್



ಬೆಂಗಳೂರು: ಹೊಸಗುಡ್ಡದಹಳ್ಳಿ ಕುವೆಂಪುನಗರದ ನಿವಾಸಿ ಜೋಸೆಫ್ ಶಾಂತರಾಜ್ (67) ಗುರುವಾರ ನಿಧನರಾದರು.

ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ರಾಜ್ಯ ಕಾರ್ಯದರ್ಶಿಯಾಗಿದ್ದರು. ಅವರಿಗೆ ಪತ್ನಿ ಶೀಲಾ, ಪುತ್ರರಾದ ನಿಖಿಲ್, ನಿಶಾಲ್ ಇದ್ದಾರೆ. ಮೈಸೂರು ರಸ್ತೆಯ ಕ್ರೈಸ್ತಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

SUNAYANA EYE HOSPITAL, Jayanagar. Looking For Smart RECEPTIONISTS, ASSISTANTS For Doctors, Age: 25-40. Call: 9620220224 (9AM- 7PM)

Part-Time Jobs

TOP MNC Com. Licensed By Central Govt. Restart Your 2nd Career Opporty with Flexible Timings Age Limit 45yrs & Above: 7019215243/ 9886641282

Teachers/ Professors

REQUIRED EXPERIENCED candidates to handle Nursery Section with NTT qualification. Contact: Jnanavahini Vidya Samsthe (JVS) #8, BEML layout, 8th main, Basaveswara Nagar, Bengaluru-79. Phone: 9343745526. Email: jvsschool@gmail.com

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

Walk-in

TATA ADVANCED SYSTEMS **WALK-IN DRIVE**
Operator Assembly
Qualification: ITI- Fitter & Apprentice (NCVT) **Exp:** 4 to 8 Years
Description:
Assembly: Hands on experience in the Aerostructure Assembly process. Good understanding on Engineering drawing, familiar with hand tools & cutting tools
Work Location: Hyderabad
Date of Interview: 02-09-2023 Timings: 09.00AM-5.00PM
Documents to Carry(Only Xerox Copies):
1. Updated CV & Passport Size Photograph. (2) All Education Certificates.(3) Present Company CTC Letter & Last 3 months Payslips. (4) Previous Company Experience Letters/Service Certificates (5) Aadhaar Copy.
Venue: TATA Advanced Systems Limited Block-B30, #42 / 43, 1st Phase, Hosur Rd, Electronics City Phase 1, Electronic City, Bengaluru, Karnataka 560100

AUTOMOTIVE

Four Wheelers Selling

Maruti

REQUIRED SALVAGE quote for Maruti Brezza LXI CNG, KA53TC11 2018-18-2 with & without RC. 9844036218

RENTAL PROPERTIES

Accommodation Available

Commercial

500 SQFT Corner office space available for rent at Sheshadripuram 1st Main Road. 9739290396/ 9986436449.

REAL ESTATE SELLING

House

Basaveshwaranagar

SALE, OLD House at Basaveshwaranagar, BEML Layout. 39X60, South Facing. Price:18000/- sqft. 9035767333, 9242251819

Flat

Whitefield

"SALE: WHITEFIELD Sindhu Biravi West face, 3bedrooms, 1700sqft +400sqft of garden area 1Car-park Ground floor, Price:-2.10cr. "Golden Nest Realtors" 9980513550/ 9742113550"

Sarjapur Road

"SALE: SARJAPUR-ROAD Diyasree Elan Homes, duplex,NE entrance Ground floor 2895.sqft. 4bedrooms, 2car-parks, Price:-2.75 Cr. "Golden Nest Realtors" 9972013550/ 8105213550"

Rajajinagar

DNR HIGHLINE @ Okalipuram near LULU Mall Rajajinagar 3 & 4 Bedroom FLATS with 7 Star Luxurious Amenities for Sale. for details Contact: 9844027560.

Sites

General

EAGLETON RESORTS, BIDADI SITE 80X120, ES CORNER CLOSE GOLF GROUND CLEAR DOCUMENTS RS. 2.70Cr: 9845065084

PERSONAL

Change of Name

USHA, WIFE/O, JC826308M, SUB/ APTC, MURUGAN G, Vill- Kammavan Pet, Vellore, Tamil Nadu changed name USHA to M USHA, 31/08/2023, Notary K.V. Mani, Bangalore

I, CHANDANA.P.V W/o.K.B Venkateshwarulu R/o.#2474, LIG, 3rd Stage, Near Chaitanya Techno School, Yelahanka New Town, Bangalore- 560064 have changed my minor daughter's name from DIVYA K V to TRISHA K V affidavit dated:3-6-2023 before Notary S.R.Ravikumar, Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

CHANGE OF NAME
I, **UPASNA NATWAR SINGH THAKOR,** R/at. 202, 2nd Floor, Apex Pearl Apartment, Horamavu Main Road, Banasawadi, Bangalore-43, have changed my name to **UPASNA THAKOR** vide affidavit dated 31/08/2023 before Notary Y.R.Chandrasekar, Bangalore. Henceforth I shall be called **UPASNA THAKOR** only

I, MANJUNATHA Bakshi, Residing at #180 5th Cross GKW Layout Vijayanagar Bengaluru-560040. Have changed my name to Manjunath Bakshi, Vide affidavit dated 22-05-2019, before Notary H.S.Sakalesh Aradhya, Bangalore.

I, MALLAPPA GAMA S/o.Sangappa Gama R/a#90, 13th cross, Channappa Layout, SG.Kaval,Near Shanthidhama Collage, Magadi Main Road, Sunkadakatte, Bangalore- 560091 have changed my Name to MALLAPPA S GAMA vide affidavit dated:31.8.2023 before notary H.R.Karunakara, Bangalore

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats,Converted& Agriculture Lands Call:7204995189

ಜಾತಿ ಆಧಾರದ ಸಂಘರ್ಷ ಮನುಷ್ಯನ ವಿಕೃತಿ

ಬಟ್ಟೆ ಬಿಚ್ಚಿ ದೇಗುಲಕ್ಕೆ ಬನ್ನಿ ಎಂಬುದು ಅಮಾನವೀಯ: ನಾರಾಯಣ ಗುರು ಜಯಂತಿ ಕಾರ್ಯಕ್ರಮದಲ್ಲಿ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇವರನ್ನು ಮುಂದಿಟ್ಟುಕೊಂಡು ಜಾತಿ, ಧರ್ಮದ ನಡುವೆ ಸಂಘರ್ಷ ಸೃಷ್ಟಿಸುವುದು ದೇವರಿಗೆ ಮಾಡುವ ಅವಮಾನ. ಮನುಷ್ಯನ ವಿಕೃತಿ' ಎಂದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವೀಂದ್ರ ಕಲಾಕ್ಷೇತ್ರದಲ್ಲಿ ಗುರುವಾರ ಆಯೋಜಿಸಿದ್ದ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ದೇವರ ದೃಷ್ಟಿಯಲ್ಲಿ ಎಲ್ಲರೂ ಒಂದೇ. ಬಟ್ಟೆ ಬಿಚ್ಚಿ ದೇವಾಲಯಕ್ಕೆ ಬನ್ನಿ ಎನ್ನುವುದು ದೇವರ ದೃಷ್ಟಿಯಲ್ಲೂ ಅಮಾನವೀಯ. ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಜಾತಿ, ಧರ್ಮಗಳ ನಡುವೆ ಸಂಘರ್ಷ ಸೃಷ್ಟಿಸುವ ಶಕ್ತಿಗಳು ನಾರಾಯಣಗುರುಗಳ ಅವಧಿಯಲ್ಲೂ ಇದ್ದವು. ಈಗಲೂ ಇವೆ. ನಾರಾಯಣಗುರುಗಳು ಸಂಘರ್ಷಕ್ಕೆ ಅವಕಾಶ ನೀಡದೆ ಸಮಾಜದಲ್ಲಿ ವ್ಯಾಪಕ ಬದಲಾವಣೆ ತಂದರು. ಸಮಾಜ ಸುಧಾರಣೆಯ ಕ್ರಾಂತಿಕಾರಕ ಧಾರ್ಮಿಕ ಚಳವಳಿ ಪರಿಣಾಮವಾಗಿ ಕೇರಳದಲ್ಲಿ 60 ದೇವಸ್ಥಾನಗಳನ್ನು ನಿರ್ಮಿಸಿದರು. ಉಳಿದ ದೇವಸ್ಥಾನಗಳಿಗೆ ಪ್ರವೇಶ ಇಲ್ಲದ ಶೂದ್ರ ಮತ್ತು ದಲಿತ ಸಮುದಾಯವನ್ನು ತಾವೇ ಕಟ್ಟಿಸಿದ ದೇವಸ್ಥಾನಗಳ ಒಳಗೆ ಕರೆತಂದರು' ಎಂದು ಸ್ಮರಿಸಿದರು.

'ನಾರಾಯಣಗುರುಗಳು ಒಂದು ಜಾತಿ, ಧರ್ಮಕ್ಕೆ ಸೇರಿದವರಲ್ಲ. ಅವರು ಜಾತಿ-ಧರ್ಮದ ತಾರತಮ್ಯಗಳನ್ನು ಮೀರಿದ ವಿಶ್ವಮಾನವ. ಹಾಗಾಗಿ, ಅವರ ಜಯಂತಿಯನ್ನು ಸರ್ಕಾರವೇ ಆಚರಿಸಬೇಕು ಎಂದು ಆದೇಶ ಮಾಡಿದೆ' ಎಂದರು.

ಸೋಲೂರು ಆರ್ಯ ಈಡಿಗ ಮಹಾಸಂಸ್ಥಾನದ ವಿಖ್ಯಾತಾನಂದ ಸ್ವಾಮೀಜಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಶಾಸಕ ಗೋಪಾಲಕೃಷ್ಣ ಬೇಳೂರು, ಎಚ್.ಆರ್.ಗವಿಯಪ್ಪ, ಆರ್ಯಈಡಿಗ ಸಮಾಜದ ಅಧ್ಯಕ್ಷ ಎಂ.ತಿಮ್ಮೇಗೌಡ ಮತ್ತಿತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಕಾರ್ಯಕ್ರಮದಲ್ಲಿ ನಾರಾಯಣಗುರುಗಳ ಭಾವಚಿತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪನಮನ ಸಲ್ಲಿಸಿದರು. ಸೋಲೂರು ವಿಖ್ಯಾತಾನಂದ ಸ್ವಾಮೀಜಿ, ಸಚಿವ ಮಧು ಬಂಗಾರಪ್ಪ ಇದ್ದರು —ಪ್ರಜಾವಾಣಿ ಚಿತ್ರ.

'ಈಡಿಗ ಅಭಿವೃದ್ಧಿ ನಿಗಮಕ್ಕೆ ಅನುದಾನ'

ಆರ್ಯ ಈಡಿಗ ಅಭಿವೃದ್ಧಿ ನಿಗಮ ಹಾಗೂ ನಾರಾಯಣಗುರು ಭವನ ನಿರ್ಮಾಣಕ್ಕೆ ಅನುದಾನ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ನಾರಾಯಣ ಗುರು ಈಡಿಗ ಅಭಿವೃದ್ಧಿ ನಿಗಮಕ್ಕೆ ₹ 500 ಕೋಟಿ ನೀಡಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಮನವಿಗೆ ಅವರು ವೇದಿಕೆಯಲ್ಲೇ ಸಮ್ಮತಿ ಸೂಚಿಸಿದರು.

'ಸಿದ್ದರಾಮಯ್ಯ ಅವರು ಮೊದಲ ಅವಧಿ ಮುಖ್ಯಮಂತ್ರಿಯಾಗಿದ್ದಾಗ ಮೂರು ಬೇಡಿಕೆ ಸಲ್ಲಿಸಿದ್ದೆ. ಬ್ರಹ್ಮಶ್ರೀ ನಾರಾಯಣ ಗುರು ಈಡಿಗ ಅಭಿವೃದ್ಧಿ ನಿಗಮ, ನಾರಾಯಣ ಗುರು ಅಧ್ಯಯನ ಪೀಠ ಬೇಡಿಕೆ ಈಡೇರಿವೆ' ಎಂದು ಮಧು ಬಂಗಾರಪ್ಪ ಹೇಳಿದರು.

ಫೋಟೊ ಜರ್ನಲಿಸ್ಟ್ಸ್ ಅಸೋಸಿಯೇಷನ್ ಆಫ್ ಬೆಂಗಳೂರು ನಗರದ ಚಿತ್ರಕಲಾ ಪರಿಷತ್ತಿನಲ್ಲಿ ಗುರುವಾರ ಆಯೋಜಿಸಿದ್ದ 'ಫ್ರೋಜನ್ ಮೆಮೋರಿಸ್' ಛಾಯಾಚಿತ್ರ ಪ್ರದರ್ಶನವನ್ನು ಯುವತಿಯರು ವೀಕ್ಷಣೆ ಮಾಡಿದರು. ಈ ಪ್ರದರ್ಶನ ಸೆ.2 ರವರೆಗೆ ನಡೆಯಲಿದೆ -ಪ್ರಜಾವಾಣಿ ಚಿತ್ರ/ ರಂಜು ಪಿ.

ಸುಪ್ರೀಂ ಕೋರ್ಟ್ ವಕೀಲ ಸಾಯಿ ದೀಪಕ್ ಪ್ರತಿಪಾದನೆ

ಯುಸಿಸಿ ಎರಡು ಧರ್ಮಗಳ ನಡುವಿನ ವಿಚಾರವಲ್ಲ

ಬೆಂಗಳೂರು: 'ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಎರಡು ಧರ್ಮಗಳ ಮಧ್ಯದ ವಿಚಾರ ಎಂಬ ಕಲ್ಪನೆಯೇ ತಪ್ಪು' ಎಂದು ಪ್ರತಿಪಾದಿಸಿದ ಸುಪ್ರೀಂ ಕೋರ್ಟ್ ವಕೀಲ, ಲೇಖಕ ಜೆ.ಸಾಯಿ ದೀಪಕ್, 'ಈ ಕುರಿತ ಪ್ರಶ್ನೆಗಳಿಗೆ ಸುದೀರ್ಘವಾದ ಸಲಹೆಗಳನ್ನು ಪಡೆದು ಮುನ್ನಡೆಯಬೇಕಾದ ಅಗತ್ಯವಿದೆ ಮತ್ತು ಇದನ್ನು ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ) ರೀತಿ ಅನುಷ್ಠಾನಗೊಳಿಸಲು ಸಾಧ್ಯವಿಲ್ಲ' ಎಂದು ಅಭಿಪ್ರಾಯಪಟ್ಟರು.

'ಕರ್ನಾಟಕ ವಕೀಲರ ಪರಿಷತ್ತು' ಮತ್ತು 'ಲಾ ಅಕಾಡೆಮಿ' ಸಹಯೋಗದಲ್ಲಿ ಎನ್‌ಜಿಒ ಹಾಲ್ ನಲ್ಲಿ ಗುರುವಾರ ಏರ್ಪಡಿಸಿದ್ದ, 'ಏಕರೂಪ ನಾಗರಿಕ ಸಂಹಿತೆಯ ಸಾಧಕ–ಬಾಧಕಗಳು' ಉಪನ್ಯಾಸದಲ್ಲಿ ಅವರು ಮಾತನಾಡಿದರು. 'ಭಾರತ ವೈವಿಧ್ಯತೆಗಳಿಂದ ಕೂಡಿದ ದೇಶ. ಹೀಗಾಗಿ, ಯುಸಿಸಿ ಬೇರೆ ಬೇರೆ ಧರ್ಮಗಳಿಗೆ ತನ್ನದೇ ಆದ ವ್ಯಾಖ್ಯಾನವನ್ನು ತೆರೆದಿಡುತ್ತದೆ. ಯುಸಿಸಿಯಿಂದಾಗುವ ಲಾಭಗಳ ಕುರಿತು ನಾವೀಗ ಸ್ಪಷ್ಟವಾಗಿ ಮಾತನಾಡದೇ ಹೋದರೆ ಇದರ ಅನುಷ್ಠಾನದ ನಿಟ್ಟಿನಲ್ಲಿ ಶೇಕಡ 50ರಷ್ಟು ಜನರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ' ಎಂದರು.

'ಏಕರೂಪ ನಾಗರಿಕ ಸಂಹಿತೆ' ಬಗ್ಗೆ ಜೆ. ಸಾಯಿ ದೀಪಕ್ ಉಪನ್ಯಾಸ ನೀಡಿದರು. ಕರ್ನಾಟಕ ರಾಜ್ಯ ವಕೀಲರ ಪರಿಷತ್ ಅಧ್ಯಕ್ಷ ಎಚ್.ಎಲ್. ವಿಶಾಲ ರಘು, ಉಪಾಧ್ಯಕ್ಷ ವಿನಯ್ ಬಿ.ಮಂಗಳೇಕರ್ ಇದ್ದರು. ಪ್ರಜಾವಾಣಿ ಚಿತ್ರ

'ಬಿ.ಆರ್.ಅಂಬೇಡ್ಕರ್ ಆದಿಯಾಗಿ ಸಂವಿಧಾನ ರಚನೆ ಸಲಹಾ ಸಮಿತಿ ಸದಸ್ಯೆಯಾಗಿದ್ದ ಹಂಸ ಜೀವರಾಜ್ ಮೆಹ್ತಾ, ಸಂವಿಧಾನ ಸಭೆಯ ಸದಸ್ಯ ಮೀನೂ ಮಸಾನಿ, ಸರ್ದಾರ ಪಟೇಲ್ ಅವರಂತಹ ನಾಯಕರು ಯುಸಿಸಿ ಅಗತ್ಯದ ಬಗ್ಗೆ ಒತ್ತಿ ಹೇಳಿದ್ದರು. ಆದರೆ, ಈ ಪ್ರಸ್ತಾಪವನ್ನು ಸಬೂಬು ಹೇಳಿಕೊಂಡು ದಶಕಗಳ ಕಾಲ ಬದಿಗೊತ್ತಲಾಯಿತು. ಇದು ಜಾತ್ಯತೀತ ನಾಗರಿಕ ಸಂಹಿತೆ ಅಲ್ಲ ಎಂಬುದನ್ನು ನಾವು ಅರಿಯಬೇಕು. ಯುಸಿಸಿ ಜಾರಿಗೆ ಇದು ಸಕಾಲ' ಎಂದರು.

ಹೈಕೋರ್ಟ್‌ನ ಹಿರಿಯ ವಕೀಲ ಎಸ್.ಬಸವರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದ ಆರಂಭಕ್ಕೂ ಮುನ್ನ ಕೆಲ ವಕೀಲರು, 'ಸಾಯಿ ದೀಪಕ್ ಚರ್ಚೆಯಲ್ಲಿ ಪಾಲ್ಗೊಳ್ಳಬಾರದು' ಎಂದು ಪ್ರತಿಭಟಿಸಿದ ಕಾರಣ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಸಾಯಿ ದೀಪಕ್ ಭಾಷಣದ ವ್ಯಂಗ್ಯ ಮತ್ತು ಕುಟುಕುಗಳಿಗೆ ವಿದ್ಯಾರ್ಥಿಗಳು ಜೋರಾದ ಉದ್ಗಾರ, ಚಪ್ಪಾಳೆ ತಟ್ಟಿ ಸಂಭ್ರಮಿಸಿದರು.

'ಜೈ ಶ್ರೀರಾಮ್' ರೀಲ್ಸ್: ಬೆದರಿಕೆ ಹಾಕಿದವನ ಬಂಧನ

ಬೆಂಗಳೂರು: 'ಜೈ ಶ್ರೀರಾಮ್' ಎಂಬುದಾಗಿ ರೀಲ್ಸ್ ಮಾಡಿ ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದ ಯುವಕ–ಯುವತಿಗೆ ಜೀವ ಬೆದರಿಕೆಯೊಡ್ಡಿದ್ದ ಆರೋಪದಡಿ ನಯಾಜ್‌ನನ್ನು (22) ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೋಣನಕುಂಟೆ ಬಳಿಯ ಹರಿ ನಗರ ನಿವಾಸಿ ನಯಾಜ್, ಆಟೊ ಚಾಲಕ. ಯುವಕ–ಯುವತಿಗೆ ಬೆದರಿಕೆಯೊಡ್ಡಿ ವಿಡಿಯೊ ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದ. ವಿಡಿಯೊ ಆಧರಿಸಿ ಪ್ರಕರಣ ದಾಖಲಿಸಿಕೊಂಡು, ನಯಾಜ್‌ನನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಬುರ್ಖಾ ಧರಿಸಿದ್ದ ಯುವತಿ ಹಾಗೂ ಟೋಪಿ ಧರಿಸಿದ್ದ ಯುವಕ, ಒಟ್ಟಿಗೆ ರೀಲ್ಸ್ ಮಾಡಿದ್ದರು. 'ನಮ್ಮ ಮನದಲ್ಲಿ ಒಂದೇ ಹೆಸರು. ಜೈ ಶ್ರೀರಾಮ್... ಜೈ ಶ್ರೀರಾಮ್...' ಎಂಬುದಾಗಿ ವಿಡಿಯೊದಲ್ಲಿ ಹೇಳಿದ್ದರು.

ನಯಾಜ್

ಈ ವಿಡಿಯೊ ಹಲವೆಡೆ ಹರಿದಾಡಿತ್ತು.'

ವಿಡಿಯೊಗೆ ಪ್ರತಿಕ್ರಿಯಿಸಿ ಮತ್ತೊಂದು ವಿಡಿಯೊ ಮಾಡಿದ್ದ ಆರೋಪಿ ನಯಾಜ್, 'ಬುರ್ಖಾ ಹಾಗೂ ಟೋಪಿ ತೆಗೆದು ಮಾತನಾಡಿ. ನಿಮ್ಮಿಬ್ಬರು ಎದುರಿಗೆ ಸಿಕ್ಕರೆ ಸೀಳಿ ಬಿಡುತ್ತೇವೆ' ಎಂದು ಬೆದರಿಸಿದ್ದ. ಈತನ ವಿಡಿಯೊವನ್ನು ಪೊಲೀಸ್ ಸಾಮಾಜಿಕ ಮಾಧ್ಯಮ ನಿರ್ವಹಣೆ ಘಟಕಕ್ಕೆ ಕಳುಹಿಸಿದ್ದ ಸಾರ್ವಜನಿಕರು, ಕ್ರಮಕ್ಕೆ ಒತ್ತಾಯಿಸಿದ್ದರು.

'ವಿಡಿಯೊ ಅಪ್‌ಲೋಡ್ ಮಾಡಿದ್ದ ಮಾಹಿತಿ ಆಧರಿಸಿ ಆರೋಪಿ ವಿಳಾಸ ಪತ್ತೆ ಮಾಡಲಾಗಿತ್ತು. ಪ್ರಕರಣ ದಾಖಲಾದ ಕೆಲವೇ ಗಂಟೆಗಳಲ್ಲಿ ಆರೋಪಿಯನ್ನು ಬಂಧಿಸಲಾಗಿದೆ' ಎಂದರು.

ಅಪಘಾತ: ಯುವತಿ ಸಾವು

ಕುಣಿಗಲ್: ತಾಲ್ಲೂಕಿನ ಸಿದ್ದಾಪುರ ಗೇಟ್ ಬಳಿ ಗುರುವಾರ ನಡೆದ ಅಪಘಾತದಲ್ಲಿ ಬೆಂಗಳೂರಿನ ಗಿರಿ ನಗರದ ಐಶ್ವರ್ಯ (19) ಮೃತಪಟ್ಟಿದ್ದಾರೆ.

ಎರಡು ಕಾರುಗಳಲ್ಲಿ ಸ್ನೇಹಿತರೊಂದಿಗೆ ಐಶ್ವರ್ಯ ಎಡೆಯೂರಿಗೆ ತೆರಳಿದ್ದರು. ಬೆಂಗಳೂರಿಗೆ 2 ಕಾರುಗಳು ಅಕ್ಕಪಕ್ಕದಲ್ಲಿ ಹೋಗುತ್ತಿದ್ದಾಗ ಒಂದು ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಉರುಳಿದೆ. ಕಾರಿನಲ್ಲಿದ್ದ ಉಳಿದವರ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

'ಕಾವ್ಯಾ'ಗೆ ಅಂತಿಮ ನಮನ

ಬೆಂಗಳೂರು: ಪೊಲೀಸ್ ಕಮಿಷನರೇಟ್‌ನ ಶ್ವಾನದಳದ 'ಕಾವ್ಯಾ' ಹೆಸರಿನ ಶ್ವಾನ, ವಯೋಸಹಜ ಕಾಯಿಲೆಯಿಂದ ಮೃತಪಟ್ಟಿದೆ. ಕಾವ್ಯಾ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದ ಸಿಬ್ಬಂದಿ, ಅಂತ್ಯಕ್ರಿಯೆ ನೆರವೇರಿಸಿದರು.

'2014ರಲ್ಲಿ ಜನಿಸಿದ್ದ ಶ್ವಾನ, ಅದೇ ವರ್ಷ ಪೊಲೀಸ್ ಇಲಾಖೆಗೆ ಸೇರ್ಪಡೆಗೊಂಡಿತ್ತು. ಅಂದಿನಿಂದ ಹತ್ತು ವರ್ಷಗಳವರೆಗೆ ಶ್ವಾನದಳದಲ್ಲಿತ್ತು. ಹುಸಿ ಬಾಂಬ್ ಬೆದರಿಕೆ ಕರೆ ಹಾಗೂ ಗಣ್ಯ ವ್ಯಕ್ತಿಗಳ ಭದ್ರತೆ ಕೆಲಸದಲ್ಲಿ ಶ್ವಾನ ಚುರುಕಾಗಿತ್ತು' ಎಂದು ಸಿಬ್ಬಂದಿ ಹೇಳಿದರು.

ಇಸ್ರೊ ಉದ್ಯೋಗಿಗೆ ಬೆದರಿಕೆ: ಆರೋಪಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಉದ್ಯೋಗಿ ಆಶೀಷ್ ಲಾಂಬಾ ಅವರ ಕಾರು ಅಡ್ಡಗಟ್ಟಿ ಜೀವ ಬೆದರಿಕೆಯೊಡ್ಡಿದ್ದ ಆರೋಪದಡಿ ಇಮ್ರಾನ್ ಖಾನ್‌ನನ್ನು ಜೀವನ್‌ಭಿಮಾನಗರ ಠಾಣೆ ಪೊಲೀಸರು ಬಂಧಿಸಿದ್ದು, ಜಾಮೀನು ಮೇಲೆ ಬಿಡುಗಡೆ ಮಾಡಿದ್ದಾರೆ.

'ಆಗಸ್ಟ್ 29ರಂದು ಬೆಳಿಗ್ಗೆ ನಡೆದಿದ್ದ ಘಟನೆ ಸಂಬಂಧ ಆಶೀಷ್ ಅವರು ಟ್ವೀಟ್ ಮಾಡಿದ್ದರು. ಕಾರಿನ ಡ್ಯಾಶ್‌ಬೋರ್ಡ್ ಕ್ಯಾಮೆರಾದಲ್ಲಿ ಸೆರೆಯಾಗಿದ್ದ ದೃಶ್ಯವನ್ನೂ ಅಪ್‌ಲೋಡ್ ಮಾಡಿದ್ದರು. ಅದೇ ಮಾಹಿತಿ ಆಧರಿಸಿ ಪ್ರಕರಣ ದಾಖಲಿಸಿಕೊಂಡು, ಆರೋಪಿ ಇಮ್ರಾನ್ ಖಾನ್‌ನನ್ನು ಸೆರೆ ಹಿಡಿಯಲಾಗಿತ್ತು. ನಂತರ, ಮುಚ್ಚಳಿಕೆ ಬರೆಸಿಕೊಂಡು ಜಾಮೀನು ಮೇಲೆ ಬಿಡುಗಡೆ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಗೂಂಡಾ ಕಾಯ್ದೆ: ಮ್ಯಾಡಿ ಬಂಧನ

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ ರೌಡಿ ಎಂ.ಸಿ. ಶ್ರೀಕಾಂತ್ ಅಲಿಯಾಸ್ ಮ್ಯಾಡಿಯನ್ನು ಕಾಡುಗೋಡಿ ಠಾಣೆ ಪೊಲೀಸರು ಗೂಂಡಾ ಕಾಯ್ದೆಯಡಿ ಬಂಧಿಸಿ, ಕೇಂದ್ರ ಕಾರಾಗೃಹಕ್ಕೆ ಬಿಟ್ಟು ಬಂದಿದ್ದಾರೆ.

ಪ್ರಕರಣವೊಂದರಲ್ಲಿ ಜೈಲು ಸೇರಿದ್ದ ಈತ, ಇತ್ತೀಚೆಗಷ್ಟೇ ಜಾಮೀನು ಮೇಲೆ ಹೊರಗೆ ಬಂದಿದ್ದ. ತನ್ನ ಹಳೇ ಚಾಳಿ ಮುಂದುವರಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕುಡಿದು ಗುಂಡು ಹಾರಿಸಿದ್ದ ಮಾಜಿ ಸೈನಿಕ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದ ಅಮಲಲ್ಲಿ ಪಿಸ್ತೂಲ್‌ನಿಂದ ಗುಂಡು ಹಾರಿಸಿ ಭಯ ಸೃಷ್ಟಿಸಿದ್ದ ಆರೋಪದಡಿ ಮಾಜಿ ಸೈನಿಕ ಪ್ರಶಾಂತ್ (39) ಅವರನ್ನು ಬಂಧಿಸಿದ್ದ ತಿಲಕ್‌ನಗರ ಪೊಲೀಸರು, ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

'ಆಗಸ್ಟ್ 26ರಂದು ತಡರಾತ್ರಿ ನಡೆದಿದ್ದ ಘಟನೆ ಸಂಬಂಧ ಪಿ.ಪಿ. ಅನಿಲ್‌ಕುಮಾರ್ ದೂರು ನೀಡಿದ್ದರು. ಪ್ರಕರಣ ದಾಖಲಾಗುತ್ತಿದ್ದಂತೆ ಆರೋಪಿಯನ್ನು ಸೆರೆ ಹಿಡಿಯಲಾಗಿತ್ತು. ಇದೀಗ, ಅವರನ್ನು ಬಿಡುಗಡೆ ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ದೂರುದಾರ ಅನಿಲ್‌ಕುಮಾರ್ ,ಆರೋಪಿ ಪ್ರಶಾಂತ್, ಕೇರಳದವರು. ಇಬ್ಬರೂ ಮಾಜಿ ಸೈನಿಕರು. ಉದ್ಯಮಿಯೊಬ್ಬರ ಬಳಿ ಗನ್‌ಮ್ಯಾನ್ ಆಗಿ ಕೆಲಸಕ್ಕೆ ಸೇರಿ ದ್ದರು. ಜಯನಗರದ 4ನೇ ಹಂತದ ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ಒಂದೇ ಕೊಠಡಿಯಲ್ಲಿ ನೆಲೆಸಿದ್ದರು' ಎಂದು ತಿಳಿಸಿವೆ.

ಮದ್ಯದ ಪಾರ್ಟಿ ವೇಳೆ ಘಟನೆ: 'ಅನಿಲ್‌ಕುಮಾರ್ ಹಾಗೂ ಪ್ರಶಾಂತ್, ಆಗಸ್ಟ್ 26ರಂದು ತಡರಾತ್ರಿ ಮದ್ಯದ ಪಾರ್ಟಿ ಮಾಡಿದ್ದರು. ಸ್ನೇಹಿತ ಅಮಿತ್ ಸಹ ಕೊಠಡಿಗೆ ಬಂದು ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು. ಮೂವರು ಮದ್ಯ ಕುಡಿದಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮದ್ಯದ ಅಮಲಿನಲ್ಲಿದ್ದ ಪ್ರಶಾಂತ್, ಪತ್ನಿಗೆ ಕರೆ ಮಾಡಿ ಮಾತನಾಡುತ್ತಿದ್ದ. ಇದಕ್ಕಿದ್ದಂತೆ ಕೋಪಗೊಂಡು ಕೂಗಾಡಲಾರಂಭಿಸಿದ್ದ. ದೂರುದಾರರು ಪ್ರಶ್ನಿಸಿದಾಗ, ಅವರ ಮೇಲೆಯೇ ಹರಿಹಾಯ್ದಿದ್ದ. ನಂತರ, ಬೀರುವಿನಲ್ಲಿಟ್ಟಿದ್ದ ಪಿಸ್ತೂಲ್ ಹೊರತೆಗೆದು ಕಿಟಕಿಯತ್ತ ಒಂದು ಸುತ್ತು ಗುಂಡು ಹಾರಿಸಿದ್ದ. ನಂತರ ಪಿಸ್ತೂಲ್ ಬಿಸಾಕಿ, ಕೊಠಡಿಯಿಂದ ಹೊರಗೆ ಹೋಗಿದ್ದ. ದೂರುದಾರರೇ ಪಿಸ್ತೂಲ್ ಬಚ್ಚಿಟ್ಟಿದ್ದರು' ಎಂದು ಮೂಲಗಳು ತಿಳಿಸಿವೆ.

'ಅದೃಷ್ಟವಶಾತ್ ಯಾರಿಗೂ ಗುಂಡು ತಗುಲಿರಲಿಲ್ಲ. ಪ್ರಶಾಂತ್ ವರ್ತನೆಯಿಂದ ಭಯಗೊಂಡ ಅನಿಲ್‌ಕುಮಾರ್, ಜಯನಗರ ಠಾಣೆಗೆ ಹೋಗಿ ಮಾಹಿತಿ ನೀಡಿದ್ದರು. ಸಿಬ್ಬಂದಿ ಸ್ಥಳಕ್ಕೆ ಹೋಗಿ ಪರಿಶೀಲಿಸಿದ್ದರು. ಘಟನೆ ನಡೆದ ಸ್ಥಳದ ಆಧಾರದಲ್ಲಿ ತಿಲಕ್‌ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಯಿತು' ಎಂದು ಮೂಲಗಳು ಹೇಳಿವೆ.

ನಗರದಲ್ಲಿ ಇಂದು

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

18ನೇ ಶ್ರೀಮದ್ಭಾಗವತ ಸಪ್ತಾಹ: ಶೇಷಭಾಗ, ಆಯೋಜನೆ ಹಾಗೂ ಸ್ಥಳ: ರಾಧಾಕೃಷ್ಣ ದೇವಸ್ಥಾನ ಭಕ್ತ ಮಂಡಳಿ ಟ್ರಸ್ಟ್, ಸಂಜಯನಗರ, ಬೆಳಿಗ್ಗೆ 6.30ರಿಂದ

ರಾಘವೇಂದ್ರ ಸದ್ಭಾವನಾ ಪ್ರಶಸ್ತಿ ಪ್ರದಾನ: ಮುಖ್ಯ ಅತಿಥಿಗಳು: ಬಿ.ಎ. ಪಾಟೀಲ, ಮಹೇಶ ಜೋಶಿ, ಅಧ್ಯಕ್ಷತೆ: ಎಚ್.ಎಲ್.ಎನ್. ರಾವ್, ಪ್ರಶಸ್ತಿ ಪುರಸ್ಕೃತರು: ದೊಡ್ಡರಂಗೇಗೌಡ, ಎಸ್. ನಾರಾಯಣ್, ನಾಗಲಿಂಗನಗೌಡ ಪಾಟೀಲ, ಕಿರಣ್ ಎಸ್. ಮೂರ್ತಿ, ಭಾರತಿ ಗೋಪಾಲ್, ಕುಮಾರ್ ಭದ್ರಾವತಿ, ಟಿ. ರಾಜಾರಾಮ್, ಮಾನಸ ಕಂಠಿ, ಅನಿಲ್ ಶ್ರೀನಿವಾಸ್, ಬಿ.ಆರ್. ರಘುನಾಥ್, ಜಯಾನಂದ ಹೋಬಳಿದಾರ್, ಸುಮಾಲಿನಿ ರಾಮಾಚಾರಿ, ಕೇಶವಗೋಪಾಲ ಅಯ್ಯಂಗಾರ್, ಆಯೋಜನೆ: ಆರ್ಯಭಟ ಸಾಂಸ್ಕೃತಿಕ ವೇದಿಕೆ, ಸ್ಥಳ: ಕೋದಂಡರಾಮ ವಿದ್ಯಾರ್ಥಿ ಸೇವಾ ಸಂಘ, ಕುಮಾರ ಪಾರ್ಕ್ ಪಶ್ಚಿಮ, ಬೆಳಿಗ್ಗೆ 9.30

ಥಾವರಚಂದ್ ಗೆಹಲೋತ್

ಭಾರತೀಯ ಸೈಬರ್ ಸುರಕ್ಷತಾ ಶೃಂಗದ ಸಮಾರೋಪ: ಮುಖ್ಯ ಅತಿಥಿ: ಥಾವರಚಂದ್ ಗೆಹಲೋತ್, ಆಯೋಜನೆ ಹಾಗೂ ಸ್ಥಳ: ಕ್ರೈಸ್ಟ್ ವಿಶ್ವವಿದ್ಯಾಲಯ, ಕೆಂಗೇರಿ, ಸಂಜೆ 4

ವಚನ ಶ್ರಾವಣ: ವಚನ ವಾಚನ: ಶಾಲಾ ವಿದ್ಯಾರ್ಥಿಗಳಿಂದ ವಚನ ಗಾಯನ: ಬಾಪೂಗೌಡ ಪಾಟೀಲ, ವಚನ ಚಿಂತನ: ಎಸ್. ಪಿನಾಕಪಾಣಿ, ಅತಿಥಿ: ಚಿತ್ಕಲ ರವಿ, ಉಪಸ್ಥಿತಿ: ಜಿ. ವಿಜಯ, ಅಧ್ಯಕ್ಷತೆ: ಎ. ಭವ್ಯ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸುಂಕೇನಹಳ್ಳಿ, ಹನುಮಂತನಗರ, ಬೆಳಿಗ್ಗೆ 9.30

'ಐಇಇಇ ಎನ್‌ಎಂಐಟಿಸಿಒನ್' ಉದ್ಘಾಟನೆ: ಮುಖ್ಯ ಅತಿಥಿ: ಟಿ.ಜಿ. ಸಿತಾರಾಮ್, ಗೌರವ ಅತಿಥಿಗಳು: ಥಾಮಸ್ ಎಂ. ಕೊಗ್ಲಿನ್, ಡೇವಿಡ್ ಕ್ಯಾಮ್ಪ್ಟೊ, ಎನ್.ಆರ್. ಶೆಟ್ಟಿ, ಜ್ಯೋತಿಕ ಅಠವಳೆ, ಅಧ್ಯಕ್ಷತೆ: ಎನ್. ವಿನಯ್ ಹೆಗಡೆ, ಆಯೋಜನೆ ಹಾಗೂ ಸ್ಥಳ: ನಿಟ್ಟೆ ಮೀನಾಕ್ಷಿ ತಾಂತ್ರಿಕ ವಿದ್ಯಾಲಯ, ಯಲಹಂಕ, ಬೆಳಿಗ್ಗೆ 9.30

ಏಕ ವ್ಯಕ್ತಿ ಕಲಾ ಪ್ರದರ್ಶನ: ಪ್ರವೀಣ್ ಕೆ.ಆರ್., ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

ದಾಸಗಾನಾಮೃತ: ಸುಷ್ಮಾ ಶ್ರೇಯಸ್, ವಾದ್ಯ ಸಹಕಾರ: ರಾಜೀವಲೋಚನ, ಸಾಯಿವಂಶಿ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸೀತಾಪತಿ ಅಗ್ರಹಾರ, ಚಾಮರಾಜಪೇಟೆ, ಸಂಜೆ 6

'ಕರ್ನಾಟಿಕ್ ಕೋಡ್' ಸಂಗೀತ ಕಾರ್ಯಕ್ರಮ: ನಿಶಾಂತ್ ಚಂದ್ರನ್, ಬಿ.ಸಿ. ಮಂಜುನಾಥ್, ಜಿ. ಗುರುಪ್ರಸನ್ನ, ಎಂ. ಭಾಗ್ಯಲಕ್ಷ್ಮಿ, ಆಯೋಜನೆ: ಥಿಲ್ಲೈಸ್ಥಾನಂ ಫೌಂಡೇಶನ್, ಸ್ಥಳ: ಐಐಐಟಿ–ಬಿ ಆಡಿಟೋರಿಯಂ, ಹೊಸೂರು ರಸ್ತೆ, ಎಲೆಕ್ಟ್ರಾನಿಕ್ ಸಿಟಿ, ಸಂಜೆ 6

ರಾಘವೇಂದ್ರ ಸ್ವಾಮಿಗಳ ಆರಾಧನೆ ಮಹೋತ್ಸವ: ಜ್ಞಾನವಿ ಭಜನಾ ಮಂಡಳಿ, ಸುಮಲತಾ ಮಂಜುನಾಥ್, ಆಯೋಜನೆ ಹಾಗೂ ಸ್ಥಳ: ವ್ಯಾಸರಾಜ ಮಠ, ಸುಬ್ರಹ್ಮಣ್ಯ ನಗರ, ಸಂಜೆ 6.30

'ಬೋಲ್' ಸಂಗೀತ ಕಛೇರಿ: ಉಸ್ತಾದ್ ತೌಫಿಕ್ ಖುರೇಷಿ, ವಿಜಯ್ ಪ್ರಕಾಶ್, ಪ್ರಿಯಾಂಕಾ ಬರ್ವೆ, ಸತ್ಯಜಿತ್ ತಲ್ವಾಲ್ಕರ್, ಶ್ರೀಧರ್ ಪಾರ್ಥಸಾರಥಿ, ಶಿಖರ್ ನಾಡ್, ಅಜಯ್ ಜೋಗ್ಲೇಕರ್, ಕೌಶಿಕಿ ಜೋಗ್ಲೇಕರ್, ಆಯೋಜನೆ: ಇನ್ಫಿನಿಟಿ ಇವೆಂಟ್ಸ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 6.30

23ನೇ ವರ್ಷದ ಪ್ರವಚನ ವಾಹಿನಿ: ದಿವ್ಯ ಕ್ಷೇತ್ರ ದರ್ಶನದ ಬಗ್ಗೆ ವಿಡಿಯೊ ಪ್ರದರ್ಶನ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಹರಿದಾಸ ನಮನ: ರಮ್ಯಾ ಸುಧೀರ್ ಮತ್ತು ಸಂಗಡಿಗರು, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 13ನೇ 'ಎ' ಮುಖ್ಯರಸ್ತೆ, 35ನೇ ಅಡ್ಡರಸ್ತೆ, 4ನೇ 'ಟಿ' ಬ್ಲಾಕ್, ಜಯನಗರ, ಸಂಜೆ 6.30

ರಾಘವೇಂದ್ರ ಗುರುಸಾರ್ವಭೌಮರ 352ನೇ ಆರಾಧನಾ ಮಹೋತ್ಸವದ ಅಂಗವಾಗಿ ಹರಿದಾಸ ಝೇಂಕಾರ: ಗಾಯನ: ಸುಮಲತಾ ಮಂಜುನಾಥ್ ಮತ್ತು ಸಂಗಡಿಗರು, ಆಯೋಜನೆ ಹಾಗೂ ಸ್ಥಳ: ವ್ಯಾಸರಾಜ ಮಠ (ಸೋಸಲೆ), #1160, 5ನೇ ಮುಖ್ಯರಸ್ತೆ, ರಾಜಾಜಿನಗರ 2ನೇ ಹಂತ, ಸಂಜೆ 6.30

ರಾಘವೇಂದ್ರ ಸ್ವಾಮಿಗಳ ಆರಾಧನೆ ಮಹೋತ್ಸವ: ದಾಸವಾಣಿ: ಅನರ್ಘ್ಯ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಶಾಕಾಂಬರಿನಗರ, ಸಂಜೆ 6.30

ಹರಿದಾಸ ಮಂಜರಿ: ಚಾಂದಿನಿ ಗರ್ತಿಕೆರೆ ಮತ್ತು ಸಂಗಡಿಗರು, ಆಯೋಜನೆ ಮತ್ತು ಸ್ಥಳ: ವಜ್ರಕ್ಷೇತ್ರ, ತ್ಯಾಗರಾಜನಗರ, ಸಂಜೆ 6.30

ರಾಘವೇಂದ್ರ ಸ್ವಾಮಿಗಳವರ ಆರಾಧನಾ ಮಹೋತ್ಸವ: ಫಲಾಭಿಷೇಕ: ವಿದ್ಯಾಶ್ರೀಶತೀರ್ಥ ಸ್ವಾಮೀಜಿ, ಸುಜಯತೀರ್ಥ ಸ್ವಾಮೀಜಿ, ಬೆಳಿಗ್ಗೆ 7, ಪ್ರವಚನ: ಗುರುರಾಜ ದಾಸರು, ಬೆಳಿಗ್ಗೆ 10, ದಾಸವಾಣಿ: ಉದಯ ದೇಶಪಾಂಡೆ, ಬೆಳಿಗ್ಗೆ 11, ಸಭಾ ಕಾರ್ಯಕ್ರಮ: ಮುಖ್ಯ ಅತಿಥಿ: ಪ್ರಲ್ಹಾದ್ ಜೋಶಿ, ಅಧ್ಯಕ್ಷತೆ: ಕಟ್ಟಾ ಸುಬ್ರಮಣ್ಯ ನಾಯ್ಡು, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಸಂಜಯನಗರ, ಸಂಜೆ 6.30

ರಾಘವೇಂದ್ರ ಸ್ವಾಮಿಗಳ ಆರಾಧನೆ ಮಹೋತ್ಸವ ಪ್ರಯುಕ್ತ ದಾಸರ ಪದಗಳು: ಅಶ್ವಿನಿ ಮತ್ತು ಸಂಗಡಿಗರು, ಆಯೋಜನೆ ಹಾಗೂ ಸ್ಥಳ: ಗುರುರಾಘವೇಂದ್ರ ಸೇವಾ ಟ್ರಸ್ಟ್, ಕೋಣನಕುಂಟೆ, ಸಂಜೆ 6.30

ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 352ನೇ ಆರಾಧನಾ ಪಂಚರಾತ್ರೋತ್ಸವ: ವೀಣಾ ವಾದನ: ಅಪೂರ್ವ ಅನಿರುದ್ಧ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರಸ್ವಾಮಿಗಳ ಮಠ, ಶೇಷಾದ್ರಿಪುರ, ಸಂಜೆ 7

ರಾಘವೇಂದ್ರ ಗುರುಸಾರ್ವಭೌಮರ 352ನೇ ಆರಾಧನೆ ಪ್ರಯುಕ್ತ ಮಧ್ಯಾರಾಧನೆ: ವೀಣಾ ವಾದನ: ಸಹನಾ ಶ್ರೀವತ್ಸ ಮತ್ತು ಸಂಗಡಿಗರು, ಆಯೋಜನೆ: ಬನಶಂಕರಿ ಸರ್ವಜ್ಞ ಸೇವಾ ಬಳಗ, ಸ್ಥಳ: ರಾಘವೇಂದ್ರ ಸ್ವಾಮಿಗಳ ಬೃಂದಾವನ ಸನ್ನಿಧಿ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಸಂಜೆ 7

ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 352ನೇ ಆರಾಧನಾ ಸಪ್ತರಾತ್ರೋತ್ಸವ: ದಾಸಲಹರಿ: ವರದೇಂದ್ರ ಗಂಗಾಖೇಡ್ ಮತ್ತು ವೃಂದ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ
ದಿನಾಂಕ: 09/03/2023
ಎನ್‌ಐಎಎನ್‌ಪಿ/ಎಡಿವಿ–4–ಸಿಡಿಎನ್/2023–24
ಐಸಿಎಆರ್–ಎನ್‌ಐಎಎನ್‌ಪಿ, ಬೆಂಗಳೂರು ಇಲ್ಲಿನ ಯಂಗ್ ಪ್ರೊಫೆಷನಲ್ಸ್ – 1 ಎಂಬ ಎರಡು (02) ಹುದ್ದೆಗಳ ನಿಯುಕ್ತಿಗಾಗಿ (1 ಹುದ್ದೆ ಎನ್‌ಸಿವಿಟಿಸಿ – ಆರ್‌ಎಂ ಮತ್ತು 1 ಹುದ್ದೆ ಸಿಆರ್‌ಪಿ – ಬಯೋಫೋರ್ಟಿಫಿಕೇಶನ್ ಯೋಜನೆಗೆ) ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಮಾಸಿಕ ರೂ. 25,000/– ಕ್ರೋಢಿಕೃತ ಸಂಭಾವನೆ ಇರುತ್ತದೆ. ದಿನಾಂಕ 11.09.2023 ರಂದು ಬೆಳಗ್ಗೆ 10.30 ಗಂಟೆಗೆ ನೇರ ಸಂದರ್ಶನಕ್ಕೆ ಹಾಜರಾಗಬಹುದು. ವಿವರವಾದ ಜಾಹೀರಾತು ಪರಿಶೀಲಿಸಲು ಸಂಸ್ಥೆಯ www.nianp.res.in ವೆಬ್‌ಸೈಟ್‌ಗೆ ಭೇಟಿ ಕೊಡಿ.
ಸಹಿ/– ಆಡಳಿತಾಧಿಕಾರಿ

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ A Government of India Undertaking
ಸಿಂಡಿಕೇಟ್ Syndicate
ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310038
ಸ್ಥಳಾವಕಾಶ ಬೇಕಾಗಿದೆ
ಕೆಳಕಂಡ ಸ್ಥಳಗಳಲ್ಲಿ ಶಾಖೆಗಳಿಗಾಗಿ ವಾಣಿಜ್ಯ ಸ್ಥಳವನ್ನು ಹೊಂದಿರುವ ಮಾಲೀಕರಿಂದ ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಸ್ಥಳ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
ಬನಶಂಕರಿ 3ನೇ ಹಂತ	2500 ಚ.ಅಡಿಗಳು
ಕಾಡುಗೋಡಿ, ವೈಟ್‌ಫೀಲ್ಡ್ (ಸತ್ಯ ಸಾಯಿ ಆಸ್ಪತ್ರೆ ಹತ್ತಿರ)	2500 ಚ.ಅಡಿಗಳು

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ http://www.canarabank.com ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ Announcement → Tenders ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : 21–09–2023 ರಂದು ಸಂಜೆ 3.00 ಗಂಟೆಯವರೆಗೆ. ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. "ಮಧ್ಯವರ್ತಿಗಳಿಗೆ ಅವಕಾಶವಿಲ್ಲ"
ಸ್ಥಳ : ಬೆಂಗಳೂರು ಸಹಿ/–
ದಿನಾಂಕ : 01–09–2023 ಸಹಾಯಕ ಮಹಾ ಪ್ರಬಂಧಕರು

FARNAZ




ರುಕ್ಮಿಣಿ

ಮನು-ಪ್ರಿಯಾ ಕಾಡುವ ಸಂಬಂಧ

ವಿನಾಯಕ ಕೆ.ಎಸ್

ನಟ ರಕ್ಷಿತ್ ಶೆಟ್ಟಿ, ರುಕ್ಮಿಣಿ ವಸಂತ್ ಅಭಿನಯದ 'ಸಪ್ತ ಸಾಗರದಾಚೆ ಎಲ್ಲೋ' ಚಿತ್ರ ಇಂದು (ಸೆ.1) ತೆರೆ ಕಾಣುತ್ತಿದೆ. ಇಂಗ್ಲಿಷ್ ರಂಗಭೂಮಿಯಿಂದ ನಟನೆ ಆರಂಭಿಸಿದ ರುಕ್ಮಿಣಿ, ತಮ್ಮ ಪಾತ್ರದ ಕುರಿತು, ಸಿನಿ ಪಯಣದ ಕುರಿತು ಒಂದಷ್ಟು ಮಾಹಿತಿ ಹಂಚಿಕೊಂಡಿದ್ದಾರೆ...

• ನಿಮ್ಮ ನಟನೆಯ ನಂಟಿನ ಕುರಿತು ಹೇಳಿ.

ನಮ್ಮದು ಕಲಾವಿದರ ಕುಟುಂಬ. ಅಜ್ಜಿ, ಅಮ್ಮ ಭರತನಾಟ್ಯ ಕಲಾವಿದೆಯರು. ಹೀಗಾಗಿ ನನಗೂ ಬಾಲ್ಯದಿಂದಲೇ ಭರತನಾಟ್ಯದ ನಂಟು. ಬ್ಯಾಲೆ ಡ್ಯಾನ್ಸರ್ ಆಗಿದ್ದೆ. ಶಾಲಾ ದಿನಗಳಲ್ಲಿ ರಂಗಭೂಮಿ ನಟನೆ ಪ್ರಾರಂಭಿಸಿದೆ. ಓದಿಗಿಂತ ನಟನೆಯಲ್ಲೇ ಆಸಕ್ತಿ, ಖುಷಿ ಹೆಚ್ಚಿತ್ತು. ಆದರೆ ಅಮ್ಮ ಪಿಯುಸಿ ಮುಗಿಯುವ ತನಕ ನಟನೆ ಬೇಡ ಎಂದಿದ್ದರು. ಪಿಯುಸಿ ಮುಗಿಸಿ ರಂಗ ತರಬೇತಿಗೆ ಲಂಡನ್‌ನ 'ರಾಯಲ್ ಅಕಾಡೆಮಿ ಆಫ್ ಆರ್ಟ್ಸ್' ಸೇರಿಕೊಂಡೆ. ನಟನೆಯಲ್ಲಿ ಪದವಿ ಮುಗಿಸಿ ಬೆಂಗಳೂರಿಗೆ ಮರಳಿದೆ.

• ನೀವು ಮೂಲತಃ ಬೆಂಗಳೂರಿನವರಾ?

ಹೌದು. ಹುಟ್ಟಿದ್ದು ಬೆಂಗಳೂರಿನಲ್ಲಿ. ಆದರೆ ಅಪ್ಪ ಸೈನ್ಯದಲ್ಲಿದ್ದರು. ಹೀಗಾಗಿ ಗುಜರಾತ್, ಚೆನ್ನೈನಿಂದ ಹಿಡಿದು ದೇಶದ ಬೇರೆ ಬೇರೆ ಊರುಗಳಲ್ಲಿದ್ದೆ. ನಟನೆ ತರಬೇತಿ ಮುಗಿಸಿ ಬಂದಾಗ ಅಪ್ಪ ಕಾಶ್ಮೀರದಲ್ಲಿದ್ದರು. ನೆಲೆಗೊಂಡಿದ್ದು ಬೆಂಗಳೂರಿನಲ್ಲಿ.

• ನಿಮ್ಮ ಸಿನಿಮಾ ಪಯಣ ಹೇಗೆ ಪ್ರಾರಂಭವಾಯಿತು?

ಲಂಡನ್‌ನಿಂದ ಬಂದ ಬಳಿಕ 'ಆಡಿಷನ್' ನೀಡಲು ಆರಂಭಿಸಿದೆ. 'ಬೀರಬಲ್' ಸಿನಿಮಾಕ್ಕೆ ಆಯ್ಕೆಯಾದೆ. 2019ರಲ್ಲಿ ಸಿನಿಮಾ ತೆರೆಗೆ ಬಂತು. ಅಷ್ಟು ಹೊತ್ತಿಗೆ 'ಸಪ್ತ ಸಾಗರ...' ಆಡಿಷನ್ ಕರೆದಿದ್ದರು. ನಿರ್ದೇಶಕ ಹೇಮಂತ್ ಅವರ ಸಿನಿಮಾಗಳ ಅಭಿಮಾನಿ. ಹೀಗಾಗಿ ಪ್ರಯತ್ನಿಸಿದೆ.

• 'ಸಪ್ತ ಸಾಗರ...'ಕ್ಕೆ ನಾಯಕಿಯಾಗಿ ಆಯ್ಕೆಯಾದ ಕ್ಷಣ ಹೇಗಿತ್ತು?

ಆಡಿಷನ್ ಮರುದಿನ ಹೇಮಂತ್ ಕರೆ ಮಾಡಿ ಬಹಳ ಸಹಜವಾಗಿ ಮಾತು ಪ್ರಾರಂಭಿಸಿದರು. ಗೆಟಪ್ ಬಗ್ಗೆ ಹೇಳಿದರು. ಆಫೀಸಿಗೆ ಬರಲು ತಿಳಿಸಿದರು. ಆದರೆ ಆಯ್ಕೆಯಾಗಿರುವ ಕುರಿತು ಏನೂ ಹೇಳಲಿಲ್ಲ. ಕುತೂಹಲ ತಡೆದುಕೊಳ್ಳಲಾದೆ ನಾನೇ ಆಯ್ಕೆಯಾಗಿದ್ದೀನಾ ಅಂತ ಕೇಳಿದೆ. ನಿಜಕ್ಕೂ ಅದೊಂದು ಅವಿಸ್ಮರಣೀಯ ಕ್ಷಣ.

• ಚಿತ್ರದಲ್ಲಿ ನಿಮ್ಮ ಪಾತ್ರವೇನು?

'ಪ್ರಿಯಾ' ಎಂಬ ಪಾತ್ರ ಮಾಡಿರುವೆ. ಕಾಲೇಜು ಓದುವ ಮಧ್ಯಮ ವರ್ಗದ ಹುಡುಗಿ. ಹಾಡುಗಾರ್ತಿ. ಅದರಲ್ಲಿಯೇ ಸಾಧನೆ ಮಾಡಬೇಕೆಂಬ ಕನಸು ಕಾಣುತ್ತಿರುತ್ತೇನೆ. ಮನುವಿನ ಪರಿಚಯವಾಗುತ್ತೆ. ನಮ್ಮಿಬ್ಬರ ಪ್ರೀತಿಯ ಪಯಣದ ಕಥೆಯೇ ಈ ಸಿನಿಮಾ.

ಹೇಮಂತ್ ರಾವ್ ಅವರಂತಹ ನಿರ್ದೇಶಕರ ಜೊತೆ ಕೆಲಸ ಮಾಡುವುದು ಎಷ್ಟು ಸವಾಲಾಗಿತ್ತು?

ಬಹಳ ಸುಲಭವಾಗಿತ್ತು. ಕಲಾವಿದರಿಗೆ ಒತ್ತಡ ಹಾಕದೆ, ಅವರಲ್ಲಿನ ಒತ್ತಡವನ್ನು ತೆಗೆಯುವುದು ನಿರ್ದೇಶಕನ ಕೆಲಸ ಎಂಬ ನಂಬಿಕೆಯಲ್ಲಿ ಕೆಲಸ ಮಾಡುವವರು ಹೇಮಂತ್. ಹೀಗಾಗಿ ಸೆಟ್‌ನಲ್ಲಿ ಯಾವತ್ತೂ ಒತ್ತಡ ಹಾಕುತ್ತಿರಲಿಲ್ಲ. ಅಂದುಕೊಂಡ ನಟನೆ, ಭಾವನೆ ಬಂದಿಲ್ಲ ಎನ್ನಿಸಿದರೆ ತಯಾರಿಗೆ ಸಾಕಷ್ಟು ಸಮಯ ಕೊಡುತ್ತಿದ್ದರು. ಇಡೀ ಸೆಟ್ ಕಲಾವಿದರು ಸಿದ್ಧರಾಗುವವರೆಗೆ ಬೇಸರಿಕೊಳ್ಳದೇ ಕಾಯುತ್ತಿತ್ತು. ತುಂಬ ಕಡೆ ಮಾತಿಗಿಂತ ಭಾವನೆಗೆ ಹೆಚ್ಚು ಒತ್ತು ನೀಡಿ, ಕಣ್ಣಿನಲ್ಲೇ ನಟನೆ ತೆಗೆಸಿದ್ದಾರೆ.

• ರಕ್ಷಿತ್ ಜೊತೆಗಿನ ಅಭಿನಯದ ಅನುಭವ ಹೇಗಿತ್ತು?

ರಕ್ಷಿತ್ ಕೂಡ ತುಂಬ ಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅವರ ಲುಕ್, ಹಾವಭಾವ ಎಲ್ಲವೂ ಈವರೆಗಿನ ಸಿನಿಮಾಗಳಿಂದ ಹೊರತಾಗಿದೆ. ಪ್ರಿಯಾ ಮತ್ತು ಮನುವಿನ ಸಂಬಂಧ ಚಿತ್ರಮಂದಿರದಿಂದ ಹೊರಬಂದ ಮೇಲೆಯೂ ಪ್ರೇಕ್ಷಕರನ್ನು ಕಾಡುತ್ತದೆ ಎಂಬ ವಿಶ್ವಾಸವಿದೆ.

• ನಿಮ್ಮ ಮುಂದಿನ ಯೋಜನೆಗಳ ಕುರಿತು ಹೇಳಿ?

ಗಣೇಶ್ ಅವರ ಜೊತೆಗಿನ 'ಬಾನ ದಾರಿಯಲ್ಲಿ' ಬಿಡುಗಡೆಗೆ ಸಿದ್ಧವಿದೆ. ಶಿವರಾಜ್ ಕುಮಾರ್ ಜೊತೆಗೆ 'ಭೈರತಿ ರಣಗಲ್' ಸಿನಿಮಾದಲ್ಲಿ ನಟಿಸುತ್ತಿರುವೆ. ವಿಜಯ್ ಸೇತುಪತಿ ಜೊತೆ ತಮಿಳು ಚಿತ್ರವೊಂದನ್ನು ಒಪ್ಪಿಕೊಂಡಿರುವೆ. ❖

ಈಶಾನಿ

'ಫ್ರೀಡಮ್' ಆಲ್ಬಮ್ ಸಾಂಗ್ ಬಿಡುಗಡೆ

ಗಾಯಕಿ ಈಶಾನಿ ಹಾಡಿರುವ 'ಫ್ರೀಡಮ್' ಆಲ್ಬಮ್ ಸಾಂಗ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪ್ರಸ್ತುತ ದುಬೈನಲ್ಲಿ ನೆಲೆಸಿರುವ ಈಶಾನಿ ಅವರ ಕನ್ನಡ ಕಾರ್ಯಕ್ಕೆ ನಟರಾದ ಶಿವರಾಜ್ ಕುಮಾರ್, ದರ್ಶನ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇದು ಈಶಾನಿ ಅವರ ಮೂರನೇ ಕನ್ನಡ ಆಲ್ಬಮ್ ಸಾಂಗ್. ಈ ಹಿಂದೆ 'ರೈಟರ್', 'ಊರ್ಮಿಳ' ಆಲ್ಬಮ್ ಹಾಡುಗಳಿಗೆ ಈಶಾನಿ ಧ್ವನಿಯಾಗಿದ್ದರು. 'ಫ್ರೀಡಮ್' ಗೀತೆಗೆ ಸಂಗೀತ ನಿರ್ದೇಶಕ ವಾಸುಕಿ ವೈಭವ್ ಸ್ವರ ಸಂಯೋಜಿಸಿ, ಸಾಹಿತ್ಯ ಬರೆದಿದ್ದಾರೆ.

'ಮೂಲತಃ ಮೈಸೂರಿನವಳಾದ ನಾನು 13ನೇ ವರ್ಷದಿಂದ ಹಾಡುತ್ತಿರುವೆ. ಈಗಾಗಲೇ 17 ಇಂಗ್ಲೀಷ್ ಆಲ್ಬಮ್ ಸಾಂಗ್‌ಗಳು ಬಿಡುಗಡೆಗೊಂಡಿವೆ. 2016ರಲ್ಲಿ ಮೊದಲು ಹಾಡನ್ನು ಬರೆದು ನಾನೇ ಹಾಡಿದೆ. ಈಗ ಸಿನಿಮಾದಲ್ಲಿ ನಟಿಸಲು ಸಿದ್ಧತೆ ನಡೆಸಿರುವೆ. ಜೊತೆಗೆ ಸಿನಿಮಾದಲ್ಲಿಯೂ ಹಾಡುವೆ' ಎಂದರು. ಇದೇ ಸಂದರ್ಭದಲ್ಲಿ ಈ ಗೀತೆಯ ನಿರ್ದೇಶಕ ಗಿರಿ ಗೌಡ ಅವರು ಆ್ಯಕ್ಷನ್–ಕಟ್ ಹೇಳಲಿರುವ 'ಥಗ್ಸ್ ಆಫ್ 1980' ಚಿತ್ರದ ಶೀರ್ಷಿಕೆ ಕೂಡ ಬಿಡುಗಡೆಗೊಳಿಸಲಾಯಿತು. ಈ ಗೀತೆಯನ್ನು ಎ.ಎಸ್ ಪ್ರೊಡಕ್ಷನ್ಸ್ ಬ್ಯಾನರ್‌ನಲ್ಲಿ ನಿರ್ಮಿಸಿರುವ ವೆಂಕಟ್ ಅವರೇ ಚಿತ್ರದ ನಿರ್ಮಾಣ ಕೂಡ ಮಾಡುತ್ತಿದ್ದಾರೆ. ❖

ಪ್ರಜಾವಾಣಿ ನೋಡಿಯೊ
ಸಿನಿಮಾತು
ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

'ತತ್ಸಮ ತದ್ಭವ'ಕ್ಕೆ ಡಾಲಿ ಬಲ

ಮೇಘನಾ ರಾಜ್, ಪ್ರಜ್ವಲ್ ದೇವರಾಜ್ ನಟಿಸಿರುವ 'ತತ್ಸಮ ತದ್ಭವ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟರಾದ ಧ್ರುವ ಸರ್ಜಾ ಹಾಗೂ ಡಾಲಿ ಧನಂಜಯ ಟ್ರೇಲರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು.

ಈ ಚಿತ್ರದ ಮೂಲಕ ಮೇಘನಾ ರಾಜ್ ಮತ್ತೆ ಚಿತ್ರರಂಗಕ್ಕೆ ಮರಳಿದ್ದಾರೆ. 'ನಾನು ಸಿನಿಮಾದಲ್ಲಿ ನಟಿಸಬಾರದು ಎಂದು ನಿರ್ಧರಿಸಿದಾಗ ಬಂದ ಸಿನಿಮಾವಿದು. ಈ ಚಿತ್ರ ಆರಂಭವಾಗಲು ನನ್ನ ಪತಿ ಚಿರು ಸರ್ಜಾ ಕಾರಣ. ಅವರಿಗೆ ಪ್ರಜ್ವಲ್ ಹಾಗೂ ಪನ್ನಗ ಅವರ ಜೊತೆ ಸೇರಿ ಸದಭಿರುಚಿಯ ಚಿತ್ರಗಳನ್ನು ನಿರ್ಮಾಣ ಮಾಡಬೇಕೆಂಬ ಆಸೆಯಿತ್ತು. ಹಾಗಾಗಿ ಈ ಚಿತ್ರವಾಗಿದೆ' ಎಂದರು ಮೇಘನಾ ರಾಜ್.

ವಿಶಾಲ್ ಆತ್ರೇಯ ಚಿತ್ರದ ನಿರ್ದೇಶಕರು. ಪನ್ನಗಾಭರಣ, ಸ್ಫೂರ್ತಿ ಅನಿಲ್ ಹಾಗೂ ಚೇತನ್ ನಂಜುಂಡಯ್ಯ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಸೆಪ್ಟೆಂಬರ್ 15ಕ್ಕೆ ತೆರೆಗೆ ಬರಲಿದೆ. 'ನಾನು ಬಹಳ ಇಷ್ಟಪಟ್ಟು ಮಾಡಿರುವ ಸಿನಿಮಾವಿದು. ಟ್ರೇಲರ್‌ಗೆ ನಮ್ಮ ತಂದೆ ದೇವರಾಜ್ ಅವರು ಧ್ವನಿ ನೀಡಿದ್ದಾರೆ' ಎಂದು ಪ್ರಜ್ವಲ್ ದೇವರಾಜ್ ತಿಳಿಸಿದರು.

'ನಾನು ಸಾಮಾನ್ಯವಾಗಿ ಭಾವುಕನಾಗುವುದಿಲ್ಲ. ಇಂದು ಏಕೋ ಗೊತ್ತಿಲ್ಲ, ಸ್ವಲ್ಪ ಭಾವುಕನಾಗುತ್ತಿದ್ದೇನೆ. ನಿರ್ಮಾಪಕನಾಗುವ ಕನಸು ಇರಲಿಲ್ಲ. ಆದರೂ ನಿರ್ಮಾಪಕನಾದೆ. ನನ್ನೊಟ್ಟಿಗೆ ಕೆಲವು ಸ್ನೇಹಿತರು ಕೈಜೋಡಿಸಿದರು 'ಎಂದರು ಪನ್ನಗಾಭರಣ. ವಾಸುಕಿ ವೈಭವ್ ಸಂಗೀತ ನಿರ್ದೇಶನ, ಶ್ರೀನಿವಾಸ ರಾಮಯ್ಯ ಛಾಯಾಗ್ರಾಹಣ ಚಿತ್ರಕ್ಕಿದೆ. ❖

ಡಾಲಿ ಧನಂಜಯ, ಮೇಘನಾ ರಾಜ್, ಪ್ರಜ್ವಲ್ ದೇವರಾಜ್

ತ್ರಿವೇಣಿ ಕೆಂಪೇಗೌಡ ಸರ್ಕಲ್
DOLBY DIGITAL 7.1
4K DIGITAL SCRABBLE ENTERTAINMENT PVT LTD
ಮಾಗಡಿರಸ್ತೆ ಪ್ರಸನ್ನ
URVASHI 4K DIGITAL 3D CINEMA
ನವಿತ Navitha
CAUVERY 4K DIGITAL 3D CINEMA
Swagath SHANKARNAG M.G.ROAD
VICTORY CINEMA

PVR INOX: NEXUS | ORION | VAISHNAVI | REGALIA | MARKETCITY | AURA | VEGACITY | SPIRIT | UPTOWN | BHARTIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEXUS NEIGHBOURHOOD | SBR | BROOKFIELD
Cinépolis: ETA | MEENAKSHI | ORION EAST | LULU | SHANTINIKETAN | SJR
GOPALAN CINEMAS: ARCH | INNOVATION | GRAND | SIGNATURE | LEGACY
ROCKLINE cinemas JALAHALLI
MIRAJ SUNKADAKATTE
KINO CINEMAS SEEGEHALLI
INNOVATIVE MULTIPLEX MARATHHALLI
MUKTA A2 CINEMAS UTHARAHALLI
CINEPHILE HSR LAYOUT
ಆವಲಹಳ್ಳಿ ವೆಂಕಟೇಶ್ವರ
ರಾಜಾಜಿನಗರ ನವರಂಗ್
ಜೆ.ಪಿ.ನಗರ ಸಿದ್ದೇಶ್ವರ
ಸಂಜಯನಗರ ವೈಭವ್
ತಾವರೆಕೆರೆ ಬಾಲಾಜಿ
ಕತ್ರಿಗುಪ್ಪೆ ಈಶ್ವರಿ
ಗೌಡನಪಾಳ್ಯ ಶ್ರೀನಿವಾಸ
ಪೀಣ್ಯ ಭಾರತಿ
ಕಮಲಾನಗರ ವೀರಭದ್ರೇಶ್ವರ
ಲಗ್ಗೆರೆ ಆಕಾಶ್
ರಾಜಗೋಪಾಲನಗರ ಮಾರುತಿ
ಚಿಕ್ಕಲಸಂದ್ರ ಬಾಲಾಜಿ
ಕೋಣನಕುಂಟೆ ಮಾನಸ

ಹೊಂಗಸಂದ್ರ ಬೃಂದ
ಅಗರ ತಿರುಮಲ
ಕೆಂಗೇರಿ ರಾಬಿನ್
ಜಾಲಹಳ್ಳಿ ಎಚ್.ಎಂ.ಟಿ
ಮಾರತ್ ಹಳ್ಳಿ ವಿನಾಯಕ
ಗರುಡಾಚಾರ್‌ಪಾಳ್ಯ ವಿಜಯಲಕ್ಷ್ಮಿ
ಕೆ.ಆರ್.ಪುರಂ ವೆಂಕಟೇಶ್ವರ
ಆರ್.ಟಿ.ನಗರ ರಾಧಾಕೃಷ್ಣ
ಕೋನಪ್ಪನ ಅಗ್ರಹಾರ ವೆಂಕಟೇಶ್ವರ
ಸುಂಕದಕಟ್ಟೆ ಮೋಹನ್
ದೊಮ್ಮಸಂದ್ರ ಬಾಲಾಜಿ
ಗೊಟ್ಟಿಗೆರೆ ಲಕ್ಷ್ಮಿ
ಮಲ್ಲತ್ತಹಳ್ಳಿ ವಿ.ಆರ್.ಸಿನಿಮಾಸ್
ಕದಿರೇನಹಳ್ಳಿ ಮಹದೇಶ್ವರ
ಯಲಹಂಕ ಗಣೇಶ್
ನಾಗವಾರ ಪೃಥ್ವಿ
ಉಲ್ಲಾಳ ವಜ್ರೇಶ್ವರಿ
ಗೊಲ್ಲರಹಟ್ಟಿ ವೆಂಕಟೇಶ್ವರ
ತುಮಕೂರು ಗಾಯತ್ರಿ, PVR INOX
ತಿಪಟೂರು ಲಕ್ಷ್ಮಿ
ರಾಮನಗರ ಶ್ರೀರಾಮ
ಚನ್ನಪಟ್ಟಣ ಬಾಲಾಜಿ
ಕನಕಪುರ ಅರ್ಕಾವತಿ
ಕೋಲಾರ ನಾರಾಯಣಿ
ಚಿಕ್ಕಬಳ್ಳಾಪುರ ಬಾಲಾಜಿ
ದೊಡ್ಡಬಳ್ಳಾಪುರ ವೈಭವ್
ಮಧುಗಿರಿ ಶಾಂತಲಾ
ಕುಣಿಗಲ್ ಪದ್ಮ

ಮಾಗಡಿ ಬಾಲಾಜಿ
ವಿಜಯಪುರ ಗೌರಿಶಂಕರ
ಹೊಸಕೋಟೆ ಅಲಂಕಾರ್
ಆನೇಕಲ್ ಅನ್ನಪೂರ್ಣ
ಗೌರಿಬಿದನೂರು ಶಂಕರ್
ಶಿರಾ ಭಾಗ್ಯಲಕ್ಷ್ಮಿ
ನೆಲಮಂಗಲ ರೂಪ
ಮೈಸೂರು ಗಾಯತ್ರಿ, PVR INOX GARUDA | FORUM | SATYAM, DRC CINEMAS, VISION CINEMAS
ಮಂಡ್ಯ ಗುರುಶ್ರೀ
ಹಾಸನ ಎಸ್.ಬಿ.ಜಿ
ಚಾಮರಾಜನಗರ ಸಿಂಹ ಮೂವೀ
ಕೊಳ್ಳೇಗಾಲ ಶಾಂತಿ
ಚನ್ನರಾಯಪಟ್ಟಣ ಗಾಯತ್ರಿ
ಹೊಳೆನರಸೀಪುರ ಚೆನ್ನಾಂಬಿಕಾ
ಬನ್ನೂರು ರತ್ನಮಹಲ್
ಟಿ.ನರಸೀಪುರ ಮುರುಗನ್
ಗುಂಡ್ಲುಪೇಟೆ ವೆಂಕಟೇಶ್ವರ
ಕೆ.ಆರ್.ನಗರ ವೆಂಕಟೇಶ್ವರ
ಅರಸೀಕೆರೆ ಸಾಧನಾ
ನಂಜನಗೂಡು ಶಾರದ
ಕೆ.ಆರ್.ಪೇಟೆ ಬಸವೇಶ್ವರ
ಪಿರಿಯಾಪಟ್ಟಣ ಮಹದೇಶ್ವರ
ಮಳವಳ್ಳಿ ಮಹಾಲಕ್ಷ್ಮಿ
ಮದ್ದೂರು ಮಹಾವೀರ
ಕೆ.ಎಂ.ದೊಡ್ಡಿ ಸುಮ
ಹುಣಸೂರು ಲೀಲಾ
ಕುಶಾಲನಗರ ಕೂರ್ಗ್

ಸಕಲೇಶಪುರ ತೇಜಸ್ವಿನಿ
ಪಾಂಡವಪುರ ಲಕ್ಷ್ಮಿ
ನಾಗಮಂಗಲ ವೆಂಕಟೇಶ್ವರ
ಬೆಳ್ಳೂರು ಕ್ರಾಸ್ ಮಾರುತಿ
ಶನಿವಾರಸಂತೆ ಯಶಸ್ವಿನಿ
ಸಿದ್ದಾಪುರ ವುಡ್‌ಲ್ಯಾಂಡ್ಸ್
ದಾವಣಗೆರೆ ಗೀತಾಂಜಲಿ, MOVIE TIME
ಬಳ್ಳಾರಿ ನಟರಾಜಕಾಂಪ್ಲೆಕ್ಸ್, MOVIE TIME
ಚಿತ್ರದುರ್ಗ ವೆಂಕಟೇಶ್ವರ
ಹೊಸಪೇಟೆ ಲಕ್ಷ್ಮಿ
ಹರಿಹರ ಶ್ರೀಕಾಂತ
ಹಗರಿಬೊಮ್ಮನಹಳ್ಳಿ ಕೊಟ್ಟೂರೇಶ್ವರ
ಹಿರಿಯೂರು ನಂಜುಂಡೇಶ್ವರ
ಹುಬ್ಬಳ್ಳಿ ಅಪ್ಸರಾ, PVR INOX, Cinépolis
ಧಾರವಾಡ ಪದ್ಮ
ಗದಗ ಕೃಷ್ಣ
ಬೆಳಗಾವಿ ಚಿತ್ರಾ, PVR INOX, KAPEEL
ಬಿಜಾಪುರ ಡ್ರೀಮ್‌ಲ್ಯಾಂಡ್
ರಾಣಿಬೆನ್ನೂರು ಶಿವಶಕ್ತಿ
ಬಾಗಲಕೋಟೆ ವಾಸವಿ
ಇಳಕಲ್ ಶ್ರೀನಿವಾಸ
ಗೋಕಾಕ್ ಲಕ್ಷ್ಮಿ
ರಬಕವಿ ಶ್ರೀನಿವಾಸ
ಬಾದಾಮಿ ಮಹಾಕೂಟೇಶ್ವರ
ಮುಧೋಳ ಸೂರ್ಯವಂಶಿ
ಹಾವೇರಿ ಮಾಫಾವಿ

ಅಂಕೋಲಾ ಸಮರ್ಥ
ಶಿರಸಿ ನಟರಾಜ
ಕಾರವಾರ ಅರ್ಜುನ
ಹೊನ್ನಾವರ ಪದ್ಮಾಂಜಲಿ
ಗುಲ್ಬರ್ಗ PVR INOX, MIRAJ, SHETTY'S
ಬೀದರ್ ಸಪ್ನ
ರಾಯಚೂರು MIRAJ
ಗಂಗಾವತಿ ಶಿವೆ
ಕೊಪ್ಪಳ ಶಾರದ
ಸಿಂಧನೂರು ಮಂಜುನಾಥ
ಷಹಪುರ ಜಯಶ್ರೀ
ಲಿಂಗಸುಗೂರು ಎಂಪೈರ್
ಶಿವಮೊಗ್ಗ ವೀರಭದ್ರೇಶ್ವರ, Bharath Cinemas
ಭದ್ರಾವತಿ ವೀರಭದ್ರೇಶ್ವರ
ಚಿಕ್ಕಮಗಳೂರು ನಾಗಲಕ್ಷ್ಮಿ
ಅನವೇರಿ ಶ್ರೀದೇವಿ
ಸಾಗರ ಶ್ರೀ
ಕಡೂರು ಅನ್ನಪೂರ್ಣ
ಶಿಕಾರಿಪುರ ಕಿರಣ್
ಮಂಗಳೂರು SP CINEMAS, PVR INOX, Cinépolis, Bharath Cinemas
ಉಡುಪಿ ಅಲಂಕಾರ್
ಸುರತ್ಕಲ್ Cine GALAXY
ಮಣಿಪಾಲ PVR INOX, Bharath Cinemas
ಕುಂದಾಪುರ Bharath Cinemas
ಪಡುಬಿದ್ರೆ Bharath Cinemas
ಪುತ್ತೂರು Bharath Cinemas
ಬೈಂದೂರು ಶಂಕರ್
ಕಾರ್ಕಳ ಪ್ಲಾನೆಟ್

ಯೋಜನೆ ಆಕ್ಷೇಪಿಸಿದ್ದ ಅರ್ಜಿದಾರರಿಗೆ ಹೈಕೋರ್ಟ್ ತರಾಟೆ

'ಶಕ್ತಿ'ಗೂ ಮೊದಲು ಚೆನ್ನಾಗಿತ್ತಾ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್ಥಿಕ ಸಂಕಷ್ಟದ ಜೊತೆ ಜೊತೆಗೆ ಪ್ರತಿ ನಿತ್ಯವೂ ಹೊಸ ಹೊಸ ಅವಾಂತರಗಳ ಸೃಷ್ಟಿಯಾಗುತ್ತಿವೆ' ಎಂದು ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಒದಗಿಸುವ 'ಶಕ್ತಿ ಯೋಜನೆ'ಯನ್ನು ಆಕ್ಷೇಪಿಸಿದ್ದ ಅರ್ಜಿದಾರರನ್ನು ಹೈಕೋರ್ಟ್, 'ದುರ್ಬಲ ವರ್ಗಗಳಿಗೆ ಉಚಿತ ಪ್ರಯಾಣದ ಸೌಲಭ್ಯ ನೀಡಿರುವ ಯೋಜನೆಯನ್ನು ಪ್ರಶ್ನಿಸುವ ನಿಮಗೆ ಮುಂಬೈ ಲೋಕಲ್ ರೈಲುಗಳ ದಟ್ಟಣೆ ಅರಿವಿದೆಯೇ' ಎಂದು ಕುಟುಕಿದೆ.

ಈ ಸಂಬಂಧ ವಿವಿಧ ಕಾನೂನು ಕಾಲೇಜು ವಿದ್ಯಾರ್ಥಿಗಳಾದ ಬೆಂಗಳೂರಿನ ಅಶ್ವಿನ್ ಶಂಕರ್ ಭಟ್, ನೇಹಾ ವೆಂಕಟೇಶ್ ಹಾಗೂ ಮುಂಬೈನ ಯಾಶಿಕಾ ಸರವಣ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'ಅರ್ಜಿದಾರರು ಸರಿಯಾದ ಅಧ್ಯಯನ ನಡೆಸದೆ ಈ ಅರ್ಜಿ ಸಲ್ಲಿಸಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, 'ಶಕ್ತಿ ಯೋಜನೆಗೂ ಮೊದಲು ಸಂಚಾರ ಸುಗಮವಾಗಿತ್ತಾ? ಯೋಜನೆಯಿಂದಾಗಿಯೇ ಬಸ್‌ಗಳಲ್ಲಿ ದಟ್ಟಣೆ ಉಂಟಾಗಿದೆಯೇ? ಯಾವ ರೂಟ್‌ಗಳಲ್ಲಿ ಪ್ರಯಾಣಿಕರ ದಟ್ಟಣೆ ಇದೆ? ಸಾರ್ವಜನಿಕ ಬಸ್‌ಗಳಲ್ಲಿ ಇಷ್ಟೇ ಜನ ಇರಬೇಕೆಂಬ ನಿಯಮ ಏನಾದರೂ ಇದೆಯೇ? ಅರ್ಜಿ ಸಲ್ಲಿಸುವ ಮೊದಲು ಸಾರಿಗೆ ನಿಯಮಗಳನ್ನು ಏಕೆ ಅಧ್ಯಯನ ನಡೆಸಿಲ್ಲ' ಎಂದು ಪ್ರಶ್ನೆಗಳ ಕೂರಂಬುಗಳನ್ನೇ ಎಸೆಯಿತು.

'ಸೂಕ್ತ ಅಧ್ಯಯನ ಮತ್ತು ಸಿದ್ಧತೆಯೊಂದಿಗೆ ಮತ್ತೊಮ್ಮೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಬಹುದು' ಎಂದು ಸಲಹೆ ನೀಡಿದ ನ್ಯಾಯಪೀಠ, ಅರ್ಜಿ ಹಿಂಪಡೆಯಲು ಅರ್ಜಿದಾರರಿಗೆ ಅನುಮತಿ ನೀಡಿತು.

ದೂರು: 'ಶಕ್ತಿ ಯೋಜನೆ ಜಾರಿಗೆ ಬಂದಾಗಿನಿಂದ ಬಸ್‌ಗಳಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಾಗಿದೆ. ಸೀಟು ಗಿಟ್ಟಿಸಿಕೊಳ್ಳಲು ಗಲಾಟೆ, ಹೊಡೆದಾಟ ಸಂಭವಿಸಿದ ಘಟನೆಗಳು ಜರುಗಿವೆ. ಹಿರಿಯ ನಾಗರಿಕರು, ಮಕ್ಕಳು ಬಸ್‌ಗಳಲ್ಲಿ ಒಳ ಪ್ರವೇಶಿಸಲು ಆಗುತ್ತಿಲ್ಲ. ವಿದ್ಯಾರ್ಥಿಗಳು ನಿಗದಿತ ಸಮಯಕ್ಕೆ ಶಾಲಾ-ಕಾಲೇಜು ತಲುಪಲು ಆಗುತ್ತಿಲ್ಲ. ಇದರಿಂದಾಗಿ ಬಸ್ ಹಾಗೂ ಬಸ್ ನಿಲ್ದಾಣಗಳಲ್ಲಿ ಅನುಚಿತ ವರ್ತನೆ, ಅಹಿತಕರ ಘಟನೆಗಳು ನಡೆಯುತ್ತಿವೆ. ಬಸ್ ನಿಲ್ದಾಣ ಮತ್ತು ಸರ್ಕಾರಿ ಬಸ್‌ಗಳು ಯುದ್ಧ ಭೂಮಿ, ಮೀನು ಮಾರುಕಟ್ಟೆಯಂತಾಗಿವೆ' ಎಂದು ಅರ್ಜಿದಾರರು ದೂರಿದ್ದರು.

'ಯೋಜನೆ ಜಾರಿಗೆ ಬಂದಾಗಿನಿಂದ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮೂರು ಕೋಟಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದಾರೆ. ಇದರಿಂದ ತೆರಿಗೆದಾರರ ಹಣದಲ್ಲಿ ವಾರಕ್ಕೆ ₹ 100 ಕೋಟಿಯಷ್ಟು ಬೃಹತ್ ಮೊತ್ತದ ನಷ್ಟವುಂಟಾಗುತ್ತಿದೆ. ಈ ಯೋಜನೆಗೆ ವಾರ್ಷಿಕ ₹ 3,200 ರಿಂದ ₹ 3,400 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ' ಎಂದು ವಿವರಿಸಿದ್ದರು.

ಕೋರಿಕೆ: 'ಶಾಲಾ ಮಕ್ಕಳು, ಹಿರಿಯ ನಾಗರಿಕರಿಗೆ ಬಸ್ ಹತ್ತಿ, ಇಳಿಯಲು ಸೂಕ್ತ ವ್ಯವಸ್ಥೆ ಕಲ್ಪಿಸಬೇಕು. ದೂರದ ಊರುಗಳಿಗೆ ತೆರಳುವ ಬಸ್‌ಗಳಲ್ಲಿ ಮುಂಗಡ ಟಿಕೆಟ್ ಕಾಯ್ದಿರಿಸಿದ ಪ್ರಯಾಣಿಕರು ಮೊದಲು ಹತ್ತಲು ಅವಕಾಶ ಮಾಡಿಕೊಡಬೇಕು. ನಿಂತು ಪ್ರಯಾಣಿಸುವುದನ್ನು ನಿಷೇಧಿಸಬೇಕು. ಟಿಕೆಟ್ ಪಡೆದವರಿಗೆ ಶೇ 50 ರಷ್ಟು ಸೀಟುಗಳನ್ನು ಮೀಸಲಿಡಬೇಕು. ಪ್ರಯಾಣಿಕರು ಕಿಟಕಿ ಹಾಗೂ ಚಾಲಕರ ದ್ವಾರದ ಮೂಲಕ ಹತ್ತುವುದನ್ನು ನಿರ್ಬಂಧಿಸಬೇಕು. ಶಾಲಾ ಮಕ್ಕಳಿಗೆ ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಬೇಕು' ಎಂದು ಕೋರಿದ್ದರು.

ಖಾಲಿಸ್ತಾನ ಪರ ಘೋಷಣೆ ಬರೆದಿದ್ದವನ ಬಂಧನ

ನವದೆಹಲಿ (ಪಿಟಿಐ): 'ದೆಹಲಿಯ ಐದು ಮೆಟ್ರೊ ನಿಲ್ದಾಣಗಳ ಗೋಡೆಗಳ ಮೇಲೆ ಖಾಲಿಸ್ತಾನ ಪರ ಘೋಷಣೆಗಳನ್ನು ಬರೆದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದು, ಮತ್ತೊಬ್ಬನನ್ನು ವಶಕ್ಕೆ ಪಡೆದಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಪೊಲೀಸ್ ಅಧಿಕಾರಿಗಳು, 'ಪ್ರೀತ್ ಪಾಲ್ ಸಿಂಗ್ ಬಂಧಿತ ಆರೋಪಿ. ದೆಹಲಿ ಪೊಲೀಸ್‌ನ ವಿಶೇಷ ಘಟಕದ ಅಧಿಕಾರಿಗಳು ಪಂಜಾಬ್‌ನಲ್ಲಿ ಈತನನ್ನು ಸೆರೆಹಿಡಿದಿದ್ದಾರೆ. ವಶಕ್ಕೆ ಪಡೆಯಲಾಗಿರುವ ವ್ಯಕ್ತಿ ಹೆಸರು ರಾಜ್‌ವಿಂದರ್ ಸಿಂಗ್. ದೆಹಲಿಗೆ ಬಂದ ತಕ್ಷಣವೇ ಆತನನ್ನೂ ಬಂಧಿಸಲಾಗುವುದು. ಇವರಿಬ್ಬರೂ ನಿಷೇಧಿತ ಸಿಖ್ಸ್ ಫಾರ್ ಜಸ್ಟೀಸ್ (ಎಸ್‌ಎಫ್‌ಜೆ) ಸಂಘಟನೆಯ ಮುಖ್ಯಸ್ಥ ಗುರಪತ್ವಂತ್ ಸಿಂಗ್ ಪನ್ನುನ್‌ನ ನಿರ್ದೇಶನದ ಮೇರೆಗೆ ಈ ಕೃತ್ಯ ಎಸಗಿದ್ದಾರೆ' ಎಂದರು.

ಶಿವಾಜಿ ಪಾರ್ಕ್, ಮದಿಪುರ್, ಪಶ್ಚಿಮ ವಿಹಾರ್, ಉದ್ಯೋಗ್ ನಗರ ಮತ್ತು ಮಹಾರಾಜ ಸೂರಜ್ಮಲ್ ಕ್ರೀಡಾಂಗಣ ಮೆಟ್ರೊ ನಿಲ್ದಾಣಗಳ ಗೋಡೆಗಳ ಮೇಲೆ ಈ ವ್ಯಕ್ತಿಗಳು ಈಚೆಗೆ ಖಾಲಿಸ್ತಾನ ಪರ ಘೋಷಣೆಗಳನ್ನು ಬರೆದಿದ್ದರು.

ಇಬ್ಬರು ನ್ಯಾಯಮೂರ್ತಿಗಳ ಕಾಯಂಗೆ ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಗಳಾದ ಅನಂತ ರಾಮನಾಥ ಹೆಗಡೆ ಮತ್ತು ಕೆ.ಎಸ್. ಹೇಮಲೇಖಾ ಅವರನ್ನು ಕಾಯಂ ನ್ಯಾಯಮೂರ್ತಿಗಳನ್ನಾಗಿ ನೇಮಿಸುವಂತೆ ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಶಿಫಾರಸು ಮಾಡಿದೆ.

ಸಿಜೆಐ ಡಿ.ವೈ. ಚಂದ್ರಚೂಡ್ ಅಧ್ಯಕ್ಷತೆಯ ಕೊಲಿಜಿಯಂ, ಕರ್ನಾಟಕದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಈ ಇಬ್ಬರನ್ನು ಕಾಯಂ ನ್ಯಾಯಮೂರ್ತಿಗಳಾಗಿ ನೇಮಿಸುವಂತೆ ಶಿಫಾರಸಿನಲ್ಲಿ ತಿಳಿಸಿದೆ.

ಹೆಚ್ಚುವರಿ ನ್ಯಾಯಮೂರ್ತಿ ಸಿದ್ದಯ್ಯ ರಾಚಯ್ಯ ಅವರನ್ನು ಮತ್ತೆ ಒಂದು ವರ್ಷದ ಅವಧಿಗೆ ಅದೇ ಹುದ್ದೆಗೆ ಹೊಸದಾಗಿ ನೇಮಕ ಮಾಡಬಹುದು ಎಂದು ತಿಳಿಸಿದೆ.

ಮೇ ತಿಂಗಳಿನಲ್ಲಿ ಈ ಮೂವರನ್ನು ಕಾಯಂ ನ್ಯಾಯಮೂರ್ತಿಗಳಾಗಿ ನೇಮಿಸುವಂತೆ ಹೈಕೋರ್ಟ್‌ನ ಕೊಲಿಜಿಯಂ ಶಿಫಾರಸು ಮಾಡಿತ್ತು. ಇದಕ್ಕೆ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರು ಅನುಮೋದನೆ ನೀಡಿದ್ದರು.

ಸಂಕ್ಷಿಪ್ತ ಸುದ್ದಿ

ಅಮರನಾಥ ಯಾತ್ರೆ ಮುಕ್ತಾಯ

ಶ್ರೀನಗರ: 62 ದಿನಗಳ ಸುದೀರ್ಘ ಅಮರನಾಥ ಯಾತ್ರೆ ಗುರುವಾರ ಮುಕ್ತಾಯಗೊಂಡಿದ್ದು, ದಕ್ಷಿಣ ಕಾಶ್ಮೀರದ ಹಿಮಾಲಯದಲ್ಲಿರುವ ಶಿವನ ದೇಗುಲಕ್ಕೆ ಈ ಬಾರಿ 4.70 ಲಕ್ಷ ಭಕ್ತರು ಯಾತ್ರೆ ಕೈಗೊಂಡಿದ್ದರು.

ಅಮರನಾಥ ಗುಹೆಯಲ್ಲಿ ಸ್ವಾಭಾವಿಕವಾಗಿ ಮೂಡುವ ಹಿಮದ ಶಿವಲಿಂಗ ದರ್ಶನದ ವಾರ್ಷಿಕ ಯಾತ್ರೆ ಜುಲೈ 1ರಿಂದ ಆರಂಭವಾಗಿತ್ತು.

ಮುಂಗಾರು ಮತ್ತೆ ಚುರುಕು: ಐಎಂಡಿ



ನವದೆಹಲಿ (ಪಿಟಿಐ): ನೈರುತ್ಯ ಮುಂಗಾರು ವಾರಾಂತ್ಯದಲ್ಲಿ ಮತ್ತೆ ಚುರುಕುಗೊಳ್ಳುವ ಸಾಧ್ಯತೆ ಇದ್ದು, ದೇಶದ ಮಧ್ಯ ಮತ್ತು ದಕ್ಷಿಣ ಭಾಗಗಳಲ್ಲಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮಹಾನಿರ್ದೇಶಕ ಮೃತ್ಯುಂಜಯ್ ಮೊಹಾಪಾತ್ರ ತಿಳಿಸಿದ್ದಾರೆ.

ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮೊಹಾಪಾತ್ರ, ಸೆಪ್ಟೆಂಬರ್‌ನಲ್ಲಿ ವಾಡಿಕೆ ಮಳೆ ಆಗುವ ಸಾಧ್ಯತೆ ಇದೆ. ದೀರ್ಘಾವಧಿಯ ಸರಾಸರಿ ಮಳೆ ಪ್ರಮಾಣ 167.9 ಮಿ.ಮೀ.ನ ಶೇಕಡ 91-109 ರಷ್ಟು ಮಳೆ ಬೀಳುವ ನಿರೀಕ್ಷೆ ಇದೆ ಎಂದು ಹೇಳಿದರು.

ಸೆಪ್ಟೆಂಬರ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಬಿದ್ದರೂ, ಜೂನ್-ಸೆಪ್ಟೆಂಬರ್ ಅವಧಿಯಲ್ಲಿನ ಮಳೆ ಪ್ರಮಾಣ ವಾಡಿಕೆಗಿಂತ ಕಡಿಮೆಯೇ ಇರಲಿದೆ ಎಂದು ಮೊಹಾಪಾತ್ರ ಹೇಳಿದರು.

ಸಚಿನ್ ನಿವಾಸದ ಎದುರು ಪ್ರತಿಭಟನೆ

ಮುಂಬೈ (ಪಿಟಿಐ): ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಅವರು ಆನ್‌ಲೈನ್ ಗೇಮಿಂಗ್ ಜಾಹೀರಾತಿನಲ್ಲಿ ಕಾಣಿಸಿಕೊಂಡಿರುವುದನ್ನು ವಿರೋಧಿಸಿ ಬಾಂದ್ರಾದಲ್ಲಿರುವ ಅವರ ನಿವಾಸದ ಎದುರು ಶಾಸಕ ಬಚ್ಚು ಕಡು ಮತ್ತು ಬೆಂಬಲಿಗರು ಗುರುವಾರ ಪ್ರತಿಭಟನೆ ನಡೆಸಿದ್ದಾರೆ.

ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಬೆಂಬಲಿಗ ಹಾಗೂ ಪ್ರಹಾರ್ ಜನಶಕ್ತಿ ಪಕ್ಷದ ಶಾಸಕರಾಗಿರುವ ಬಚ್ಚು ಮತ್ತು ಇತರ 22 ಮಂದಿಯನ್ನು ಪೊಲೀಸರು ಸಚಿನ್ ನಿವಾಸದ ಬಳಿಯಿಂದ ಕರೆದೊಯ್ದರು. ಪ್ರತಿಭಟನಕಾರರ ವಿರುದ್ಧ ಪ್ರಕರಣ ದಾಖಲಾಗಿದೆ.

'ವಿಭಜಿತ ಜಗತ್ತನ್ನು ಒಗ್ಗೂಡಿಸುವ ಜವಾಬ್ದಾರಿ ಭಾರತದ್ದು'

ನವದೆಹಲಿ (ಪಿಟಿಐ): 'ಇಂದು ವಿಶ್ವವು ಉತ್ತರ– ದಕ್ಷಿಣ ಮತ್ತು ಪೂರ್ವ– ಪಶ್ಚಿಮಗಳಾಗಿ ವಿಭಜನೆಯಾಗಿದ್ದು, ಅದನ್ನು ಒಗ್ಗೂಡಿಸುವ ಜವಾಬ್ದಾರಿ ಭಾರತದ ಮೇಲಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಗುರುವಾರ ಹೇಳಿದರು.

ಅವರು ಹಿಂದೂ ಕಾಲೇಜಿನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭೀಯಂತರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ
ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2023–24/827 ದಿನಾಂಕ : 31–08–2023

ಅಲ್ಪಾವಧಿ ಟೆಂಡರ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿಲಕೋಟೆಯಲ್ಲಿ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಒದಗಿಸುವ ಕಾಮಗಾರಿಗಳಿಗೆ ಕೊಳವೆ ಬಾವಿ ಕೊರೆಯಲು ಅರ್ಹ ಕೊಳವೆ ಬಾವಿ ಕೊರೆಯುವ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ: **Empanelment of Bore Wells Drilling Agencies for Drilling Bore Well in Kalaburagi District,** 2) ಲೆಕ್ಕ ಶಿರ್ಷಿಕೆ: water supply all heads, 3) ಗುತ್ತಿಗೆದಾರರ ಅರ್ಹತೆ: ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೊಂದಿಯಿತ ನಮೂನೆ–7ಎ ಹೊಂದಿರುವ ಕೊಳವೆ ಬಾವಿ ಕೊರೆಯುವ ಗುತ್ತಿಗೆದಾರರು ಮಾತ್ರ, 4) ಟೆಂಡರ ಫಾರಂ ಪಡೆಯುವ ದಿನಾಂಕ: **01–09–2023 ರಿಂದ 15–09–2023,** 5) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಇ–ಪ್ರೋಕ್ಯೂರಮೆಂಟ್ ಪ್ರಕಾರ, 6) ಪ್ರಿ ಬಿಡ್ ಸಭೆ ದಿನಾಂಕ: **11–09–2023 ಬೆಳಿಗ್ಗೆ 11:00** ಕೆಳಗೆ ನಮೂದಿಸಿದ ಕಛೇರಿಯಲ್ಲಿ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **15–09–2023 ಸಾಯಂಕಾಲ 4:00 ಗಂಟೆವರೆಗೆ,** 8) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ: **16–09–2023 ಸಾಯಂಕಾಲ 4:01 ಗಂಟೆವರೆಗೆ,** 9) ಆರ್ಥಿಕ ಬಿಡ್ಡ್ ತೆರೆಯುವ ದಿನಾಂಕ: **19–09–2023 ಬೆಳಿಗ್ಗೆ 11:00 ಗಂಟೆ ನಂತರ,** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ, ಕುಸನೂರ ರೋಡ, ಕಲಬುರಗಿ, 11) ಅಂತರಜಾಲ ತಾಣದ ವಿಳಾಸ: https://kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/226/ಕೆ.ಎಸ್.ಎಂ.ಸಿ.&ಎ/2023–24

ಬೆವಿಕಂ BESCOM
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ)

ಬೆ.ವಿ.ಕಂ, ಈ ಕೆಳಗಿನ ಕಾಮಗಾರಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಚಾರಣೆ ಸಂಖ್ಯೆ & ದಿನಾಂಕ	ವಿವರಣೆಗಳು	ಟೆಂಡರಿಗಿಟ್ಟ ಅಂದಾಜು ಮೊತ್ತ	ಇಎಂಡಿ ಮೊತ್ತ
1	CEE/CTAZ/SEE(O)/AEE-1/2023-24/062, Date: 18.08.2023	ಚಿತ್ರದುರ್ಗ ವಲಯ ವ್ಯಾಪ್ತಿಯ ವಿವಿಧ ಕಚೇರಿಗಳಿಗೆ 12 ತಿಂಗಳ ಅವಧಿಗೆ ಒಟ್ಟು 108 ಭದ್ರತಾ ಸಿಬ್ಬಂಧಿಗಳ ಸೇವೆಯನ್ನು (ಬಂದೂಕು ರಹಿತ) ಗುತ್ತಿಗೆ ಆಧಾರದಲ್ಲಿ ಒದಗಿಸುವುದು (ಅನುಬಂಧ–ಎ ರ ಪ್ರಕಾರ)	Rs. 2,88,98,701/-	Rs. 4,33,481/-

ಟೆಂಡರ್ ವೇಳಾಪಟ್ಟಿ:

a	ಬಿಡ್ ದಾಖಲೆಗಳು ಇ–ಪೋರ್ಟಲ್‌ನಲ್ಲಿ ಲಭ್ಯತೆ	31.08.2023 ಬೆಳಿಗ್ಗೆ 11:00 ಗಂಟೆಗೆ
b	ಬಿಡ್ ಪೂರ್ವಭಾವಿ ಸಭೆಯ ದಿನಾಂಕ	08.09.2023 ಬೆಳಿಗ್ಗೆ 11:00 ಗಂಟೆಗೆ
c	ಆಕ್ಷೇಪಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ	16.09.2023 ಸಂಜೆ 5:00 ಗಂಟೆಯವರೆಗೆ
d	ಬಿಡ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ	30.09.2023 ಸಂಜೆ 5:00 ಗಂಟೆಯವರೆಗೆ
e	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	04.10.2023 ಬೆಳಿಗ್ಗೆ 11:00 ಗಂಟೆಗೆ

ಟೆಂಡರ್‌ನಲ್ಲಿ ಭಾಗವಹಿಸುವ ಮಾಹಿತಿಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **kpppusers@karnataka.gov.in** ನಲ್ಲಿ ದಿನಾಂಕ **31.08.2023**ರ ನಂತರ ಪಡೆದುಕೊಳ್ಳಬಹುದು. ಬಿಡ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕ್ರಿಯೆಯಲ್ಲಿ ಬೆವಿಕಂ ಆಹ್ವಾನಿಸಿದೆ.
ಟೆಂಡರ್ ಮೊತ್ತ, ಇಎಂಡಿ ಇತ್ಯಾದಿ ಪಾವತಿಗಳನ್ನು ಇ–ಪಾವತಿ ಮೂಲಕ ಮಾಡತಕ್ಕದ್ದು. ಇತರೆ ಯಾವುದೇ ಮಾಹಿತಿಗಾಗಿ ಈ ಕೆಳಕಂಡ ದೂರವಾಣಿ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಲಾಗಿದೆ. **080–68948777 & 080–46010000** ಅಥವಾ ಇ–ಮೇಲ್ **hphelpdesk.blr@rteservices.com** ಸಂಪರ್ಕಿಸಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/–
ಮುಖ್ಯ ಇಂಜಿನಿಯರ್ (ವಿದ್ಯುತ್),
ಕಾ&ಪಾ ವಲಯ, ಬೆವಿಕಂ, ಚಿತ್ರದುರ್ಗ

ಬಮೂಲ್ / ನಂದಿನಿ
ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಡಾ॥ ಎಂ.ಹೆಚ್.ಮರೀಗೌಡ ರಸ್ತೆ, ಬೆಂಗಳೂರು–560029.

IFT.NO:kmf:ಬಮೂಲ್:ಮಾರುಕಟ್ಟೆ(ಸಾರಿಗೆ):ಇ–ಟೆಂಡರ್:556:2023:24 ದಿನಾಂಕ: 01.09.2023

ಸಾರಿಗೆ ಟೆಂಡರ್ ಪ್ರಕಟಣೆ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಮಾತ್ರ

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ., ಬೆಂಗಳೂರುರವರಿಂದ ಇನ್ಸುಲೇಟೆಡ್ ಕಂಟೈನರ್‌ವುಳ್ಳ ವಾಹನ ಹೊಂದಿರುವ ಮಾಲೀಕರಿಂದ ದ್ವೈವಾರ್ಷಿಕ ಗುತ್ತಿಗೆ ಆಧಾರದ ಮೇಲೆ ದ್ವೈವಾರ್ಷಿಕ ಗುತ್ತಿಗೆಗೆ ಇ–ಟೆಂಡರ್ ಮೂಲಕ ಆಹ್ವಾನಿಸಲಾಗಿದೆ.

1) ಮುಖ್ಯಡೇರಿ, ಮತ್ತು ಹೊಸಕೋಟೆ ಡೇರಿಯಿಂದ ಬೆಂಗಳೂರು ನಗರ ಹಾಗೂ ವಿವಿಧ ಗ್ರಾಮಾಂತರ ಪ್ರದೇಶಗಳಿಗೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸಾಗಾಣಿಕೆ ಮಾಡಿ ವಿತರಿಸುವ ಸಲುವಾಗಿ 2011ನೇ ಇಸವಿಗಿಂತ ಹಾಗೂ ಮೇಲ್ಪಟ್ಟು ತಯಾರಾದ ವರ್ಷ ಅಥವಾ ನೋಂದಾವಣಿಯಾಗಿರುವ ಇನ್ಸುಲೇಟೆಡ್ ಕಂಟೈನರ್‌ವುಳ್ಳ 1.0 ಟನ್, 2.0 ಟನ್, 3.0 ಟನ್ ಮತ್ತು 6.0 ಟನ್ ಸಾಮರ್ಥ್ಯದ ಸಾಗಾಣಿಕಾ ವಾಹನಗಳಿಗೆ 109 ಮಾರ್ಗಗಳಿಗೆ ಹಾಗೂ 14 ಮಾರ್ಗಗಳಿಗೆ (Call-2) ಮರು ಟೆಂಡರ್ ಆಹ್ವಾನಿಸಲಾಗಿದೆ.
2) ಮಾರುಕಟ್ಟೆ ವಿಭಾಗದ ಕಚೇರಿ ಕೆಲಸ ಕಾರ್ಯಗಳಿಗಾಗಿ 2015ನೇ ಮಾದರಿ ಮತ್ತು ಮೇಲ್ಪಟ್ಟ Swift Dzire/XCENT/ TOYOTA ETIOS/HONDA AMAZE/TATA INDICAಹಳದಿ ಬೋರ್ಡ್‌ನ ಕಾರುಗಳನ್ನು ಹೊಂದಿರುವ ವಾಹನ ಮಾಲಿಕರುಗಳಿಂದ ಟೆಂಡರ್ ಆಹ್ವಾನಿಸಲಾಗಿದೆ.

ವಿವರಗಳು ಈ ಕೆಳಕಂಡಂತಿವೆ

1	ಇ–ಟೆಂಡರ್ ಲಭಿಸುವ ದಿನಾಂಕ ಮತ್ತು ಸಮಯ	ದಿನಾಂಕ: 01.09.2023 ರಿಂದ 30.09.2023ರ ಸಂಜೆ 5.00 ಘಂಟೆಯವರೆಗೆ.
2	ಟೆಂಡರ್ ಬಗ್ಗೆ ಸ್ಪಷ್ಟನೆ ಪಡೆಯುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 26.09.2023 ರಂದು ಸಂಜೆ 5.00 ಘಂಟೆಯವರೆಗೆ
3	ಟೆಂಡರ್ ಸಲ್ಲಿಸುವ/ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 30.09.2023 ರಂದು ಸಂಜೆ 5.00 ಘಂಟೆಯವರೆಗೆ
4	ತಾಂತ್ರಿಕ ಟೆಂಡರ್ ಭಾಗ–1 ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 04.10.2023 ರಂದು ಮಧ್ಯಾಹ್ನ 2.30 ಘಂಟೆ
5	ವಾಣಿಜ್ಯ ಟೆಂಡರ್ ಭಾಗ–2 ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 11.10.2023 ರಂದು ಮಧ್ಯಾಹ್ನ 2.30 ಘಂಟೆ
6	ತಾಂತ್ರಿಕ/ವಾಣಿಜ್ಯ ಟೆಂಡರ್‌ಗಳನ್ನು ತೆರೆಯುವ ಸ್ಥಳ	ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ.,

ವಿ.ಸೂ:–
- ಪ್ರತಿ ಮಾರ್ಗಕ್ಕೆ ವಾಹನ ದಾಖಲಾತಿಗಳನ್ನು ಹಾಗೂ ಇ.ಎಂ.ಡಿ ಮೊತ್ತವನ್ನು ಪ್ರತ್ಯೇಕವಾಗಿ ಸಲ್ಲಿಸುವುದು.
- ಒಂದೇ ವಾಹನದ ದಾಖಲಾತಿಗಳನ್ನು ಒಂದಕ್ಕಿಂತ ಹೆಚ್ಚು ಮಾರ್ಗಗಳಿಗೆ ಸಲ್ಲಿಸಿದ್ದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು. (ಬೆಳಗ್ಗಿನ ಸರತಿಯ ಮಾರ್ಗಗಳಲ್ಲಿ ಭಾಗವಹಿಸುವ ವಾಹನಗಳು ಮಧ್ಯಾಹ್ನದ ಸರತಿಗೆ ಅದೇ ಸಾಮರ್ಥ್ಯದ ವಾಹನವಾಗಿದ್ದಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.)
- ಎಲ್ಲಾ ವಾಹನಗಳು ಕಡ್ಡಾಯವಾಗಿ ಇನ್ಸುಲೇಟೆಡ್ ಕಂಟೈನರ್‌ವುಳ್ಳ ವಾಹನವಾಗಿರತಕ್ಕದ್ದು, ಟೆಂಡರ್‌ನಲ್ಲಿ ನಮೂದಿಸಿರುವಂತೆ ಇನ್ಸುಲೇಟೆಡ್ ವಿನ್ಯಾಸ/ಮಾದರಿ ಹೊಂದಿರಬೇಕು.
- ಟೆಂಡರ್‌ನಲ್ಲಿ ಸಂಬಂಧ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗತಕ್ಕದ್ದು.

ಟೆಂಡರ್ ಸಂಬಂಧ ನೀಡಬೇಕಾದ ಅರ್ಜಿ ಶುಲ್ಕ, ಇ.ಎಂ.ಡಿ. ಮೊತ್ತ, ಭದ್ರತಾಠೇವಣಿ ಹಾಗೂ ಟೆಂಡರ್ ಷರತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ **https:// kppp.karnataka.gov.in**ನಲ್ಲಿ ಲಭ್ಯವಿರುತ್ತದೆ. ಹಾಗೂ e-procurmentನಲ್ಲಿ upload ಮಾಡಿರುವ ಹಾಲು ವಿತರಣಾ ಮಾರ್ಗಗಳ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ **https:// bmulnandini.coop**ನಲ್ಲಿ ಲಭ್ಯವಿರುತ್ತದೆ. **ಬಮೂಲ್, ಕಚೇರಿ ದೂರವಾಣಿ ಸಂಖ್ಯೆ:8660813724\9731537770\7760967170**

ಸಹಿ/–
ಬೆಂಗಳೂರು ಸಹಕಾರ ಹಾಲು ಒಕ್ಕೂಟದ ನಿ.,
ವ್ಯವಸ್ಥಾಪಕ ನಿರ್ದೇಶಕರು
ಇ–ಟೆಂಡರ್ ಆಹ್ವಾನ ಪ್ರಾಧಿಕಾರ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
namma metro · G20
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in
ಸಂ: ನಂ.3 ಎಸ್&ಟಿ–ಐಬಿಎಸ್ ಟೆಂಡರ್ ದಿನಾಂಕ: 31.08.2023

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್ ಇವರು **" ದಿನಾಂಕ 16.08.2023 ರಂದು ಬಿಎಂಆರ್‌ಸಿಎಲ್ ನೆಟ್‌ವರ್ಕ್‌ನಾದ್ಯಂತ ಮೆಟ್ರೋ ನಿಲ್ದಾಣಗಳು ಹಾಗೂ ಎತ್ತರಿಸಿದ ಸೆಕ್ಷನ್‌ಗಳಲ್ಲಿನ ಪಿಲ್ಲರ್‌ಗಳ ಮೇಲೆ ಐಬಿಎಸ್/ಬಿಟಿಎಸ್/ಸೆಲ್ಯೂಲರ್ ಟವರ್/ಪೋಲ್‌ಗಳ ಸ್ಥಾಪನೆಗಾಗಿ ಜಾಗದ ಪರವಾನಗಿ"**ಗಾಗಿ ಪ್ರಕಟಣೆ ಹೊರಡಿಸಿತ್ತು. ಇದಕ್ಕಾಗಿ ದಸ್ತಾವೇಜುಗಳ ಆನ್‌ಲೈನ್ ಮಾರಾಟದ ಅವಧಿಯನ್ನು **ದಿನಾಂಕ: 31.08.2023 ರಿಂದ 07.09.2023 ರ ಮಧ್ಯರಾತ್ರಿಯ ವರೆಗೆ** ವಿಸ್ತರಿಸಲಾಗಿದೆ. ಟೆಂಡರ್ ಸಲ್ಲಿಕೆಗೆ **ದಿನಾಂಕ: 16.10.2023 ಮಧ್ಯಾಹ್ನ 3.00 ಗಂಟೆಯವರೆಗೆ.** ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 16.10.2023 ಮಧ್ಯಾಹ್ನ 3.30 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ ಬಿಎಂಆರ್‌ಸಿಎಲ್ ವೆಬ್‌ಸೈಟ್ **www.bmrc.co.in** ಗೆ ಭೇಟಿನೀಡಿ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ರಾಜ್ಯ ಉಗ್ರಾಣ ನಿಗಮ
"ಉಗ್ರಾಣ ಭವನ" ನಂ.43 ಪ್ರಿಂ ರೋಸ್ ರಸ್ತೆ, ಬೆಂಗಳೂರು – 560025
ದೂ : 08029533679 ಫ್ಯಾಕ್ಸ್ : 080–29533673
ಇ-ಮೇಲ್: gmcom.kswc@gmail.com ವೆಬ್‌ಸೈಟ್: www.kswc.karnataka.gov.in
ಸಂಖ್ಯೆ: ಕರಾಉನಿ/ವಾಣಿಜ್ಯ-2/ಹ ಮತ್ತು ಸಾ ಟೆಂಡರ್ /01-ಕೇಂದ್ರ/1305/2023–24 ದಿನಾಂಕ: 30.08.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ನಿಗಮವು ಬೃಹತ್ ಠೇವಣಿದಾರರಿಂದ ಸ್ವೀಕರಿಸುವ ಆಹಾರ ಧಾನ್ಯಗಳು, ರಸಗೊಬ್ಬರ ಹಾಗೂ ಇತರೆ ಅಧಿಸೂಚಿತ ಸಾಮಾಗ್ರಿಗಳ ಹಸ್ತಾಂತರ ಹಾಗೂ ಸಾಗಾಣಿಕೆ ಕೆಲಸವನ್ನು ನಿರ್ವಹಿಸಲು ಮಂಗಳೂರು ಉಗ್ರಾಣ ಕೇಂದ್ರಕ್ಕೆ ಗುತ್ತಿಗೆದಾರರನ್ನು ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಟೆಂಡರುದಾರರು ಟೆಂಡರು ವಿವರಗಳ ಜೊತೆಗೆ ನಿಗಧಿತ ನಿಬಂಧನೆ ಹಾಗೂ ಷರತ್ತುಗಳನ್ನೊಳಗೊಂಡ ಟೆಂಡರು ಫಾರಂಗಳನ್ನು ವೆಬ್‌ಸೈಟ್ **https://kppp.karnataka.gov.in/kppp** ವಿಳಾಸದಲ್ಲಿ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: **15.09.2023 ಸಂಜೆ 5.00 ಗಂಟೆಯವರೆಗೆ ಸಲ್ಲಿಸಬೇಕು.** ಹೆಚ್ಚಿನ ವಿವರಗಳಿಗಾಗಿ ಟೆಂಡರುದಾರರು ವೆಬ್ ವಿಳಾಸ **https://kppp.karnataka.gov.in/kppp** ಅಥವಾ ಸಹಾಯವಾಣಿ **ಸಂಖ್ಯೆ: 080–25501216/25501227** ಸಂಪರ್ಕಿಸಬಹುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
DIPR/CP/1122/YC/2023-24

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹಾವೇರಿ ವಿಭಾಗ ಹಾವೇರಿ
E-Mail : dcfhaveri@gmail.com Tel No : 08375-298936
ಎ6/ಕಿ.ಅ.ಉ/ಹು.ಫ/ಡಿವ್ಹಿ ಡಿವ್ಹಿ/ಟೆಂ–ಕಂ–ಬ.ಹ/ಸಿಆರ್–/2023–24
ದಿನಾಂಕ : 29/08/2023

ಡಿವ್ಹಿ ಡಿವ್ಹಿ/ಹುಣಸೆ ಫಸಲಿನ ಟೆಂಡರ್–ಕಂ–ಬಹಿರಂಗ ಹರಾಜು ಪ್ರಕಟಣೆ

ಹಾವೇರಿ ಪ್ರಾದೇಶಿಕ ಅರಣ್ಯ ವಿಭಾಗ ವ್ಯಾಪ್ತಿಯ **ಕಿರು ಅರಣ್ಯ ಉತ್ಪನ್ನಗಳಾದ ಡಿವ್ಹಿ ಡಿವ್ಹಿ ಹಾಗೂ ಹುಣಸೆ ಫಸಲಿನ** ಟೆಂಡರ್–ಕಂ–ಬಹಿರಂಗ ಹರಾಜನ್ನು ಈ ಕೆಳಗಿನ ವೇಳಾಪಟ್ಟಿಯ ದಿನಾಂಕ : **12/09/2023** ರಂದು ನಡೆಸಲಾಗುವುದು.

ವಿವರಗಳು : (1) ಟೆಂಡರ್–ಕಂ–ಬಹಿರಂಗ ಹರಾಜು ದಿನಾಂಕ : **12–09–2023** (2) ಟೆಂಡರ್–ಕಂ–ಬಹಿರಂಗ ಹರಾಜು ಫಾರ್ಮ ನೀಡುವ ದಿನಾಂಕ : **12–09–2023** ರಂದು ಬೆಳಿಗ್ಗೆ 10–00 ಗಂಟೆಯಿಂದ 1–00 ಗಂಟೆಯವರೆಗೆ (3) ಟೆಂಡರ್ ತೆರೆಯುವ ದಿನಾಂಕ : **12–09–2023** ರಂದು ಮಧ್ಯಾಹ್ನ 4–00 ಗಂಟೆಗೆ (4) ಸದರಿ ದಿನಾಂಕದಂದು ಟೆಂಡರನಲ್ಲಿ ಯಾರೂ ಭಾಗವಹಿಸದೇ ಇದ್ದ ಪಕ್ಷದಲ್ಲಿ ಹಾಗೂ ಹರಾಜು ಜರುಗದೇ ಇದ್ದ ಪಕ್ಷದಲ್ಲಿ ದಿನಾಂಕ : **14–09–2023** ರಂದು ಟೆಂಡರ್–ಕಂ–ಬಹಿರಂಗ ಹರಾಜನ್ನು ಜರುಗಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ : **08375–298936** ನೇದ್ದನ್ನು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಸಂಪರ್ಕಿಸಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/160/2023–24 ಹಾವೇರಿ ವಿಭಾಗ, ಹಾವೇರಿ

KRISHNA BHAGYA JALA NIGAM LIMITED
(A Government of Karnataka Undertaking)
Office of the Executive Engineer, KBJNL,
IBC Division-2, Almel. Tq:Sindagi, Dist:Vijayapur.
Phone no:08488 232298,
Email:kbjnleealmel@gmail.com
No: KBJNL/IBCD-2/PB/Quotation/2023-24/278 Dated:30.08.2023

SHORT TERM QUOTATION

This office has invited short-term quotation from Registered Consultants for preparation of estimate for proposed work. Name of work:: **Consultancy services for Survey, investigation preparation of PFR/DPR and Detailed estimates for the work of Extension Renovation & Modernization of Indi LIS Main Canal from Ch.0.00 to 97.00 Km, Distributaries, Laterals & Sub Laterals including structures there under including liasoning with various Directorates of CWC for obtaining approval.**
Intended consultants to submit the quotations excluding GST and other taxes to this office on or before 07.09.2023.
The price list envelops should be clearly stamped with the "quotation. The quotations will be opened undersigned office on 07.09.2023 at 5.00 PM.
This officer competent to accept the tender shall have the right to reject any or all the Quotation rates without assigning any reason whatsoever.
Further information can be had from the undersigned during office hours. Contact Phone: Shri.S.L.Shivanl, Executive Engineer, Phone: 9731618422

Sd/- Executive Engineer,KBJNL, IBC Division -2, Almel.
ವಾಸಾಸಂಇ/ವಿಜಯಪುರ/132/ಕೆಎಸ್‌ಎಂಸಿಎ/2023–24

ಕರ್ನಾಟಕ ಸರ್ಕಾರ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ ಹಾವೇರಿ.
ಸಂ:ಹಾಜಿಪಂ/ಎನ್‌ಆರ್‌ಎಲ್‌ಎಂ/ಮಾ.ಸಂ.ಸಂ/ಇ–ಟೆಂಡರ/2023–24 ದಿನಾಂಕ: 31–08–2023

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಹಾವೇರಿ ಇವರಿಂದ ಆಹ್ವಾನಿಸಲಾದ ಟೆಂಡರ್:– ಹಾವೇರಿ ಜಿಲ್ಲೆಯಲ್ಲಿ ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ (ಕೆ.ಎಸ್.ಆರ್.ಎಲ್.ಪಿ.ಎಸ್) ವತಿಯಿಂದ ಅನುಷ್ಠಾನವಾಗುತ್ತಿರುವ ಎನ್‌ಆರ್‌ಎಲ್‌ಎಂ ಯೋಜನೆಯಡಿ ಜಿಲ್ಲೆ ಮತ್ತು (7) ತಾಲ್ಲೂಕ ಅಭಿಯಾನ ನಿರ್ವಹಣಾ ಘಟಕಗಳಲ್ಲಿ ಅನುಮೋದನೆಗೊಂಡು ಖಾಲಿ ಇರುವ 42 ಹುದ್ದೆಗಳಿಗೆ ಅರ್ಹ ಸಿಬ್ಬಂದಿ ಸೇವೆಯನ್ನು ಹೊರ ಸಂಪನ್ಮೂಲದಿಂದ ಪಡೆಯಲು ಮಾನವ ಸಂಪನ್ಮೂಲ ಪೂರೈಕೆ ಮಾಡುವ ಸಂಸ್ಥೆಯನ್ನು ಆಯ್ಕೆಮಾಡಲು ಅಲ್ಪಾವಧಿ ಇ–ಟೆಂಡರನ್ನು ಆಹ್ವಾನಿಸಲಾಗಿದೆ. ವಿವರ ಕೆಳಗಿನಂತಿದೆ:

1) **E-Tender Number**:ಹಾಜಿಪಂ/ಎನ್‌ಆರ್‌ಎಲ್‌ಎಂ/ಹೊರಗುತ್ತಿಗೆ/ಇ–ಟೆಂಡರ್‌ಪ್ರಕಟಣೆ/23–24 ದಿ:**30–08–2023** 2) ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. **208.92** ಲಕ್ಷಗಳು 3) **EMD** ಮೊತ್ತ ರೂ. ಇ-ಪೋರ್ಟಲ್ ನಲ್ಲಿರುವಂತೆ. 4) ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ದಿ:**13–09–2023** ಸಂಜೆ **04:00** ರವರೆಗೆ ಟೆಂಡರಗಳನ್ನು ಸಲ್ಲಿಸಬಹುದು. 5) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟರ್‌ನಲ್ಲಿ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿ:**15–09–2023, 10:00** ಗಂಟೆಗೆ. 6) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟರ್‌ನಲ್ಲಿ ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ ದಿ: **16–09–2023, 10:00** ಗಂಟೆಗೆ
ಕೆಲಸದ ಹೆಸರು/ಪೂರೈಕೆದಾರರ ಅರ್ಹತೆ/ಟೆಂಡರ್ ನಿಯಮಗಳು/ಟೆಂಡರ್ ಪ್ರೊಸೆಸ್ಸಿಂಗ್ ಫೀ ಇತ್ಯಾದಿ ವಿವರ ಗಳಿಗೆ https://kppp.karnataka.gov.in ಮೂಲಕ ಪಡೆಯಬಹುದು.
ವಿ.ಸೂ: ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/–
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ, ಹಾವೇರಿ
ವಾ.ಸಾ.ಇ/ಹಾವೇರಿ/157/2023–24/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ, ಬೆಳಗಾವಿ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿ, ಬೆಳಗಾವಿ
ಫೋ.ನಂ:0831–2407241 ಫ್ಯಾಕ್ಸ್:0831–2407242 E-mail:dhobelgaum@gmail.com
ಸಂ:ಇ-ಟೆಂಡರ/ 13/2022–23 ದಿನಾಂಕ: 31.08.2023

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮರು ಟೆಂಡರ ಆಹ್ವಾನ

ವಿಷಯ;2023 ನೇ ಸಾಲಿಗೆ ಬೆಳಗಾವಿ ಜಿಲ್ಲೆಯ ಸ.ಆ. ಕೇಂದ್ರ/ ಸಾರ್ವಜನಿಕ ಆಸ್ಪತ್ರೆ/ವಿಸ್ತೀರ್ಣ ಆರೋಗ್ಯ ಘಟಕಗಳಿಗೆ ಫಾರ್ಮಾಸಿಸ್ಟ್/ ಕಿ.ಪ್ರ.ತಾಂ.ಅಧಿಕಾರಿ/ಶುಶ್ರೂಷಕ/ಮತ್ತು ಗ್ರೂಪ್'ಡಿ' ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಅಡಿ ಪಡೆಯಲು ಮರು ಟೆಂಡರ ಕರೆಯುವ ಬಗ್ಗೆ.
ಉಲ್ಲೇಖ:– ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ.ಬೆಳಗಾವಿ ಇವರ ಟಿಪ್ಪಣಿ ಅನುಮೋದನೆ,ದಿ:24.08.2023

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, 2023 ನೇ ಸಾಲಿಗೆ ಬೆಳಗಾವಿ ಜಿಲ್ಲೆಯ ಸ.ಆ.ಕೇಂದ್ರ/ಸಾರ್ವಜನಿಕ ಆಸ್ಪತ್ರೆ/ ವಿಸ್ತೀರ್ಣ ಆರೋಗ್ಯ ಘಟಕಗಳಿಗೆ ಫಾರ್ಮಾಸಿಸ್ಟ್ /ಕಿ.ಪ್ರ.ತಾಂ.ಅಧಿಕಾರಿ /ಶುಶ್ರೂಷಕ/ ಮತ್ತು ಗ್ರೂಪ್'ಡಿ' ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಅಡಿ ಪಡೆಯುವ ಕುರಿತು ನೊಂದಾಯಿತ ಸಂಸ್ಥೆಗಳಿಂದ ದ್ವಿಲಕೋಟೆ ಪದ್ಧತಿಯಲ್ಲಿ ಮರು ಇ-ಟೆಂಡರ ಆಹ್ವಾನಿಸಲಾಗಿದೆ. ಟೆಂಡರ ಫಾರ್ಮಗಳನ್ನು ಹಾಗೂ ನಿಬಂಧನೆಗಳನ್ನೊಳಗೊಂಡ ಟೆಂಡರ ಪುಸ್ತಕವನ್ನು ದಿನಾಂಕ: 01.09.2023 ರಿಂದ ದಿ: 14.09.2023 ರವರೆಗೆ ಸಾಯಂಕಾಲ 4.00 ಗಂಟೆ ಒಳಗಾಗಿ ಇ ಪ್ರೊಕ್ಯೂರ್‌ಮೆಂಟ್ ವೆಬಸೈಟ್ www.eproc.karnataka.gov.inದಲ್ಲಿ ಇ–ಪೋರ್ಟಲ್ ನಿಗದಿಪಡಿಸಿದ ಶುಲ್ಕದೊಂದಿಗೆ ಪಡೆಯಬಹುದು. ಭರ್ತಿ ಮಾಡಿದ ಟೆಂಡರ ಫಾರ್ಮಗಳನ್ನು ದಿ:15.09.2023 ರ ಸಾಯಂಕಾಲ 4.00 ಗಂಟೆವರೆಗೆ ಇ-ಪೋರ್ಟಲ್‌ನಲ್ಲಿ ಅಪಲೋಡ್ ಮಾಡಬಹುದು. ಸ್ವೀಕರಿಸಿದ ಟೆಂಡರಗಳನ್ನು ದಿ:16.09.2023 ರಂದು ಮದ್ಯಾಹ್ನ 4.00 ಗಂಟೆಗೆ ಟೆಂಡರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು (0831–2407241) 9535903733 ಜಿಲ್ಲಾ ಆರೋಗ್ಯ ಮತ್ತು ಕು.ಕ.ಕಚೇರಿ, 2ನೇ ರೇಲ್ವೆ ಗೇಟ್, ಟಿಳಕವಾಡಿ.ಬೆಳಗಾವಿ ಇಲ್ಲಿ ಪಡೆಯಬಹುದು.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು,
ಬೆಳಗಾವಿ
DIPR/BGM/RO-NO-353/KSMCA/2023-24

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಹುಬ್ಬಳ್ಳಿ–ಧಾರವಾಡ ನಗರ ಸಾರಿಗೆ ವಿಭಾಗ, ಹುಬ್ಬಳ್ಳಿ
ಸಂ.ವಾಕರಸಾ/ಹುಧಾನಸಾವಿ/ಸಂ/ವಾ/1056 ದಿನಾಂಕ : 30–08–2023

ಇ–ಟೆಂಡರ್ ಪ್ರಕಟಣೆ ಸಂಖ್ಯೆ : 02/2023

ವಾ.ಕ.ರ.ಸಾ.ಸಂಸ್ಥೆ, ಹುಬ್ಬಳ್ಳಿ–ಧಾರವಾಡ ನಗರ ಸಾರಿಗೆ ವಿಭಾಗದ ವ್ಯಾಪ್ತಿಗೆ ಬರುವ ಹುಬ್ಬಳ್ಳಿ ನಗರ ಸಾರಿಗೆ ಬಸ್ ನಿಲ್ದಾಣದ(ಸಿ.ಬಿ.ಟಿ.–ಹುಬ್ಬಳ್ಳಿ), ಹೊಸೂರ ನಗರ–ಉಪನಗರ ಬಸ್ ನಿಲ್ದಾಣ, ಸಿ.ಬಿ.ಟಿ.–ಧಾರವಾಡ, ಹೆಬ್ಬಳ್ಳಿ ಮತ್ತು ಮಿಶ್ರಿಕೋಟಿ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಸ್ಥಳಗಳಿಗೆ/ಬಸ್ ನಿಲ್ದಾಣಗಳಲ್ಲಿ ಜಾಹೀರಾತು ಪ್ರದರ್ಶಿಸಲು ಮತ್ತು ಹಣತೆತ್ತು ಉಪಯೋಗಿಸುವ ಪದ್ಧತಿಯಲ್ಲಿ ಬಸ್‌ನಿಲ್ದಾಣದ/ಶೌಚಾಲಯ/ಮೂತ್ರಾಲಯಗಳ ಸ್ವಚ್ಛತಾ ಗುತ್ತಿಗೆಗಾಗಿ ಪರವಾನಿಗೆದಾರರ ಆಯ್ಕೆಗೆ ದಿ : **30–08–2023** ರಿಂದ ಇ–ಟೆಂಡರ್ ಮೂಲಕ ಅರ್ಜಿಗಳನ್ನು ಆಹಾನಿಸಲಾಗಿದೆ. ಟೆಂಡರ್ ವಿವರ/ದಿನಾಂಕಗಳು ಕೆಳಕಂಡಂತೆ ಇರುತ್ತವೆ.
ಇ–ಪ್ರೊಕ್ಯೂರಮೆಂಟ್ ವಿವರ ಮತ್ತು ನಿಗದಿಪಡಿಸಿದ ದಿನಾಂಕ : ಇ–ಟೆಂಡರ್ ದಸ್ತಾವೇಜುಗಳನ್ನು **https://kppp.karnataka.gov.in/** ಮೂಲಕ ಡೌನಲೋಡ್ ಮಾಡಿಕೊಳ್ಳಬಹುದು. ದಿನಾಂಕ : **16/09/2023** ಸಮಯ 12:00 ರವರೆಗೆ ಅರ್ಜಿ ಸಲ್ಲಿಸಲು ಕೊನೆ ದಿನಾಂಕ : **18/09/2023** ಸಮಯ 16:00 ರವರೆಗೆ ಇ–ಟೆಂಡರ್ ತೆರೆಯುವ ದಿನಾಂಕ (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ) ದಿನಾಂಕ : **20/09/2023** ಸಮಯ 12:00 ಘಂಟೆಗೆ.
ಹೆಚ್ಚಿನ ವಿವರಗಳಿಗಾಗಿ ವಾ.ಕ.ರ.ಸಾ.ಸಂಸ್ಥೆಯ ಹುಬ್ಬಳ್ಳಿ–ಧಾರವಾಡ ನಗರ ಸಾರಿಗೆ ವಿಭಾಗದ ವಿಭಾಗೀಯ ಕಛೇರಿ, 5ನೇ ಮಹಡಿ, ಸಿ.ಬಿ.ಟಿ.–ಹುಬ್ಬಳ್ಳಿ ಬಸ್ ನಿಲ್ದಾಣದ ಬಹುಮಹಡಿ ಕಟ್ಟಡ, ಸಿ.ಬಿ.ಟಿ–ಹುಬ್ಬಳ್ಳಿಯನ್ನು ಸಂಪರ್ಕಿಸಲು ಕೋರಲಾಗಿದೆ. ಮೊಬೈಲ್ ಸಂಖ್ಯೆ : **9606030542** (ವಿಭಾಗೀಯ ಸಾರಿಗೆ ಅಧಿಕಾರಿ)

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ವಾ.ಕ.ರ.ಸಾ.ಸಂಸ್ಥೆ, ಹು–ಧಾ.ನ.ಸಾ. ವಿಭಾಗ ಹುಬ್ಬಳ್ಳಿ

ಕರ್ನಾಟಕ ಸರ್ಕಾರ
ಶಿವಮೊಗ್ಗ ಅರಣ್ಯ ವಿಭಾಗ, ಶಿವಮೊಗ್ಗ.
ಸಂಖ್ಯೆ:ಎ6/ಬಿಜಿಟಿ/ಟೆಂಡರ್/ಸಿಆರ್–02/2023–24 ದಿನಾಂಕ: 28.08.2023

ಮರು ಇ–ಟೆಂಡರ್ ಪ್ರಕಟಣೆ.
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2023–24 ನೇ ಸಾಲಿನಲ್ಲಿ 4406-Capital Outlay on Forestry & Wildlife-01-Forestry-101-Forest Conservation, Development and Regeneration -0 -02-Flexi Fund - 139 MW ಲೆಕ್ಕ ಶೀರ್ಷಿಕೆರಡಿ ಶಿವಮೊಗ್ಗ ಅರಣ್ಯ ವಿಭಾಗದ, ವಿವಿಧ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಮುಂಗಡ ಕಾಮಗಾರಿ ಮತ್ತು ಸಸಿಗಳನ್ನು ಬೆಳೆಸಿಕೊಂಡು ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2023– 24 ನೇ ಸಾಲಿಗೆ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ಸ್ಥಳದಿಂದ 20 ಕಿ.ಮೀ ವ್ಯಾಪ್ತಿಯಲ್ಲಿ ಸ್ವಂತ ಸಸ್ಯಕ್ಷೇತ್ರ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:05.09.2023 ರ ಸಂಜೆ 4.30 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್ ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/99/08/23–24/388

ಕರ್ನಾಟಕ ಸರ್ಕಾರ
ಉಪವಿಭಾಗಾಧಿಕಾರಿಯುವರ ಕಾರ್ಯಾಲಯ,
ಹಾಸನ ಉಪವಿಭಾಗ, ಹಾಸನ.
ದೂ.ಸಂಖ್ಯೆ: 08172–268403 E-mail hsn.sub@gmail.com
ಸಂಖ್ಯೆ: ಡಿಎಎಸ್.43/22–23 ದಿನಾಂಕ 31–08–2023

ಟೆಂಡರ್ ಪ್ರಕಟಣೆ (ಇಂಡೆಂಟ್ ನಂ HRICE/2023-24/IND.0110)

ಶ್ರೀ ಹಾಸನಾಂಬ ದೇವಿ ದರ್ಶನ ಮತ್ತು ಶ್ರೀ ಸಿದ್ದೇಶ್ವರ ದೇವಾಲಯದ ಜಾತ್ರಾ ಮಹೋತ್ಸವ–2023 ರ ಅಂಗವಾಗಿ ದಿನಾಂಕ 02–11–2023 ರಿಂದ 15–11–2023 ರವರೆಗೆ ಭಕ್ತಾಧಿಗಳಿಗೆ ಲಾಡು ಪ್ರಸಾದ, ದೊನ್ನೆ ಪ್ರಸಾದ, ಸಿಬ್ಬಂದಿಗಳಿಗೆ ಬೆಳಿಗ್ಗೆ ತಿಂಡಿ, ಮದ್ಯಾಹ್ನ ಮತ್ತು ರಾತ್ರಿ ಊಟ ತಯಾರಿಸಿ ಸರಬರಾಜು ಮಾಡುವ ಸಂಬಂಧ ಅರ್ಹ ಸರಬರಾಜು ಸಂಸ್ಥೆಯವರಿಂದ ದರಗಳನ್ನು ಇ– ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಇಂಡೆಂಟ್ ನಂ ಹೆಚ್.ಆರ್.ಐ.ಸಿ./2023–24 ಐ.ಎನ್.ಡಿ.0110 ಕೆಲಸದ ವಿವರ ಹಾಸನಾಂಬ ದೇವಿ ದರ್ಶನ ಮತ್ತು ಶ್ರೀ ಸಿದ್ದೇಶ್ವರ ದೇವಾಲಯದ ಜಾತ್ರಾ ಮಹೋತ್ಸವ–2023 ರ ಅಂಗವಾಗಿ ದಿನಾಂಕ 02–11–2023 ರಿಂದ 15–11–2023 ರವರೆಗೆ ಭಕ್ತಾಧಿಗಳಿಗೆ ಲಾಡು ಪ್ರಸಾದ, ದೊನ್ನೆ ಪ್ರಸಾದ, ಸಿಬ್ಬಂದಿಗಳಿಗೆ ಬೆಳಿಗ್ಗೆ ತಿಂಡಿ, ಮದ್ಯಾಹ್ನ ಮತ್ತು ರಾತ್ರಿ ಊಟ ತಯಾರಿಸಿ ಸರಬರಾಜು ಮಾಡುವ ಬಗ್ಗೆ. ಕ್ರ.ಸಂ 1)ವಿವರ ಲಾಡು ಪ್ರಸಾದ ವಿತರಣೆ (ಟೆಂಡರ್‌ನಲ್ಲಿ ತಿಳಿಸಿರುವಂತೆ ಒಂದು ಸೆಟ್‌ಗೆ) ಬೆಂಚ್ ಮಾರ್ಕ್(ದರ ರೂಗಳಲ್ಲಿ): 35.00 2)ಭಕ್ತಾಧಿಗಳಿಗೆ ಪ್ರಸಾದ ವಿತರಣೆ (ಒಂದು ಪ್ರಸಾದಕ್ಕೆ) ಬೆಂಚ್ ಮಾರ್ಕ್(ದರ ರೂಗಳಲ್ಲಿ): 10.00 3)ಸಿಬ್ಬಂದಿಗಳಿಗೆ ಉಪಹಾರ ಮತ್ತು ಊಟ (ವಿವರ ಟೆಂಡರ್‌ನಂತೆ) ಬೆಂಚ್ ಮಾರ್ಕ್(ದರ ರೂಗಳಲ್ಲಿ): 30.00x3=90 ಎ.ಎಂ.ಡಿ.ಮೊತ್ತ (ರೂ.ಗಳಲ್ಲಿ): 50,000/– (ಐವತ್ತು ಸಾವಿರ ಮಾತ್ರ) ಟೆಂಡರ್‌ನ ವೇಳಾಪಟ್ಟಿ ವಿವರ ಕೆಳಗಿನಂತಿದೆ. ಕ್ರ.ಸಂ 1)ವಿವರ ಏರ್ಪಾಡುಗಳ ನಿರ್ವಹಣೆಯ ಅವಧಿ: ದಿನಾಂಕ 02–11–2023 ರಿಂದ 15–11–2023 ರವರೆಗೆ 2)ಇ.ಎಂ.ಡಿ. ಮೊತ್ತ: ರೂ. 50,000/– (ಐವತ್ತು ಸಾವಿರ ಮಾತ್ರ) 3)ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಖಾಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ನಿಗಧಿಪಡಿಸಿದ ದಿನಾಂಕ:31–08–2023 ರಿಂದ 16–09–2023 ರವರೆಗೆ ಸಮಯ ಸಂಜೆ 5–30 ರವರೆಗೆ 4)ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 16–09–2023 ಸಮಯ ಸಂಜೆ 5–30 5)ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ/ಆರ್ಥಿಕ ಅರ್ಹತೆಯ ಬಿಡ್) 19–09–2023

ಸಹಿ/–ಮಾರುತಿ ಜೆ.ಬಿ, ಕೆ.ಎ.ಎಸ್
ಆಡಳಿತಾಧಿಕಾರಿ, ಶ್ರೀ ಹಾಸನಾಂಬ ದೇವಾಲಯ,
ಹಾಗೂ ಉಪವಿಭಾಗಾಧಿಕಾರಿ, ಹಾಸನ
ವಾಸಾಸಂಇ/ಹಿಸನಿ/ಹಾಸನ/249/ಕೆಎಸ್‌ಎಂಸಿಎ/250/2023–24

ಕಾವೇರಿ ಜಲ ವಿವಾದ: ಕಾನೂನು ತಜ್ಞರೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮಾಲೋಚನೆ

ಅಣೆಕಟ್ಟೆಗೆ ಭೇಟಿ ನೀಡಿ ಪರಿಶೀಲನೆಗೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಕಾವೇರಿ ನೀರು ನಿಯಂತ್ರಣ ಸಮಿತಿಯವರು ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದ ಅಣೆಕಟ್ಟುಗಳಿಗೆ ಭೇಟಿ ನೀಡಿ ಅಲ್ಲಿನ ವಾಸ್ತವಾಂಶವನ್ನು ಪರಿಶೀಲಿಸಬೇಕು ಎಂದು ಮನವಿ ಮಾಡಿದ್ದೇವೆ. ಆಗಲಾದರೂ ನಮ್ಮ ಪರಿಸ್ಥಿತಿ ಅವರಿಗೆ ಅರ್ಥವಾಗಲಿದೆ' ಎಂದು ಉಪಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಕಾವೇರಿ ನೀರಿನ ವಿಚಾರವಾಗಿ ನಮ್ಮ ಅಧಿಕಾರಿಗಳ ಹೋರಾಟದ ಪರಿಣಾಮವಾಗಿ ತಮಿಳುನಾಡಿಗೆ ಕಡಿಮೆ ನೀರು ಹರಿಸುವ ಆದೇಶ ಸಿಕ್ಕಿದೆ. ಆದರೂ ಕರ್ನಾಟಕದಲ್ಲಿ ಮಳೆಯ ಕೊರತೆಯಿಂದಾಗಿ ಪ್ರತಿನಿತ್ಯ 5 ಸಾವಿರ ಕ್ಯೂಸೆಕ್ ನೀರು ಹರಿಸುವುದು ಸವಾಲಿನ ವಿಚಾರ' ಎಂದರು.

'ಪ್ರತಿನಿತ್ಯ 24 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ತಮಿಳುನಾಡಿನವರು ಒತ್ತಡ ಹೇರಿದ್ದರು. ನಮ್ಮ ಅಧಿಕಾರಿಗಳು ವಾಸ್ತವಾಂಶಗಳ ದಾಖಲೆ ಮಂಡಿಸಿದ ಪರಿಣಾಮ ತಮಿಳುನಾಡಿಗೆ ಹರಿಸುವ ನೀರಿನ ಪ್ರಮಾಣ 5 ಸಾವಿರ ಕ್ಯೂಸೆಕ್‌ಗೆ ಇಳಿಸಲಾಗಿದೆ. ರಾಜ್ಯದಲ್ಲಿ ಮಳೆಯ ಕೊರತೆ, ಅಣೆಕಟ್ಟುಗಳಿಗೆ ಒಳಹರಿವಿನ ಪ್ರಮಾಣ ಕುಸಿದಿರುವ ಕಾರಣ, ಈ ಪ್ರಮಾಣದ ನೀರನ್ನು ಬಿಡುವುದು ಕಷ್ಟಕರವಾಗಿದೆ. ನಾವು ಎಷ್ಟು ನೀರು ಬಿಟ್ಟಿದ್ದೇವೆ ಎಂಬುದಕ್ಕೆ ಬಿಳಿಗುಂಡ್ಲುವಿನಲ್ಲಿ ಲೆಕ್ಕ ಇದೆ' ಎಂದರು.

ಕಾವೇರಿ ಜಲವಿವಾದದಲ್ಲಿ ರಾಜ್ಯದ ಪರ ವಾದಿಸುತ್ತಿರುವ ಹಿರಿಯ ವಕೀಲ ಶ್ಯಾಮ್ ದಿವಾನ್ ಅವರನ್ನು ಡಿ.ಕೆ. ಶಿವಕುಮಾರ್ ಭೇಟಿ ಮಾಡಿದರು

'ಸರಿಯಾದ ಪ್ರಮಾಣದಲ್ಲಿ ಮಳೆಯಾಗಿ, ನೀರು ಇದ್ದಿದ್ದರೆ ನೀರು ಹರಿಸಲು ಯಾವುದೇ ಅಭ್ಯಂತರ ಇರುತ್ತಿರಲಿಲ್ಲ. ಈ ಹಿಂದೆ ಕೈಗೊಂಡ ನಿರ್ಧಾರಗಳನ್ನು ಗೌರವಿಸಿ ನೀರು ಹರಿಸಿದ್ದೇವೆ. ಪ್ರಾಧಿಕಾರದ ಅಧಿಕಾರಿಗಳು ನಮ್ಮ ಅಣೆಕಟ್ಟುಗಳಿಗೆ ಭೇಟಿ ನೀಡಿ ವಾಸ್ತವಾಂಶ ವನ್ನು ಕಣ್ಣಾರೆ ನೋಡಿ ಪರಿಶೀಲನೆ ನಡೆಸಲಿ ಎಂದು ಆಹ್ವಾನ ನೀಡಿದ್ದೇವೆ. ಆಗ ಕರ್ನಾಟಕದಲ್ಲಿ ನೀರಿನ ಸಮಸ್ಯೆಯ ತೀವ್ರತೆ ಅರಿವಾಗಲಿದೆ. ಪ್ರಾಧಿಕಾರದವರು ನಮ್ಮ ಮನವಿ ಪುರಸ್ಕರಿಸಿ, ನಮ್ಮ ರಾಜ್ಯ ಹಾಗೂ ರೈತರ ಹಿತ ಕಾಯುತ್ತಾರೆ ಎಂಬ ನಿರೀಕ್ಷೆ ಇಟ್ಟುಕೊಂಡಿದ್ದೇವೆ' ಎಂದು ಅವರು ಹೇಳಿದರು.

> ರಾಜ್ಯದ ರೈತರಿಗೆ ಅನ್ಯಾಯ ಮಾಡಿ ತಮಿಳುನಾಡಿಗೆ ಕಾವೇರಿ ನೀರು ಬಿಡುವುದು ಸರಿಯಲ್ಲ. ನಮ್ಮ ಜನರ ಪರವಾಗಿ ಬಿಜೆಪಿ ಹೋರಾಟ ಮಾಡಲಿದೆ
> **ನಳಿನ್ ಕುಮಾರ್ ಕಟೀಲ್**
> ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ಕರ್ನಾಟಕದ ರೈತರ ಹಿತ ಕಾಯುವುದು ನಮ್ಮ ಆದ್ಯತೆ. ಸುಪ್ರೀಂ ಕೋರ್ಟ್‌ನಲ್ಲಿ ಶುಕ್ರವಾರ ವಿಚಾರಣೆ ನಿಗದಿಯಾಗಿತ್ತು. ಅದು 2-3 ದಿನ ಮುಂದಕ್ಕೆ ಹೋಗುವ ಸಾಧ್ಯತೆ ಇದೆ. ಹೀಗಾಗಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವ ಕುರಿತು ಕಾನೂನು ತಜ್ಞರ ಜತೆಗೆ ಚರ್ಚೆ ಮಾಡಿ ಮುಂದಿನ ತೀರ್ಮಾನ ಕೈಗೊಳ್ಳುತ್ತೇವೆ' ಎಂದು ಅವರು ಹೇಳಿದರು.

'ಈಗಿನ ಎಲ್ಲ ಸಮಸ್ಯೆಗಳಿಗೆ ಮೇಕೆದಾಟು ಯೋಜನೆಯೊಂದೇ ಪರಿಹಾರ. ಮೇಕೆದಾಟು ಅಣೆಕಟ್ಟು ಇದ್ದಿದ್ದರೆ ಸಂಕಷ್ಟ ಸೂತ್ರದ ಮೂಲಕ ತಮಿಳುನಾಡಿಗೆ ನೀರು ಬಿಡಬಹುದಾಗಿತ್ತು. ಮೇಕೆದಾಟು ಯೋಜನೆಯು ತಮಿಳುನಾಡಿನ ಹಿತವನ್ನು ಕಾಯಲಿದೆ. ಹೀಗಾಗಿ ನಾವು ಈ ವಿಚಾರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಮನವಿ ಸಲ್ಲಿಸುತ್ತೇವೆ' ಎಂದು ತಿಳಿಸಿದರು.

'ತಮಿಳುನಾಡಿನ ಹಕ್ಕಿನ ನೀರಿನ ಬಳಕೆ ಬಗ್ಗೆ ಪ್ರಶ್ನಿಸಲು ಸಾಧ್ಯವಿಲ್ಲ. ಅವರ ರಾಜ್ಯದಲ್ಲಿ ಅವರು ಬೆಳೆ ಬೆಳೆಯುತ್ತಾರೆ. ನಮಗೆ ಅದನ್ನು ಪ್ರಶ್ನಿಸುವ ಹಕ್ಕು ಇಲ್ಲ' ಎಂದು ಶಿವಕುಮಾರ್ ಹೇಳಿದರು. ಆಗ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರು ಸಚಿವರ ಬೆನ್ನು ಸವರಿ ಎಚ್ಚರಿಸಿದರು. 'ನಾವು ಸದ್ಯಕ್ಕೆ ಆ ವಿಚಾರ ಚರ್ಚೆ ಮಾಡುವುದು ಬೇಡ' ಎಂದು ಹೇಳಿ ಸಚಿವರು ಪತ್ರಿಕಾಗೋಷ್ಠಿ ಕೊನೆಗೊಳಿಸಿದರು.

ನಿರ್ಧಾರ ಮರು ಪರಿಶೀಲಿಸಲು ಪ್ರಾಧಿಕಾರಕ್ಕೆ ಅರ್ಜಿ

ತಮಿಳುನಾಡಿಗೆ ಪ್ರತಿದಿನ 5 ಸಾವಿರ ಕ್ಯೂಸೆಕ್ ನೀರು ಬಿಡುಗಡೆ ಮಾಡಬೇಕು ಎಂಬುದಾಗಿ ಹೊರಡಿಸಿರುವ ಆದೇಶವನ್ನು ಮರುಪರಿಶೀಲಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಲು ಕರ್ನಾಟಕ ಮುಂದಾಗಿದೆ.

ಕಾವೇರಿ ಜಲವಿವಾದದ ಕುರಿತು ಇಲ್ಲಿನ ಕರ್ನಾಟಕ ಭವನದಲ್ಲಿ ಕಾನೂನು ತಜ್ಞರು ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಶಿವಕುಮಾರ್ ಗುರುವಾರ ಸಭೆ ನಡೆಸಿದರು. ಈ ವೇಳೆ, ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುವಂತೆ ರಾಜ್ಯದ ವಕೀಲರು ಸಲಹೆ ನೀಡಿದರು.

ಸಭೆಯಲ್ಲಿ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಕರ್ನಾಟಕ ಪರ ವಕೀಲ ಮೋಹನ್ ಕಾತರಕಿ, ಜಲ ಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಡಿಸಿಎಂ ಅವರ ತಾಂತ್ರಿಕ ಸಲಹೆಗಾರ ಜಯಪ್ರಕಾಶ್ ಭಾಗಿಯಾಗಿದ್ದರು. ಬಳಿಕ ಶಿವಕುಮಾರ್ ಅವರು ರಾಜ್ಯದ ಪರ ವಕೀಲ ಶ್ಯಾಮ್ ದಿವಾನ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು.

'ತಮಿಳುನಾಡಿಗೆ ಕಾವೇರಿ ನೀರು ತಕ್ಷಣ ನಿಲ್ಲಿಸಿ'

ಬೆಂಗಳೂರು: 'ರಾಜ್ಯ ಸರ್ಕಾರ ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ತಕ್ಷಣ ನಿಲ್ಲಿಸಿ, ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕು' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಕಾವೇರಿ ವಿಷಯದಲ್ಲಿ ರಾಜ್ಯ ಸರ್ಕಾರ ಮೊದಲಿನಿಂದಲೂ ಎಡವುತ್ತಲೇ ಬಂದಿದೆ. ಈಗಾಗಲೇ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶದಂತೆ 10 ಸಾವಿರ ಕ್ಯುಸೆಕ್‌ನಂತೆ ಸುಮಾರು 15 ಟಿಎಂಸಿ ಅಡಿ ನೀರು ಬಿಟ್ಟಿದೆ. ಆದರೂ, ಅದರ ವಿರುದ್ಧ ಯಾವುದೇ ಕಾನೂನಾತ್ಮಕ ಕ್ರಮ ತೆಗೆದುಕೊಳ್ಳಲಿಲ್ಲ. ಪ್ರಾಧಿಕಾರದ ಸೂಚನೆಯಂತೆ 5,000 ಕ್ಯುಸೆಕ್ ನೀರು ಬಿಡಲು ಆರಂಭಿಸಿದ ಬಳಿಕ ಕಾನೂನು ತಜ್ಞರ ಜೊತೆ ಉಪ ಮುಖ್ಯಮಂತ್ರಿ ಚರ್ಚೆ ಮಾಡುವುದರಲ್ಲಿ ಯಾವ ಅರ್ಥವಿದೆ' ಎಂದು ಪ್ರಶ್ನಿಸಿದ್ದಾರೆ.

ಸುದ್ದಿ 2 ನಿಮಿಷ

ಕುಮಾರಸ್ವಾಮಿ ಗುಣಮುಖ; ವಿಶ್ರಾಂತಿಗೆ ವೈದ್ಯರ ಸಲಹೆ

ಬೆಂಗಳೂರು: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರ ಆರೋಗ್ಯ ಸುಧಾರಿಸಿದ್ದು, ಶೀಘ್ರ ಮನೆಗೆ ಮರಳಲಿದ್ದಾರೆ.

ಲಘು ಪಾರ್ಶ್ವವಾಯುವಿಗೆ ಒಳಗಾಗಿದ್ದ ಕುಮಾರಸ್ವಾಮಿ ಅವರು ಜಯನಗರದ ಅಪೊಲೊ ಆಸ್ಪತ್ರೆಗೆ ಬುಧವಾರ ದಾಖಲಾಗಿದ್ದರು. ಚಿಕಿತ್ಸೆಯ ನಂತರ ಚೇತರಿಕೆ ಕಂಡುಬಂದಿದೆ. ಈಗಾಗಲೇ ವಾರ್ಡ್‌ಗೆ ಸ್ಥಳಾಂತರಿಸ ಲಾಗಿದೆ. ಪಕ್ಷದ ಚಟುವಟಿಕೆಗಳನ್ನು ಆರಂಭಿಸುವ ಮೊದಲು ಕೆಲ ದಿನಗಳು ವಿಶ್ರಾಂತಿ ತೆಗೆದುಕೊಳ್ಳಲು ವೈದ್ಯರು ಸೂಚಿಸಿದ್ದಾರೆ ಎಂದು ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಗುರುವಾರ ಮಾಹಿತಿ ನೀಡಿದ್ದಾರೆ.



ತಂದೆಯ ಆರೋಗ್ಯ ಚೇತರಿಕೆಗಾಗಿ ಪ್ರೀತಿ, ವಾತ್ಸಲ್ಯದಿಂದ ಪ್ರಾರ್ಥನೆ ಮಾಡಿದ ಎಲ್ಲ ಕಾರ್ಯಕರ್ತರಿಗೂ, ರಾಜ್ಯದ ಜನರಿಗೂ ಕೃತಜ್ಞತೆ ಸಲ್ಲಿಸಿದ್ದಾರೆ.

ಆಸ್ಪತ್ರೆಗೆ ಗಣ್ಯರ ಭೇಟಿ: ಮುಖ್ಯಮಂತ್ರಿ ಸಿದ್ದರಾಮಯ್ಯ, ಕೃಷಿ ಸಚಿವ ಚಲುವರಾಯ ಸ್ವಾಮಿ ಸೇರಿದಂತೆ ಹಲವು ಗಣ್ಯರು ಆಸ್ಪತ್ರೆಗೆ ಭೇಟಿ ನೀಡಿ ಕುಮಾರಸ್ವಾಮಿ ಅವರ ಆರೋಗ್ಯ ವಿಚಾರಿಸಿದರು.

ಕಲುಷಿತ ಆಹಾರ: ವ್ಯಕ್ತಿಗೆ ಪಾರ್ಶ್ವವಾಯು

ಬೆಳಗಾವಿ: ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿಯಲ್ಲಿ ಈಚೆಗೆ ಮದುವೆಯಲ್ಲಿ ಕಲುಷಿತ ಆಹಾರ ಸೇವಿಸಿದ್ದ ಶಬ್ಬೀರ್ ಮಕಾನದಾರ (58) ಅವರು ಪಾರ್ಶ್ವವಾಯುವಿಗೆ ಒಳಗಾಗಿದ್ದು, ಜಿಲ್ಲಾಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

'ಮೂರು ದಿನಗಳಿಂದ ವಾಂತಿ–ಭೇದಿಯಿಂದ ಅವರ ದೇಹ ನಿರ್ಜಲೀಕರಣಗೊಂಡಿದೆ. ಇದರಿಂದ ರಕ್ತದೊತ್ತಡ ಕುಸಿದು, ಪಾರ್ಶ್ವವಾಯು ಆಗಿದೆ. ಅವರ ಆರೋಗ್ಯ ಕ್ಷೀಣಿಸಿದ್ದು, ನಿಗಾ ವಹಿಸಲಾಗಿದೆ' ಎಂದು ಜಿಲ್ಲಾಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಎ.ಬಿ.ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

'ಹಿರೇಕೋಡಿಯ ಬಾಬಾಸಾಬ್ ಕುತುಮುದ್ದೀನ್ ಬೇಗ್ (37) ಅವರು ವಾಂತಿ–ಭೇದಿಯಿಂದ ಬಳಲಿದ್ದು, ಕಣ್ಣಿನ ನರಗಳು ದುರ್ಬಲಗೊಂಡಿವೆ. ಹೀಗಾಗಿ ಕಣ್ಣು ಕಾಣದಂತಾಗಿದೆ. ಗುರುವಾರ ಕೂಡ ಅವರ ಆರೋಗ್ಯ ಸ್ಥಿತಿ ಸುಧಾರಿಸಿಲ್ಲ. ಅವರಿಗೆ ದೃಷ್ಟಿ ಬರುವುದೆ ಅಥವಾ ಇಲ್ಲವೇ ಎಂಬುದನ್ನು ಸದ್ಯಕ್ಕೆ ಹೇಳಲು ಆಗುವುದಿಲ್ಲ' ಎಂದರು.

'ವಾಂತಿ– ಭೇದಿಯಿಂದ ಬಳಲಿ ಚಿಕ್ಕೋಡಿ ಹಾಗೂ ಯಕ್ಸಂಬಾದ ಸರ್ಕಾರಿ ಆಸ್ಪತ್ರೆಗಳಲ್ಲಿ ದಾಖಲಾಗಿದ್ದ 158 ಮಂದಿ ಗುಣಮುಖರಾಗಿ ಮನೆಗೆ ಮರಳಿದ್ದಾರೆ. ಇನ್ನೂ 8 ಮಂದಿಗೆ ಚಿಕಿತ್ಸೆ ಮುಂದುವರಿದಿದೆ' ಎಂದು ಹೆಚ್ಚುವರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್‌.ಎಸ್‌.ಗಡೇದ ತಿಳಿಸಿದರು.

'ತಮಿಳುನಾಡಲ್ಲಿ ಕುರುವೈ ಬೆಳೆ ನಿಲ್ಲಿಸಲಿ'

ಮಂಡ್ಯ ಜಿಲ್ಲೆಯಲ್ಲಿ ಭುಗಿಲೆದ್ದ ಕಾವೇರಿ ಹೋರಾಟ • ಸಂಕಷ್ಟ ಸೂತ್ರ ರೂಪಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕೆಆರ್‌ಎಸ್ ಅಚ್ಚುಕಟ್ಟು ಪ್ರದೇಶದಲ್ಲಿ ಬರ ಪರಿಸ್ಥಿತಿ ಇದ್ದು, ಇಲ್ಲಿನ ರೈತರು ಮುಂಗಾರು ಬಿತ್ತನೆ ತ್ಯಾಗ ಮಾಡಿದ್ದಾರೆ. ಅದೇ ರೀತಿ ತಮಿಳುನಾಡು ರೈತರು ಕೂಡ ಕಾವೇರಿ ನದಿ ನೀರನ್ನೇ ಅವಲಂಬಿಸಿರುವ 'ಕುರುವೈ' ಬೆಳೆ ಬೆಳೆಯುವುದನ್ನು ಸ್ಥಗಿತಗೊಳಿಸಬೇಕು' ಎಂದು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸದಸ್ಯರು ಒತ್ತಾಯಿಸಿದರು.

ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ವಿರೋಧಿಸಿ ನಗರದ ಸರ್‌.ಎಂ.ವಿ ಪ್ರತಿಮೆ ಎದುರು ಗುರುವಾರ ಪ್ರತಿಭಟನೆ ನಡೆಸಿ, 'ಸಂಕಷ್ಟ ಪರಿಸ್ಥಿತಿಯಲ್ಲೂ ನೀರು ಹರಿಸಲಾಗುತ್ತಿದೆ' ಎಂದು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. 'ಬರ ಪರಿಸ್ಥಿತಿಯನ್ನು ಪರಿಗಣಿಸದೇ ತಮಿಳುನಾಡಿಗೆ ನೀರು ಬಿಡುವಂತೆ ಕಾವೇರಿ ನೀರು ನಿರ್ವಹಣಾ ಸಮಿತಿ ಹಾಗೂ ಪ್ರಾಧಿಕಾರ ಸೂಚಿಸಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕುಡಿಯುವ ನೀರು ಕಾಪಾಡಿಕೊಳ್ಳಲು ಕಾವೇರಿ ನೀರಾವರಿ ನಿಗಮ ಕೆಆರ್‌ಎಸ್ ಅಚ್ಚುಕಟ್ಟುದಾರ ರೈತರಿಗೆ ಬೆಳೆ ಬೆಳೆಯದಂತೆ ಸೂಚಿಸಿದೆ. ನಮ್ಮ ರೈತರಿಗೆ ನೀರು ನಿರಾಕರಿಸಿ ತಮಿಳುನಾಡಿಗೆ ನೀರು ಹರಿಸುವುದು ಎಷ್ಟು ಸರಿ, ನಮ್ಮ ರೈತರಷ್ಟೇ ತ್ಯಾಗ ಮಾಡಬೇಕಾ? ಇಲ್ಲಿನ ಬರ ಪರಿಸ್ಥಿತಿಯನ್ನು ಪರಿಗಣಿಸಿ ತಮಿಳುನಾಡು ರೈತರು ಕೂಡ ಕುರುವೈ ಬೆಳೆ ತ್ಯಾಗ ಮಾಡಬೇಕು. ತಮಿಳುನಾಡು ಸರ್ಕಾರ ಸ್ವಾತಂತ್ರ್ಯಪೂರ್ವದ ಒಡಂಬಡಿಕೆ, ಹಳೆಯ ತೀರ್ಪುಗಳನ್ನಿಟ್ಟುಕೊಂಡು ಕರ್ನಾಟಕ ರಾಜ್ಯದ ವಿರುದ್ಧ ಬ್ಲ್ಯಾಕ್‌ಮೇಲ್ ಮಾಡುತ್ತಿದೆ' ಎಂದು ಸಮಿತಿ ಕಾರ್ಯದರ್ಶಿ ಕೆ.ಬೋರಯ್ಯ ಆರೋಪಿಸಿದರು.

'ಸರಿಯಾಗಿ ಮಳೆಯಾದರೆ ನಮ್ಮ ರೈತರು ವರ್ಷಕ್ಕೆ 2 ಬೆಳೆ ಮಾತ್ರ (ಮುಂಗಾರು– ಹಿಂಗಾರು) ಬೆಳೆಯುತ್ತಾರೆ, ಈ ಬಾರಿ ಮುಂಗಾರು ಮರೆತಿದ್ದೇವೆ. ಆದರೆ, ತಮಿಳುನಾಡು ರೈತರು ಕುರುವೈ, ತಾಲಡಿ, ಸಾಂಬಾ 3 ಬೆಳೆ ಬೆಳೆಯುತ್ತಾರೆ. ಅಲ್ಲಿ ತಡವಾಗಿ ಮುಂಗಾರು ಆರಂಭವಾಗುವುದರಿಂದ ತಾಲಡಿ, ಸಾಂಬಾ ಬೆಳೆಯಲು ಸಮಸ್ಯೆ ಇಲ್ಲ. ಇಲ್ಲಿ ಬರ ಪರಿಸ್ಥಿತಿ ಇರುವುದರಿಂದ ಅಲ್ಲಿನ ರೈತರು ಕುರುವೈ ಬೆಳೆ ಕೈಬಿಡಬೇಕು, ಇದೇ ಸಂಕಷ್ಟ ಸೂತ್ರವೂ ಆಗಬೇಕು' ಎಂದು ಒತ್ತಾಯಿಸಿದರು.

100 ಅಡಿಗೆ ಕುಸಿದ ಕೆಆರ್‌ಎಸ್ ನೀರು

ಮಂಡ್ಯ: ಗುರುವಾರ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 100.66 ಅಡಿಗೆ ಕುಸಿದಿದೆ, ದಿನವೊಂದರಲ್ಲಿ 1 ಅಡಿ ನೀರು ಹರಿದಿದೆ. ರಾತ್ರಿ 8 ಗಂಟೆ ವೇಳೆಗೆ ಒಳಹರಿವು 1,628 ಕ್ಯುಸೆಕ್, ಹೊರಹರಿವು 7,231 ಕ್ಯುಸೆಕ್ ಇತ್ತು. ನದಿಗೆ 7,181 ಕ್ಯುಸೆಕ್ ಹರಿಯುತ್ತಿದ್ದು ಅದು ತಮಿಳುನಾಡು ಸೇರುತ್ತಿದೆ.

ಅಹೋರಾತ್ರಿ ಧರಣಿ 2ನೇ ದಿನಕ್ಕೆ: ಜಲಾಶಯದ ನಾರ್ತ್‌ಬ್ಯಾಂಕ್ ಬಳಿ ರೈತಸಂಘದ ಸದಸ್ಯರ ಅಹೋರಾತ್ರಿ ಪ್ರತಿಭಟನೆ 2ನೇ ದಿನಕ್ಕೆ ಕಾಲಿಟ್ಟಿತು.

'ರಾಜಕಾರಣದ ಆಚೆಗೆ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು' ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಪ್ರತಿಪಾದಿಸಿದರು.

ಸಿ.ಎಂ, ಡಿ.ಸಿ.ಎಂ ರಾಜೀನಾಮೆಗೆ ಒತ್ತಾಯ: ನೀರು ಹರಿಸುತ್ತಿರುವುದನ್ನು ಖಂಡಿಸಿ ಶ್ರೀರಂಗಪಟ್ಟಣದಲ್ಲಿ ಭೂಮಿತಾಯಿ ರೈತ ಹೋರಾಟ ಸಮಿತಿ ಸದಸ್ಯರು ಅರೆಬೆತ್ತಲೆ ಪ್ರತಿಭಟನೆ ನಡೆಸಿದರು.

ಸ್ನಾನಘಟ್ಟದ ಬಳಿ ಕಾವೇರಿ ನದಿಗಿಳಿದು, 'ತಮಿಳುನಾಡಿಗೆ ನೀರು ನಿಲ್ಲಿಸುವವರೆಗೂ ಹೋರಾಟ ನಿಲ್ಲದು' ಎಂದು ನೀರು ಮುಟ್ಟಿ ಪ್ರಮಾಣ ಮಾಡಿದರು. ಜಿಲ್ಲಾ ಪಂಚಾಯಿತಿ ಕಚೇರಿವರೆಗೂ ಮೆರವಣಿಗೆ ನಡೆಸಿದರು.

'ನೀರಾವರಿ ಮಂತ್ರಿಯೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಾವು ನೀರು ಬಿಡಲು ಅಧಿಕಾರಿಗಳಿಗೆ ಹೇಳಿಲ್ಲ, ಪ್ರಾಧಿಕಾರದ ಆದೇಶದಂತೆ ನೀರು ಬಿಡಲಾಗಿದೆ ಎಂದು ಬೇಜವಾಬ್ದಾರಿ ಹೇಳಿಕೆ ನೀಡಿದ್ದಾರೆ. ಅವರ ಮೇಲೆ ಗೌರವವಿದೆ, ಆದರೆ ಅವರು ಅಯೋಗ್ಯನ ರೀತಿಯಲ್ಲಿ ಮಾತನಾಡಿದ್ದಾರೆ. ರೈತರ ಹಿತ ಕಾಯಲು ಆಗದಿದ್ದರೆ ಅಧಿಕಾರದಲ್ಲಿ ಏಕಿರಬೇಕು? ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಇಬ್ಬರೂ ರಾಜೀನಾಮೆ ಕೊಟ್ಟು ಮನೆಗೆ ಹೋಗಲಿ' ಎಂದು ಸಮಿತಿಯ ಅಧ್ಯಕ್ಷ ಕೆ.ಎಸ್.ನಂಜುಂಡೇಗೌಡ ಒತ್ತಾಯಿಸಿದರು.

ಮದ್ದೂರು, ಪಾಂಡವಪುರದಲ್ಲೂ ರೈತರು ಪ್ರತಿಭಟನೆ ನಡೆಸಿದರು. ಕಾವೇರಿ ನೀರು ನಿರ್ವಹಣಾ ಸಮಿತಿಯ ಆದೇಶ ಪ್ರತಿಯನ್ನು ಹರಿದು ಚಾಮರಾಜನಗರದಲ್ಲಿ ಗುರುವಾರ ಕರ್ನಾಟಕ ಸೇನಾಪಡೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧೆಡೆ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ, ಧಾರವಾಡ, ಬೆಳಗಾವಿ, ಗದಗ, ಬಳ್ಳಾರಿ, ಮಂಡ್ಯ ಜಿಲ್ಲೆಯ ವಿವಿಧೆಡೆ ಗುರುವಾರ ಮಳೆಯಾಯಿತು.

ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ಉಪ್ಪಿನಬೆಟಗೇರಿ, ಮುಮ್ಮಿಗಟ್ಟಿಯಲ್ಲಿ ಭಾರಿ ಮಳೆಯಾಯಿತು. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಸವದತ್ತಿ, ಕಿತ್ತೂರಿನಲ್ಲಿ ಮತ್ತು ಗದಗ ಜಿಲ್ಲೆಯ ಲಕ್ಷ್ಮೇಶ್ವರ, ನರಗುಂದದಲ್ಲಿ ಮಳೆ ಸುರಿಯಿತು. ಬಳ್ಳಾರಿ ಜಿಲ್ಲೆಯ ಸಂಡೂರು ಸುತ್ತಮುತ್ತಲ ಪ್ರದೇಶದಲ್ಲೂ ಉತ್ತಮ ಮಳೆ ಬಿತ್ತು. ಮಂಡ್ಯ ನಗರ, ನಾಗಮಂಗಲ ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಗುಡುಗು ಮಿಂಚು ಸಹಿತ ಉತ್ತಮ ಮಳೆಯಾಯಿತು. ಬೆಂಗಳೂರು ನಗರದಲ್ಲಿ ರಾತ್ರಿ ಗುಡುಗು, ಮಿಂಚು ಸಹಿತ ಸುಮಾರು ಅರ್ಧ ತಾಸು ಮಳೆ ಸುರಿಯಿತು. ಬಿಸಿಲಿನಿಂದ ಬಸವಳಿದಿದ್ದ ಜನರಿಗೆ ತಂಪೆರೆಯಿತು.

ಮಳೆಯಲಿ... ಧಾರವಾಡ ಸಮೀಪ ಮರೆವಾಡ ಬಳಿ ಕಾರ್ಮಿಕರು ಮಳೆಯಲ್ಲೇ ಸಾಗಿದರು

ಸಂಕ್ಷಿಪ್ತ ಸುದ್ದಿ

ಸುನಂದಾ ಕಡಮೆಗೆ ಬಿ.ಎಂ.ಶ್ರೀ ಪ್ರತಿಷ್ಠಾನ ಪುರಸ್ಕಾರ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ 'ಸಾವಿತ್ರಮ್ಮ–ಪ್ರೊ. ಎಂ.ವಿ.ಸೀ. ಸಾಹಿತ್ಯ ಪುರಸ್ಕಾರಕ್ಕೆ ಕಥೆಗಾರ್ತಿ ಸುನಂದಾ ಕಡಮೆ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 30 ಸಾವಿರ ನಗದು ಒಳಗೊಂಡಿದೆ. ಲೇಖಕಿ ಎಚ್.ಎಲ್. ಪುಷ್ಪ ಹಾಗೂ ಪ್ರಾಧ್ಯಾಪಕ ಎಚ್.ಎಸ್. ಮುರಳೀಧರ್ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ. ಸೃಜನಶೀಲ ಸಾಹಿತಿಗಳನ್ನು ಪರಿಗಣಿಸಬೇಕೆಂಬ ನಿಬಂಧನೆಯಂತೆ ಈ ಆಯ್ಕೆ ಮಾಡಲಾಗಿದೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

ಶಾಲಿನಿ ರಜನೀಶ್ ವರ್ಗ

ಬೆಂಗಳೂರು: ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಅಭಿವೃದ್ಧಿ ಆಯುಕ್ತರ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಅಭಿವೃದ್ಧಿ ಆಯುಕ್ತ ಇ.ವಿ. ರಮಣರೆಡ್ಡಿ ಅವರು ಗುರುವಾರ (ಆಗಸ್ಟ್ 31) ನಿವೃತ್ತರಾಗಿದ್ದು, ಖಾಲಿಯಾದ ಆ ಹುದ್ದೆಯನ್ನು ಶಾಲಿನಿ ರಜನೀಶ್ ಅವರು ವಹಿಸಿಕೊಳ್ಳಲಿದ್ದಾರೆ.

ಬುದ್ಧಿ ಕಲಿಯದ ಬಿಜೆಪಿಗರು: ರೇಣುಕಾಚಾರ್ಯ

ಬೆಂಗಳೂರು: 'ನಮ್ಮ ಪಕ್ಷದವರಿಗೆ ಇನ್ನೂ ಬುದ್ಧಿ ಬಂದಿಲ್ಲ. ರಿಮೋಟ್ ಕಂಟ್ರೋಲ್ ಮೂಲಕ ರಾಜ್ಯ ಘಟಕವನ್ನು ನಿಯಂತ್ರಿಸಲಾಗುತ್ತಿದೆ' ಎಂದು ಬಿಜೆಪಿ ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನಗೆ ನೋಟಿಸ್ ನೀಡಿರುವ ಕಾರಣ ಬಿಜೆಪಿ ಸಭೆಗೆ ಹೋಗಿಲ್ಲ. ಯಡಿಯೂರಪ್ಪ ಅವರನ್ನೂ ಕೈಬಿಟ್ಟು ಸಭೆ ನಡೆಸಲಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಡಾನೆ ದಾಳಿ: ಶಾರ್ಪ್‌ಶೂಟರ್ ಸಾವು

ಒಂದನೇ ಪುಟದಿಂದ...

ಕೆಲ ದಿನಗಳ ಹಿಂದೆ ಸಕಲೇಶಪುರ ವ್ಯಾಪ್ತಿಯಲ್ಲಿ ಕಾಡಾನೆಗಳ ಕಾಳಗದಲ್ಲಿ ಭೀಮ ಗಾಯಗೊಂಡಿದ್ದು, ಚಿಕಿತ್ಸೆ ನೀಡಲಾಗಿತ್ತು. ಆದರೆ, ಗಾಯಗಳು ಉಲ್ಬಣಿಸಿದ್ದರಿಂದ ಹೆಚ್ಚಿನ ಚಿಕಿತ್ಸೆ ನೀಡಲು ಗುರುವಾರ ಕಾರ್ಯಾಚರಣೆ ಆರಂಭಿಸಲಾಗಿತ್ತು. ಗ್ರಾಮದ ಬಳಿ ನಾಲ್ಕು ಸಾಕಾನೆಗಳ ಸಹಾಯದಿಂದ ಭೀಮನಿಗೆ ಅರಿವಳಿಕೆ ಚುಚ್ಚುಮದ್ದು ನೀಡಲಾಗಿತ್ತು. ಆ ಸಂದರ್ಭದಲ್ಲಿ ಮುಂದಕ್ಕೆ ಸಾಗದೆ ಹಿಂದಿರುಗಿ ದಾಳಿ ಮಾಡಿತ್ತು.

1988ರಲ್ಲಿ ಅರಣ್ಯ ವಾಚರ್ ಆಗಿ ಕೆಲಸಕ್ಕೆ ಸೇರಿದ್ದ ವೆಂಕಟೇಶ್ ಅವರ ಸೇವೆಯನ್ನು 2013ರಲ್ಲಿ ಕಾಯಂ ಮಾಡಲಾಗಿತ್ತು. ಆನೆಗಳಿಗೆ ಅರಿವಳಿಕೆ ಚುಚ್ಚುಮದ್ದು ಶೂಟ್ ಮಾಡುವುದರಲ್ಲಿ ಪರಿಣತರಾಗಿದ್ದ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿತ್ತು. 2018ರಲ್ಲಿ ನಿವೃತ್ತರಾಗಿದ್ದ ಅವರು, ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು.

ಹಾದಿ ತಪ್ಪಿ ಗಿರಕಿ ಹೊಡೆದ ಪ್ರಜ್ಞಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದ್ರನ ಅಂಗಳದಲ್ಲಿ 'ಪ್ರಜ್ಞಾನ್' ಹಾದಿ ತಪ್ಪಿದಾಗ ಗೊಂದಲಕ್ಕೊಳಗಾಗಿ ಸರಿ ದಾರಿ ಹುಡುಕಲು ನಿಂತಲ್ಲೇ ಗಿರಕಿ ಹೊಡೆದಿದೆ.

ತಾಯಿ ತನ್ನ ಪುಟ್ಟ ಮಗುವಿನ ಮೇಲೆ ಕಣ್ಣಿಡುವಂತೆ ವಿಕ್ರಮ್(ಲ್ಯಾಂಡರ್) ಕೂಡಾ ತನ್ನ 'ಹಸುಗೂಸು' ಪ್ರಜ್ಞಾನ್ (ರೋವರ್) ಮೇಲೆ ಕಣ್ಣಿಟ್ಟಿತ್ತು. ಅಲ್ಲಿ ಆಗಿದ್ದೇನು? – ಚಂದ್ರನ ಅಂಗಳದಲ್ಲಿ ಸುತ್ತಾಡಿ ಮಾಹಿತಿ ಕಲೆ ಹಾಕುತ್ತಿರುವ ಪ್ರಜ್ಞಾನ್‌ಗೆ ಅಡ್ಡಿ ಎದುರಾದಾಗ ಸುರಕ್ಷಿತ ದಾರಿ ಯಾವುದು ಎಂಬುದನ್ನು ಹುಡುಕಲು ಆರಂಭಿಸಿತು. ಅದಕ್ಕಾಗಿ ನಿಂತಲ್ಲೇ ಸುತ್ತು ಹಾಕಲಾರಂಭಿಸಿತು.

ಕೊನೆಗೆ ಹೇಗೆ ಮುಂದಕ್ಕೆ ಹೋಗಬೇಕು ಎಂಬುದು ಅರಿವಿಗೆ ಬರುತ್ತಿದ್ದಂತೆ ತನ್ನ ಹಾದಿಯನ್ನು ಹಿಡಿಯಿತು. ಇವೆಲ್ಲ ದೃಶ್ಯವನ್ನು ವಿಕ್ರಮ್‌ನಲ್ಲಿರುವ ಇಮೇಜರ್ ಕ್ಯಾಮೆರಾ ಸೆರೆ ಹಿಡಿದಿದೆ. 'ಇದನ್ನು ನೋಡುತ್ತಿದ್ದರೆ ಚಂದಮಾಮನ ಅಂಗಳದಲ್ಲಿ ಮಗುವೊಂದು ಕುಪ್ಪಳಿಸಿ ಆಡುತ್ತಿದ್ದಂತೆ, ಅದನ್ನು ತಾಯಿ ವಾತ್ಸಲ್ಯದಿಂದ ನೋಡುತ್ತಿದ್ದಂತೆ ಭಾಸವಾಗುತ್ತದೆಯಲ್ಲವೇ ' ಎಂದು ಹೇಳಿರುವ ಇಸ್ರೊ 'ಎಕ್ಸ್'ನಲ್ಲಿ ವಿಡಿಯೊ ಹಂಚಿಕೊಂಡಿದೆ.

ರೋವರ್ 'ಪ್ರಜ್ಞಾನ್' ಹಾದಿ ತಪ್ಪಿ ಗಿರಕಿ ಹೊಡೆಯುತ್ತಿದ್ದ ದೃಶ್ಯವನ್ನು ಲ್ಯಾಂಡರ್‌ನಲ್ಲಿರುವ ಇಮೇಜರ್ ಕ್ಯಾಮೆರಾ ಸೆರೆ ಹಿಡಿದಿದೆ —ಪಿಟಿಐ ಚಿತ್ರ

ವೈಜ್ಞಾನಿಕ ಅಧ್ಯಯನ ಮುಂದುವರಿಕೆ: ಈ ಎಲ್ಲ 'ತುಂಟಾಟ'ದ ಮಧ್ಯೆಯೂ ಚಂದ್ರನ ಮೇಲ್ಮೈನಲ್ಲಿ ಇನ್ನಷ್ಟು ಪತ್ತೆ ಕಾರ್ಯವನ್ನೂ ನಡೆಸಿದೆ. ಎರಡು ದಿನಗಳ ಹಿಂದೆ ಚಂದ್ರನಲ್ಲಿ ಗಂಧಕದ ಧಾತುವಿದೆ ಎಂದು ಪತ್ತೆ ಮಾಡಿತ್ತು. ಈಗ ಮತ್ತೊಂದು ತಂತ್ರದ ಮೂಲಕ ಗಂಧಕದ ಇರುವಿಕೆಯನ್ನು ದೃಢಪಡಿಸಿದೆ.

ರೋವರ್‌ನಲ್ಲಿರುವ ಎಪಿಎಕ್ಸ್‌ಎಸ್ (ಆಲ್ಫಾ ಪಾರ್ಟಿಕಲ್ ಎಕ್ಸ್–ರೇ ಸ್ಪೆಕ್ಟ್ರೊ ಮೀಟರ್) ಗಂಧಕ ಮತ್ತು ಇತರ ಧಾತುಗಳನ್ನು ಪತ್ತೆ ಮಾಡಿದೆ. ಮೀಥೈಲ್ ಅಯಾನ್ ಈ ಅಂಶವನ್ನು ಪತ್ತೆ ಮಾಡಿದ್ದರಿಂದ ಗಂಧಕದ ಮೂಲದ ಬಗ್ಗೆ ತಾಜಾ ವಿವರಣೆಗಳನ್ನು ಪಡೆಯುವುದು ವಿಜ್ಞಾನಿಗಳಿಗೆ ಅನಿವಾರ್ಯವಾಯಿತು. ಸ್ವಾಭಾವಿಕವಾಗಿ ಇದೆಯೇ? ಜ್ವಾಲಾಮುಖಿ ಕಾರಣಕ್ಕೆ ಇದ್ದಿರಬಹುದೇ? ಉಲ್ಕೆಗಳಿಂದ ಅಲ್ಲಿ ಗಂಧಕ ಇದೆಯೇ ಎಂಬ ಪ್ರಶ್ನೆಗಳೂ ಎದ್ದಿವೆ. ಲಿಬ್ಸ್(ಲೇಸರ್ ಇಂಡ್ಯೂಸ್ಡ್ ಬ್ರೇಕ್ ಡೌನ್ ಸ್ಪೆಕ್ಟ್ರೊಸ್ಕೋಪ್) ಗಂಧಕದ ಅಂಶ ಇರುವುದನ್ನು ಖಚಿತಪಡಿಸಿರುವುದರಿಂದ ಇದರ ವಿಸ್ತೃತ ವೈಜ್ಞಾನಿಕ ವಿಶ್ಲೇಷಣೆ ಪ್ರಗತಿಯಲ್ಲಿದೆ.

ಚಂದ್ರನ ಅಂಗಳದಲ್ಲಿರುವ ಮಣ್ಣು ಮತ್ತು ಬಂಡೆಗಳು ಯಾವುದರಿಂದ ಆಗಿವೆ ಎಂಬುದನ್ನು ಪ್ರಜ್ಞಾನ್ ವೈಜ್ಞಾನಿಕ ಅಧ್ಯಯನ ನಡೆಸುತ್ತಿದೆ. ಆರು ಚಕ್ರಗಳನ್ನು ಹೊಂದಿರುವ 26 ಕೆ.ಜಿ ತೂಕದ ಪ್ರಜ್ಞಾನ್ ಸೌರಫಲಕದಿಂದ ಕಾರ್ಯನಿರ್ವಹಿಸುತ್ತಿದೆ. ಇದರ ಕಾರ್ಯನಿರ್ವಹಣೆಗೆ ಅಗತ್ಯವಿರುವ ವಿದ್ಯುತ್ ಅನ್ನು ಪೂರೈಸುತ್ತಿದೆ.

ಮೂವರು ಕಾರ್ಮಿಕರ ಸಾವು

ಸುಳ್ಯ (ದಕ್ಷಿಣ ಕನ್ನಡ): ತಾಲ್ಲೂಕಿನ ಜಾಲ್ಸೂರಿನಲ್ಲಿ ಗುರುವಾರ ಬೆಳಿಗ್ಗೆ ರಸ್ತೆ ಬದಿ ನಿಂತಿದ್ದ ಕಾರ್ಮಿಕರ ಮೇಲೆ ಕಾರು ಹಾಯ್ದು ಮೂವರು ಮೃತಪಟ್ಟಿದ್ದಾರೆ.

ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕು ಕಾಕೊಳ ತಾಂಡಾದ ಚೆನ್ನಪ್ಪ, ರೇಖಪ್ಪ, ಮಹಾಂತಪ್ಪ ಮೃತಪಟ್ಟವರು. ವೆಂಕಪ್ಪ ಅವರಿಗೆ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

'ಕೂಲಿ ಕೆಲಸಕ್ಕೆಂದು ಸುಳ್ಯಕ್ಕೆ ಬಂದಿದ್ದ ನಾವು, ರಸ್ತೆ ಬದಿಯಲ್ಲಿ ನಿಂತಿದ್ದೆವು. ಹುಣಸೂರು ಕಡೆಯಿಂದ ಬರುತ್ತಿದ್ದ ಕಾರನ್ನು ಚಾಲಕ ನಿರ್ಲಕ್ಷ್ಯದಿಂದ ಚಲಾಯಿಸಿ, ಜತೆಗಿದ್ದ ನಾಲ್ವರಿಗೆ ಡಿಕ್ಕಿ ಹೊಡಿಸಿದ' ಎಂದು ಹುಲಿಗೆಪ್ಪ ಎಂಬುವರು ದೂರು ನೀಡಿದ್ದಾರೆ.

ಶಾಂತ್ ತಿಮ್ಮಯ್ಯ ವಜಾ

ಒಂದನೇ ಪುಟದಿಂದ...

ಕಾಯ್ದೆ, ನಿಯಮಾವಳಿಗಳ ಪ್ರಕಾರ, ಅಧ್ಯಕ್ಷ ಹುದ್ದೆ ಅವಧಿ ಜಯರಾಂ ಅವರ ನೇಮಕವಾದ 2019ರ ಜೂನ್ 20ರಿಂದ ಆರಂಭವಾಗಿದೆ. ಅದು 2022ರ ಮಾರ್ಚ್ 4ಕ್ಕೆ ಮುಗಿದಿದೆ. ಆ ಅವಧಿಯಲ್ಲಿ ಜಯರಾಂ ನಂತರ, ಆರು ಮಂದಿ ಅಧ್ಯಕ್ಷರಾಗಿದ್ದಾರೆ. ಹೀಗಾಗಿದ್ದರೂ, ಶಾಂತ್ ತಿಮ್ಮಯ್ಯ ಅವರ ನೇಮಕ ಆದೇಶದಲ್ಲಿ 2024ರ ನವೆಂಬರ್ 14ರವರೆಗೆ ಎಂದು ಅವಧಿ ತಪ್ಪಾಗಿ ನಮೂದಾಗಿದೆ. ಅದನ್ನು 2022ರ ಮಾರ್ಚ್ 4 ಎಂದು ಬದಲಿಸಿ, ತಿದ್ದುಪಡಿ ಆದೇಶವನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಹೊರಡಿಸಿದೆ.

'10 ದಿನಗಳಲ್ಲಿ ಬೆಳೆ ನಷ್ಟದ ವರದಿ'

ಒಂದನೇ ಪುಟದಿಂದ...

'29 ಜಿಲ್ಲೆಗಳಲ್ಲಿ ಆಗಸ್ಟ್‌ನಲ್ಲಿ ಶೇ 70ಕ್ಕೂ ಅಧಿಕ ಮಳೆ ಕೊರತೆಯಾಗಿದೆ. ಸತತ ಮೂರು ವಾರ ಮಳೆ ಬಿದ್ದಿಲ್ಲ. 120 ತಾಲ್ಲೂಕುಗಳಲ್ಲಿ ತೇವಾಂಶವೂ ಕಡಿಮೆಯಾಗಿದೆ. ಬಾಗಲಕೋಟೆ, ಗದಗ, ತುಮಕೂರು ಬೆಳಗಾವಿ ಸೇರಿದಂತೆ ನಾಲ್ಕು ಜಿಲ್ಲೆಗಳ 194 ಗ್ರಾಮಗಳಲ್ಲಿ ಬಿತ್ತನೆ ಮಾಡಲು ಸಾಧ್ಯವಾಗಿಲ್ಲ. 35,209 ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇವರಿಗೆ ಅಂದಾಜು ₹35 ಕೋಟಿ ಬೆಳೆ ವಿಮೆ ದೊರೆಯಲಿದೆ' ಎಂದು ವಿವರಿಸಿದರು.

ಬಿತ್ತನೆ ಕ್ಷೇತ್ರ (ಮುಂಗಾರು ಹಂಗಾಮು)	
ಗುರಿ	82.35 ಲಕ್ಷ ಹೆಕ್ಟೇರ್
ಸಾಧನೆ	66.68 ಲಕ್ಷ ಹೆಕ್ಟೇರ್
ಶೇಕಡವಾರು	81
ಹಿಂದಿನ ವರ್ಷ	71.74 ಲಕ್ಷ ಹೆಕ್ಟೇರ್ ಬಿತ್ತನೆ

'ರಾಜ್ಯದಲ್ಲಿ ಒಟ್ಟು 15.31 ಲಕ್ಷ ಹೆಕ್ಟೇರ್ ಪ್ರದೇಶ ಬೆಳೆ ವಿಮೆ ವ್ಯಾಪ್ತಿಗೆ ಒಳಪಟ್ಟಿದ್ದು, ಈಗಾಗಲೇ 16.23 ಲಕ್ಷ ರೈತರು ಬೆಳೆ ವಿಮೆಗೆ ನೋಂದಾಯಿಸಿಕೊಂಡಿದ್ದಾರೆ. ಕಳೆದ ವರ್ಷ 19 ಲಕ್ಷ ರೈತರು ನೋಂದಾಯಿಸಿದ್ದರು. ಅದರ ಹಿಂದಿನ ವರ್ಷ 12 ಲಕ್ಷ ರೈತರು ನೋಂದಾಯಿಸಿಕೊಂಡಿದ್ದರು. ಈ ಬಾರಿ ವಿಮೆ ನೋಂದಣಿ ತಡವಾಗಿ ಆರಂಭವಾಗಿದ್ದು, ಮಳೆ ಇಲ್ಲದೆ ಬಿತ್ತನೆಯೂ ವಿಳಂಬವಾದ ಕಾರಣ ವಿಮೆ ನೋಂದಣಿ ಕಡಿಮೆಯಾಗಿದೆ' ಎಂದು ತಿಳಿಸಿದರು.

'ಕೃಷಿ ಇಲಾಖೆಯಲ್ಲಿ ಶೇ 57ರಷ್ಟು ಹುದ್ದೆಗಳು ಖಾಲಿ ಉಳಿದಿವೆ. ಪ್ರತಿ ವರ್ಷ ಹಂತ ಹಂತವಾಗಿ ಹುದ್ದೆಗಳನ್ನು ಭರ್ತಿ ಮಾಡಲು ನಿರ್ಧರಿಸಲಾಗಿದೆ' ಎಂದರು.

ಕರೆಂಟ್ ಬೇಡಿಕೆ ದುಪ್ಪಟ್ಟು

ಒಂದನೇ ಪುಟದಿಂದ

ರಾಜ್ಯದಲ್ಲಿ ಪ್ರಸ್ತುತ ಲಭ್ಯವಿರುವ ಮೂಲಗಳಿಂದ 8,738 ಮೆಗಾವಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಕೇಂದ್ರ ಗ್ರಿಡ್ ಮೂಲಕ ಮತ್ತು ಇತರೆ ರಾಜ್ಯ ಹಾಗೂ ಖಾಸಗಿ ಉತ್ಪಾದಕರಿಂದ 6 ಸಾವಿರ ಮೆಗಾವಾಟ್ ಖರೀದಿಸಲಾಗುತ್ತಿದೆ. ಉಳಿದ ಕೊರತೆ ನೀಗಿಸಲು ಪ್ರತಿ ದಿನ ಸುಮಾರು ₹40 ಕೋಟಿ ಖರ್ಚು ಮಾಡಲಾಗುತ್ತಿದೆ ಎಂದು ಇಂಧನ ಇಲಾಖೆಯ ಮೂಲಗಳು ತಿಳಿಸಿವೆ.

ಕೃಷಿ ಪಂಪ್‌ಸೆಟ್‌ಗಳಿಗೇ 3,400 ಸಾವಿರ ಮೆಗಾವಾಟ್: ರಾಜ್ಯದಲ್ಲಿ ಒಟ್ಟು 32.55 ಲಕ್ಷ ಕೃಷಿ ಪಂಪ್‌ಸೆಟ್‌ಗಳಿವೆ. ಉತ್ತಮ ಮಳೆಯಾಗಿ ಕೆರೆ-ಕಟ್ಟೆಗಳು, ಜಲಮೂಲಗಳು ತುಂಬಿ ನೀರು ಸಮೃದ್ಧಿಯಾಗಿದ್ದಾಗ ಕೃಷಿ ಕ್ಷೇತ್ರಕ್ಕೆ 1,900 ಮೆಗಾವಾಟ್ ವಿನಿಯೋಗ ಆಗುತ್ತಿತ್ತು. ಈ ಬಾರಿ ಮಳೆಗಾಲದಲ್ಲೇ ಕೃಷಿ ಪಂಪ್‌ಸೆಟ್‌ಗಳಿಗೆ 3,400ಕ್ಕೂ ಹೆಚ್ಚು ಮೆಗಾವಾಟ್ ವಿದ್ಯುತ್ ಬಳಕೆಯಾಗುತ್ತಿದೆ. ಬೆಳೆಗಳು ಒಣಗುತ್ತಿರುವ ಕಾರಣ ಅಧಿಕ ಸಂಖ್ಯೆಯ ರೈತರು ವಿದ್ಯುತ್ ಪೂರೈಕೆಯಾದ ತಕ್ಷಣ ಏಕಕಾಲಕ್ಕೆ ಬಳಕೆ ಮಾಡುತ್ತಿದ್ದಾರೆ. ಇದರಿಂದ ವಿದ್ಯುತ್ ಪರಿವರ್ತಕಗಳು, ಗ್ರಿಡ್‌ಗಳಿಗೆ ಒತ್ತಡ ತಾಳಲಾಗುತ್ತಿಲ್ಲ. ಇದರಿಂದ ಕೆಲ ಪ್ರದೇಶಗಳಲ್ಲಿ ವಿದ್ಯುತ್ ಅಭಾವ ಎದುರಾಗಿದೆ.

ರಾಜ್ಯದಲ್ಲಿ ಪ್ರಸ್ತುತ ಸೌರ-ಪವನ ಶಕ್ತಿ, ಜಲಶಕ್ತಿ, ಶಾಖೋತ್ಪನ್ನ ಘಟಕಗಳು ಸೇರಿದಂತೆ ಬೇರೆಬೇರೆ ಮೂಲಗಳಿಂದ 32 ಸಾವಿರ ಮೆಗಾವಾಟ್ ಉತ್ಪಾದನೆಗೆ ಅವಕಾಶವಿದ್ದರೂ ಇದುವರೆಗಿನ ಉತ್ಪಾದನಾ ಸಾಮರ್ಥ್ಯ 9 ಸಾವಿರ ಮೆಗಾವಾಟ್ ದಾಟಿಲ್ಲ.

'ಮೊದಲೇ ಒಪ್ಪಂದ ಮಾಡಿಕೊಂಡಂತೆ ಕಡಿಮೆ ದರಕ್ಕೆ ಮಳೆಗಾಲಕ್ಕೆ ಅಗತ್ಯವಾದ ವಿದ್ಯುತ್ ಖರೀದಿಸಲಾಗುತ್ತಿತ್ತು. ಮಳೆ ಕೊರತೆಯ ಕಾರಣ ಹೆಚ್ಚಿದ ಬೇಡಿಕೆಗೆ ಅನುಗುಣವಾಗಿ ಕೊರತೆ ನೀಗಿಸಲು ದುಬಾರಿ ದರ ನೀಡಲಾಗುತ್ತಿದೆ. ಸರ್ಕಾರ ಇನ್ನು 5 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಸರ್ಕಾರ ಕಾರ್ಯಕ್ರಮ ರೂಪಿಸಿದೆ. ಯೋಜನೆ ಅನುಷ್ಠಾನಕ್ಕೆ ಸಮಯ ಬೇಕಾಗುತ್ತದೆ. ಸದ್ಯದ ಮಟ್ಟಿಗೆ ಅನ್ಯ ರಾಜ್ಯಗಳು ಹಾಗೂ ಕೇಂದ್ರದ ಮೇಲಿನ ಅವಲಂಬನೆ ಅನಿವಾರ್ಯವಾಗಿದೆ. ಅಲ್ಲಿಯವರೆಗೂ ಬೇಡಿಕೆ ಸರಿದೂಗಿಸುವ ಸವಾಲು ನಮ್ಮ ಮುಂದಿದೆ' ಎನ್ನುತ್ತಾರೆ ಕೆಪಿಸಿಎಲ್ ಅಧಿಕಾರಿಗಳು.

ಕಲ್ಲಿದ್ದಲು ಕೊರತೆ

ಒಂದನೇ ಪುಟದಿಂದ...

ಅವುಗಳನ್ನು ನೇರವಾಗಿ ವಿದ್ಯುತ್ ಉತ್ಪಾದನೆಗೆ ಬಳಸಲಾಗುತ್ತಿದೆ. ಹಾಗೆಯೇ, ಬಳ್ಳಾರಿ ಘಟಕದಿಂದ 1,700 ಹಾಗೂ ಯರಮರಸ್ ಘಟಕದಿಂದ 1,600 ಮೆಗಾವಾಟ್ ಉತ್ಪಾದನೆಗೆ ಅವಕಾಶವಿದ್ದರೂ ಕಲ್ಲಿದ್ದಲು ಕೊರತೆ ಕಾರಣ ನಿಗದಿತ ಪ್ರಮಾಣದಲ್ಲಿ ವಿದ್ಯುತ್ ದೊರೆಯುತ್ತಿಲ್ಲ.

ವಿದ್ಯಾರ್ಥಿಗಳ ಅನಗತ್ಯ ಪರದಾಟ ತಪ್ಪಿಸಲು ಹೊಸ ವ್ಯವಸ್ಥೆ

ಕೆಇಎಗೆ ಪಾಸ್‌ಪೋರ್ಟ್ ಕಚೇರಿ ಮಾದರಿ ಸ್ಪರ್ಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳ ಅನಗತ್ಯ ಪರದಾಟ ತಪ್ಪಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಪಾಸ್‌ಪೋರ್ಟ್ ಕಚೇರಿ ಮಾದರಿಯ ಕಾರ್ಯನಿರ್ವಹಣಾ ವ್ಯವಸ್ಥೆ ಅಳವಡಿಸಲಾಗುತ್ತಿದೆ.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಹಾಗೂ ಇತರ ಹಿರಿಯ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಕೆಇಎ ಆಡಳಿತ ಮಂಡಳಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ದಾಖಲೆಗಳ ಪರಿಶೀಲನೆ, ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕೌನ್ಸೆಲಿಂಗ್, ಮಾಹಿತಿ ವಿನಿಮಯ ಮತ್ತಿತರ ಕಾರ್ಯಗಳಿಗಾಗಿ ಕೆಇಎ ಪ್ರತಿಯೊಬ್ಬರಿಗೂ ಪಾಸ್‌ಪೋರ್ಟ್ ಕಚೇರಿ ಮಾದರಿಯಲ್ಲಿ ದಿನಾಂಕ, ಸಮಯ ನೀಡಲಾಗುತ್ತದೆ. ನಿಗದಿಯಾದ ದಿನ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಕುಳಿತುಕೊಳ್ಳಲು ಪ್ರತ್ಯೇಕ ವ್ಯವಸ್ಥೆ, ಡಿಜಿಟಲ್ ಬೋರ್ಡ್ ಮೂಲಕ ಸೂಕ್ತ ಮಾಹಿತಿ ನೀಡಲು ವ್ಯವಸ್ಥೆ ಮಾಡಲಾಗುತ್ತಿದೆ.

'ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಆನ್‌ಲೈನ್ ಮೂಲಕ ಮುಂಗಡವಾಗಿ ದಿನಾಂಕ, ಸಮಯ ನಿಗದಿ ಮಾಡುವ ವ್ಯವಸ್ಥೆಯನ್ನು ಪರಿಚಯಿಸುತ್ತಿದ್ದೇವೆ. ಯಾವುದೇ ಅನಾನುಕೂಲಕ್ಕೆ ಅವಕಾಶವಿಲ್ಲದಂತೆ ಅಧಿಕಾರಿಗಳ ಭೇಟಿಗೆ ಅವಕಾಶ ಕಲ್ಪಿಸಲಾಗುತ್ತದೆ' ಎಂದು ಸಚಿವ ಸುಧಾಕರ್ ಮಾಹಿತಿ ನೀಡಿದರು.

ಈಗಿರುವ ವ್ಯವಸ್ಥೆಯಲ್ಲಿ ಯಾವುದೇ ಸಮಸ್ಯೆಗಳಿದ್ದಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರು ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಕೆಇಎ ಕಚೇರಿಗೆ ಬಂದು ಅಧಿಕಾರಿಗಳನ್ನು ಭೇಟಿ ಮಾಡಬೇಕಿದೆ. ದೂರದ ಊರಿನಿಂದ ಬಂದರೂ ಅಧಿಕಾರಿಗಳನ್ನು ಭೇಟಿ ಮಾಡಲು ಸಾಧ್ಯವಾಗುತ್ತಿಲ್ಲ. ಪಾಸ್‌ಪೋರ್ಟ್ ಕಚೇರಿ ಮಾದರಿ ವ್ಯವಸ್ಥೆ ಅಳವಡಿಕೆಯಿಂದ ಸಮಸ್ಯೆಗಳಿಗೆ ಪರಿಹಾರ ದೊರಕಲಿದೆ ಎನ್ನುತ್ತಾರೆ ಕೆಇಎ ಅಧಿಕಾರಿಗಳು.

ಮುಂದಿನ ಶೈಕ್ಷಣಿಕ ವರ್ಷದ ಒಳಗೆ ವ್ಯವಸ್ಥೆ ಜಾರಿಯಾಗಲಿದೆ. ವಿದ್ಯಾರ್ಥಿಗಳು, ಪೋಷಕರು ಬೆಂಗಳೂರಿನ ಕೇಂದ್ರ ಕಚೇರಿಗೆ ತೆರಳುವ ಮೊದಲು ಆನ್‌ಲೈನ್‌ನಲ್ಲೇ ಬೇಡಿಕೆ, ದೂರು ಸಲ್ಲಿಸಿ, ಸಮಯ ತೆಗೆದುಕೊಳ್ಳಬಹುದು. ಇದರಿಂದ ಕೆಇಎ ಆವರಣದ ಜನಸಂದಣಿ ಸಮಸ್ಯೆಗೂ ಪರಿಹಾರ ದೊರೆಯುತ್ತದೆ.

'ಕೆಇಎ ಆವರಣದಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಸೂಕ್ತ ಕಾಯುವ ಸ್ಥಳದ ಕೊರತೆ ಇದೆ. ಅದಕ್ಕಾಗಿ ₹ 38 ಕೋಟಿ ವೆಚ್ಚದಲ್ಲಿ ಅಗತ್ಯ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಆವರಣದಲ್ಲಿ ಭದ್ರತೆ ಒದಗಿಸಲು, ಸರ್ವರ್ ಸಮಸ್ಯೆಗಳ ನಿವಾರಣೆಗೆ ಹೊಸ ಸಾಫ್ಟ್‌ವೇರ್ ಅಳವಡಿಸಲಾಗುವುದು' ಎಂದು ಸುಧಾಕರ್ ಹೇಳಿದರು.

ರಾಯರು ಭಕ್ತರ ಕಾಮಧೇನು

• ಎಸ್. ಜಯಸಿಂಹ



ಆರಾಧನಾ ಮಹೋತ್ಸವ

ಶ್ರಾವಣಮಾಸದ ಕೃಷ್ಣಪಕ್ಷದ ಬಿದಿಗೆ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆಯ ಪುಣ್ಯ ದಿವಸ. ಇದು ಅವರ 352ನೇ ವರ್ಷದ ಆರಾಧನಾ ಮಹೋತ್ಸವ.

ರಾಘವೇಂದ್ರಸ್ವಾಮಿಗಳನ್ನು 'ರಾಯರು, ಗುರುರಾಯರು, ಗುರುರಾಜರು, ಗುರುಸಾರ್ವಭೌಮರು' ಎಂಬೆಲ್ಲಾ ಹೆಸರುಗಳಿಂದ ಅವರ ಭಕ್ತರು ಸಂಬೋಧಿಸುತ್ತಾರೆ. 'ರಾಯರು' ಎಂಬುದಂತೂ ಅವರನ್ನು ಗುರುತಿಸುವ ಮನೆ, ಮನೆಯ ಸರ್ವಮಾನ್ಯ ಹೆಸರಾಗಿದೆ. ದೈನಂದಿನ ಜೀವನದಲ್ಲಿ ಯಾವುದೇ ತರಹವಾದ ಕಷ್ಟ, ಸಂಕಟ, ತೊಂದರೆ, ತೊಡಕುಗಳು ಎದುರಾದಾಗ ಭಾವುಕರಿಗೆ ತಟ್ಟನೆ ನೆನಪಾಗುವ ಹೆಸರೇ - 'ರಾಯರು'. ಅವರ ಅಸಂಖ್ಯಾತ ಭಕ್ತ ವೃಂದದ ಪಾಲಿಗಂತೂ ರಾಯರು ಕಲಿಯುಗದ ಕಾಮಧೇನು, ಕಲ್ಪತರು. ಮಾನವತೆಯೇ ಮೈತಳೆದಂತಿರುವ ಮಾತೃಹೃದಯದ ವ್ಯಕ್ತಿತ್ವ ರಾಯರದು.

ದ್ವೈತ ಸಿದ್ಧಾಂತದ ಬೆಳಕಿನಲ್ಲಿ ಶಾಸ್ತ್ರವಾಙ್ಮಯಕ್ಕೆ ರಾಯರು ಕೊಟ್ಟ ಕೊಡುಗೆ ಅಮೂಲ್ಯವಾದುದು. ಎಂತಹ ಕ್ಲಿಷ್ಟಕರ ಪ್ರಮೇಯಭರಿತ ಶಾಸ್ತ್ರಕೃತಿಗಳಿಗೂ ಸರಳ ರೀತಿಯಲ್ಲಿ ಮನಮುಟ್ಟುವಂತೆ ವ್ಯಾಖ್ಯಾನಿಸುವ ಅವರ ಶೈಲಿ ವಿಶಿಷ್ಟವಾದುದು. ಹಾಗಾಗಿಯೇ ಅವರಿಗೆ 'ಟಿಪ್ಪಣ್ಯಾಚಾರ್ಯಚಕ್ರವರ್ತಿ' ಎಂಬ ಬಿರುದು ಸಂದಿದೆ. ರಾಯರದು ಅಸಾಧಾರಣ ವಿದ್ವತ್ಪೂರ್ಣ ಗ್ರಂಥರಚನಾ ಶೈಲಿ. ಅವರು ರಚಿಸಿದ ಗ್ರಂಥಗಳು ವೈವಿಧ್ಯಮಯವಾದವು. ಶ್ರುತಿ ಪ್ರಸ್ಥಾನ, ಉಪನಿಷತ್ ಪ್ರಸ್ಥಾನ, ಗೀತಾ ಪ್ರಸ್ಥಾನ ಮತ್ತು ಸೂತ್ರ ಪ್ರಸ್ಥಾನಗಳೆಂಬ ನಾಲ್ಕು ಪ್ರಸ್ಥಾನಗಳ ವ್ಯಾಪ್ತಿಯಲ್ಲಿ ಬರುವ ಮಂತ್ರಾರ್ಥಮಂಜರೀ, ಭಾವದೀಪ, ತತ್ತ್ವಮಂಜರೀ, ಪರಿಮಳ, ಚಂದ್ರಿಕಾಪ್ರಕಾಶ, ನ್ಯಾಯದೀಪ, ಪ್ರಾತಃಸಂಕಲ್ಪಗದ್ಯ, ರಾಮಚಾರಿತ್ರ್ಯ ಮಂಜರೀ, ಕೃಷ್ಣಚಾರಿತ್ರ್ಯ ಮಂಜರೀ, ಭಾಟ್ಟಸಂಗ್ರಹ, ಪ್ರಮೇಯ ಸಂಗ್ರಹಗಳಲ್ಲದೇ ನದಿತಾರತಮ್ಯಸ್ತೋತ್ರ, ದಶಾವತಾರಸ್ತುತಿ, ರಾಜಗೋಪಾಲಸ್ತುತಿ ಮುಂತಾದ ಸ್ತೋತ್ರಗಳೂ ಸೇರಿದಂತೆ ಸುಮಾರು ನಲವತ್ತೆಂಟು ಅಮೂಲ್ಯ ಕೃತಿಗಳನ್ನು ರಾಯರು ರಚಿಸಿದ್ದಾರೆ.

ರಾಯರು ರಚಿಸಿರುವ ಈ ಎಲ್ಲ ಕೃತಿಗಳಲ್ಲಿ ಅವರ ಸರ್ವತೋಮುಖವಾದ ಪಾಂಡಿತ್ಯ, ಪ್ರತಿಭೆ ಮತ್ತು ಅಸೀಮ ಭಗವದ್ಭಕ್ತಿಗಳ ಪ್ರತಿಫಲನವಿದೆ.

ರಾಘವೇಂದ್ರಸ್ವಾಮಿಗಳಿಂದ ಕನ್ನಡ ಹರಿದಾಸ ಸಾಹಿತ್ಯದ ವಿಕಸನವೂ ವಿಶಿಷ್ಟ ರೀತಿಯಲ್ಲಿ ನಡೆಯಿತು. ನೂರಾರು ಹರಿದಾಸರಿಗೆ ಪ್ರೇರಕಶಕ್ತಿಯಾಗಿ, ಆಶ್ರಯದಾತರಾಗಿ ವಿಪುಲ ಸಾಹಿತ್ಯಸೃಷ್ಟಿಗೆ ರಾಘವೇಂದ್ರರು ಕಾರಣರಾದರಲ್ಲದೇ ತಮ್ಮ ಜೀವಿತಕಾಲದಲ್ಲಿ 'ಧೀರ ವೇಣುಗೋಪಾಲ' ಎಂಬ ಮುದ್ರಿಕೆಯಲ್ಲಿ ತಾವೇ ಸ್ವತಃ ಕನ್ನಡ ಕೃತಿಗಳನ್ನು ರಚಿಸಿದರು. ರಾಯರು ರಚಿಸಿರುವ 'ಇಂದು ಎನಗೆ ಗೋವಿಂದ' ಎಂಬ ಸುಂದರ ಕೀರ್ತನೆ ಅಪಾರ ಜನಮನ್ನಣೆಯನ್ನು ಗಳಿಸಿದೆ.

ರಾಘವೇಂದ್ರಸ್ವಾಮಿಗಳು ಪ್ರಮೇಯಭರಿತವಾದ ಶಾಸ್ತ್ರವಾಙ್ಮಯವನ್ನು ಪದ, ಪದ್ಯ, ಸುಳಾದಿಗಳ ಮೂಲಕ ಕನ್ನಡ ಭಾಷೆಗೆ ರೂಪಾಂತರಗೊಳಿಸಲು ಕಾರಣರಾದರು. ಜಾತಿ, ಮತ, ಪಂಥಗಳ ಭೇದವೆಣಿಸದೆ ಸಮಸ್ತಜೀವಿಗಳಲ್ಲಿಯೂ ದೇವಸದೃಶ ಕರುಣೆಯನ್ನು ತೋರಿದ ಗುರು ರಾಘವೇಂದ್ರರು ಆಸಿಕ್ಯಭಾವಗಳನ್ನು ಉದ್ದೀಪನಗೊಳಿಸಲು, ನೊಂದವರ ನೋವು, ಸಂಕಟಗಳನ್ನು ನಿವಾರಿಸಲು, ಹತಾಶೆಗೊಂಡವರಲ್ಲಿ ಸ್ಫೂರ್ತಿಯ ಜೀವಸೆಲೆಯನ್ನು ತುಂಬಲು ಅಸಂಖ್ಯಾತ ಅತಿಮಾನುಷವೆನ್ನಿಸುವ ಮಹಿಮೆಗಳನ್ನು ತೋರಿದರು.

ತಮಿಳುನಾಡು, ಆಂಧ್ರಪ್ರದೇಶದಿಂದ ಮಂತ್ರಾಲಯಕ್ಕೆ ಬಂದ ಶೇಷವಸ್ತ್ರ

ರಾಯರ ಪೂರ್ವಾರಾಧನೆ ಸಂಭ್ರಮ

ಪ್ರಜಾವಾಣಿ ವಾರ್ತೆ

ಮಂತ್ರಾಲಯಕ್ಕೆ ಶ್ರೀರಂಗಂನ ಶ್ರೀರಂಗನಾಥ ದೇವಸ್ಥಾನ ಹಾಗೂ ಆಂಧ್ರಪ್ರದೇಶದ ಅಹೋಬಲ ನರಸಿಂಹಸ್ವಾಮಿ ದೇವಸ್ಥಾನದಿಂದ ರಾಯರಿಗೆ ಶೇಷವಸ್ತ್ರ ತೆಗೆದುಕೊಂಡು ಬಂದ ಪ್ರತಿನಿಧಿಗಳು

ರಾಯಚೂರು: ರಾಘವೇಂದ್ರ ಸ್ವಾಮಿಗಳ 352ನೇ ಆರಾಧನಾ ಮಹೋತ್ಸವ ಪ್ರಯುಕ್ತ ಮಂತ್ರಾಲಯ ಮಠದಲ್ಲಿ ಗುರುವಾರ ರಾಯರ ಪೂರ್ವಾರಾಧನೆ ನಡೆಯಿತು.

ಬೆಳಗಿನ ಜಾವ ಸುಪ್ರಭಾತ, ಪಂಚಾಮೃತ ಅಭಿಷೇಕ, ಉತ್ಸವ ರಾಯರ ಪಾದಪೂಜೆ, ರಜತ ಸಿಂಹ ವಾಹನೋತ್ಸವ ಇತರೆ ಧಾರ್ಮಿಕ ಕಾರ್ಯಗಳು ವಿಧಿವತ್ತಾಗಿ ನಡೆದವು.

ರಾಯರು ರಚಿಸಿರುವ ಪರಿಮಳ ಗ್ರಂಥವನ್ನು ಪಲ್ಲಕ್ಕಿಯಲ್ಲಿ ಇಟ್ಟು ಮಠದ ಪ್ರಾಂಗಣದಲ್ಲಿ ಮೆರವಣಿಗೆ ಮಾಡಲಾಯಿತು. ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿರುವ ಭಕ್ತರು ರಾಯರಿಗೆ ಭಕ್ತಿ ಸೇವೆ ಸಲ್ಲಿಸಿದರು.

ತಮಿಳುನಾಡು ಸರ್ಕಾರದ ನಿರ್ದೇಶನ ಮೇರೆಗೆ ಮುಜರಾಯಿ ಇಲಾಖೆ ಅಧಿಕಾರಿಗಳು ಶ್ರೀರಂಗಂನ ಶ್ರೀರಂಗನಾಥ ದೇವಸ್ಥಾನ ಹಾಗೂ ಆಂಧ್ರಪ್ರದೇಶದ ಅಹೋಬಲ ನರಸಿಂಹ ಸ್ವಾಮಿ ದೇವಸ್ಥಾನದಿಂದ ರಾಯರಿಗೆ ಶೇಷವಸ್ತ್ರ ತೆಗೆದುಕೊಂಡು ಬಂದು ಅರ್ಪಣೆ ಮಾಡಿದರು.

ತಮಿಳುನಾಡಿನ ಶ್ರೀರಂಗಂನಿಂದ ತಂದಿರುವ ವಸ್ತ್ರವನ್ನು ಮಂತ್ರಾಲಯ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ವಿವಿಧ ಕಲಾ-ತಂಡಗಳ ವಾದ್ಯಗಳೊಂದಿಗೆ ಸ್ವಾಗತಿಸಿ ಸ್ವೀಕರಿಸಿ ರಾಯರಿಗೆ ಸಮರ್ಪಿಸಿದರು.

ನಂತರ ಶ್ರೀಗಳು ಮಾತನಾಡಿ, 'ಶ್ರೀರಂಗಂ–ಅಹೋಬಲ ಕ್ಷೇತ್ರದಿಂದ ಶೇಷವಸ್ತ್ರ ಗುರುರಾಯರಿಗೆ ಸಮರ್ಪಣೆಯಾಗಿದ್ದು, ಎಲ್ಲ ಪುಣ್ಯಕ್ಷೇತ್ರ ಫಲ ಮಂತ್ರಾಲಯಕ್ಕೆ ಬಂದಿದೆ. ಐತಿಹಾಸಿಕ ದೈವಿಕ ಕ್ಷೇತ್ರಗಳಿಂದ ಬಂದಿರುವ ಶೇಷ ವಸ್ತ್ರದ ಮೂಲಕ ರಾಯರಿಗೆ ಅನುಗ್ರಹಿಸಿದ್ದಾರೆ. ಅಹೋಬಲ ಕ್ಷೇತ್ರದ ನರಸಿಂಹಸ್ವಾಮಿ ಹಾಗೂ ಶ್ರೀರಂಗಂ ಕ್ಷೇತ್ರದೊಂದಿಗೆ ಮಠವು ಅನನ್ಯ ಸಂಬಂಧ ಹೊಂದಿದೆ' ಎಂದರು.

ಶ್ರೀರಂಗನಾಥ ದೇವಸ್ಥಾನ ಹಾಗೂ ಕುಂಬಕೋಣಂನ ಉಪ್ಪಲಿ ಅಪ್ಪನ್ ದೇವಾಲಯದ ಪ್ರತಿನಿಧಿಗಳಿಗೆ ಮಠದ ವತಿಯಿಂದ ಫಲಪುಷ್ಪ ನೀಡಿ ಗೌರವಿಸಲಾಯಿತು. ಅಹೋಬಲ ನರಸಿಂಹಸ್ವಾಮಿ ದೇವಸ್ಥಾನದ ಆಡಳಿತ ಅಧಿಕಾರಿ ಸಂಪತ್, ಅರ್ಚಕ ರಮೇಶ ಆಚಾರ್ಯ, ಶ್ರೀರಂಗಂ ಕ್ಷೇತ್ರದ ಗೋಪಾಲನ್, ವಿದ್ವಾನ ಸುಧೀಂದ್ರ ಆಚಾರ್ಯ, ಧರಶ್ರೀ ಆಚಾರ್ಯ, ಮಠದ ಆಡಳಿತಾಧಿಕಾರಿ ಮಾಧವಶೆಟ್ಟಿ, ವ್ಯವಸ್ಥಾಪಕ ಎಸ್.ಕೆ. ಶ್ರೀನಿವಾಸರಾವ್, ಗುರುಸಾರ್ವಭೌಮ ವಿದ್ಯಾಪೀಠದ ಪ್ರಾಚಾರ್ಯ ರಮಣರಾವ್, ಮಠದ ಮಾಧ್ಯಮ ಉಸ್ತುವಾರಿ ಶ್ರೀನಿಧಿ, ಮಠದ ವಿದ್ಯಾರ್ಥಿಗಳು, ಸಿಬ್ಬಂದಿ ಇದ್ದರು.

ಸುಪ್ರೀಂ ಕೋರ್ಟ್‌ಗೆ ಹೇಳಿಕೆ: ರಾಜ್ಯ ಮರುಸ್ಥಾಪನೆ ಕಾಲಮಿತಿಗೆ ನಕಾರ

ಕಾಶ್ಮೀರ ಚುನಾವಣೆಗೆ ಸಿದ್ಧ: ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನವನ್ನು ಮರಳಿ ನೀಡುವುದಕ್ಕೆ ಕೆಲ ಸಮಯ ಹಿಡಿಯಲಿದೆ. ಆದರೆ, ಯಾವಾಗ ಬೇಕಾದರೂ ಚುನಾವಣೆ ನಡೆಯಲು ಸಿದ್ಧ ಎಂದು ಕೇಂದ್ರ ಸರ್ಕಾರವು, ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಸಂವಿಧಾನದ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದತಿ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿ ಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರ ಅಧ್ಯಕ್ಷತೆಯ ಸಾಂವಿಧಾನಿಕ ಪೀಠವು ಗುರುವಾರ ನಡೆಸಿತು.

ಜಮ್ಮು ಮತ್ತು ಕಾಶ್ಮೀರದಲ್ಲಿ 2018ರ ಜೂನ್‌ನಿಂದ ಚುನಾಯಿತ ಸರ್ಕಾರ ಅಸ್ತಿತ್ವದಲ್ಲಿಲ್ಲ. ಹಾಗಾಗಿ, ಎರಡು ದಿನದ ಹಿಂದೆ ನಡೆದ ವಿಚಾರಣೆ ವೇಳೆ 'ಚುನಾವಣಾ ಪ್ರಜಾಪ್ರಭುತ್ವ'ದ ಪ್ರಾಮುಖ್ಯ ಕುರಿತು ನ್ಯಾಯಪೀಠವು ಒತ್ತಿ ಹೇಳಿತ್ತು. 'ಮತ್ತೆ ಯಾವಾಗ ರಾಜ್ಯದ ಸ್ಥಾನ ಮರುಸ್ಥಾಪಿಸುತ್ತೀರಿ' ಎಂದು ಪ್ರಶ್ನಿಸಿದ್ದ ಪೀಠವು, 'ಇದಕ್ಕೆ ಕಾಲಮಿತಿ ನಿಗದಿಪಡಿಸಬೇಕು' ಎಂದು ಸೂಚಿಸಿತ್ತು.

ಕೇಂದ್ರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ನಾವು ಇದೇ ಹಾದಿಯಲ್ಲಿ ಸಾಗುತ್ತಿದ್ದೇವೆ. ಆದರೆ, ಇದಕ್ಕೆ ನಿರ್ದಿಷ್ಟ ಕಾಲಮಿತಿಯ ಚೌಕಟ್ಟು ನಿಗದಿಪಡಿಸಲು ಸಾಧ್ಯವಿಲ್ಲ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಅಲ್ಲಿ ಬಂಡವಾಳ ಹೂಡಿಕೆ, ಉದ್ಯೋಗ ಸೃಷ್ಟಿಗೆ ಒತ್ತು ನೀಡಿದ್ದೇವೆ. ಪ್ರವಾಸಿಗರ ಸಂಖ್ಯೆಯೂ ಹೆಚ್ಚಳವಾಗಿದ್ದು, ಇಲ್ಲಿಯವರೆಗೆ 1.88 ಕೋಟಿ ಜನರು ಭೇಟಿ ನೀಡಿದ್ದಾರೆ. ರಾಜ್ಯದ ಸ್ಥಾನ ನೀಡಿಕೆ ವಿಚಾರದಲ್ಲಿ ಇವೆಲ್ಲವೂ ಪರಿಗಣನೆಗೆ ಬರಲಿದೆ' ಎಂದರು.

ಸಿಜೆಐ ಚಂದ್ರಚೂಡ್, ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್, ಸಂಜೀವ್ ಖನ್ನಾ, ಬಿ.ಆರ್. ಗವಾಯಿ ಮತ್ತು ಸೂರ್ಯಕಾಂತ್ ಅವರಿದ್ದ ನ್ಯಾಯಪೀಠವು, ಕೇಂದ್ರದ ಈ ಹೇಳಿಕೆಯನ್ನು ದಾಖಲಿಸಿಕೊಂಡಿತು.

'ಆದರೆ, ವಿಶೇಷ ಸ್ಥಾನಮಾನ ರದ್ದತಿಯ ಸಾಂವಿಧಾನಿಕ ಸಿಂಧುತ್ವವನ್ನು ಸಾಂವಿಧಾನಿಕ ನೆಲೆಗಟ್ಟಿನಲ್ಲಿಯೇ ಕೋರ್ಟ್ ನಿರ್ಧರಿಸುತ್ತದೆ. ಚುನಾವಣೆ ಅಥವಾ ರಾಜ್ಯದ ಸ್ಥಾನ ಮರುಸ್ಥಾಪನೆ ವಿಷಯವು ಈ ನಿರ್ಣಯದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ' ಎಂದು ಸ್ಪಷ್ಟಪಡಿಸಿತು.

ಆಯೋಗದ ಹೆಗಲಿಗೆ ಚುನಾವಣೆ ಹೊಣೆ: 'ಚುನಾವಣೆಗೆ ಸಂಬಂಧಿಸಿದಂತೆ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯು ನಡೆಯುತ್ತಿದೆ. ಕೇಂದ್ರ ಮತ್ತು ರಾಜ್ಯ ಚುನಾವಣಾ ಆಯೋಗವು ಚುನಾವಣೆಗೆ ದಿನಾಂಕ ನಿಗದಿಪಡಿಸಬೇಕಿದೆ' ಎಂದು ಮೆಹ್ತಾ ತಿಳಿಸಿದರು.

ಈಗಾಗಲೇ, ಜಿಲ್ಲಾ ಅಭಿವೃದ್ಧಿ ಕೌನ್ಸಿಲ್ ಚುನಾವಣೆ ಮುಗಿದಿದೆ. ಶೀಘ್ರವೇ, ಪಂಚಾಯಿತಿ ಚುನಾವಣೆ ನಡೆಯಲಿದೆ ಎಂದ ಅವರು, ಲೇಹ್ ಹಿಲ್ ಅಭಿವೃದ್ಧಿ ಕೌನ್ಸಿಲ್ ಚುನಾವಣೆಯೂ ಪೂರ್ಣಗೊಂಡಿದೆ. ಈ ತಿಂಗಳಿನಲ್ಲಿ ಕಾರ್ಗಿಲ್‌ನಲ್ಲಿ ಚುನಾವಣೆ ನಡೆಯಲಿದೆ' ಎಂದು ವಿವರಿಸಿದರು.

'ಪಂಚಾಯಿತಿ, ಮುನ್ಸಿಪಲ್ ಚುನಾವಣೆ ಮುಗಿದ ಬಳಿಕ ವಿಧಾನ ಸಭೆಗೆ ಚುನಾವಣೆ ನಡೆಯಲಿದೆ' ಎಂದು ತಿಳಿಸಿದರು.

ಮೆಹ್ತಾ–ಸಿಬಲ್ ನಡುವೆ ವಾಗ್ವಾದ

ತುಷಾರ್ ಮೆಹ್ತಾ ಮತ್ತು ಕಪಿಲ್ ಸಿಬಲ್ ನಡುವೆ ಜೋರು ವಾಗ್ವಾದ ನಡೆಯಿತು.

ಜಮ್ಮು ಮತ್ತು ಕಾಶ್ಮೀರದಲ್ಲಿನ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದಂತೆ ಸರ್ಕಾರದ ಅಂಕಿಅಂಶಗಳನ್ನು ನ್ಯಾಯಪೀಠದ ಮುಂದಿಟ್ಟ ಮೆಹ್ತಾ, '2018ರಲ್ಲಿ 52 ಸಂಘಟಿತ ಬಂದ್‌ಗಳಿಗೆ ಕರೆ ನೀಡಲಾಗಿತ್ತು. ಈಗ ಇದು ಶೂನ್ಯಕ್ಕೆ ಇಳಿದಿದೆ' ಎಂದರು. ಇದಕ್ಕೆ ಆಕ್ಷೇಪಿಸಿದ ಸಿಬಲ್, 'ಸೆಕ್ಷನ್ 144ರಡಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಇಂಟರ್‌ನೆಟ್ ಸೇವೆಯೂ ಸ್ಥಗಿತಗೊಂಡಿದೆ. ಐದು ಸಾವಿರ ಜನರನ್ನು ಗೃಹ ಬಂಧನದಲ್ಲಿ ಇಟ್ಟರೆ ಧರಣಿ ನಡೆಸಲು ಸಾಧ್ಯವೇ? ನ್ಯಾಯಾಲಯಕ್ಕೂ ಇದು ಗೊತ್ತಿದೆ. ಪ್ರಜಾಪ್ರಭುತ್ವದ ಅಪಹಾಸ್ಯಕ್ಕೆ ಸರ್ಕಾರ ಮುಂದಾಗಬಾರದು' ಎಂದು ಹೇಳಿದರು.

'ಜನರು ಆಸ್ಪತ್ರೆಗೆ ತೆರಳಲು ಸಾಧ್ಯವಾಗದಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ಅವರು ಬಂದ್‌ಗೆ ಕರೆ ನೀಡಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಕಣಿವೆಯಲ್ಲಿನ ಪ್ರಗತಿಯು ಎಂದಿಗೂ ಸಮಸ್ಯೆ ಸೃಷ್ಟಿಸುವುದಿಲ್ಲ' ಎಂದು ಮೆಹ್ತಾ ಸಮರ್ಥಿಸಿಕೊಂಡರು.

ಈ ವೇಳೆ ಮಧ್ಯಪ್ರವೇಶಿಸಿದ ಸಿಜೆಐ ಚಂದ್ರಚೂಡ್ ಅವರು, 'ಸಾಂವಿಧಾನಿಕ ವಿಷಯಗಳನ್ನು ಸಾಂವಿಧಾನಿಕ ಮಾರ್ಗದಲ್ಲಿಯೇ ವ್ಯವಹರಿಸಬೇಕು. ಇದಕ್ಕೆ ಸರ್ಕಾರಿ ನೀತಿಗಳ ತಳಹದಿಯನ್ನು ಅನ್ವಯಿಸಬಾರದು' ಎಂದರು.

'ಆರಂಭದಿಂದಲೂ ಈ ಪ್ರಕರಣದ ವಿಚಾರಣೆಯು ನ್ಯಾಯಸಮ್ಮತ ಹಾಗೂ ನಿಷ್ಪಕ್ಷಪಾತವಾಗಿಯೇ ಸಾಗುತ್ತಿದೆ. ಇಬ್ಬರೂ ಇದೇ ಹಾದಿಯಲ್ಲಿ ಸಾಗಬೇಕು' ಎಂದು ಸಲಹೆ ನೀಡಿದರು.

ಭಯೋತ್ಪಾದನಾ ಚಟುವಟಿಕೆ ಕ್ಷೀಣ

ಹಿಂದಿನ ವರ್ಷಗಳಿಗೆ ಹೋಲಿಸಿದರೆ ಭಯೋತ್ಪಾದನಾ ಚಟುವಟಿಕೆಗಳು ಶೇ 45ರಷ್ಟು ತಗ್ಗಿವೆ ಎಂದು ಸಾಲಿಸಿಟರ್ ಜನರಲ್ ಮೆಹ್ತಾ ನ್ಯಾಯಪೀಠಕ್ಕೆ ತಿಳಿಸಿದರು.

ಒಳನುಸುಳುವಿಕೆಯು ಶೇ 90.2ರಷ್ಟು ಹಾಗೂ ಭದ್ರತಾ ಸಿಬ್ಬಂದಿ ಮೇಲಿನ ದಾಳಿ ಪ್ರಕರಣಗಳು ಶೇ 65.9ರಷ್ಟು ಇಳಿಕೆಯಾಗಿವೆ. ಕಾನೂನು ಮತ್ತು ಸುವ್ಯವಸ್ಥೆ ಉಲ್ಲಂಘನೆ ಪ್ರಕರಣಗಳು ಶೇ 97.2ರಷ್ಟು ಹಾಗೂ ಕಲ್ಲು ಎಸೆತ ಪ್ರಕರಣಗಳು ಶೇ 97ರಷ್ಟು ಕಡಿಮೆಯಾಗಿವೆ. ಚುನಾವಣೆ ನಡೆಸಲು ಇದು ಅಳತೆಗೋಲು ಆಗಿದೆ' ಎಂದು ಹೇಳಿದರು.

'2018ರಲ್ಲಿ 1,767 ಕಲ್ಲು ಎಸೆತದ ಘಟನೆಗಳು ವರದಿಯಾಗಿದ್ದವು. ಈಗ ಸಂಪೂರ್ಣ ಕಡಿಮೆಯಾಗಿವೆ. ಪೊಲೀಸ್ ಮತ್ತು ರಕ್ಷಣಾ ಸಿಬ್ಬಂದಿಯ ಪರಿಣಾಮಕಾರಿ ಕಾರ್ಯಾಚರಣೆಯೊಂದರಿಂದ ಮಾತ್ರ ಇದು ಸಾಧ್ಯವಾಗಿಲ್ಲ. ಪ್ರತ್ಯೇಕತಾವಾದಿಗಳಿಂದ ಯುವಕರು ದಿಕ್ಕುತಪ್ಪುತ್ತಿದ್ದರು. ಅಂತಹ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ. ಹಾಗಾಗಿ, ಕಾನೂನುಬಾಹಿರ ಚಟುವಟಿಕೆಗಳಿಗೆ ಕಡಿವಾಣ ಬಿದ್ದಿದೆ' ಎಂದು ಹೇಳಿದರು.

'ಈ ವಿಷಯಗಳನ್ನು ವಿಶೇಷ ಸ್ಥಾನಮಾನ ರದ್ದತಿಗೆ ಸಂಬಂಧಿಸಿದ ಪ್ರಕರಣಕ್ಕೆ ಪರಿಗಣಿಸಬಾರದು' ಎಂದು ಅರ್ಜಿದಾರರ ಪರ ವಕೀಲ ಕಪಿಲ್ ಸಿಬಲ್ ವಾದಿಸಿದರು.

ಕೇಂದ್ರದ ಹೇಳಿಕೆಯಲ್ಲಿ ಹೊಸದೇನು ಇಲ್ಲ. ಇದು ಜನರನ್ನು ದಿಕ್ಕುತಪ್ಪಿಸುವ ತಂತ್ರವಷ್ಟೇ. ಸಾಂವಿಧಾನಿಕ ಹಾಗೂ ಕಾನೂನುಬದ್ಧ ಹಕ್ಕುಗಳಿಗಾಗಿ ನಮ್ಮ ಹೋರಾಟ ಮುಂದುವರಿಯಲಿದೆ

ಇಮ್ರಾನ್ ನಬಿ ದಾರ್, ವಕ್ತಾರ, ನ್ಯಾಷನಲ್ ಕಾನ್ಫರೆನ್ಸ್

'ಜೈಲುಗಳಲ್ಲಿ ಅಸಹಜ ಸಾವು: ಆತ್ಮಹತ್ಯೆಯೇ ಅತಿ ಹೆಚ್ಚು'

ಸುಪ್ರೀಂ ಕೋರ್ಟ್ ನೇಮಿಸಿದ ವರದಿಯಲ್ಲಿ ಉಲ್ಲೇಖ

ನವದೆಹಲಿ (ಪಿಟಿಐ): ದೇಶದ ಜೈಲುಗಳಲ್ಲಿ 2017ರಿಂದ 2021ರ ನಡುವೆ 817 ಅಸಹಜ ಸಾವುಗಳು ವರದಿಯಾಗಿದ್ದು, ಆತ್ಮಹತ್ಯೆಯೇ ಅದರಲ್ಲಿ ಹೆಚ್ಚು ಎಂದು ಸುಪ್ರೀಂ ಕೋರ್ಟ್ ರಚಿಸಿರುವ 'ಜೈಲುಗಳ ಸುಧಾರಣೆ ಕುರಿತ ಸಮಿತಿ'ಯ ವರದಿಯಲ್ಲಿ ಹೇಳಲಾಗಿದೆ.

ಸೆರೆವಾಸದಲ್ಲಿರುವವರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಡೆಗಟ್ಟುವಂತಹ ಜೈಲುಗಳನ್ನು ನಿರ್ಮಿಸುವ ಅಗತ್ಯ ಇದೆ ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ವರದಿಯಲ್ಲಿ ಸಮಿತಿಯು ಪ್ರತಿಪಾದಿಸಿದೆ.

'817 ಅಸ್ವಾಭಾವಿಕ ಸಾವುಗಳ ಪೈಕಿ 660 ಜೈಲುವಾಸಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಉತ್ತರ ಪ್ರದೇಶದಲ್ಲಿ ಗರಿಷ್ಠ 101 ಮಂದಿ ಆತ್ಮಹತ್ಯೆಗೆ ಶರಣಾಗಿದ್ದಾರೆ' ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅಮಿತಾವ್ ರಾಯ್ ನೇತೃತ್ವದ ಸಮಿತಿ ಹೇಳಿದೆ.

ಪರಿಸರಸ್ನೇಹಿಯಲ್ಲದ ಪಟಾಕಿಗಳ ನಿಷೇಧ: ವಿವರ ಕೋರಿದ 'ಸುಪ್ರೀಂ'



ನವದೆಹಲಿ (ಪಿಟಿಐ): 'ನಿಯಮಗಳನ್ನು ಅನುಷ್ಠಾನಗೊಳಿಸದೇ ಇದ್ದರೆ ನಗೆಪಾಟಲಾಗುತ್ತದೆ' ಎಂದು ಸುಪ್ರೀಂ ಕೋರ್ಟ್ ಗುರುವಾರ ಅಭಿಪ್ರಾಯಪಟ್ಟಿತು. ಪರಿಸರಸ್ನೇಹಿಯಲ್ಲದ ಪಟಾಕಿಗಳ ನಿಷೇಧಕ್ಕೆ ಕೈಗೊಂಡಿರುವ ಕ್ರಮಗಳ ವಿವರ ನೀಡುವಂತೆಯೂ ಸೂಚಿಸಿತು.

ಹಸಿರುಯೇತರ ಪಟಾಕಿಗಳ ತಯಾರಿಕೆ, ಮಾರಾಟ ನಿಷೇಧಿಸಲು ನಿಯಮಗಳನ್ನು ಬಲಪಡಿಸಲು ಕೈಗೊಂಡಿರುವ ವಿವರ ನೀಡಬೇಕು ಎಂದು ಕೇಂದ್ರ ಸರ್ಕಾರ ಹಾಗೂ ಪೆಟ್ರೋ ಲಿಯಂ ಮತ್ತು ಸ್ಫೋಟಕ ಸುರಕ್ಷತಾ ಸಂಘಕ್ಕೆ (ಪಿಇಎಸ್‌ಒ) ಸುಪ್ರೀಂ ಕೋರ್ಟ್ ತಿಳಿಸಿತು.

ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಮತ್ತು ಎಂ.ಎಂ.ಸುಂದ್ರೇಶ್ ಅವರಿದ್ದ ಪೀಠವು ಈ ಸೂಚನೆಯನ್ನು ನೀಡಿತು.

'ಲಿಂಗತ್ವ ಅಲ್ಪಸಂಖ್ಯಾತ ಕೈದಿಗಳಿಗೆ ಸಮಾನ ಹಕ್ಕು ಕಲ್ಪಿಸಿ'

ನವದೆಹಲಿ (ಪಿಟಿಐ): ಜೈಲಿನಲ್ಲಿರುವ ಸಹ ಕೈದಿಗಳಿಗೆ ಒದಗಿಸಿರುವ ಸಮಾನ ಹಕ್ಕುಗಳು ಮತ್ತು ಸೌಲಭ್ಯವನ್ನು ಲಿಂಗತ್ವ ಅಲ್ಪಸಂಖ್ಯಾತ ಕೈದಿಗಳಿಗೂ ಕಲ್ಪಿಸಬೇಕು. ಯಾವುದೇ, ತಾರತಮ್ಯ ಮಾಡಬಾರದು ಎಂದು ಸುಪ್ರೀಂ ಕೋರ್ಟ್ ರಚಿಸಿರುವ 'ಜೈಲುಗಳ ಸುಧಾರಣೆ ಕುರಿತ ಸಮಿತಿ ಶಿಫಾರಸು ಮಾಡಿದೆ.

ನಿವೃತ್ತ ನ್ಯಾಯಮೂರ್ತಿ ಅಮಿತಾವ್ ರಾಯ್ ನೇತೃತ್ವದ ಸಮಿತಿಯು ಈ ಕುರಿತು ಸುಪೀಂ ಕೋರ್ಟ್‌ಗೆ ಅಂತಿಮ ವರದಿ ಸಲ್ಲಿಸಿದೆ.

ಕಾರಾಗೃಹದ ಸಿಬ್ಬಂದಿ ಸೇರಿದಂತೆ ಅಪರಾಧಿಗಳ ಸುಧಾರಣೆ ಮತ್ತು ಪುನರ್ವಸತಿ ಗುರಿ ಹೊಂದಿರುವ ಸೇವಾ ಆಡಳಿತದ ಸಿಬ್ಬಂದಿಯು ಇಂತಹ ಕೈದಿಗಳೊಂದಿಗೆ ಸೂಕ್ತ ಸಂವಹನ ನಡೆಸಬೇಕಿದೆ. ಇದಕ್ಕೆ ಪೂರಕವಾಗಿ ಈ ಸಿಬ್ಬಂದಿಗೆ ಸಮರ್ಪಕ ಹಾಗೂ ನಿಯಮಿತವಾಗಿ ತರಬೇತಿ ನೀಡಬೇಕು ಎಂದು ಸಮಿತಿಯು ಹೇಳಿದೆ.

ಲಿಂಗತ್ವ ಅಲ್ಪಸಂಖ್ಯಾತ ಕೈದಿಗಳ ಮೇಲಿನ ಹಿಂಸೆ, ತಾರತಮ್ಯ ಸೇರಿದಂತೆ ಇತರೇ ಅಪಾಯವನ್ನು ತಡೆಗಟ್ಟಲು ರಾಜ್ಯ ಸರ್ಕಾರಗಳು ಮತ್ತು ಕಾರಾಗೃಹ ಇಲಾಖೆಗಳು ಸೂಕ್ತ ಹಾಗೂ ಪರಿಣಾಮಕಾರಿಯಾಗಿ ಕ್ರಮಕೈಗೊಳ್ಳಬೇಕು ಎಂದು ಸಲಹೆ ನೀಡಿದೆ.

ಪ್ರವಾಹ... ಅಸ್ಸಾಂನ ಮೋರಿಗಾಂವ್ ಜಿಲ್ಲೆಯ ಪ್ರವಾಹ ಪೀಡಿತ ಗ್ರಾಮವೊಂದರಲ್ಲಿ ಗುರುವಾರ ಮಹಿಳೆಯೊಬ್ಬರು ಮರದ ತೆಪ್ಪದ ಮೂಲಕ ಸುರಕ್ಷಿತ ಪ್ರದೇಶಕ್ಕೆ ತೆರಳಿದರು –ಪಿಟಿಐ ಚಿತ್ರ

18ರಿಂದ 22ರವರೆಗೆ ಸಂಸತ್ತಿನ ವಿಶೇಷ ಅಧಿವೇಶನ

ನವದೆಹಲಿ (ಪಿಟಿಐ): ಸೆ. 18ರಿಂದ 22ರವರೆಗೆ ಐದು ದಿನಗಳ ಕಾಲ ಕೇಂದ್ರ ಸರ್ಕಾರವು ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆದಿದೆ ಎಂದು ಸಂಸತ್ತಿನ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಗುರುವಾರ ತಿಳಿಸಿದ್ದಾರೆ.

'ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ಫಲಪ್ರದ ಚರ್ಚೆಗಳನ್ನು ಎದುರು ನೋಡಲಾಗುತ್ತಿದೆ' ಎಂದು ಜೋಶಿ ಅವರು 'ಎಕ್ಸ್' ವೇದಿಕೆಯಲ್ಲಿ ಬರೆದುಕೊಂಡಿದ್ದಾರೆ.

ಸೆ. 9 ಮತ್ತು 10ರಂದು ದೆಹಲಿಯಲ್ಲಿ ನಡೆಯಲಿರುವ ಜಿ20 ಶೃಂಗಸಭೆಯ ಕೆಲ ದಿನಗಳ ಬಳಿಕ ನಡೆಯಲಿರುವ ವಿಶೇಷ ಅಧಿವೇಶನದ ಕಾರ್ಯಸೂಚಿಯ ಕುರಿತು ಇನ್ನೂ ಅಧಿಕೃತವಾಗಿ ಹೇಳಿಕೆ ನೀಡಿಲ್ಲ.

'ಫೆ. 28ರಂದು ಪ್ರಧಾನಿ ನರೇಂದ್ರ ಮೋದಿ ಅವರಿಂದ ಉದ್ಘಾಟನೆಯಾಗಿರುವ ನೂತನ ಸಂಸತ್ ಕಟ್ಟಡದಲ್ಲಿ ವಿಶೇಷ ಅಧಿವೇಶನ ನಡೆಯುವ ಸಾಧ್ಯತೆ ಇದೆ. ನೂತನ ಸಂಸತ್ ಕಟ್ಟಡಕ್ಕೆ ಅಂತಿಮ ಸ್ಪರ್ಶ ನೀಡುವ ಕಾರ್ಯಗಳು ನಡೆಯುತ್ತಿವೆ' ಎಂದು ಮೂಲಗಳು ತಿಳಿಸಿವೆ.

'ಸಾಮಾನ್ಯವಾಗಿ ಸಂಸತ್ತಿನ ಅಧಿವೇಶನವು ವರ್ಷದಲ್ಲಿ ಮೂರು ಬಾರಿ ನಡೆಯುತ್ತದೆ. ಬಜೆಟ್, ಮಳೆಗಾಲ ಹಾಗೂ ಚಳಿಗಾಲದ ಸಮಯದಲ್ಲಿ ಅಧಿವೇಶನ ನಡೆಯುತ್ತದೆ. ಲೋಕಸಭಾ ಚುನಾವಣೆ ಹತ್ತಿರದಲ್ಲಿರುವುದರಿಂದ ಮೋದಿ ಅವರು ತಮ್ಮ ಸಾಧನೆಗಳನ್ನು ಬಿಂಬಿಸಲು ವಿಶೇಷ ಅಧಿವೇಶನವನ್ನು ಬಳಸಿಕೊಳ್ಳುವ ಸಾಧ್ಯತೆಗಳಿವೆ' ಎಂದೂ ಹೇಳಲಾಗುತ್ತಿದೆ.

ಕಾಂಗ್ರೆಸ್ ಮತ್ತು ಶಿವಸೇನಾ ಟೀಕೆ

'ಅದಾನಿ ಸಮೂಹ ಕುರಿತು ಹೊಸ ಬೆಳವಣಿಗೆಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಕೇಂದ್ರ ಸರ್ಕಾರ, ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆಯಲಾಗಿದೆ' ಎಂದು ಕಾಂಗ್ರೆಸ್ ನಾಯಕ ಜೈರಾಂ ರಮೇಶ್ ಆರೋಪಿಸಿದ್ದಾರೆ.

'ಮಳೆಗಾಲದ ಅಧಿವೇಶನ ಮುಗಿದು ಕೇವಲ ಮೂರು ವಾರಗಳಷ್ಟೇ ಆಗಿದೆ. ಈಗ ಸರ್ಕಾರ ವಿಶೇಷ ಅಧಿವೇಶನ ಕರೆದಿರುವ ಉದ್ದೇಶ ಮಾಧ್ಯಮಗಳಲ್ಲಿ ಸುದ್ದಿಗಳ ನಿರ್ವಹಣೆಯ ಕಾರ್ಯತಂತ್ರವಾಗಿದೆ' ಎಂದು ಅವರು ಟೀಕಿಸಿದ್ದಾರೆ.

'ಆದರೆ, ಇದೆಲ್ಲದರ ಹೊರತಾಗಿಯೂ ಅದಾನಿ ಸಮೂಹದ ಕುರಿತಂತೆ ಜಂಟಿ ಸಂಸದೀಯ ಸಮಿತಿಯ ತನಿಖೆಗೆ (ಜೆಪಿಸಿ) ಸಂಸತ್ತಿನ ಹೊರಗೆ ಮತ್ತು ಒಳಗೆ ಧ್ವನಿ ಎತ್ತುವುದನ್ನು ನಿಲ್ಲಿಸುವುದಿಲ್ಲ' ಎಂದೂ ಹೇಳಿದ್ದಾರೆ.

ಹಬ್ಬದಂದೇ ಅಧಿವೇಶನ: 'ಭಾರತದ ಅತ್ಯಂತ ಪ್ರಮುಖ ಹಬ್ಬದ ದಿನವಾಗಿರುವ ಗಣೇಶ ಚತುರ್ಥಿಯಂದೇ ಸಂಸತ್ತಿನ ವಿಶೇಷ ಅಧಿವೇಶನ ಕರೆದಿರುವುದು ದುರದೃಷ್ಟ. ಇದು ಹಿಂದೂಗಳ ಭಾವನೆಗಳ ವಿರುದ್ಧವಾಗಿದೆ. ಈ ದಿನಾಂಕಗಳನ್ನು ಆಯ್ಕೆ ಮಾಡಿಕೊಂಡಿರುವುದು ಆಶ್ಚರ್ಯ ತಂದಿದೆ' ಎಂದು ಶಿವಸೇನಾ (ಯುಬಿಟಿ) ನಾಯಕಿ ಪ್ರಿಯಾಂಕಾ ಚತುರ್ವೇದಿ 'ಎಕ್ಸ್'ವೇದಿಕೆಯಲ್ಲಿ ಹೇಳಿದ್ದಾರೆ.

'ಕ್ಷಮಾದಾನ: ರಾಷ್ಟ್ರಪತಿ ತೀರ್ಮಾನವೇ ಅಂತಿಮ'

ನವದೆಹಲಿ (ಪಿಟಿಐ): ಮರಣ ದಂಡನೆಗೆ ಗುರಿಯಾದ ಅಪರಾಧಿಗಳಿಗೆ ಕ್ಷಮಾದಾನ ಅಥವಾ ಗಲ್ಲು ಶಿಕ್ಷೆ ವಿಧಿಸುವಂತೆ ರಾಷ್ಟ್ರಪತಿ ಹೊರಡಿಸುವ ಆದೇಶ ಪ್ರಶ್ನಿಸಿ ಯಾವುದೇ ನ್ಯಾಯಾಲಯಗಳಲ್ಲಿ ಮೇಲ್ಮನವಿ ಸಲ್ಲಿಸುವುದಕ್ಕೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮಸೂದೆಯಲ್ಲಿ ನಿರ್ಬಂಧ ಹೇರಲಾಗಿದೆ.

ಕ್ರಿಮಿನಲ್ ಪ್ರೊಸೀಜರ್ ಆ್ಯಕ್ಟ್ (ಅಪರಾಧ ಪ್ರಕ್ರಿಯಾ ಸಂಹಿತೆ) ಬದಲಿಗೆ ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಇತ್ತೀಚೆಗೆ ಈ ಮಸೂದೆ ಮಂಡಿಸಿದೆ. ಇದು ಕಾಯ್ದೆಯ ಸ್ವರೂಪ ಪಡೆದರೆ ರಾಷ್ಟ್ರಪತಿ ಆದೇಶದ ವಿರುದ್ಧ ಕೋರ್ಟ್‌ಗಳ ಮಧ್ಯಪ್ರವೇಶಕ್ಕೆ ಕಡಿವಾಣ ಬೀಳಲಿದೆ. ಅಲ್ಲದೇ, ಅಪರಾಧಿಗಳು ನ್ಯಾಯಾಂಗದ ಪರಿಹಾರ ಪಡೆಯಲು ಅವಕಾಶದ ಬಾಗಿಲು ಸಂಪೂರ್ಣವಾಗಿ ಮುಚ್ಚಲಿದೆ.

ಸಂವಿಧಾನದ 72ನೇ ವಿಧಿ ಅನ್ವಯ ಮರಣ ದಂಡನೆಗೆ ಗುರಿಯಾದ ಅಪರಾಧಿಗಳಿಗೆ ಕ್ಷಮಾದಾನ, ಶಿಕ್ಷೆಗೆ ವಿನಾಯಿತಿ ಅಥವಾ ಅಮಾನತಿನಲ್ಲಿಡುವುದು, ಕ್ಷಮೆ ಅಥವಾ ಶಿಕ್ಷೆಯನ್ನು ಬದಲಾಯಿಸುವ ಅಧಿಕಾರವು ರಾಷ್ಟ್ರಪತಿ ಅವರಿಗೆ ಸಂವಿಧಾನದತ್ತವಾಗಿ ನೀಡಲಾಗಿದೆ.

ಆದರೆ, ಹೊಸ ಮಸೂದೆಯ ಸೆಕ್ಷನ್ 473ರ ಅನ್ವಯ ರಾಷ್ಟ್ರಪತಿ ಪ್ರಕಟಿಸುವ ಆದೇಶ ಪ್ರಶ್ನಿಸಿ ನ್ಯಾಯಾಲಯಗಳಲ್ಲಿ ಅಪರಾಧಿಗಳು ಮೇಲ್ಮನವಿ ಸಲ್ಲಿಸಲು ಅವಕಾಶ ಇರುವುದಿಲ್ಲ ಎಂದು ವಿವರಿಸಲಾಗಿದೆ.

ಅಪರಾಧಿಯ ಕ್ಷಮಾದಾನಕ್ಕೆ ಸಂಬಂಧಿಸಿದಂತೆ ರಾಷ್ಟ್ರಪತಿ ಅಥವಾ ರಾಜ್ಯಪಾಲರು ಕೈಗೊಳ್ಳುವ ನಿರ್ಧಾರವು ನ್ಯಾಯಯುತವಾಗಿರಬೇಕು. ಆದರೆ, ಏಕಾಂತ ಬಂಧನ, ಕ್ಷಮದಾನ ಅರ್ಜಿಯ ಅನಗತ್ಯ ವಿಳಂಬವಾದರೆ ನ್ಯಾಯಾಲಯದ ಮೊರೆ ಹೋಗಬಹುದು ಎಂದು ಈ ಹಿಂದೆ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

ಮಣಿಪುರ: ಗುಂಡಿನ ಚಕಮಕಿ ಗಾಯಕ ಸೇರಿ ಮೂವರ ಸಾವು

ಪ್ರಜಾವಾಣಿ ವಾರ್ತೆ

ಇಂಫಾಲ್: ವಿಷ್ಣುಪುರ ಜಿಲ್ಲೆಯ ಖೋರೆಂಟಕ್ ಬೆಟ್ಟದ ತಪ್ಪಲು ಹಾಗೂ ಚುರಚಂದಪುರ ಜಿಲ್ಲೆಯ ಚಿಂಗ್ಫೈ, ಖೌಸಾಬಂಗ್ ಪ್ರದೇಶಗಳಲ್ಲಿ ಗುರುವಾರ ಬೆಳಿಗ್ಗೆ ಎರಡು ಗುಂಪುಗಳ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಕುಕಿ ಸಮುದಾಯದ ಗಾಯಕ ಮಂಗ್ಬೋಯ್ ಸೇರಿದಂತೆ ಮೂವರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕುಕಿ-ಜೋಮಿ ಬುಡಕಟ್ಟು ಸಮುದಾಯದ ಏಕತೆಗೆ ಕರೆ ನೀಡುವ ಹಾಡಿಗೆ ಹೆಸರು ವಾಸಿಯಾದ ಗಾಯಕ ಮತ್ತು ಇತರ ಇಬ್ಬರು ಗ್ರಾಮ ಸ್ವಯಂಸೇವಕರು ಮೃತಪಟ್ಟಿದ್ದಾರೆ. ಐದು ಮಂದಿ ಗಾಯಗೊಂಡಿದ್ದಾರೆ.

ಅಧಿಕಾರಿಗಳ ಪ್ರಕಾರ, ಹಲವು ದಿನಗಳ ವಿರಾಮ ಬಳಿಕ ಬುಧವಾರ ಸಂಜೆಯಿಂದ ಗುಂಡಿನ ದಾಳಿ ನಡೆದಿದೆ.

ತೀವ್ರ ಗಾಯಗೊಂಡಿದ್ದ ಮಂಗ್ಬೋಯ್ ಅವರನ್ನು ಮಿಜೋರಾಂ ಮೂಲಕ ಗುವಾಹಟಿಗೆ ಕರೆದೊಯ್ಯುವ ಮಾರ್ಗದಲ್ಲಿ ಮೃತಪಟ್ಟರೆ, ತೀವ್ರವಾಗಿ ಗಾಯಗೊಂಡು ಚುರಚಂದಪುರ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮತ್ತೊಬ್ಬ ವ್ಯಕ್ತಿ ಗುರುವಾರ ಸಾವಿಗೀಡಾಗಿದ್ದಾರೆ.

ಈ ನಡುವೆ ಸ್ಥಳೀಯ ಬುಡಕಟ್ಟು ನಾಯಕರ ವೇದಿಕೆ (ಐಟಿಎಲ್‌ಎಫ್) ತಕ್ಷಣದಿಂದ ಜಾರಿಗೆ ಬರುವಂತೆ ಚುರಚಂದಪುರದಲ್ಲಿ ಬಂದ್‌ಗೆ ಕರೆ ನೀಡಿದೆ. ನೀರು ಮತ್ತು ವೈದ್ಯಕೀಯ ಸೇವಾ ಸೇರಿದಂತೆ ಅಗತ್ಯ ಸೇವೆಗಳನ್ನು ಬಂದ್‌ನಿಂದ ವಿನಾಯಿತಿ ನೀಡಲಾಗಿದೆ ಎಂದು ಐಟಿಎಲ್‌ಎಫ್ ತಿಳಿಸಿದೆ.

'ಬಿಲ್ಕಿಸ್ ಪ್ರಕರಣ: ಅಪರಾಧಿ ದಂಡ ಪಾವತಿಸಿದ್ದು ಹೇಗೆ?'

ನವದೆಹಲಿ (ಪಿಟಿಐ): 'ಬಿಲ್ಕಿಸ್ ಬಾನು ಪ್ರಕರಣದಲ್ಲಿ ಬಿಡುಗಡೆಗೊಂಡವರ ಪೈಕಿ ಒಬ್ಬರು ಅಪರಾಧಿಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ದಂಡ ಪಾವತಿಸಲು ಸಾಧ್ಯವಾಗಿದ್ದು ಹೇಗೆ?' ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ಶಿಕ್ಷೆಯ ಅವಧಿ ಪೂರ್ಣಗೊಳ್ಳುವ ಮೊದಲೇ ಈ ಪ್ರಕರಣದ 11 ಅಪರಾಧಿಗಳನ್ನು ಬಿಡುಗಡೆ ಮಾಡಿರುವ ಗುಜರಾತ್ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಉಜ್ಜಲ್ ಭುಯಾನ್ ಅವರಿದ್ದ ವಿಭಾಗೀಯ ನ್ಯಾಯಪೀಠವು ಗುರುವಾರ ನಡೆಸಿತು.

'ಕ್ಷಮಾಪಣೆ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಯುತ್ತಿರುವುದು ಗಮನಕ್ಕೆ ಬಂದಿದ್ದರಿಂದ ದಂಡ ಪಾವತಿಸಲಾಗಿದೆಯೇ' ಎಂದು ಪ್ರಶ್ನಿಸಿತು. ಅಪರಾಧಿ ರಮೇಶ್ ರೂಪಾಭಾಯಿ ಚಂದನ ಪರ ಹಾಜರಿದ್ದ ಹಿರಿಯ ವಕೀಲ ಸಿದ್ಧಾರ್ಥ್ ಲೂತ್ರಾ, 'ಮುಂಬೈನ ವಿಚಾರಣಾ ಕೋರ್ಟ್‌ಗೆ ಅಪರಾಧಿಗಳು ದಂಡ ಪಾವತಿಸಿದ್ದಾರೆ' ಎಂದರು.

'ದಂಡ ಪಾವತಿಸುವುದು ಪ್ರಕರಣದ ಮೇಲೆ ಪರಿಣಾಮ ಬೀರುತ್ತದೆ ಎಂದು ಭಾವಿಸಿದ್ದೀರ? ಮೊದಲು ಇದಕ್ಕೆ ನೀವು ಅನುಮತಿ ಪಡೆಯಬೇಕು. ಆದರೆ, ಅನುಮತಿ ಪಡೆಯದೇ ಪಾವತಿಸಿದ್ದೀರಿ' ಎಂದು ಹೇಳಿತು.

'ದಂಡ ಪಾವತಿಸದಿರುವುದು ಅಪರಾಧಿಗಳ ಬಿಡುಗಡೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಆದರೆ, ದಂಡದ ವಿವಾದದಿಂದ ಮುಕ್ತರಾಗುವಂತೆ ತಾವೇ ಫಿರ್ಯಾದಿಗೆ ಸಲಹೆ ನೀಡಿದ್ದೆ' ಎಂದರು. ವಿಚಾರಣೆಯನ್ನು ಸೆ. 14ಕ್ಕೆ ಮುಂದೂಡಿತು.

'ಫಿಶಿಂಗ್': ಎಚ್ಚರದಿಂದಿರಲು ಸಿಜೆಐ ಸಲಹೆ

ನವದೆಹಲಿ(ಪಿಟಿಐ): 'ಫಿಶಿಂಗ್'ಗಾಗಿ ಸುಪ್ರೀಂಕೋರ್ಟ್ ಹೆಸರಿನಲ್ಲಿ ಸುಳ್ಳು ವೆಬ್‌ಸೈಟ್ ಸೃಷ್ಟಿಸಿ, ವಂಚಿಸುತ್ತಿರುವ ಬಗ್ಗೆ ಎಚ್ಚರ ವಹಿಸುವಂತೆ ವಕೀಲರು ಹಾಗೂ ಕಕ್ಷಿದಾರರಿಗೆ ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಗುರುವಾರ ಎಚ್ಚರಿಸಿದ್ದಾರೆ.

ಹಣಕಾಸು ವ್ಯವಹಾರ ನಡೆಸುವಾಗಲೂ ಹೆಚ್ಚು ಜಾಗರೂಕರಾಗಿರುವಂತೆ ಹೇಳಿದ್ದಾರೆ.

ಸಂವಿಧಾನದ 370ನೇ ವಿಧಿಯಡಿ ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದ ಕೇಂದ್ರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ವೇಳೆ ಚಂದ್ರಚೂಡ್ ಅವರು ಈ ಎಚ್ಚರಿಕೆ ನೀಡಿದರು.

'ಸುಳ್ಳು ವೆಬ್‌ಸೈಟ್ ಸೃಷ್ಟಿಸಿರುವುದು ಸುಪ್ರೀಂಕೋರ್ಟ್ ರಿಜಿಸ್ಟ್ರಿ ಗಮನಕ್ಕೆ ಬಂದಿದೆ. ಆದರೆ, ರಿಜಿಸ್ಟ್ರಿಯು ಯಾರ ವೈಯಕ್ತಿಕ, ಹಣಕಾಸಿಗೆ ಸಂಬಂಧಿಸಿದ ಅಥವಾ ಗೌಪ್ಯ ಮಾಹಿತಿಯನ್ನು ಕೇಳುವುದಿಲ್ಲ. ಸುಪ್ರೀಂಕೋರ್ಟ್‌ನ ಅಧಿಕೃತ ವೆಬ್‌ಸೈಟ್ (www.sci.gov.in) ಅನ್ನು ಖಚಿತಪಡಿಸಿಕೊಂಡ ನಂತರವಷ್ಟೇ ಮುಂದುವರಿಯಬೇಕು' ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ.

ವಿಶ್ವಾಸಾರ್ಹ ಸಂಸ್ಥೆಗಳ ಹೆಸರು ಬಳಸಿಕೊಂಡು ಸುಳ್ಳು ಸಂದೇಶ, ಇ–ಮೇಲ್‌ಗಳ ಮೂಲಕ ಲಿಂಕ್ ಕಳಿಸಿ, ಆ ಮೂಲಕ ನಡೆಸುವ ಮೋಸದ ವ್ಯವಹಾರವನ್ನು 'ಫಿಶಿಂಗ್' (Phishing) ಎನ್ನುತ್ತಾರೆ.

ಸಿಇಒ, ಅಧ್ಯಕ್ಷೆಯಾಗಿ ಜಯಾ ವರ್ಮಾ ಸಿನ್ಹಾ ನೇಮಕ

ರೈಲ್ವೆ ಮಂಡಳಿಗೆ ಮಹಿಳಾ ಸಾರಥ್ಯ

ನವದೆಹಲಿ (ಪಿಟಿಐ): ರೈಲ್ವೆ ಮಂಡಳಿಗೆ ಮೊದಲ ಮಹಿಳಾ ಸಿಇಒ ಮತ್ತು ಅಧ್ಯಕ್ಷರಾಗಿ ಜಯಾ ವರ್ಮಾ ಸಿನ್ಹಾ ಅವರನ್ನು ಸರ್ಕಾರ ಗುರುವಾರ ನೇಮಿಸಿ ಆದೇಶ ಹೊರಡಿಸಿದೆ.

ಇಂಡಿಯನ್ ರೈಲ್ವೆ ಮ್ಯಾನೇಜ್‌ಮೆಂಟ್ ಸರ್ವಿಸ್ (ಐಆರ್‌ಎಸ್) ಅಧಿಕಾರಿ ಹಾಗೂ ರೈಲ್ವೆ ಮಂಡಳಿಯ ಸದಸ್ಯರೂ ಆಗಿರುವ (ಕಾರ್ಯಾಚರಣೆ ಮತ್ತು ವ್ಯಾಪಾರ ಅಭಿವೃದ್ಧಿ) ಜಯಾ ವರ್ಮಾ ಸಿನ್ಹಾ ಅವರನ್ನು ಮಂಡಳಿಯ ಸಿಇಒ ಮತ್ತು ಅಧ್ಯಕ್ಷರಾಗಿ ನೇಮಕ ಮಾಡಲು ಸಂಪುಟದ ನೇಮಕಾತಿ ಸಮಿತಿ (ಎಸಿಸಿ) ಅನುಮೋದನೆ ನೀಡಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಅನಿಲ್ ಕುಮಾರ್ ಲಾಹೋಟಿ ಅವರಿಂದ ತೆರವಾಗುವ ಈ ಹುದ್ದೆಗೆ ಜಯಾ ಅವರು ಸೆಪ್ಟೆಂಬರ್ 1 ಅಥವಾ ನಂತರ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಅವರ ಅಧಿಕಾರಾವಧಿ 2024ರ ಆಗಸ್ಟ್ 31ರವರೆಗೂ ಇರಲಿದೆ.

ಜಯಾ ಅವರು ಅ. 1 ರಂದು ನಿವೃತ್ತರಾಗಲಿದ್ದಾರೆ. ಆದರೆ, ಅವರು ಅದೇ ದಿನ ಮರು ನೇಮಕವಾಗಲಿದ್ದಾರೆ. ಬಾಲೇಶ್ವರ ರೈಲ್ವೆ ದುರಂತದ ಸಂದರ್ಭದಲ್ಲಿ ಜಯಾ ಸಂಕೀರ್ಣ ಸಿಗ್ನಲಿಂಗ್ ವ್ಯವಸ್ಥೆಯ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದರು. ಈ ದುರಂತದಲ್ಲಿ ಸುಮಾರು 300 ಜನರು ಮೃತಪಟ್ಟಿದ್ದರು.

ಅಲಹಾಬಾದ್ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿನಿಯಾಗಿರುವ ಜಯಾ ಅವರು 1988ರಲ್ಲಿ ಭಾರತೀಯ ರೈಲ್ವೆ ಸಂಚಾರ ಸೇವೆ (ಐಆರ್‌ಟಿಎಸ್) ಅಧಿಕಾರಿಯಾಗಿ ಸೇವೆ ಆರಂಭಿಸಿದರು. ಅವರು ಉತ್ತರ, ಆಗ್ನೇಯ ಮತ್ತು ಪೂರ್ವ ರೈಲ್ವೆಯಲ್ಲೂ ಸೇವೆ ಸಲ್ಲಿಸಿದ್ದಾರೆ.

ಅವರು, ಬಾಂಗ್ಲಾದೇಶದ ಢಾಕಾದಲ್ಲಿ ನಾಲ್ಕು ವರ್ಷಗಳ ಕಾಲ ಭಾರತದ ಹೈ ಕಮಿಷನ್‌ಗೆ ರೈಲ್ವೆ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ.

ಪೂರ್ವ ರೈಲ್ವೆಯ ಸೀಲ್ಡಾ ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾಗಿಯೂ ಅವರು ಕಾರ್ಯ ನಿರ್ವಹಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಮತೀಯ ಮತ್ತು ಸಾಮಾಜಿಕ ಅಂಧಶ್ರದ್ಧೆ ಹಾಗೂ ಅಂಧಾಚಾರಗಳಿಂದ ಪಾರಾಗದಿದ್ದರೆ ನಾವು ಉದ್ಧಾರವಾಗುವುದಿಲ್ಲ.

–ಕುವೆಂಪು

ಸಣ್ಣ ನಗರಗಳನ್ನು ಮಾಲಿನ್ಯದಿಂದ ಕಾಪಾಡುವುದು ಸರ್ಕಾರದ ಜವಾಬ್ದಾರಿ

ಕರ್ನಾಟಕದ ಎರಡನೇ ಸ್ತರದ ನಗರಗಳಲ್ಲಿ ವಾಯು ಮಾಲಿನ್ಯ ಪ್ರಮಾಣವು 2030ರ ಹೊತ್ತಿಗೆ ಶೇಕಡ 40ರಷ್ಟು ಹೆಚ್ಚಳವಾಗಲಿದೆ ಎಂಬ ಎಚ್ಚರಿಕೆಯನ್ನು ವಿಜ್ಞಾನ, ತಂತ್ರಜ್ಞಾನ ಮತ್ತು ನೀತಿ ಅಧ್ಯಯನ ಕೇಂದ್ರವು (ಸಿಎಸ್‌ಟಿಇಪಿ) ನೀಡಿದೆ. ಮಾಲಿನ್ಯವನ್ನು ತಡೆಯಲು ಕೈಗೊಳ್ಳಬೇಕಿದ್ದ ಹಲವು ಕ್ರಮಗಳನ್ನು ಜಾರಿ ಮಾಡದಿರುವುದು ಇದಕ್ಕೆ ಕಾರಣ ಎಂದು ಹೇಳಿದೆ. 17 ರಾಜ್ಯಗಳ 75 ನಗರಗಳಲ್ಲಿ ನಡೆಸಿದ ಅಧ್ಯಯನದ ಆಧಾರದಲ್ಲಿ ಸಿಎಸ್‌ಟಿಇಪಿ ಈ ಎಚ್ಚರಿಕೆ ನೀಡಿದೆ. ದಾವಣಗೆರೆ, ಕಲಬುರಗಿ ಮತ್ತು ಹುಬ್ಬಳ್ಳಿ-ಧಾರವಾಡವನ್ನು ಅತಿಯಾದ ವಾಯು ಮಾಲಿನ್ಯ ಇರುವ ನಗರಗಳು ಎಂದು ವರ್ಗೀಕರಿಸಲಾಗಿದೆ. ಮಾಲಿನ್ಯದ ಮೂಲಗಳು ಹೊರವಲಯದಲ್ಲಿ ಇರುವ ನಗರಗಳ ಪೈಕಿ ದಾವಣಗೆರೆಯಲ್ಲಿ ಮಾಲಿನ್ಯ ಕಣಗಳ ಹೊರಸೂಸುವಿಕೆ ಪ್ರಮಾಣ ಅತಿ ಹೆಚ್ಚು ಇದೆ. ನಗರದ ಹೊರವಲಯದಲ್ಲಿ ಕಾರ್ಖಾನೆಗಳು ಹೆಚ್ಚು ಇರುವುದು ಇದಕ್ಕೆ ಕಾರಣ. ಸ್ಮಾರ್ಟ್ ಏರ್ ಎಂಬ ಸಂಸ್ಥೆ ನಡೆಸಿದ ಇನ್ನೊಂದು ಅಧ್ಯಯನವು ಮಡಿಕೇರಿ, ಮಂಗಳೂರು, ಬಾಗಲಕೋಟೆ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ನಗರಗಳನ್ನು ಅತಿ ಕಡಿಮೆ ಮಾಲಿನ್ಯದ 20 ನಗರಗಳ ಪಟ್ಟಿಯಲ್ಲಿ ಸೇರಿಸಿರುವುದು ಆಸಕ್ತಿಕರವಾದ ಅಂಶವಾಗಿದೆ. ಈ ಯಾವ ನಗರಗಳಲ್ಲಿಯೂ ಮಾಲಿನ್ಯ ಕಣಗಳ ಪ್ರಮಾಣವು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ನಿಗದಿ ಮಾಡಿದ ಮಾನದಂಡಕ್ಕಿಂತ ಕಡಿಮೆ ಇಲ್ಲ. ದೇಶದಲ್ಲಿ ಅತ್ಯಂತ ಕಡಿಮೆ ವಾಯು ಮಾಲಿನ್ಯದ ನಗರ ಎಂದು ಇಂಫಾಲ್ ಅನ್ನು ಗುರುತಿಸಲಾಗಿದೆ. ಈ ನಗರದಲ್ಲಿ ಕೂಡ ಮಾಲಿನ್ಯ ಪ್ರಮಾಣವು ನಿಗದಿತ ಮಟ್ಟಕ್ಕಿಂತ ಮೂರು ಪಟ್ಟು ಹೆಚ್ಚು ಇದೆ. ಎರಡನೇ ಅತಿ ಕಡಿಮೆ ಮಾಲಿನ್ಯದ ನಗರ ಎಂದು ಗುರುತಿಸಲಾದ ಮಡಿಕೇರಿಯಲ್ಲಿ ಮಾಲಿನ್ಯದ ಪ್ರಮಾಣವು ಡಬ್ಲ್ಯುಎಚ್‌ಒ ನಿಗದಿ ಮಾಡಿದ ಪ್ರಮಾಣಕ್ಕಿಂತ ಮೂರು ಪಟ್ಟಿಗಿಂತಲೂ ಹೆಚ್ಚು ಇದೆ.



ಎರಡನೇ ಸ್ತರದ ನಗರಗಳನ್ನು ವಾಯು ಮಾಲಿನ್ಯದಿಂದ ರಕ್ಷಿಸಲು ಸರ್ಕಾರ ತ್ವರಿತ ಕ್ರಮಗಳನ್ನು ಕೈಗೊಳ್ಳದೇ ಹೋದರೆ, ಅತಿಯಾದ ವಾಯು ಮಾಲಿನ್ಯದಿಂದ ಜೀವನದ ಗುಣಮಟ್ಟ ಕುಸಿದಿರುವ ಬೃಹತ್ ನಗರಗಳಂತೆಯೇ ಈ ನಗರಗಳೂ ಆಗಿಬಿಡುವ ಸಾಧ್ಯತೆ ಇದೆ

ಎರಡನೇ ಸ್ತರದ ನಗರಗಳಲ್ಲಿ ವಾಯು ಮಾಲಿನ್ಯವು ಹೆಚ್ಚುವುದಕ್ಕೆ ಕಾರಣವಾದ ಹಲವು ಅಂಶಗಳು ಇವೆ. ನಗರಾಭಿವೃದ್ಧಿ ಮತ್ತು ಪುನಶ್ಚೇತನದ ಚರ್ಚೆಯಿಂದ ಈ ನಗರಗಳನ್ನು ಸುದೀರ್ಘ ಕಾಲ ಹೊರಗೇ ಇರಿಸಿದ್ದು ಪ್ರಮುಖವಾದ ಕಾರಣ. ಮೂಲಸೌಕರ್ಯ ಮತ್ತು ಸುಸ್ಥಿರ ವಾತಾವರಣಕ್ಕೆ ಸಂಬಂಧಿಸಿದ ಕ್ಷೇತ್ರಗಳಿಗೆ ಇತ್ತೀಚಿನ ವರ್ಷಗಳಲ್ಲಷ್ಟೇ ಗಮನ ಹರಿಸಲಾಗಿದೆ. ಕರ್ನಾಟಕದಲ್ಲಿ ಅಭಿವೃದ್ಧಿ ಎಂಬುದು ಬೆಂಗಳೂರು ಕೇಂದ್ರಿತವೇ ಆಗಿದೆ. ಹಾಗಾಗಿ, ಇತರ ನಗರಗಳಲ್ಲಿ ಸಾರ್ವಜನಿಕ ಸಾರಿಗೆಗೆ ಹೆಚ್ಚಿನ ಗಮನವನ್ನೇ ನೀಡಲಾಗಿಲ್ಲ. ಇದರಿಂದಾಗಿ, ಸಣ್ಣ ನಗರಗಳಲ್ಲಿ ಖಾಸಗಿ ವಾಹನಗಳ ಸಂಖ್ಯೆ ಹೆಚ್ಚಳವಾಯಿತು ಮತ್ತು ಅದು ವಾಯು ಮಾಲಿನ್ಯ ಹಾಗೂ ಸಂಚಾರ ದಟ್ಟಣೆಗೆ ಕಾರಣವಾಯಿತು. ನಿರ್ಮಾಣ ಚಟುವಟಿಕೆಗಳ ಹೆಚ್ಚಳ ಮತ್ತು ಕಾರ್ಖಾನೆಗಳ ಮಾಲಿನ್ಯದ ಮೇಲೆ ನಿಯಂತ್ರಣ ಇಲ್ಲದಿರುವಿಕೆ ಇತರ ಕಾರಣಗಳು. ಮಡಿಕೇರಿ ಮತ್ತು ಪಶ್ಚಿಮ ಘಟ್ಟಗಳ ಇತರ ಪ್ರದೇಶಗಳಲ್ಲಿ ಪ್ರವಾಸೋದ್ಯಮದ ಅತಿಯಾದ ಬೆಳವಣಿಗೆಯು ದೊಡ್ಡ ಬೆದರಿಕೆಯಾಗಿ ಪರಿವರ್ತನೆಯಾಗಿದೆ. ಮನುಷ್ಯನ ಓಡಾಟ ಮತ್ತು ವಾಹನ ಸಂಚಾರವು ಪಶ್ಚಿಮ ಘಟ್ಟಗಳ ನಾಜೂಕು ಪರಿಸರ ವ್ಯವಸ್ಥೆಗೆ ಭರಿಸಲು ಅಸಾಧ್ಯ ಎನಿಸುವಷ್ಟು ಹೆಚ್ಚಳವಾಗಿದೆ. ಇದು ವಾಯು ಮಾಲಿನ್ಯ ಹೆಚ್ಚಳಕ್ಕೂ ಕಾರಣವಾಗಿದೆ.

ಮಾಲಿನ್ಯವನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳುವುದಕ್ಕಾಗಿ ಸಿಎಸ್‌ಟಿಇಪಿ ಕೆಲವು ಸಲಹೆಗಳನ್ನು ನೀಡಿದೆ. ಕಲ್ಲಿದ್ದಲು ಬದಲಿಗೆ ಶುದ್ಧ ಇಂಧನವನ್ನು ಬಳಸಬೇಕು; ರಸ್ತೆ ಮೂಲಸೌಕರ್ಯವನ್ನು ಉತ್ತಮಪಡಿಸಬೇಕು; ರಸ್ತೆಗಳು ಹಾಳಾಗುವುದನ್ನು ತಡೆಯುವಂತಹ ಸಾಮಗ್ರಿಗಳನ್ನು ಬಳಸಬೇಕು; ಕಾರ್ಖಾನೆಗಳು ಮತ್ತು ವಾಹನಗಳ ಮಾಲಿನ್ಯ ಹೊರಸೂಸುವಿಕೆ ನಿಯಂತ್ರಣದಲ್ಲಿ ಇರಿಸಲು ಕಠಿಣ ನಿಯಮಗಳನ್ನು ರೂಪಿಸಬೇಕು ಎಂಬುದು ಆ ಸಲಹೆಗಳಾಗಿವೆ. ಈ ಎಲ್ಲವುಗಳನ್ನು ಜಾರಿಗೊಳಿಸಿದರೆ ಮಾಲಿನ್ಯವು ಶೇ 35ರಷ್ಟು ತಗ್ಗಬಹುದು ಎಂದು ಅಂದಾಜಿಸಲಾಗಿದೆ. ಅಲ್ಪಾವಧಿ ಮತ್ತು ದೀರ್ಘಾವಧಿಯಲ್ಲಿ ಮಾಲಿನ್ಯವನ್ನು ತಗ್ಗಿಸುವುದಕ್ಕಾಗಿ ಈ ಎಲ್ಲ ಕ್ರಮಗಳನ್ನು ಸರ್ಕಾರವು ತಕ್ಷಣದಿಂದಲೇ ಜಾರಿಗೆ ತರಬೇಕು. ಸರ್ಕಾರವು ತ್ವರಿತವಾಗಿ ಕ್ರಮ ಕೈಗೊಳ್ಳದೇ ಇದ್ದರೆ ನಮ್ಮ ಎರಡನೇ ಸ್ತರದ ನಗರಗಳನ್ನು ವಾಯು ಮಾಲಿನ್ಯದಿಂದ ರಕ್ಷಿಸುವುದು ಮುಂದೆ ಕಷ್ಟವಾಗಬಹುದು. ಇಲ್ಲದೇಹೋದರೆ, ಈ ನಗರಗಳು ಕೂಡ ಬೆಂಗಳೂರಿನಂತೆಯೇ ಆಗಬಹುದು. ಅತಿಯಾದ ವಾಯು ಮಾಲಿನ್ಯದಿಂದಾಗಿ ಬೆಂಗಳೂರಿನಲ್ಲಿ ಜೀವನದ ಗುಣಮಟ್ಟವೇ ಕುಸಿದು ಹೋಗಿದೆ. ಹೀಗೆ ಆಗದಂತೆ ಎರಡನೇ ಸ್ತರಗಳ ನಗರಗಳನ್ನು ಕಾಪಾಡಬೇಕು.

ದಿನದ ಟ್ವೀಟ್

ಪರಿಸರವನ್ನು ಕಡೆಗಣಿಸದಿರೋಣ

ಸರಿಸುಮಾರು 100 ವರ್ಷಗಳಲ್ಲಿ ಅತ್ಯಂತ ಕಡಿಮೆ ಮಳೆಯ ಆಗಸ್ಟ್ ತಿಂಗಳು ಇದಾಗಿತ್ತು. ರೈತರಿಗೆ ಈಗ ಬೇಸರದ ಕ್ಷಣಗಳು. ಇದು ಅವರ ಉತ್ಸಾಹವನ್ನು ಕೂಡ ಬರಿದು ಮಾಡುತ್ತಿದೆ. ಜೀವನೋಪಾಯಕ್ಕಾಗಿ ನಗರಗಳಿಗೆ ಹೆಚ್ಚಿನ ಜನರು ಹೋಗುವ ಸಂಭವವಿದೆ. ಒಟ್ಟಾರೆ, ಈ ವರ್ಷದಲ್ಲಿ ಮುಂದೆ ಕಷ್ಟದ ದಿನಗಳು ಎದುರಾಗಲಿವೆ.

ಹರಿಪ್ರಸಾದ್ ನಾಡಿಗ್, ಉದ್ಯಮಿ

ಕಲಿಸಬೇಕಿದೆ ನೈತಿಕ ಮೌಲ್ಯ

ಪಠ್ಯಕ್ರಮವನ್ನು ಮರುರೂಪಿಸುವ ಹೆಸರಿನಲ್ಲಿ, ತಂತ್ರಜ್ಞಾನ ಆಧಾರಿತ ಕೋರ್ಸ್‌ಗಳನ್ನು ಜಾರಿಗೆ ತರಲು ಪ್ರಯತ್ನಿಸುತ್ತಿರುವ ಆಡಳಿತ ಮಂಡಳಿಗಳು ಶಾಲಾ ಮಕ್ಕಳಿಗೆ ನೈತಿಕ ಮೌಲ್ಯಗಳನ್ನು ಕಲಿಸಲು ಮರೆಯುತ್ತಿವೆ. ಉತ್ತಮ ಪ್ರಜೆಯಾಗುವುದು ಹೇಗೆಂದು ಮಕ್ಕಳಿಗೆ ಕಲಿಸುವುದಿಲ್ಲ- ಮನೆಯಲ್ಲಾಗಲಿ, ಶಾಲೆಯಲ್ಲಾಗಲಿ.

ವಿದ್ಯಾ ನಾಗಭೂಷಣ್

ಕಿಡಿನುಡಿ

ಮಾನ್ಯ ಪ್ರಧಾನಿ ಅವರೇ, ನಿಮ್ಮ ನೇತೃತ್ವದ ಕೇಂದ್ರ ಸರ್ಕಾರವು ಬಹಳಷ್ಟು ಮೀನಮೇಷ ಎಣಿಸಿದ ನಂತರ ಅಂತಿಮವಾಗಿ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ₹ 200 ಕಡಿಮೆ ಮಾಡಿ ಘೋಷಣೆ ಮಾಡಿದೆ. ಆದರೆ, ಮೇಲ್ನೋಟಕ್ಕೆ ಇದರಲ್ಲಿ ಕೇಂದ್ರದ ಪಾಲು ಏನೂ ಇಲ್ಲ ಎನ್ನುವುದು ನಿಚ್ಚಳಗೊಂಡಿದೆ. 'ಕಾರ್ಪೊರೇಟ್ ಹೊಣೆಗಾರಿಕೆ'ಯ ರೀತಿ ತೈಲ ಕಂಪನಿಗಳೇ ಈ ವೆಚ್ಚವನ್ನು ಭರಿಸಲಿವೆ ಎಂದು ನಿಮ್ಮದೇ ಮಂತ್ರಿಮಂಡಲದ ಸಚಿವರು ಹೇಳುವ ಮೂಲಕ ಅದನ್ನು ಒಪ್ಪಿಕೊಂಡಿದ್ದಾರೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಮಂಗಳವಾರ, 1-9-1998

• ಕೆಲಸಕ್ಕೆ ಬನ್ನಿ: ಕಾಲೇಜು ಶಿಕ್ಷಕರಿಗೆ ಸರ್ಕಾರದ ಕರೆ

ನವದೆಹಲಿ, ಆ. 31 (ಪಿಟಿಐ)– ವಿಶ್ವವಿದ್ಯಾಲಯ ಹಾಗೂ ಕಾಲೇಜು ಶಿಕ್ಷಕರು ಮುಷ್ಕರವನ್ನು ನಿಲ್ಲಿಸಿ ಕೆಲಸಕ್ಕೆ ಮರಳುವಂತೆ ಸರ್ಕಾರ ಇಂದು ಮನವಿ ಮಾಡಿದೆ.

ಮೂರು ವಾರಗಳಿಂದ ನಡೆಯುತ್ತಿರುವ ಮುಷ್ಕರವನ್ನು ಇನ್ನೂ ಮುಂದುವರಿಸುವ ಶಿಕ್ಷಕರ ನಿರ್ಧಾರಕ್ಕೆ ಸರ್ಕಾರದ ಪ್ರಕಟಣೆ ವಿಷಾದ ವ್ಯಕ್ತಪಡಿಸಿದೆ.

ಮಾನವ ಸಂಪನ್ಮೂಲ ಖಾತೆ ಸಚಿವ ಮುರಳಿ ಮನೋಹರ ಜೋಷಿ ಅವರು ಶಿಕ್ಷಕ ಸಮುದಾಯದೊಡನೆ ಮಾತುಕತೆ ನಡೆಸಿದ ಮೇಲೆ ವೇತನ ಪರಿಷ್ಕರಣೆಯಲ್ಲಿ ಸಾಕಷ್ಟು ಬದಲಾವಣೆ ಮಾಡಲಾಗಿದೆ ಎಂದು ತಿಳಿಸಿದೆ.

ರಾಜ್ಯದಲ್ಲಿ ಎಚ್ಚರಿಕೆ (ಬೆಂಗಳೂರು ವರದಿ): ಕಳೆದ ಇಪ್ಪತ್ತೊಂದು ದಿನಗಳಿಂದ ಚಳವಳಿ ನಡೆಸುತ್ತಿರುವ ರಾಜ್ಯದ ಕಾಲೇಜು ಶಿಕ್ಷಕರು ಕೂಡಲೇ ಚಳವಳಿಯನ್ನು ನಿಲ್ಲಿಸದೇ ಇದ್ದಲ್ಲಿ ಅವರ ವಿರುದ್ಧ ಸರ್ಕಾರ ಕಠಿಣ ಕ್ರಮ ಜರುಗಿಸುವುದು ಅನಿವಾರ್ಯವಾಗುತ್ತದೆ ಎಂದು ಉನ್ನತ ಶಿಕ್ಷಣ ಸಚಿವ ಬಸವರಾಜ್ ಪಾಟೀಲ್ ಅಟ್ಟೂರು ಇಂದು ಎಚ್ಚರಿಸಿದರು

'ಶಿಕ್ಷಕರ ವಿರುದ್ಧ ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆ (ಎಸ್ಮಾ) ಬಳಸುವ ವಿಚಾರದಲ್ಲಿ ಸರ್ಕಾರ ಇನ್ನೂ ತೀರ್ಮಾನಿಸಿಲ್ಲ. ಚಳವಳಿ ರಾಷ್ಟ್ರದಾದ್ಯಂತ ನಡೆಯುತ್ತಿರುವುದರಿಂದ ಈ ವಿಚಾರದಲ್ಲಿ ಕೇಂದ್ರದ ಸೂಚನೆಗಾಗಿ ಕಾಯುತ್ತಿದ್ದೇವೆ' ಎಂದು ಹೇಳಿದರು.

• ಬಾಗೂರು- ನವಿಲೆ ದೌರ್ಜನ್ಯ ತನಿಖೆಗೆ ಗಣ್ಯರ ನೇಮಕ

ಹಾಸನ, ಆ. 31– ಬಾಗೂರು- ನವಿಲೆ ಸುರಂಗ ಸಂತ್ರಸ್ತ ಹಳ್ಳಿಗಳ ಗ್ರಾಮಸ್ಥರ ಮೇಲೆ ಪೊಲೀಸರು ನಡೆಸಿದ ದೌರ್ಜನ್ಯ ಪ್ರಕರಣದ ವಿಚಾರಣೆಗೆ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಎಸ್.ಎನ್.ಎಸ್. ಮೂರ್ತಿ ಮತ್ತು ಟಿ.ಕೆ. ನಾಯರ್ ಅವರನ್ನು ಮಾನವ ಹಕ್ಕು ಆಯೋಗ ನೇಮಿಸಿದೆ.

ಜುಲೈ 20 ಹಾಗೂ 21ರಂದು ಬಾಗೂರು, ವಡ್ಡರಹಳ್ಳಿ, ಗೊಲ್ಲರಹೊಸಳ್ಳಿ, ದ್ಯಾವೇನಹಳ್ಳಿ, ಚೌಡೇನಹಳ್ಳಿ, ಓಬಳಾಪುರ, ಬಿ. ಹೊನ್ನೇನಹಳ್ಳಿಗಳಲ್ಲಿ ಪೊಲೀಸರು ಮನೆ ಮನೆಗಳಿಗೆ ನುಗ್ಗಿ ಹೆಂಗಸರು, ಮಕ್ಕಳು, ವಯೋವೃದ್ಧರೆನ್ನದೆ ಸಿಕ್ಕವರನ್ನೆಲ್ಲಾ ಥಳಿಸಿ, ದೌರ್ಜನ್ಯವೆಸಗಿದ್ದನ್ನು ಅಖಿಲ ಭಾರತ ಕಿಸಾನ್ ಸಭಾ, ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಎ) ಮತ್ತು ಕಾಂಗ್ರೆಸ್ ಪಕ್ಷ ಹಾಗೂ ಖಾಸಗಿ ವ್ಯಕ್ತಿಗಳು ಮಾನವ ಹಕ್ಕು ಆಯೋಗಕ್ಕೆ ದೂರು ನೀಡಿದ್ದರು.

ನಡೆಯಲಿದೆ ಜ್ವಾಲಾಬುಗ್ಗೆಯ ಅಧ್ಯಯನ, ನಮಗೂ ಎಟುಕಲಿದ್ದಾನೆ ರವಿಮಾಮ

ಅನಿಲ ದೈತ್ಯನ ಮುಂದೆ ಆದಿತ್ಯ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಗ್ರಹಣವಿರಲಿ, ಇಲ್ಲದಿರಲಿ ಸೌರಮಂಡಲದ ಯಜಮಾನನಾದ ಸೂರ್ಯನನ್ನು ಹತ್ತಿರದಿಂದ ಬರಿಗಣ್ಣಿನಲ್ಲಿ ಬಹಳ ಹೊತ್ತು ಗಮನಿಸುವುದಾಗಲೀ ಛಾಯಾಚಿತ್ರ ತೆಗೆಯುವುದಾಗಲೀ ಯಾವುದೇ ಗಗನನೌಕೆ ಬಳಸಿ ತೀರಾ ಹತ್ತಿರ ಸುಳಿಯುವುದಾಗಲೀ ಆಗದ ಮಾತು. ಸೂರ್ಯನ ವಾತಾವರಣದ ಅಧ್ಯಯನಕ್ಕಾಗಿ ಸಜ್ಜಾಗಿರುವ ಆದಿತ್ಯ ಎಲ್–1 ಎಂಬ ಮಹತ್ವಾಕಾಂಕ್ಷಿ ಯೋಜನೆಯಿಂದಾಗಿ ಸೂರ್ಯನನ್ನು ಇಪ್ಪತ್ತನಾಲ್ಕು ಗಂಟೆಯೂ ಹತ್ತಿರದಿಂದ ನೋಡುವುದು, ಸೂರ್ಯನ ಕಿರೀಟ (ಕೊರೋನಾ), ಅಯಸ್ಕಾಂತೀಯ ಗುಣ, ಚಿಮ್ಮುವ ಜ್ವಾಲಾಬುಗ್ಗೆ, ಬೀಸಿಬರುವ ಸೌರ ಮಾರುತಗಳನ್ನು ವಿವಿಧ ತರಂಗಾಂತರಗಳಲ್ಲಿ ವಿವರವಾಗಿ ಅಭ್ಯಸಿಸುವುದು ಸಾಧ್ಯವಾಗಲಿದೆ.

ಚಂದ್ರಯಾನ- 3ರ ಯಶಸ್ಸಿನ ಬೆನ್ನಲ್ಲೇ ಇಸ್ರೊ ಈಗ ಸೂರ್ಯನತ್ತ ಮುಖ ಮಾಡಿದೆ. 1,500 ಕಿಲೊ ಗ್ರಾಂ ತೂಕದ ಸೂರ್ಯ ವೀಕ್ಷಣಾಲಯ ಆದಿತ್ಯ ಎಲ್–1, ಪಿಎಸ್‌ಎಲ್‌ವಿ- ಎಕ್ಸ್‌ಟ್ರಾಲಾರ್ಜ್ ರಾಕೆಟ್‌ನಲ್ಲಿ ಕೂತು, ಭೂಮಿಯಿಂದ ಹದಿನೈದು ಲಕ್ಷ ಕಿ.ಮೀ. ದೂರದಲ್ಲಿರುವ ಜಾಗಕ್ಕೆ (ಲಗ್ರಾಂಜಿಯನ್ ಬಿಂದು 1) ನೂರಿಪ್ಪತ್ತು ದಿನಗಳ ಪಯಣ ಪ್ರಾರಂಭಿಸಲಿದೆ. ಅಲ್ಲಿಗೆ ತಲುಪಿದ ಮೇಲೆ ಸೂರ್ಯನ ಎದುರಿಗೆ ಕೆಳಎತ್ತರದ ಕಕ್ಷೆಯಲ್ಲಿ (ಹ್ಯಾಲೊ ಆರ್ಬಿಟ್) ಸುಮಾರು 5 ವರ್ಷ ಸುತ್ತುವ ಆದಿತ್ಯ, ಭೂಮಿಗೆ ಸಮೀಪದ ಬಾಹ್ಯಾಕಾಶದ ವಾಯುಗುಣ, ಕೊರೋನಾದಿಂದ ಚಿಮ್ಮಿ ಬರುವ ಜ್ವಾಲಾಬುಗ್ಗೆಗಳ ಉಗಮದ ಬಗ್ಗೆ ಖಚಿತ ಮಾಹಿತಿ ನೀಡಲಿದೆ.

ಸೂರ್ಯನ ಪ್ರಭೆ ಮತ್ತು ಶಾಖ ಸದಾಕಾಲ ಒಂದೇ ರೀತಿ ಇರುವುದಿಲ್ಲ. ಹೈದನೊಬ್ಬ ಬಾಯಲ್ಲಿ ಪೆಟ್ರೋಲ್ ತುಂಬಿಕೊಂಡು ಪುರ್ ಅಂತ ಮೇಲಕ್ಕೆ ಉಗುಳಿ ಅದಕ್ಕೆ ಬೆಂಕಿ ತಗುಲಿಸಿ ಭುಗ್ಗೆಂದು ಜ್ವಾಲೆ ಹೊಮ್ಮಿಸುವುದನ್ನು ನಾವು ನೋಡಿದ್ದೇವೆ. ಹಾಗೆಯೇ ಸೂರ್ಯನೂ ಆಗಾಗ ಜ್ವಾಲೆಯನ್ನು ಕಕ್ಕುತ್ತಾನೆ. ಆಗ ಅತಿ ಶಕ್ತಿಶಾಲಿ ಪ್ರೋಟಾನ್ ಪ್ರವಾಹ ಹೊಮ್ಮುತ್ತದೆ. ಅದಕ್ಕೆ ಕಾಂತಶಕ್ತಿಯೂ ಹೆಚ್ಚೇ ಇರುತ್ತದೆ. ಚಂಡಮಾರುತದಂತೆ ಚಿಮ್ಮಿ ಬರುವ ಜ್ವಾಲಾ ಬುಗ್ಗೆಗಳನ್ನು ಸೋಲಾರ್ ಫ್ಲೇರ್ ಎನ್ನುತ್ತಾರೆ. ಈ ಬುಗ್ಗೆ ಸೂರ್ಯನಿಂದ ಚಿಮ್ಮಿ ಯಾವ ದಿಕ್ಕಿಗಾದರೂ ಸಾಗಿ ಹೋಗಿ ಅಲ್ಲಿನ ಆಕಾಶಕಾಯಗಳ ಮೇಲೆ ಅಪ್ಪಳಿಸಬಹುದು. ಭೂಮಿಗೂ ಬೀಸಿ ಬರಬಹುದು. ಜೀವಿಗಳಿಗೆ ಏನೂ ಆಗದಂತೆ ರಕ್ಷಾ ಕವಚವಿದೆ. ಆದರೆ ಭೂಮಿಗೆ ಹೊದೆಸಿದಂತಿರುವ ಕಾಂತಶಕ್ತಿ ಏರುಪೇರಾಗಬಹುದು. ಭೂಮಿಯ ಹಗಲಿನ ಭಾಗದಲ್ಲಿರುವ ವಿದ್ಯುತ್ ಗ್ರಿಡ್‌ಗಳು ಕುಸಿಯಬಹುದು. ಎಲೆಕ್ಟ್ರಿಕ್ ವಸ್ತುಗಳು ಹಾಳಾಗಬಹುದು. ಭೂಮಿಯನ್ನು ಸುತ್ತುತ್ತಿರುವ ಉಪಗ್ರಹಗಳು ನಾಶವಾಗಬಹುದು. ಜಿಪಿಎಸ್ ವ್ಯವಸ್ಥೆ ಏರುಪೇರಾಗಬಹುದು.

ಹನ್ನೊಂದು ವರ್ಷಗಳಿಗೊಮ್ಮೆ ಸೂರ್ಯ ರೊಚ್ಚಿಗೇಳುತ್ತಾನೆ. 1859 ಮತ್ತು 1921ರಲ್ಲಿ ಸೂರ್ಯನಿಂದ ಬೀಸಿಬಂದ ಸೌರ ಮಾರುತದ ಶಕ್ತಿ ಅದೆಷ್ಟಿತ್ತೆಂದರೆ, ಅಮೆರಿಕ, ಕೆನಡಾದಲ್ಲಿ ಟೆಲಿಗ್ರಾಫ್ ಕಚೇರಿಗಳು ಹೊತ್ತಿ ಉರಿದಿದ್ದವು.

ಬಾಹ್ಯಾಕಾಶದಲ್ಲಿ ಸೂರ್ಯ ಮತ್ತು ಭೂಮಿಯ ನಡುವೆ ಸಮತಲದಲ್ಲಿ ನಿಂತು ಸೂರ್ಯನನ್ನು ನೋಡಲು ಇರುವ ಅನುಕೂಲಕರ ಬಿಂದುಗಳನ್ನು ಲಗ್ರಾಂಜಿಯನ್ ಬಿಂದು ಎನ್ನುತ್ತಾರೆ. ಲಗ್ರಾಂಜಿಯನ್ ಬಿಂದುವಿನಲ್ಲಿ ಸೂರ್ಯ ಮತ್ತು ಭೂಮಿಯ ಗುರುತ್ವಾಕರ್ಷಣ ಬಲಗಳು ಅಲ್ಲಿಗೆ ತೆರಳುವ ಯಾವುದೇ ಉಪಗ್ರಹ ಅಥವಾ ಸಣ್ಣ ನೌಕೆಯನ್ನು ಸಮತೋಲನದಲ್ಲಿ ಇರಿಸುತ್ತವೆ. ಇಲ್ಲಿ ವೀಕ್ಷಣಾಸಾಧನ ನಿಲ್ಲಿಸಿದರೆ ಇಂಧನದ ಬಳಕೆ ಕಡಿಮೆ ಇರುತ್ತದೆ. ಬಾಹ್ಯಾಕಾಶದಲ್ಲಿ ಒಟ್ಟು ಐದು ಲಗ್ರಾಂಜಿಯನ್ ಬಿಂದುಗಳಿವೆ. ಇವುಗಳಲ್ಲಿ ಎಲ್–1 ಭೂಮಿ ಮತ್ತು ಸೂರ್ಯನ ನಡುವೆ ಒಂದೇ ಸರಳರೇಖೆಯಲ್ಲಿದೆ. ಸದ್ಯಕ್ಕೆ ಎಲ್-2ನಲ್ಲಿ ಜೇಮ್ಸ್ ವೆಬ್ ಟೆಲಿಸ್ಕೋಪ್ ಠಿಕಾಣಿ ಹೂಡಿದೆ.

ಸೂರ್ಯಾಧ್ಯಯನದ ಭಾರತದ ಪ್ರಥಮ ಬಾಹ್ಯಾಕಾಶ ಯೋಜನೆ ಆದಿತ್ಯ ಎಲ್–1 ವೀಕ್ಷಣಾಲಯದಲ್ಲಿ ಏಳು ಉಪಕರಣಗಳಿವೆ (ಪೇಲೋಡ್). ನಾಲ್ಕು ನೇರವಾಗಿ ಸೂರ್ಯನನ್ನು ದಿಟ್ಟಿಸಿದರೆ ಉಳಿದವು ಲಗ್ರಾಂಜಿಯನ್ ಬಿಂದುವಿನತ್ತ ಸೂರ್ಯನಿಂದ ಹರಿದುಬರುವ ಕಣ ಮತ್ತು ಕ್ಷೇತ್ರಗಳನ್ನು ಆಯಾ ಕ್ಷಣದಲ್ಲೇ ಅಭ್ಯಸಿಸಿ ವರದಿ ನೀಡುತ್ತವೆ. ಸೂರ್ಯನ ಕೊರೋನಾ ವೀಕ್ಷಿಸಲು ವಿಸಿಬಲ್ ಎಮಿಶನ್ ಲೈನ್ ಕೊರೋನಾಗ್ರಾಫ್, ಸೂರ್ಯನ ಕಾಂತ ಶಕ್ತಿಯನ್ನು ಅಳೆಯಲು ಶಕ್ತಿಶಾಲಿ ಮ್ಯಾಗ್ನೆಟೊಮೀಟರ್, ಪ್ರಖರ ಪ್ರತಿಫಲನ ನೀಡುವ ವಿಶಾಲ ಕನ್ನಡಿಗಳ ಶಕ್ತಿಶಾಲಿ ಟೆಲಿಸ್ಕೋಪ್, ಪ್ಲಾಸ್ಮಾ ಅಧ್ಯಯನ ಸಾಧನ, ಎಕ್ಸ್‌ರೇ ಸ್ಪೆಕ್ಟ್ರೋಮೀಟರ್‌ಗಳು ಕೊರೋನಾ, ಬಿಸಿ ಮಾರುತ ಮತ್ತು ಜ್ವಾಲೆಗಳ ಸ್ಪಷ್ಟ ವಿವರಗಳನ್ನು ಭೂಮಿಗೆ ರವಾನಿಸಲಿವೆ.

ಇಲ್ಲಿಯವರೆಗೆ ಸಂಪೂರ್ಣ ಸೂರ್ಯಗ್ರಹಣದ ಕಾಲದಲ್ಲಿ ಮಾತ್ರ ಕೊರೋನಾದ ಅಧ್ಯಯನ ಸಾಧ್ಯವಿತ್ತು. ಈಗ ಆದಿತ್ಯನಲ್ಲಿರುವ ಕೊರೋನಾಗ್ರಾಫ್ ಬಳಸಿ ಕೃತಕವಾಗಿ ಸಂಪೂರ್ಣ ಸೂರ್ಯಗ್ರಹಣ ಉಂಟು ಮಾಡಿ ಕೊರೋನಾವನ್ನು ಇನ್ನಷ್ಟು ಸ್ಪಷ್ಟವಾಗಿ ಅರಿಯಬಹುದು ಎನ್ನುತ್ತಾರೆ ನೈನಿತಾಲ್‌ನ ಆರ್ಯಭಟ ಸಂಶೋಧನಾ ಕೇಂದ್ರದ ವಿಜ್ಞಾನಿ ದೀಪಂಕರ್ ಬ್ಯಾನರ್ಜಿ. ಬೇಕಾದ ಸಲಕರಣೆ ಮತ್ತು ತಂತ್ರಜ್ಞಾನವನ್ನು ನಮ್ಮ ವಿಜ್ಞಾನಿಗಳೇ ಒದಗಿಸಿದ್ದಾರೆ.



ಆದಿತ್ಯ ಹೋಗುವ ಜಾಗಕ್ಕೆ ಈಗಾಗಲೇ ತೆರಳಿರುವ ಅಮೆರಿಕ ಮತ್ತು ಜರ್ಮನಿ, ಅನೇಕ ಮಹತ್ವದ ಸೌರ ಯೋಜನೆಗಳನ್ನು ಕಾರ್ಯಗತಗೊಳಿಸಿವೆ. ಭೂಮಿ ಮತ್ತು ಸೂರ್ಯನ ನಡುವಿನ ಸರಾಸರಿ ದೂರ 14 ಕೋಟಿ ಕಿ.ಮೀ.ಗಳು. ನಾಸಾದ ಪಾರ್ಕರ್ ಸೋಲಾರ್ ಪ್ರೋಬ್ ಮಿಷನ್ 2021ರ ಏಪ್ರಿಲ್ 25ರಂದು ಸೂರ್ಯನ ಬಳಿ ಹೋಗುವ ತನ್ನ ಎಂಟನೇ ಪ್ರಯತ್ನದಲ್ಲಿ, ಐದು ತಾಸುಗಳವರೆಗೆ ಕೊರೋನಾವನ್ನೇ ಇಣುಕಿ ನೋಡಿತ್ತು ಎಂದು 'ನ್ಯೂ ಸೈಂಟಿಸ್ಟ್' ಪತ್ರಿಕೆ ವರದಿ ಮಾಡಿತ್ತು. ಮರುವರ್ಷ ಜನವರಿಯಲ್ಲಿ ಸೂರ್ಯನ ಪ್ರತಾಪಕ್ಕೆ ಎದುರಾದ ನೌಕೆಯ ಹೊರಕವಚ 612 ಡಿಗ್ರಿ ಸೆಲ್ಸಿಯಸ್‌ನಷ್ಟು ಬಿಸಿಯಾಗಿತ್ತು. ಆದರೆ ನೌಕೆಯ ಒಳಗಿನ ಉಷ್ಣಾಂಶ 32 ಡಿಗ್ರಿ ಸೆಲ್ಸಿಯಸ್ ದಾಟರಲಿಲ್ಲ. ನಾಸಾದ ಉನ್ನತ ತಂತ್ರಜ್ಞಾನವು ನೌಕೆಯ ಕೈಹಿಡಿದಿತ್ತು.

ಆದಿತ್ಯ ನೆಲೆಗೊಳ್ಳುವ ಜಾಗದಲ್ಲಿ ನಾಸಾ ಮತ್ತು ಯುರೋಪಿಯನ್ ಸ್ಪೇಸ್ ಏಜೆನ್ಸಿ ಜಂಟಿಯಾಗಿ ಸೋಹೊ (ಸೋಲಾರ್ ಆ್ಯಂಡ್ ಹೆಲಿಯೊಸ್ಫೆರಿಕ್ ಅಬ್ಸರ್ವೇಟರಿ) ವೀಕ್ಷಣಾಲಯವನ್ನು 1995ರಷ್ಟು ಹಿಂದೆಯೇ ಸ್ಥಾಪಿಸಿವೆ. ಬರೀ ಮೂರು ವರ್ಷಗಳಿಗಾಗಿ ಅಲ್ಲಿಗೆ ತೆರಳಿದ್ದ ಸೋಹೊ ಇಂದಿನವರೆಗೂ ಕೆಲಸ ಮಾಡುತ್ತಿದೆ. ಅಂಥ ಸುಧಾರಿತ ವ್ಯವಸ್ಥೆ ಮತ್ತು ನೌಕೆಗಳು ಅಲ್ಲಿವೆ ಎಂದ ಮೇಲೆ ನಾವೇಕೆ ನಮ್ಮ ಆದಿತ್ಯನನ್ನು ಅಲ್ಲಿಗೆ ಕಳಿಸುತ್ತಿದ್ದೇವೆ ಎಂಬ ಪ್ರಶ್ನೆ ಸಹಜ. ಅದಕ್ಕೆ ಕಾರಣಗಳಿವೆ. ಸೂರ್ಯನ ಕುರಿತಾದ ಹೆಚ್ಚಿನ ಮಾಹಿತಿ ಮುಂಚೂಣಿ ರಾಷ್ಟ್ರಗಳ ಬಳಿ ಮಾತ್ರ ಇದೆ. ಏನೇ ಬೇಕಾದರೂ ಅವರನ್ನೇ ಕೇಳಬೇಕು. ನಾಸಾದ ಪಾರ್ಕರ್ ಸೋಲಾರ್ ಯೋಜನೆಯವರು ಡೇಟಾ ಕೊಟ್ಟರೆ ಮಾತ್ರ ವಿಶ್ಲೇಷಣೆ ಸಾಧ್ಯವಿತ್ತು.

ಈಗ ಹಾಗಲ್ಲ. ಸೂರ್ಯ ನಮಗೂ ಎಟುಕಲಿದ್ದಾನೆ. ಸೂರ್ಯನಿಂದ ಹೊರಹೊಮ್ಮುವ ರಾಶಿ ರಾಶಿ ಮೂಲಕಣ ಪ್ರವಾಹವನ್ನು ಅಭ್ಯಸಿಸಲು ನಮಗೆ ಬೇಕಾದ ಕೋನದಲ್ಲಿ ಆದಿತ್ಯನನ್ನು ತಿರುಗಿಸಿ ನೋಡಬಹುದು. ಅಷ್ಟೇ ಅಲ್ಲ, ಇತರ ದೇಶಗಳಿಗೂ ನಮ್ಮ ಆದಿತ್ಯಪೀಠದಲ್ಲಿ ಜಾಗ ಕೊಡಬಹುದು. ಸೂರ್ಯನಿಂದ ಹೊಮ್ಮುವ ಜ್ವಾಲಾ ಬುಗ್ಗೆಯನ್ನು ಅಧ್ಯಯನ ಮಾಡುವುದು ಆದಿತ್ಯನ ಮುಖ್ಯ ಉದ್ದೇಶಗಳಲ್ಲೊಂದು. ಅಂಥ ಜ್ವಾಲೆ ಭೂಮಿಯೆಡೆಗೆ ಬರುವುದೇ ಆದರೆ ಅದು ಆದಿತ್ಯ ಇರುವ ಕಕ್ಷೆಯನ್ನು ದಾಟಿ ನಮ್ಮೆಡೆಗೆ ಬರಬೇಕು. ಹಾಗಾದಲ್ಲಿ ಮೊದಲ ಮುನ್ಸೂಚನೆ ಆದಿತ್ಯನಿಗೇ ದೊರೆತು ನಾವು ಹುಷಾರಾಗಬಹುದು.

ರಿಯಲ್ ಆದಿತ್ಯನ ಸೌರಜ್ವಾಲೆ ನಮ್ಮ ಕೃತಕ ಆದಿತ್ಯನನ್ನೇ ಸುಟ್ಟು ಕರಕಲಾಗಿಸಬಹುದಲ್ಲವೇ? ಇಡೀ ಯೋಜನೆಯೇ ಹಳಿ ತಪ್ಪಬಹುದಲ್ಲವೇ? ಆತಂಕ ಬೇಕಿಲ್ಲ. ಅಂಥ ಅಪಾಯಗಳನ್ನು ಎದುರಿಸಲು ಸುರಕ್ಷಾ ಕ್ರಮ ಮತ್ತು ಆದಿತ್ಯನ ಉಪಕರಣಗಳಿಗೆ ತ್ವರಿತವಾಗಿ ಸುರಕ್ಷಾ ಹೊದಿಕೆ ತೊಡಿಸುವ ಇಲ್ಲವೆ ಇಡೀ ಉಪಗ್ರಹವನ್ನೇ ಕಕ್ಷೆಯಿಂದ ಕೆಲಕಾಲ ದೂರ ಸರಿಸುವ ವ್ಯವಸ್ಥೆ ಇದ್ದೇ ಇರುತ್ತದೆ.

ನಮ್ಮೆಲ್ಲರ ಬದುಕಿಗೆ ಸೂರ್ಯ ಅದೆಷ್ಟು ಮುಖ್ಯ ಎಂದು ಕಲೆ, ಸಂಸ್ಕೃತಿ, ಆಚರಣೆಗಳಲ್ಲೆಲ್ಲ ನಾವೇ ಕೊಂಡಾಡುತ್ತಾ ಬಂದಿದ್ದೇವೆ. ಸೂರ್ಯ ನಮಗೆ ಮಿತ್ರನೇ ಆಗಿದ್ದ. ಆದರೆ ಈ ಅತಿಮಾನವ ಯುಗದಲ್ಲಿ ಪ್ರಚಂಡ ವಿದ್ಯುತ್ ಹಾಗೂ ಸರಕು ಜಾಲಗಳನ್ನು ಹೆಣೆದುಕೊಂಡಿರುವ ನಮಗೆ ಸೂರ್ಯ ಶತ್ರುವಾದರೂ ಅಚ್ಚರಿ ಇಲ್ಲ. ಅದೇನೇ ಇದ್ದರೂ ಆದಿತ್ಯನ ಅಂತರಂಗ ಅರಿಯಲು ಇನ್ನೊಬ್ಬ ಆದಿತ್ಯ ಪಯಣಿಸಲಿದ್ದಾನೆ.

ಚುರುಮುರಿ

ಗೃಹಲಕ್ಷ್ಮಿ ಗದ್ಲ!

• ಬಿ.ಎನ್.ಮಲ್ಲೇಶ್

ಮನೇಲಿ ಹೆಂಡ್ತಿ ಜೊತೆ ಜಗಳ ಮಾಡ್ಕಂಡು ಸೀದಾ ಹರಟೆಕಟ್ಟೆಗೆ ಬಂದ ತೆಪರೇಸಿ, 'ಲೇ ಗುಡ್ಡೆ, ಸಿದ್ರಾಮಣ್ಣಂಗೊಂದು ಫೋನ್ ಹಚ್ಚಿ ಕೊಡಲೆ' ಅಂದ.

'ಸಿದ್ರಾಮಣ್ಣ ಅಂದ್ರೆ... ಯಾರು ಸಿ.ಎಂ.ಗಾ? ಯಾಕೆ?' ಗುಡ್ಡೆ ಕೇಳಿದ.

'ಯಾಕೆ ಅಂದ್ರೆ? ಗ್ಯಾರಂಟಿನೆಲ್ಲ ಬರೀ ಹೆಣ್ಮಕ್ಳಿಗೇ ಕೊಟ್ರೆ ನಾವೇನ್ ಮಾಡ್ಬೇಕು? ನಿನ್ನಿ ಇನ್ನೂ ಗೃಹಲಕ್ಷ್ಮಿದು ಎರಡು ಸಾವಿರ ರೊಕ್ಕ ಬಂದೇತಿ, ಖರ್ಚಿಗೆ ಇನ್ನೂರು ರೂಪಾಯಿ ಕೊಡು ಅಂದ್ರೆ ಇಲ್ಲಾಂತಾಳೆ. ಸಿದ್ರಾಮಣ್ಣಂಗೆ ನಾವೇನ್ ವೋಟ್ ಹಾಕಿಲ್ವಾ?'

'ಅಲೆ ಇವ್ನ, ಹೌದಾ? ಸಿ.ಎಂ. ಫೋನ್ ನಂಬರ್ ತಗಾ, ಮಾಡು, ಚೆನ್ನಾಗಿ ದಬಾಯ್ಸು' ಎಂದ ಗುಡ್ಡೆ.

ಗುಡ್ಡೆ ಕೊಟ್ಟ ನಂಬರ್‌ಗೆ ಫೋನ್ ಮಾಡಿದ ತೆಪರೇಸಿ 'ಹಲೋ... ಸಿದ್ರಾಮಣ್ಣೋರಾ?'

'ಅಲ್ಲ, ನಾನು ಡಿ.ಕೆ.ಶಿವಕುಮಾರು...'

'ಅರೆ, ನಾನು ಸಿದ್ರಾಮಣ್ಣಂಗೆ ಮಾಡಿದ್ರೆ ನಿಮಗೆ ಬಂತಾ?'

'ಇನ್ಮೇಲೆ ಹಂಗೇ... ಅವರಿಗೆ ಫೋನ್ ಮಾಡಿದ್ರೆ ನಂಗೆ ಬರ್ತತಿ, ನಂಗೆ ಮಾಡಿದ್ರೆ ಅವರಿಗೆ ಹೋಗ್ತತಿ. ಇಬ್ರೂ ಈಗ ತುಂಬಾ ಕ್ಲೋಸಾಗಿದೀವಿ'.

'ಹೌದಾ? ಮತ್ತೆ ಅದೇ ತರ ರೇಣುಕಾಚಾರ್ಯ ಸಾಹೇಬ್ರಿಗೆ ಮಾಡಿದ್ರೂ ನಿಮಗೇ ಬರುತ್ತಾ?'

'ಗೊತ್ತಿಲ್ಲ, ಏನ್ ನಿಮ್ ಪ್ರಾಬ್ಲಮ್ಮು?'

'ಅಲ್ಲ ಸಾ, ಎಲ್ಲ ಗ್ಯಾರಂಟೀನ ಬರೀ ಹೆಣ್ಮಕ್ಳಿಗೇ ಕೊಟ್ರೆ ಹೆಂಗೆ? ನಾವೇನ್ ವೋಟ್ ಹಾಕಿಲ್ವಾ?'

'ಮನೆ, ಸಂಸಾರನ ಸರಿಯಾಗಿ ತೂಗಿಸೋದು ಹೆಣ್ಮಕ್ಳು ಕಣಯ್ಯ, ಅದ್ಕೆ ಕೊಟ್ಟಿದೀವಿ. ಹೆಣ್ಣು ಹುಟ್ಟಿದ ಮನೆ ತಣ್ಣಗೆ ಅಂತ ಕೇಳಿಲ್ವಾ?'

'ಓ... ಹೆಣ್ಣು ಹುಟ್ಟಿದ ಮನೆ ತಣ್ಣಗೆ, ಮತ್ತೆ ಗಂಡು ಹುಟ್ಟಿದ ಮನೆ?'

'ನುಣ್ಣಗೆ!'

'ನುಣ್ಣಗಾ? ಏನ್ ಮಾತಾಡ್ತೀರಿ ನೀವು? ಯಾವ ನಂಬರ್ ಇದು?'

'ಇದು ಪೊಲೀಸ್ ಸ್ಟೇಶನ್ನು. ಏನ್ರೀ ಹೆಣ್ಮಕ್ಳ ಬಗ್ಗೆ ಬಾಯಿಗೆ ಬಂದಂಗೆ ಮಾತಾಡ್ತೀರಾ? ಕೇಸ್ ಜಡಿದು ಒದ್ದು ಒಳಗಾಕಿಬಿಡ್ತೀನಿ'.

ತೆಪರೇಸಿ ಪಟ್ ಅಂತ ಫೋನ್ ಕಟ್ ಮಾಡಿ ಫೋನ್ ನಂಬರ್ ಕೊಟ್ಟ ಗುಡ್ಡೆ ಕಡೆ ಗುರಾಯಿಸಿದ.

ಸಂಗತ

ಕೃತಕ ಬುದ್ಧಿಮತ್ತೆಯೂ ಕರ್ಣನ ಬ್ರಹ್ಮಾಸ್ತ್ರವೂ

ಎಷ್ಟೇ ಅತ್ಯಾಧುನಿಕ ತಂತ್ರಜ್ಞಾನವಾದರೂ ನಮ್ಮ ಅಗತ್ಯಕ್ಕೆ ತಕ್ಕಂತೆ ಅದನ್ನು ಬಳಸಿಕೊಳ್ಳುವ ಸಾಮರ್ಥ್ಯ ನಮಗೆ ಇರಲೇಬೇಕಾಗುತ್ತದೆ

• ಶಿವಲಿಂಗಸ್ವಾಮಿ ಎಚ್.ಕೆ.

ಕೃತಕ ಬುದ್ಧಿಮತ್ತೆಯ ಆಗಮನದಿಂದ ಉಂಟಾಗಿರುವ ತಲ್ಲಣಗಳು 18 ಮತ್ತು 19ನೇ ಶತಮಾನದಲ್ಲಿ ಕೈಗಾರಿಕಾ ಕ್ರಾಂತಿ ಉಂಟುಮಾಡಿದ ತಲ್ಲಣಗಳನ್ನು ನೆನಪಿಸುವಂತಿವೆ. ಕೈಗಾರಿಕಾ ಕ್ರಾಂತಿಯ ಸಂದರ್ಭದಲ್ಲಿ, ಜಾಗತಿಕ ಮಟ್ಟದಲ್ಲಿ ಆರ್ಥಿಕ ಸಂಪನ್ಮೂಲಗಳನ್ನು ಸದೃಢಗೊಳಿಸುವ ದಿಸೆಯಲ್ಲಿ ಸಮರೋಪಾದಿಯಲ್ಲಿ ಯಂತ್ರಗಳ ನಿರ್ಮಾಣ ಪ್ರಾರಂಭವಾಯಿತು. ಈ ಕ್ರಾಂತಿಯ ಮೊದಲ ಹಂತದಲ್ಲಿಯೇ ಜನರಲ್ಲಿ ಮೂಡಿದ ಆತಂಕಗಳೆಂದರೆ, ಭವಿಷ್ಯದಲ್ಲಿ ಮಾನವ ಸಂಪನ್ಮೂಲ ಎಂಬುದಕ್ಕೆ ಅಸ್ತಿತ್ವವೇ ಇರುವುದಿಲ್ಲ, ಇನ್ನುಮುಂದೆ ಯಂತ್ರಗಳು ನಮ್ಮ ಜೀವನವನ್ನು ನಿಯಂತ್ರಿಸುತ್ತವೆ, ರೈತಾಪಿ ಬದುಕಿಗೆ ಎಲ್ಲರೂ ಬೆನ್ನು ತೋರಿಸುತ್ತಾರೆ...

ಹಾಗೆಯೇ, ಕೃತಕ ಬುದ್ಧಿಮತ್ತೆಯ ಕುರಿತಾಗಿ ಎಲ್ಲೆಡೆ ವ್ಯಕ್ತವಾಗಿರುವ ಆತಂಕವೆಂದರೆ, ಪ್ರಸ್ತುತ ಜಗತ್ತು ಸಂಪೂರ್ಣ ಮಾನವೋತ್ತರವಾಗಿ ರೂಪಾಂತರಗೊಂಡಿದೆ ಎಂಬುದು. ಇದಕ್ಕೆ ಪೂರಕವಾಗಿ ಕೃತಕ ಬುದ್ಧಿಮತ್ತೆಯು ಯಾವುದೇ ಕೆಲಸವನ್ನು ಅಭೂತಪೂರ್ವ ಪ್ರಮಾಣದಲ್ಲಿ ಮತ್ತು ಮನುಷ್ಯರ ಕಲ್ಪನೆಗೂ ನಿಲುಕದ ವೇಗದಲ್ಲಿ ಮಾಡುವುದು ಎಲ್ಲರಲ್ಲಿ ಸೋಜಿಗ ಹಾಗೂ ಅದಕ್ಕಿಂತ ಹೆಚ್ಚಾಗಿ ಆತಂಕವನ್ನು ಉಂಟುಮಾಡಿದೆ.

ಇದಕ್ಕೆ ಸಮಾನವಾದ ತಲ್ಲಣಗಳನ್ನು ಕೋವಿಡ್ ವೈರಸ್ ಕೂಡ ಸೃಷ್ಟಿ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಕೈಗಾರಿಕಾ ಕ್ರಾಂತಿಯ ಸಂದರ್ಭದಲ್ಲಿ ಪ್ರತಿ ಯಂತ್ರದ ಆಗಮನದಿಂದ ನೂರಾರು ಜನರಿಗೆ ಬದಲಿ ವ್ಯವಸ್ಥೆಯಾಯಿತು. ಹಾಗೆಯೇ ಕೋವಿಡ್ ಸಂದರ್ಭದಲ್ಲಿ ಇಡೀ ಭೌತಿಕ ಜಗತ್ತು ಅವಾಸ್ತವಿಕ ಜಗತ್ತಾಗಿ ಪರಿಣಮಿಸುವ ಪ್ರಕ್ರಿಯೆಯಲ್ಲಿ ಪುನಃ ನಿರುದ್ಯೋಗ ಸೃಷ್ಟಿಯ ಆತಂಕ ಜನರನ್ನು ಕಾಡಿತ್ತು. ಆದರೆ ಮಾನವ ಕುಲವು ಆ ಆತಂಕವನ್ನು ಮೆಟ್ಟಿ ನಿಲ್ಲುವ ದಿಟ್ಟತನ ತೋರಲು ಮೂಲ ಕಾರಣ, ಮಾನವನ ವಿಕಾಸದ ಮೂಲ ಗುಣವಾದ ಹೊಂದಿಕೊಳ್ಳುವಿಕೆ.

ಕೃತಕ ಬುದ್ಧಿಮತ್ತೆಯು ಬರೀ ಒಂದು ಸಾಧನ ಎಂಬ ವಿಚಾರವನ್ನು ನಾವು ಮರೆಯಬಾರದು. ಯಾವುದೇ ವ್ಯಕ್ತಿಯು ಎಷ್ಟೇ ಕಸುಬುದಾರನಾಗಿದ್ದರೂ ಆತ ಸಂಪೂರ್ಣ ಸ್ವಾವಲಂಬಿಯಾಗುವುದು ಅಥವಾ ಸಬಲೀಕರಣಗೊಳ್ಳುವುದು ಆತನ ಒಡೆತನದಲ್ಲಿ ಉತ್ತಮ ಸಾಧನಗಳಿದ್ದಾಗ ಮಾತ್ರ. ತನಗೆ ಮತ್ತು ತನ್ನ ಸಹೋದರರಿಗೆ ಕೌರವರಿಂದ ಅನ್ಯಾಯವಾಗಿದೆ ಎಂಬ ಕಾರಣದಿಂದ ಅರ್ಜುನನು ಈಶ್ವರನಿಂದ ಪಾಶುಪತಾಸ್ತ್ರ ಪಡೆಯುವುದು ಸಹ ಇದೇ ಕಾರಣಕ್ಕಾಗಿ. ಅರ್ಜುನನಿಗೆ ಎದುರಾಳಿಯಾಗಿ ಸೆಣಸಾಡುವ ಕರ್ಣ ಕೂಡ ಬ್ರಹ್ಮಾಸ್ತ್ರದ ಒಡೆತನ ಹೊಂದಿರುತ್ತಾನೆ.

ಇಬ್ಬರೂ ಜಗದ್ವಿಖ್ಯಾತ ಬಿಲ್ಲುಗಾರರಾಗಿದ್ದು, ಅಭೂತಪೂರ್ವ ಅಸ್ತ್ರಗಳನ್ನು ತಮ್ಮ ಬತ್ತಳಿಕೆಯಲ್ಲಿ ಹೊಂದಿರುತ್ತಾರೆ. ಆದರೂ ಕರ್ಣನಿಗೆ ಸೋಲಾಗುತ್ತದೆ. ಇದಕ್ಕೆ ಮೂಲ ಕಾರಣ, ಯುದ್ಧದ ಸಮಯದಲ್ಲಿ ತನ್ನ ಅತ್ಯುನ್ನತ ಅಸ್ತ್ರದ ಬಳಕೆಗೆ ಬೇಕಿರುವ ಪ್ರಮುಖವಾದ ಮಂತ್ರವನ್ನೇ ಕರ್ಣ ಮರೆಯುತ್ತಾನೆ. ಕಡೆಗೆ ಅವನ ಬತ್ತಳಿಕೆಯಲ್ಲಿ ಇರುವ ಅಸ್ತ್ರವು ಅನುಪಯುಕ್ತ ಆಗುತ್ತದೆ. ಅಂದರೆ, ಸಾಧನ ಇದ್ದರಷ್ಟೇ ಸಾಲದು, ಅದರ ಉಪಯೋಗವನ್ನು ಸಕಾಲದಲ್ಲಿ ಪಡೆದುಕೊಳ್ಳಲು ಅದರ ಬಳಕೆ ತಿಳಿದಿರಬೇಕು.

ಇದಕ್ಕೆ 'ರೇಸ್' ಎಂಬ ಬಾಲಿವುಡ್ ಚಲನಚಿತ್ರವನ್ನು ಉದಾಹರಣೆಯಾಗಿ ಕೊಡಬಹುದು. ಸಹೋದರರು ಜಿದ್ದಿಗಾಗಿ ಕಾರ್ ರೇಸ್ ಮಾಡುವ ಸಂದರ್ಭದಲ್ಲಿ, ಅಣ್ಣನು ತಮ್ಮನಿಗೆ ಹೇಳುವ ಮಾತು ಬಹಳ ಪರಿಣಾಮಕಾರಿಯಾಗಿದೆ. ಅವರ ಪಂದ್ಯ ಪ್ರಾರಂಭವಾಗುವ ಮುನ್ನ ಇಬ್ಬರೂ ತಮ್ಮ ಕಾರುಗಳನ್ನು ಅಕ್ಕಪಕ್ಕ ನಿಲ್ಲಿಸಿದಾಗ, ತಮ್ಮನು ತನ್ನ ಅಣ್ಣನದು ಸ್ಪೋರ್ಟ್ಸ್ ಕಾರು, ತನ್ನದು ಸಾಧಾರಣ ಕಾರು ಎಂದು ಹಲುಬುತ್ತಾನೆ. ಆಗ ಅಣ್ಣ 'ರೇಸ್ ಗೆಲ್ಲುವುದು ಕಾರಲ್ಲ, ಚಾಲಕ' ಎನ್ನುತ್ತಾನೆ. ಈ ಮಾತು, ನಮ್ಮಲ್ಲಿ ಎಷ್ಟೇ ಅತ್ಯಾಧುನಿಕ ತಂತ್ರಜ್ಞಾನ ಇದ್ದರೂ ಅದರ ಸಮರ್ಥ ಬಳಕೆ ಮಾತ್ರ ಅದಕ್ಕೆ ಶೋಭೆ ತರಬಹುದು ಎಂದು ತೋರಿಸುತ್ತದೆ. ಇಲ್ಲವಾದಲ್ಲಿ ತಂತ್ರಜ್ಞಾನವು ಯುದ್ಧದಲ್ಲಿ ಸಕಾಲದಲ್ಲಿ ಬಳಕೆಯಾಗದ ಕರ್ಣನ ಬ್ರಹ್ಮಾಸ್ತ್ರದಂತೆ ಆಗುತ್ತದೆ.

ಕೃತಕ ಬುದ್ಧಿಮತ್ತೆ ಮಾರಕವಾಗುವುದು ತಂತ್ರಜ್ಞಾನದ ಅರಿವಿಲ್ಲದವರಿಗೆ ಮಾತ್ರ. ಇಂದಿನ ಯುಗದಲ್ಲಿ ವಿದ್ಯಾವಂತ ಎಂದರೆ ಆತನಿಗೆ ಕನಿಷ್ಠ ಮಟ್ಟದಲ್ಲಿಯಾದರೂ ತಂತ್ರಜ್ಞಾನ ಬಳಕೆಯ ಅರಿವಿರಬೇಕು. ಆದ್ದರಿಂದ ಸಮಗ್ರ ಶಿಕ್ಷಣಕ್ಕೆ ಒಳಗಾದ ಪ್ರತಿಯೊಬ್ಬರೂ ಗಣಕಯಂತ್ರದ ಬಳಕೆ ಮತ್ತು ಸಮಕಾಲೀನ ಜಗತ್ತಿನಲ್ಲಿ ಲಭ್ಯವಿರುವ ನೂರಾರು ಆ್ಯಪ್‌ಗಳ ಬಳಕೆಯನ್ನು ತಿಳಿದಿರಲೇಬೇಕಿದೆ.

ಚಾಟ್‌ಜಿಪಿಟಿ ಒಂದು ಮಂತ್ರದಂತೆ ಕೆಲಸ ಮಾಡುವುದಿಲ್ಲ ಮತ್ತು ನಮಗೆ ಬೇಕಿದ್ದನ್ನೆಲ್ಲ ಹಿಡಿಹಿಡಿಯಾಗಿ ಕೊಡುವುದಿಲ್ಲ. ಅದು ಕೆಲಸ ಮಾಡುವ ಬಗೆ ಮತ್ತು ಅದರ ಇತಿಮಿತಿ ತಿಳಿದಿದ್ದರೆ ಮಾತ್ರ ಅದು ನಮ್ಮ ನಿಯಂತ್ರಣದಲ್ಲಿ ಇರುವ ಸಾಧನವಾಗುತ್ತದೆ. ಕೃತಕ ಬುದ್ಧಿಮತ್ತೆಯೊಂದಿಗೆ ಸಂವಹನ ನಡೆಸುವ ಕಲೆ ಹಾಗೂ ಭಾಷಾಜ್ಞಾನ ನಮ್ಮಲ್ಲಿ ಇರಬೇಕು. ಹಾಗೆಯೇ ಅದು ನೀಡುವ ಮಾಹಿತಿಯನ್ನು ಯಥಾವತ್ತಾಗಿ ಬಳಸಲು ಬರುವುದಿಲ್ಲ. ಅನುವಾದ ಮಾಡುವ ತಂತ್ರಜ್ಞಾನ ಇದೆ ಎಂದಾದರೆ, ಅದು ಮಾಡುವ ಅನುವಾದವೆಲ್ಲ ದೋಷರಹಿತವಾಗಿ ಇರುತ್ತದೆ ಎಂದು ಭಾವಿಸುವಂತಿಲ್ಲ. ಹಾಗೆ ಭಾವಿಸಿದರೆ ಪ್ರಮಾದಗಳು ಸಂಭವಿಸುತ್ತವೆ. ಹಾಗೆಯೇ ಚಾಟ್‌ಜಿಪಿಟಿಯಿಂದ ಕೆಲಸ ಮಾಡಿಸಿಕೊಳ್ಳಲು, ಮೊದಲಿಗೆ ನಾವು ನೀಡುವ ಸೂಚನೆಗಳು ಮುಖ್ಯ ಎಂಬ ಪರಿಜ್ಞಾನ ಬೇಕು. ನಂತರ ಅದು ಕೊಡುವ ಮಾಹಿತಿಯನ್ನು ಒಮ್ಮೆ ಓದಿ ಬಳಿಕ ಅದನ್ನು ನಮ್ಮ ಅಗತ್ಯಕ್ಕೆ ತಕ್ಕಂತೆ ತಿದ್ದುಪಡಿ ಮಾಡಿಕೊಳ್ಳುವ ಸಾಮರ್ಥ್ಯ ನಮ್ಮಲ್ಲಿ ಇರಬೇಕು. ಇಲ್ಲವಾದಲ್ಲಿ ಈ ಕೃತಕ ಬುದ್ಧಿಮತ್ತೆಯು ನಿರ್ಣಾಯಕ ಕಾಲಘಟ್ಟದಲ್ಲಿ ಅನುಪಯುಕ್ತವಾದ ಕರ್ಣನ ಬ್ರಹ್ಮಾಸ್ತ್ರದಂತೆ ಆಗುತ್ತದೆ.

ವಾಚಕರ ವಾಣಿ

ಎಲ್‌ಪಿಜಿ ಮಹಿಳೆಯರ ಸೊತ್ತಲ್ಲ!

ಕೇಂದ್ರ ಸರ್ಕಾರವು ಅಡುಗೆ ಅನಿಲ ಸಿಲಿಂಡರ್ ದರದಲ್ಲಿ ₹ 200 ಇಳಿಕೆ ಮಾಡಿರುವುದು ಸ್ವಾಗತಾರ್ಹ. ಆದರೆ ಇಂತಹ ಕೊಡುಗೆಗಳನ್ನು ಸರ್ಕಾರಗಳು ದೇಶದ ಜನರಿಗೆ ಅರ್ಪಿಸಬೇಕು. ಅದಿಲ್ಲದೆ ಬರೀ ಮಹಿಳೆಯರಿಗೆ ಅರ್ಪಿಸಿದಲ್ಲಿ, ಸರ್ಕಾರಗಳೇ ಲಿಂಗ ತಾರತಮ್ಯವನ್ನು ಪರೋಕ್ಷವಾಗಿ ಬೆಂಬಲಿಸಿದಂತೆ ಆಗುತ್ತದೆ. ಹೇಗೆಂದರೆ 'ಈ ಕೊಡುಗೆ ದೇಶದ ಮಹಿಳೆಯರಿಗೆ' ಎನ್ನುವ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಯಿಂದ, ಎಲ್‌ಪಿಜಿ ಅಂದರೆ ಅಡುಗೆಮನೆ, ಅಡುಗೆಮನೆ ಅಂದರೆ ಅಲ್ಲಿ ಮಾಡುವ ಕೆಲಸ ಮಹಿಳೆಯರದು ಎಂದು ಪರೋಕ್ಷವಾಗಿ ಹೇಳಿದಂತೆ ಆಗುತ್ತದೆ. ಇದು ಸ್ಪಷ್ಟವಾಗಿ ಲಿಂಗ ತಾರತಮ್ಯವನ್ನು ತೋರಿಸುತ್ತದೆ.

ರಾಜೇಶ ಆರ್.ಟಿ.ಎನ್. ಪೇಟೆ, ಪಾವಗಡ

ಕಸಾಪ: ಚರ್ಚೆ ನಡೆಯಲಿ

ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವ ಸದಸ್ಯರ ಸಭೆ ಹಾಸನ ಜಿಲ್ಲೆಯ ಹಳೇಬೀಡಿನ ಪುಷ್ಪಗಿರಿ ಮಠದಲ್ಲಿ ಇದೇ ಮೂರರಂದು ನಡೆಯುತ್ತಿರುವುದು ಸರಿಯಷ್ಟೆ (ಪ್ರ.ವಾ., ಆ. 31). ಈ ಸಭೆಯಲ್ಲಿ, ಬಹುಮುಖ್ಯವಾಗಿ ಸರಳವಾಗಿ ಸಾಹಿತ್ಯ ಸಮ್ಮೇಳನ ಆಯೋಜಿಸುವ ಬಗೆ, ದುಂದುಗಾರಿಕೆ ತಡೆಗಟ್ಟಲು ಕ್ರಮ ಮತ್ತು 'ಕನ್ನಡ ನುಡಿ' ಪತ್ರಿಕೆಯನ್ನು ಸರ್ವಸದಸ್ಯರಿಗೆ ಉಚಿತವಾಗಿ ನೀಡುವ ಬಗ್ಗೆ ಚರ್ಚೆಯಾಗಬೇಕಿದೆ. ಏಕೆಂದರೆ ಈಚೆಗೆ ಪರಿಷತ್ತಿನ ಸಾಹಿತ್ಯ ಸಮ್ಮೇಳನಗಳು ವಿಚಾರಗೋಷ್ಠಿಗಳಿಗೆ ಆದ್ಯತೆ ನೀಡದೆ ಬರೀ ಸನ್ಮಾನ, ಸ್ಮರಣಿಕೆ ವಿತರಣೆಯಲ್ಲಿ ಸಮಯ ಪೋಲು ಮಾಡುತ್ತಿವೆ. ಇದು ತಪ್ಪಬೇಕು. ನಾಡಿನ ನೆಲ, ಜಲ, ಶಿಕ್ಷಣ ಕುರಿತ ವಿಚಾರ ಸಂಕಿರಣಗಳ ಅವಶ್ಯಕತೆ ಬಹಳ ಇರುವುದರಿಂದ ಇಂತಹ ವಿಷಯಗಳಿಗೆ ಹೆಚ್ಚು ಸಮಯ ಕೊಡಬೇಕು.

'ಕನ್ನಡ ನುಡಿ' ಪತ್ರಿಕೆ ತಮಗೆ ತಲುಪುತ್ತಿಲ್ಲವೆಂದು ಬಹುತೇಕ ಸದಸ್ಯರು ಕೊರಗುತ್ತಿದ್ದಾರೆ. ಸಾಹಿತ್ಯ ಸಮ್ಮೇಳನಕ್ಕೆ ಬಾರದಿರುವ ಸದಸ್ಯರಿಗೆ ಸಹ ಕನ್ನಡದ ಆತಂಕಗಳನ್ನು ತಲುಪಿಸುವ ಮತ್ತು ಕನ್ನಡ ಸಂಸ್ಕೃತಿಯ ಹಿರಿಮೆ ಗರಿಮೆಗಳನ್ನು ಪರಿಚಯಿಸುವ ಸಲುವಾಗಿ ಈ ಪತ್ರಿಕೆ ಒಂದು ಸಂಪರ್ಕ ಕೊಂಡಿಯಾಗಿ ಈವರೆಗೆ ಕೆಲಸ ಮಾಡಿದೆ. ಸಮ್ಮೇಳನದ ಆಮಂತ್ರಣ ಪತ್ರ ಸಹ ಈ ಪತ್ರಿಕೆಯ ಮೂಲಕವೇ ಸರ್ವಸದಸ್ಯರಿಗೆ ತಲುಪುತ್ತಿತ್ತು. ಆದರೆ ಬದಲಾದ ನಿಯಮಗಳಿಂದಾಗಿ ಪತ್ರಿಕೆಯು ಸದಸ್ಯರಿಗೆ ತಲುಪುತ್ತಿಲ್ಲ. ಆದ್ದರಿಂದ ಸರ್ವಸದಸ್ಯರು ಸೇರುವ ಈ ಸಭೆಯಲ್ಲಿ ಇಂತಹ ಎಲ್ಲಾ ವಿಷಯಗಳು ಚರ್ಚೆಯಾಗಿ ಒಂದು ಸಕಾರಾತ್ಮಕ ಬದಲಾವಣೆ ಆಗುವಂತಾಗಲಿ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ನವಿಲು ಗರಿ!

ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ
ನೀರಜ್‌ಗೆ ಬಂಗಾರದ ಪದಕದ ಗರಿ,
ಫಿಡೆ ಚೆಸ್ ವಿಶ್ವಕಪ್‌ನಲ್ಲಿ ಪ್ರಜ್ಞಾನಂದನಿಗೆ
ಅಂತರರಾಷ್ಟ್ರೀಯ ಖ್ಯಾತಿಯ ಗರಿ,
ಇಸ್ರೊಗೆ ಇನ್ನೇನಿದ್ದರೂ
ಸೂರ್ಯ, ಚಂದ್ರರೇ ಗುರಿ,
ಇವೆಲ್ಲವೂ ಭಾರತಾಂಬೆಯ ಮುಕುಟಕ್ಕೆ
ನವಿರಾದ ನವಿಲುಗರಿ!

ಚಿಕ್ಕೋಬನಹಳ್ಳಿ, ಚಾಂದ್ ಬಾಷ
ತಳಕು, ಚಳ್ಳಕೆರೆ

ಚಂದ್ರಯಾನ ಮತ್ತು ನಂಬಿಕೆಯ ತಳಹದಿ

ಇಸ್ರೊ ಅಧ್ಯಕ್ಷರು ಭದ್ರಕಾಳಿ ದೇವಸ್ಥಾನಕ್ಕೆ ಭೇಟಿ ಕೊಟ್ಟ ಬಗೆಗಿನ ವಿವರಣೆ ತರ್ಕಬದ್ಧವಾಗಿದೆ. ಆದರೆ 'ಶಿವಶಕ್ತಿ ಪಾಯಿಂಟ್' ನಾಮಕರಣದ ಬಗ್ಗೆ ಕೆಲವರು ನೀಡಿರುವ ವ್ಯಾಖ್ಯಾನ ಹಾಗಿಲ್ಲ. ಚಂದ್ರಯಾನ ಒಂದು ಬಗೆಯಲ್ಲಿ ಡಿಮಿಸ್ಟಿಫಿಕೇಷನ್ (ವಿಷಯವೊಂದನ್ನು ಹೆಚ್ಚು ಸ್ಫುಟ, ಅರ್ಥ ಮಾಡಿಕೊಳ್ಳಲು ಸುಲಭ ಮಾಡುವುದು), ಇನ್ನೊಂದು ರೀತಿಯಲ್ಲಿ ವ್ಯಾಪಕವಾಗಿ ಇರುವ ನಂಬಿಕೆಗಳನ್ನು ಬದಲಿಸುವುದು. ಉದಾಹರಣೆಗೆ, ನಾವು ಚಂದ್ರಮುಖಿ ಎಂದು ವಿಜ್ಞಾನ ಬಲ್ಲ ಯುವತಿಗೆ ಈಗ ಹೇಳಿದರೆ ಬೇರೆ ಪ್ರತಿಕ್ರಿಯೆ ಸಿಗಬಹುದು. ಏಕೆಂದರೆ ದೂರದಿಂದ ಅಂದವಾಗಿ ಕಾಣುವ ಚಂದಿರ ನಿಜಕ್ಕೂ ಕುಳಿಗಳ ಮೇಲ್ಮೈ ಹೊಂದಿದೆ. ಚಂದ್ರಲೋಕಕ್ಕೆ ಟ್ರಿಪ್ ಹೋಗುವುದೊಂದು ರಮ್ಯ ಕಲ್ಪನೆ. ಆದರೆ ಅಲ್ಲಿ ನಮ್ಮ ಉಷ್ಣಾಂಶ ಸಿಗಲು ಆಳಕ್ಕೆ ಹೋಗಬೇಕು. ನೀರು ತಳದಲ್ಲೆಲ್ಲಾದರೂ ಕಂಡೀತೆ ಕಾದುನೋಡೋಣ.

ಇಸ್ರೊ ಮುಖ್ಯಸ್ಥ ಸೋಮನಾಥ್ ಅವರು ಹೇಳಿರುವಂತೆ, ಈ ಎರಡು- ಅನ್ವೇಷಣೆ ಮತ್ತು ಶೋಧಗಳು- ಪ್ರತ್ಯೇಕ, ಎರಡನ್ನೂ ಬೆರೆಸಬಾರದು. ಆದರೆ ರಾಜಕಾರಣಿಗಳು ಮತ್ತವರ ಹಿಂಬಾಲಕರು ಹಾಗೆ ಮಾಡುತ್ತಾರೆ. ಸ್ವಾಮೀಜಿಗಳು 'ಚಂದ್ರನ ಪರಿಣಾಮ ಮನುಷ್ಯರ ಮೇಲೆ ಹುಟ್ಟಿನಿಂದಲೇ ಇರುತ್ತದೆ' ಎನ್ನುತ್ತಾರೆ! ಸ್ವಾಮಿ ಚಿನ್ಮಯಾನಂದರು $E= MC^2$ನಿಂದ ತಮ್ಮ ಪ್ರವಚನ ಆರಂಭಿಸಿದ್ದನ್ನು ನೋಡಿದ್ದೇನೆ. ಆದರೆ ಈಗಿನವರು ಹೇಗೆ ಬೇಕಾದರೂ ಲಿಂಕ್ ಕಲ್ಪಿಸಬಹುದು! ಈ ಹಿನ್ನೆಲೆಯಲ್ಲಿ ವಿಜ್ಞಾನಿಗಳು ಈ ಎರಡು ವರ್ಗಗಳವರಿಂದ ಅಂತರ ಕಾಯ್ದುಕೊಂಡು, ಸನ್ಮಾನಗಳಿಂದ ತಪ್ಪಿಸಿಕೊಂಡು ತಮ್ಮ ಕಾರ್ಯದಲ್ಲಿ ತೊಡಗುವುದು ಒಳ್ಳೆಯದು. ಕೆಲವು ವಿಜ್ಞಾನಿಗಳು ಒಂದು ಹಂತದ ನಂತರ ಕೇವಲ ಟೆಕ್ನೊಕ್ರಾಟ್‌ಗಳಾಗಿ ಮಾರ್ಪಟ್ಟಿದ್ದನ್ನೂ ನಾವು ಕಂಡಿದ್ದೇವಲ್ಲ!

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಕಾಲೇಜುಗಳಲ್ಲಿ ಆರಂಭವಾಗಲಿ 'ಮಾದರಿ ಕ್ಯಾಂಟೀನ್'

ಸರ್ಕಾರಿ ಕಾಲೇಜು ವಿದ್ಯಾರ್ಥಿಗಳು ಆರ್ಥಿಕ ಸ್ಥಿತಿಗತಿ ಹಾಗೂ ದೂರದ ಊರಿನಿಂದ ಬರುವ ಕಾರಣಕ್ಕೆ ತಮ್ಮ ಶೈಕ್ಷಣಿಕ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ಹಲವಾರು ಸವಾಲುಗಳನ್ನು ಎದುರಿಸುತ್ತಾರೆ. ಸರ್ಕಾರಿ ವಿದ್ಯಾಸಂಸ್ಥೆಗಳಲ್ಲಿ ಓದುವವರಲ್ಲಿ ಹೆಚ್ಚಿನವರು ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬಗಳಿಂದ ಬಂದವರಾಗಿರುತ್ತಾರೆ. ಕೆಲವು ವಿದ್ಯಾರ್ಥಿಗಳಿಗೆ ಮನೆಯಿಂದ ಊಟದ ಡಬ್ಬಿ ತರಲಾಗುವುದಿಲ್ಲ. ಬಹು ದೂರದಿಂದ ಬರುವುದರಿಂದ ಎಷ್ಟೋ ವಿದ್ಯಾರ್ಥಿಗಳು ಬೆಳಿಗ್ಗೆ ಉಪಾಹಾರವನ್ನೂ ಸೇವಿಸದೆ ಬರುವುದೂ ಇದೆ. ಕೆಲವು ಕಾಲೇಜುಗಳಲ್ಲಿ ಸರಿಯಾದ ಕ್ಯಾಂಟೀನ್ ವ್ಯವಸ್ಥೆ ಇರುವುದಿಲ್ಲವಾದ್ದರಿಂದ ಅವರು ಮಧ್ಯಾಹ್ನದ ಊಟಕ್ಕೆ ಪರದಾಡುವಂತೆ ಆಗುತ್ತದೆ. ದಿನವೂ ಹೋಟೆಲ್‌ನಲ್ಲಿ ಊಟ ಮಾಡುವುದು ಹೆಚ್ಚಿನವರಿಗೆ ಸಾಧ್ಯವಾಗದು. ಕಾಲೇಜಿನ ಅಕ್ಕಪಕ್ಕ ಅಂಗಡಿ, ಹೋಟೆಲ್‌ಗಳು ಇಲ್ಲದಿರುವ ಸಾಧ್ಯತೆಯೂ ಇರುತ್ತದೆ.

ಹೀಗಾಗಿ, ಸರ್ಕಾರವು ಪರಿಶೀಲನೆ ನಡೆಸಿ, ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಅಗತ್ಯ ಇರುವ ಕಡೆ ಇಂದಿರಾ ಕ್ಯಾಂಟೀನ್ ಮಾದರಿಯ ಕ್ಯಾಂಟೀನ್‌ಗಳನ್ನು ತೆರೆಯುವುದು ಸೂಕ್ತ. ವಿದ್ಯಾರ್ಥಿಗಳ ಹಸಿವಿನ ಬಾಧೆ ನಿವಾರಿಸುವುದು ಅವರ ಆರೋಗ್ಯದ ದೃಷ್ಟಿಯಿಂದ ಒಂದು ಮುಖ್ಯ ಉಪಕ್ರಮ. ಸರ್ಕಾರಿ ಕಾಲೇಜುಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಉತ್ತೇಜಿಸಲು ಸಹ ಇದರಿಂದ ಸಾಧ್ಯವಾಗುತ್ತದೆ.

ಪ್ರಣೇಶ್, ನೆಲ್ಯಾಡಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬರದ ಕರಿ ನೆರಳು

ಮುಂಗಾರು ಮಾರುತವು ರಾಜ್ಯವನ್ನು ಪ್ರವೇಶಿಸಿ ಎರಡು ತಿಂಗಳಾದರೂ ವಾಡಿಕೆಯಷ್ಟು ಮಳೆ ಎಲ್ಲಿಯೂ ಆಗಿಲ್ಲ. ಜುಲೈ ತಿಂಗಳಲ್ಲಿ ಸ್ವಲ್ಪ ಮಳೆಯಾದ ಕಾರಣ ಬಿತ್ತನೆ ನಡೆದಿದೆ. ಬಳಿಕ ಮಳೆ ಕೈಕೊಟ್ಟದ್ದರಿಂದ ಬೆಳೆಗಳು ಒಣಗಿವೆ. ಕೆರೆ, ನದಿ, ಅಣೆಕಟ್ಟೆಗಳಲ್ಲಿ ನೀರಿನ ಪ್ರಮಾಣ ಕಳವಳಕಾರಿ ಎಂಬಷ್ಟು ಕಡಿಮೆ ಇದೆ. ಕುಡಿಯುವ ನೀರಿಗೂ ತತ್ವಾರ ಆಗಬಹುದು ಎಂಬ ಆತಂಕ ಮನೆ ಮಾಡಿದೆ. ಮಳೆ ಕೊರತೆಯು ರಾಜ್ಯದಾದ್ಯಂತ ಬರದ ಛಾಯೆಗೆ ಕಾರಣವಾಗಿದೆ

- ಜೂನ್–ಜುಲೈ–ಆಗಸ್ಟ್ ಅವಧಿಯಲ್ಲಿ ಆಗಬೇಕಿದ್ದ ವಾಡಿಕೆ ಮಳೆ
- ಜೂನ್–ಜುಲೈ–ಆಗಸ್ಟ್ ಅವಧಿಯಲ್ಲಿ ಆಗಿರುವ ವಾಸ್ತವ ಮಳೆ
- ಮಳೆಕೊರತೆ ಪ್ರಮಾಣ

1 ಶಿವಮೊಗ್ಗ

1781 (ಮಿ.ಮೀ.)
1093 (ಮಿ.ಮೀ.)
39%

ಮಲೆನಾಡಿನಲ್ಲೇ ಮಳೆ ಕಣ್ಮರೆಯಾಗಿದೆ. ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಲಾಗಿದ್ದ ಮೆಕ್ಕೆಜೋಳ ಹಾಗೂ ಬತ್ತದ ಬೆಳೆಗೆ ತೊಂದರೆಯಾಗಿದೆ. ಜಿಲ್ಲೆಯಲ್ಲಿ ಈ ಬಾರಿ ಬಿತ್ತನೆಯಾಗಿರುವ 45 ಸಾವಿರ ಹೆಕ್ಟೇರ್ ಮೆಕ್ಕೆಜೋಳದ ಪೈಕಿ ಶೇ 60ರಷ್ಟು ಮಳೆ ಇಲ್ಲದೇ ಒಣಗುತ್ತಿದೆ. ಸಾಗರ, ತೀರ್ಥಹಳ್ಳಿ ಹಾಗೂ ಹೊಸನಗರ ತಾಲ್ಲೂಕುಗಳಲ್ಲಿ ಬತ್ತದ ಗದ್ದೆಗಳಲ್ಲಿ ನಾಟಿ ಮಾಡಲಾಗಿತ್ತು. ನೀರಿಲ್ಲದೆ ಸಸಿಗಳು ಒಣಗುತ್ತಿವೆ.

2 ಉಡುಪಿ

3593 (ಮಿ.ಮೀ.)
2626 (ಮಿ.ಮೀ.)
27%

ಜಿಲ್ಲೆಯಲ್ಲಿ 35,508 ಹೆಕ್ಟೇರ್ ಪ್ರದೇಶದಲ್ಲಿ ಬತ್ತದ ನಾಟಿ ನಡೆದಿದ್ದು, ನೀರಿಲ್ಲದೆ ಬೆಳೆ ಒಣಗುತ್ತಿದೆ. ಜಿಲ್ಲೆಯಲ್ಲಿ ಕೃಷಿಗೆ ನೀರುಣಿಸುವ ಅಣೆಕಟ್ಟುಗಳು, ಬೃಹತ್ ನೀರಾವರಿ ಯೋಜನೆಗಳು ಇಲ್ಲ. ವಾರಾಹಿ ಯೋಜನೆ ಕಾಮಗಾರಿ ಪೂರ್ಣಗೊಂಡಿಲ್ಲ. ಜಿಲ್ಲೆಯಲ್ಲಿ ಕೃಷಿ ಸಂಪೂರ್ಣವಾಗಿ ಮಳೆಯಾಶ್ರಿತವಾಗಿದೆ. ತೋಟಗಾರಿಕಾ ಬೆಳೆಗಳೂ ನೀರಿಲ್ಲದೆ ಸೊರಗಿವೆ. ಕೃಷಿಗೆ ನೀರುಣಿಸಲು ಪರ್ಯಾಯ ನೀರಿನ ಮೂಲಗಳಾಗಿದ್ದ ಕೆರೆಗಳು, ಹಳ್ಳಗಳಲ್ಲಿ ನೀರಿನ ಪ್ರಮಾಣ ಕುಸಿದಿರುವುದು ರೈತರ ಆತಂಕಕ್ಕೆ ಕಾರಣವಾಗಿದೆ.

3 ಚಿಕ್ಕಮಗಳೂರು

1272 (ಮಿ.ಮೀ.)
718 (ಮಿ.ಮೀ.)
44%

ಜಿಲ್ಲೆಯಲ್ಲಿ ಶೇ 40ರಷ್ಟು ಮಳೆ ಕೊರತೆಯಾಗಿದ್ದು, ಮುಂದಿನ ದಿನಗಳಲ್ಲಿ ಮಳೆ ಬಾರದಿದ್ದರೆ 227 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಬಹುದು. 98,350 ಹೆಕ್ಟೇರ್‌ನಲ್ಲಿ ಬಿತ್ತನೆಯಾಗಬೇಕಿತ್ತು. ಆದರೆ, 72,131 ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆಯಾಗಿದೆ. ಸದ್ಯಕ್ಕೆ ಯಾವುದೇ ಗ್ರಾಮಕ್ಕೂ ಟ್ಯಾಂಕರ್‌ನಲ್ಲಿ ನೀರು ಪೂರೈಕೆಯಾಗುತ್ತಿಲ್ಲ. ಇನ್ನೂ ಒಂದು ತಿಂಗಳು ಮಳೆ ಬಾರದಿದ್ದರೆ ಸಮಸ್ಯೆ ಬಿಗಡಾಯಿಸಬಹುದು.

4 ದಕ್ಷಿಣ ಕನ್ನಡ

3031 (ಮಿ.ಮೀ.)
2068 (ಮಿ.ಮೀ.)
32%

ಪ್ರತಿ ವರ್ಷ ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳಿನಲ್ಲಿ ತುಂಬಿ ಹರಿಯುತ್ತಿದ್ದ ಜಿಲ್ಲೆಯ ಕುಮಾರಧಾರಾ ಮತ್ತು ನೇತ್ರಾವತಿ ನದಿಗಳು ಮಳೆಯ ಕೊರತೆಯಿಂದಾಗಿ ಸೊರಗಿವೆ. ಜಿಲ್ಲೆಯಲ್ಲಿ ಸದ್ಯ ಎಲ್ಲಿಯೂ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡುತ್ತಿಲ್ಲ. ಆದರೆ, ಡಿಸೆಂಬರ್ ವೇಳೆಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು.

5 ಕೊಡಗು

1953 (ಮಿ.ಮೀ.)
1028 (ಮಿ.ಮೀ.)
47%

ಜಿಲ್ಲೆಯಲ್ಲಿ ಬರದ ಛಾಯೆ ಆವರಿಸಿದೆ. ಕೆರೆ, ತೊರೆಗಳಲ್ಲಿ ನೀರು ಕಡಿಮೆಯಾಗುತ್ತಿದ್ದು, ಮಳೆಯಾಗದಿದ್ದರೆ ಅದೂ ಬತ್ತುವ ಸಾಧ್ಯತೆ ಹೆಚ್ಚಿದೆ. ಕೆಲವರು ನೀರಿಲ್ಲದ ಕಾರಣ ಬತ್ತದ ನಾಟಿಯನ್ನೇ ಕೈಬಿಟ್ಟಿದ್ದಾರೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಪೊನ್ನಂಪೇಟೆ ತಾಲ್ಲೂಕಿನಲ್ಲಿ ನವೆಂಬರ್‌ನಲ್ಲೇ ಕುಡಿಯುವ ನೀರಿನ ಸಮಸ್ಯೆ ತಲೆದೋರಬಹುದು. ಕೆಲವು ಭಾಗಗಳಲ್ಲಿ ಕಾಳುಮೆಣಸು ಉದುರುತ್ತಿವೆ.

6 ಮೈಸೂರು

307 (ಮಿ.ಮೀ.)
204 (ಮಿ.ಮೀ.)
34%

ಜಿಲ್ಲೆಯಲ್ಲಿ ಶೇ 58ರಷ್ಟು ಮಾತ್ರವೇ ಬಿತ್ತನೆಯಾಗಿದೆ. 1.03 ಲಕ್ಷ ಹೆಕ್ಟೇರ್‌ನಲ್ಲಿ ಬತ್ತ ಬೆಳೆಯಲಾಗುತ್ತಿದ್ದು, ಈ ವರ್ಷ 17,685 ಹೆಕ್ಟೇರ್‌ನಲ್ಲಷ್ಟೇ ನಾಟಿ ಕಾರ್ಯ ನಡೆದಿದೆ. ತೇವಾಂಶದ ಕೊರತೆಯಿಂದ, ಜಿಲ್ಲೆಯಲ್ಲಿ 63,525 ಹೆಕ್ಟೇರ್ ಪೈಕಿ 10,548 ಹೆಕ್ಟೇರ್‌ನಲ್ಲಷ್ಟೇ ರಾಗಿ ಬಿತ್ತನೆಯಾಗಿದ್ದು ಬೆಳೆಗಳು ಒಣಗಿವೆ. ಕೆರೆಗಳಲ್ಲಿ ನೀರಿನ ಸಂಗ್ರಹ ಕಡಿಮೆಯಾಗುತ್ತಿದೆ. ಕುಡಿಯುವ ನೀರಿನ ಸಮಸ್ಯೆ ಇಲ್ಲ. ಆದರೆ ಅಣೆಕಟ್ಟೆಗಳಲ್ಲಿ ನೀರಿನ ಸಂಗ್ರಹ ಕಡಿಮೆಯಾದಷ್ಟೂ ನಗರ ಪ್ರದೇಶಗಳಿಗೆ ನೀರು ಪೂರೈಕೆ ಪ್ರಮಾಣ ತಗ್ಗಲಿದ್ದು, ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕಾಡಲಿದೆ.

7 ಹಾವೇರಿ

406 (ಮಿ.ಮೀ.)
304 (ಮಿ.ಮೀ.)
25%

ಆಗಸ್ಟ್ ಆರಂಭದಿಂದಲೇ ಜಿಲ್ಲೆಯಲ್ಲಿ ಒಣಹವೆ ಮುಂದುವರಿದಿದೆ. ಮಳೆ ಕೈಕೊಟ್ಟಿರುವ ಕಾರಣ ಬರದ ಛಾಯೆ ಕಾಣಿಸಿಕೊಂಡಿದೆ. ರಟ್ಟೀಹಳ್ಳಿ ತಾಲ್ಲೂಕಿನ ಕಡೂರ ಗ್ರಾಮದ ರೈತರು ಮಳೆಯಿಲ್ಲದೆ ಒಣಗಿದ ನೂರಾರು ಎಕರೆ ಗೋವಿನ ಜೋಳ ನಾಶಪಡಿಸಿದ್ದಾರೆ. ಮೆಕ್ಕೆಜೋಳ, ಹತ್ತಿ, ಶೇಂಗಾ, ಸೋಯಾಬಿನ್, ತೊಗರಿ ಬೆಳೆಗಳು ಒಣಗುತ್ತಿವೆ. ಬೆಳೆಗಳು ಒಣಗಿದ ಪರಿಣಾಮ ಕೆಲ ರೈತರು ಬೆಳೆನಾಶ ಮಾಡಿ, ಮರು ಬಿತ್ತನೆ ಮಾಡಿದ್ದಾರೆ.

8 ದಾವಣಗೆರೆ

283 (ಮಿ.ಮೀ.)
241 (ಮಿ.ಮೀ.)
15%

ಜುಲೈನಲ್ಲಿ ಉತ್ತಮ ಮಳೆ ಸುರಿದಿದ್ದರಿಂದ ಕೆರೆ–ಕಟ್ಟೆಗಳು ತುಂಬಿದ್ದವು. ತುಂಗಾ, ಭದ್ರಾ ಜಲಾಶಯಗಳಿಗೆ ಒಳಹರಿವು ಹೆಚ್ಚಿತ್ತು. ಆದ್ದರಿಂದ ಸದ್ಯಕ್ಕೆ ಕುಡಿಯುವ ನೀರಿಗೆ ಸಮಸ್ಯೆ ಎದುರಾಗಿಲ್ಲ. ಆದರೆ, ಹಿಂಗಾರು ಹಂಗಾಮಿನಲ್ಲಿ ಮಳೆ ಸುರಿಯದಿದ್ದರೆ ಬೇಸಿಗೆ ಅವಧಿಗೆ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಬಹುದು. ಜಿಲ್ಲೆಯ ಪ್ರಮುಖ ಬೆಳೆಯಾದ ಮೆಕ್ಕೆಜೋಳವನ್ನು 1.27 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದೆ. ಬಿಸಿಲಿನಿಂದಾಗಿ ಬೆಳೆ ಬಾಡಿಹೋಗಿದೆ. ಈಗ ಮಳೆ ಬಂದರೂ ಉತ್ತಮ ಫಸಲು ಬರುವುದು ಅನುಮಾನ.



9 ಹಾಸನ

612 (ಮಿ.ಮೀ.)
377 (ಮಿ.ಮೀ.)
39%

ಗೊರೂರು ಹೇಮಾವತಿ ಜಲಾಶಯ ಭರ್ತಿಯಾಗುವ ಲಕ್ಷಣಗಳು ಕಾಣುತ್ತಿಲ್ಲ. ಕುಡಿಯುವ ನೀರಿಗಾಗಿ ನಾಲೆ ಹಾಗೂ ನದಿಗೆ ನೀರು ಹರಿಸಲಾಗುತ್ತಿದೆ. ಇದರಿಂದಾಗಿ ನೀರಿನ ಸಂಗ್ರಹವೂ ಕಡಿಮೆಯಾಗುತ್ತಿದೆ. ಸಕಲೇಶಪುರ, ಆಲೂರಿನಂತಹ ಮಳೆ ಬೀಳುವ ಪ್ರದೇಶದಲ್ಲಿ ಈ ವರ್ಷ ಬರದ ಸ್ಥಿತಿ ಇದೆ. ಜಿಲ್ಲೆಯ 8 ತಾಲ್ಲೂಕುಗಳಲ್ಲೂ ಬರಗಾಲದ ಛಾಯೆ ಆವರಿಸಿದೆ. ಬತ್ತ ಸೇರಿದಂತೆ ಕೃಷಿ ಚಟುವಟಿಕೆಗೆ ತೀವ್ರ ಹಿನ್ನಡೆಯಾಗಿದೆ. ಇದರಿಂದದಾಗಿ ರೈತರು ಮೆಕ್ಕೆಜೋಳ ಬಿತ್ತನೆಗೆ ಮುಂದಾಗಿದ್ದಾರೆ.

10 ಚಿತ್ರದುರ್ಗ

173 (ಮಿ.ಮೀ.)
135 (ಮಿ.ಮೀ.)
22%

ತೀವ್ರ ಮಳೆ ಕೊರತೆಯಿಂದ ಶೇಂಗಾ, ಮೆಕ್ಕೆಜೋಳ ಹಾಗೂ ರಾಗಿ ಬೆಳೆಗಳು ಬಾಡಿದ್ದು, ಜಿಲ್ಲೆಯಲ್ಲಿ ಬರದ ಭೀತಿ ಎದುರಾಗಿದೆ. ಜಿಲ್ಲೆಯಲ್ಲಿ 2.98 ಲಕ್ಷ ಹೆಕ್ಟೇರ್ ಪ್ರದೇಶದ ಪೈಕಿ 2.75 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. 1 ಲಕ್ಷ ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಶೇಂಗಾ, 85 ಸಾವಿರ ಹೆಕ್ಟೇರ್‌ನಲ್ಲಿ ಮೆಕ್ಕೆಜೋಳ ಹಾಗೂ 45 ಸಾವಿರ ಹೆಕ್ಟೇರ್‌ನಲ್ಲಿ ರಾಗಿ ಬಿತ್ತಲಾಗಿದೆ. ಸಕಾಲಕ್ಕೆ ಮಳೆ ಬಾರದೇ ಇರುವುದರಿಂದ ಮೆಕ್ಕೆಜೋಳ, ಶೇಂಗಾ, ಸಿರಿಧಾನ್ಯ ಸೇರಿ ಎಲ್ಲ ಬೆಳೆಗಳು ಒಣಗಿವೆ. ಬಿತ್ತನೆ ಪೂರ್ಣಗೊಂಡ ಬಳಿಕ ಶೇ 78ರಷ್ಟು ಮಳೆ ಕೊರತೆ ಉಂಟಾಗಿದೆ.

11 ತುಮಕೂರು

211 (ಮಿ.ಮೀ.)
171 (ಮಿ.ಮೀ.)
19%

ಒಟ್ಟು ಹತ್ತು ತಾಲ್ಲೂಕುಗಳು ಬರಪೀಡಿತ. ಜಿಲ್ಲೆಯಲ್ಲಿ ಒಟ್ಟು 3.14 ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆ ಗುರಿ ಹೊಂದಲಾಗಿತ್ತು. ಆದರೆ, ಈವರೆಗೂ 1.96 ಲಕ್ಷ ಹೆಕ್ಟೇರ್‌ಗಳಲ್ಲಷ್ಟೇ (ಶೇ 62) ಬಿತ್ತನೆಯಾಗಿದೆ. ರಾಗಿ, ಶೇಂಗಾ, ಮುಸುಕಿನ ಜೋಳ ಒಣಗಿವೆ. ತೆಂಗು, ಅಡಿಕೆ ಗರಿ ಬಾಡಲಾರಂಭಿಸಿವೆ. ಜಾನುವಾರುಗಳಿಗೆ ಮೇವಿನ ಕೊರತೆ ಎದುರಾಗಿದೆ. ಹೇಮಾವತಿ ನಾಲೆ ಮೂಲಕ ನೀರು ಹರಿಸಿ ಕೆರೆ ತುಂಬಿಸುತ್ತಿರುವುದರಿಂದ ಕುಡಿಯುವ ನೀರಿಗೆ ಅಷ್ಟಾಗಿ ಸಮಸ್ಯೆ ಕಾಡುತ್ತಿಲ್ಲ. ನಾಲೆ ನೀರಿನ ಆಸರೆ ಇಲ್ಲದ ಪಾವಗಡ, ಮಧುಗಿರಿ, ಶಿರಾ, ಕೊರಟಗೆರೆ ಭಾಗದಲ್ಲಿ ನೀರಿನ ಸಮಸ್ಯೆ ಉಲ್ಬಣಿಸುತ್ತಿದೆ. ತೋವಿನಕೆರೆ ಸುತ್ತಮುತ್ತ ರಾಗಿ ಹೊಲಗಳನ್ನು ಉಳಿಸಿಕೊಳ್ಳಲು ರೈತರು ಟ್ಯಾಂಕರ್ ನೀರಿನ ಮೊರೆಹೋಗಿದ್ದಾರೆ. 'ಒಮ್ಮೆ ನೀರು ಹಾಯಿಸಲು ₹2,500 ಬೇಕಾಗುತ್ತದೆ. ಮತ್ತೆ, ಮತ್ತೆ ನೀರು ಹಾಯಿಸಬೇಕಾಗಿದೆ' ಎನ್ನುತ್ತಾರೆ ರೈತರು.

12 ಬೆಂಗಳೂರು ಗ್ರಾಮಾಂತರ

271 (ಮಿ.ಮೀ.)
202 (ಮಿ.ಮೀ.)
25%

ಜಿಲ್ಲೆಯಲ್ಲಿ ವಾಡಿಕೆಗಿಂತ ಶೇ 12ರಷ್ಟು ಕಡಿಮೆ ಮಳೆಯಾಗಿದ್ದು, ರಾಗಿ, ಮುಸುಕಿನಜೋಳ, ಅವರೆ, ಅಲಸಂದೆ ಸೇರಿದಂತೆ ಎಲ್ಲಾ ಬೆಳೆಗಳು ಬಾಡಿ ಹೋಗಿವೆ. ಸಕಾಲಕ್ಕೆ ಮಳೆಯಾಗದ ಕಾರಣ ಮತ್ತೊಂದಷ್ಟು ಪ್ರದೇಶದಲ್ಲಿ ಬಿತ್ತಿದ ರಾಗಿ ಬೆಳೆ ಕಮರಿ ಹೋಗಿದೆ. ಜಿಲ್ಲೆಯಲ್ಲಿ ಒಟ್ಟು 71,460 ಹೆಕ್ಟೇರ್ ಪ್ರದೇಶದ ಪೈಕಿ 50,943 ಹೆಕ್ಟೇರ್‌ನಲ್ಲಿ (ಶೇ 71.29) ಮಾತ್ರ ಬಿತ್ತನೆ ಮಾಡಲಾಗಿದೆ.

13 ಕೋಲಾರ

236 (ಮಿ.ಮೀ.)
168 (ಮಿ.ಮೀ.)
28%

ಜಿಲ್ಲೆಯ ಬಂಗಾರಪೇಟೆ, ಕೋಲಾರ, ಮಾಲೂರು ಹಾಗೂ ಕೆಜಿಎಫ್ ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಉದ್ಭವಿಸಿದೆ. ಜಿಲ್ಲೆಯಲ್ಲಿ ಈವರೆಗೆ ಶೇ 83ರಷ್ಟು ಪ್ರದೇಶದಲ್ಲಿ ಬಿತ್ತನೆಯೇ ನಡೆದಿಲ್ಲ. ಕೆ.ಸಿ. ವ್ಯಾಲಿ ವ್ಯಾಪ್ತಿಯ ಕೆಲವು ಕೆರೆಗಳು ಭರ್ತಿಯಾಗಿವೆ. ಆದರೆ, ಉಳಿದ ಹೆಚ್ಚಿನ ಕೆರೆಗಳು ಒಣಗುತ್ತಿವೆ. ಕೊಳವೆ ಬಾವಿಗಳೇ ಆಧಾರವಾಗಿರುವ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಸದ್ಯಕ್ಕೆ ತೊಂದರೆ ಆಗಿಲ್ಲ.

14 ಮಂಡ್ಯ

184 (ಮಿ.ಮೀ.)
130 (ಮಿ.ಮೀ.)
29%

ಕೆಆರ್‌ಎಸ್ ಜಲಾಶಯ ತುಂಬಿಲ್ಲ, ಅಚ್ಚುಕಟ್ಟು ಪ್ರದೇಶಗಳ ಕೆರೆಗಳಲ್ಲೂ ನೀರು ಕಡಿಮೆಯಾಗಿ ಕುಡಿಯುವ ನೀರಿಗೂ ಕೊರತೆಯಾಗಿದೆ. 1.95 ಲಕ್ಷ ಹೆಕ್ಟೇರ್ ಪ್ರದೇಶದ ಬಿತ್ತನೆಯ ಗುರಿ ಇದ್ದರೂ 55,400 ಹೆಕ್ಟೇರ್ ಪ್ರದೇಶದಲ್ಲಷ್ಟೇ ಬಿತ್ತನೆಯಾಗಿದೆ. ಕೆಆರ್‌ಎಸ್ ಜಲಾಶಯದಿಂದ ನಾಲೆಗಳಿಗೆ ಕಟ್ಟು ಪದ್ಧತಿಯಲ್ಲಿ ನೀರು ಹರಿಸಿದರೂ ಕೊನೆ ಭಾಗದ ನಾಲೆಗಳಿಗೆ ನೀರು ತಲುಪದೆ ಮಳವಳ್ಳಿ, ಮದ್ದೂರು ತಾಲ್ಲೂಕಿನಲ್ಲಿ ಕಬ್ಬಿನ ಬೆಳೆ ಒಣಗುತ್ತಿದೆ. ಜಿಲ್ಲೆಯ ಹಲವೆಡೆ ಕೊಳವೆಬಾವಿಗಳು ಬತ್ತಿದ್ದು ಕುಡಿಯುವ ನೀರಿಗೆ ತತ್ವಾರ ಉಂಟಾಗಿದೆ. ಟ್ಯಾಂಕರ್ ಮೂಲಕ ನೀರು ಪೂರೈಸಬೇಕೆಂಬ ಆಗ್ರಹ ಕೇಳಿ ಬಂದಿದೆ.

15 ರಾಮನಗರ

258 (ಮಿ.ಮೀ.)
134 (ಮಿ.ಮೀ.)
48%

ಜಿಲ್ಲೆಯಲ್ಲಿ ಜೂನ್ ಮತ್ತು ಜುಲೈ ತಿಂಗಳಲ್ಲಿ ವಾಡಿಕೆ ಮಳೆ ಸುರಿದಿಲ್ಲ. ಹಾಗಾಗಿ, ಕೃಷಿ ಚಟುವಟಿಕೆಗಳು ಕುಸಿದಿವೆ. ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ. ಪ್ರಸಕ್ತ ಸಾಲಿನಲ್ಲಿ ಬಿತ್ತನೆ ಗುರಿ 92,655 ಹೆಕ್ಟೇರ್ ಪೈಕಿ ಕೇವಲ 12,167 ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆಯಾಗಿದೆ. ಜಿಲ್ಲೆಯ ಕೆಲ ಭಾಗಗಳಿಗೆ ನೀರಿನ ಮೂಲವಾಗಿದ್ದ ಅರ್ಕಾವತಿ ನದಿಯ ಒಡಲು ಬತ್ತಿರುವುದರಿಂದ, ಸದ್ಯ ಮಾಗಡಿ ತಾಲ್ಲೂಕಿನ ಮಂಚನಬೆಲೆ ಜಲಾಶಯದಿಂದ ನೀರು ಪೂರೈಕೆ ಮಾಡಲಾಗುತ್ತಿದೆ. ಕೆಲವು ವಾರ್ಡ್‌ಗಳಿಗೆ 3ರಿಂದ 6 ದಿನಗಳಿಗೊಮ್ಮೆ ನೀರು ಪೂರೈಸಲಾಗುತ್ತಿದೆ. ಕೆಲವೆಡೆ ಟ್ಯಾಂಟರ್ ನೀರೇ ಗತಿಯಾಗಿದೆ.

16 ಚಿಕ್ಕಬಳ್ಳಾಪುರ

255 (ಮಿ.ಮೀ.)
138 (ಮಿ.ಮೀ.)
46%

ಬರದ ಹಣೆಪಟ್ಟಿ ಹೊತ್ತ ಜಿಲ್ಲೆಯು ಕಳೆದ ಎರಡು ವರ್ಷಗಳಲ್ಲಿ 'ಮಲೆನಾಡು' ಎನಿಸಿತ್ತು. ಆದರೆ ಈ ಬಾರಿ ಮತ್ತೆ ಬರದ ಹಣೆಪಟ್ಟಿ ಹೊತ್ತಿದೆ. ಜಿಲ್ಲೆಯ ನಾಲ್ಕು ತಾಲ್ಲೂಕುಗಳು ತೀವ್ರ ಬರ ಮತ್ತು ಒಂದು ತಾಲ್ಲೂಕಿನಲ್ಲಿ ಸಾಧಾರಣ ಬರದ ಸ್ಥಿತಿ ಉದ್ಭವಿಸಿದೆ. ಜಿಲ್ಲೆಯ ರೈತರಿಗೆ ಆರ್ಥಿಕ ಅನುಕೂಲ ತರುತ್ತಿದ್ದ ಶೇಂಗಾ (ನೆಲಗಡಲೆ) ಮತ್ತು ತೊಗರಿ ಬಿತ್ತನೆಗೆ ಮಳೆ ಕೊರತೆ ದೊಡ್ಡ ಪ್ರಮಾಣದಲ್ಲಿ ಹಿನ್ನಡೆ ಆಗಿದೆ. ಈಗಾಗಲೇ ಬಿತ್ತಿರುವ ರಾಗಿ ಸಹ ಒಣಗುತ್ತಿದೆ.

17 ಚಾಮರಾಜನಗರ

191 (ಮಿ.ಮೀ.)
129 (ಮಿ.ಮೀ.)
33%

ಜಿಲ್ಲೆಯಲ್ಲಿ ಮುಂಗಾರು ಹಾಗೂ ಮುಂಗಾರುಪೂರ್ವದ ಅವಧಿಯಲ್ಲಿ ಈವರೆಗೆ ಶೇ 55ರಷ್ಟು ಬಿತ್ತನೆಯಾಗಿದೆ. ಮುಂಗಾರು ಪೂರ್ವ ಬೆಳೆಗಳ ಇಳುವರಿ ಶೇ 50ರಷ್ಟು ಇಳಿಕೆಯಾಗಿದೆ. ಐದು ತಾಲ್ಲೂಕುಗಳ ಪೈಕಿ ಕೊಳ್ಳೇಗಾಲದಲ್ಲಿ ಶೇ 79.2 ಮತ್ತು ಹನೂರಿನಲ್ಲಿ ಶೇ 52.4ರಷ್ಟು ಮಳೆ ಕೊರತೆಯಾಗಿದ್ದು, ಸ್ಥಿತಿ ಗಂಭೀರವಾಗಿದೆ. ಕೆರೆಗಳಲ್ಲಿ ನೀರಿನ ಮಟ್ಟ ಕುಸಿಯಲಾರಂಭಿಸಿದೆ.

ಮಾಹಿತಿ: ಪ್ರಜಾವಾಣಿ ಬ್ಯೂರೊಗಳಿಂದ ಪ್ರಜಾವಾಣಿ ಗ್ರಾಫಿಕ್ಸ್

ನಾವು ನೋಡಿದ ಸಿನಿಮಾ

ಪ್ರಕ್ಷುಬ್ಧ ಗಮ್ಯದತ್ತ ನಿಶ್ಯಬ್ದ ನದಿಯ ಪಯಣ

ರಕ್ಷಿತ್ ಶೆಟ್ಟಿ ಹಾಗೂ ರುಕ್ಮಿಣಿ ವಸಂತ್

ನಿಶ್ಯಬ್ದವಾಗಿ, ನಿರುಮ್ಮಳವಾಗಿ, ಹಿತವಾಗಿ ಹರಿಯುವ ನದಿ (ಕಥೆ). ಅದರೊಳಗೇ ಬೆರೆತು ಪ್ರವಹಿಸುವ ಜೋಡಿ. ನದಿಯ ದಾರಿಯಲ್ಲಿ ಒಂದಿಷ್ಟು ತಿರುವು. ಸೇರುವ ಸಮುದ್ರ ಮಾತ್ರ ಪ್ರಕ್ಷುಬ್ಧ. ವೇಗವಾಗಿ ಹರಿಯುವ ಮುನ್ಸೂಚನೆಯುಳ್ಳ ಎರಡನೇ ನದಿಗೊಂದು ವಿಸ್ತಾರ ವೇದಿಕೆ. ನಿರ್ದೇಶಕ ಹೇಮಂತ್ ಎಂ.ರಾವ್ ಮೂರನೇ ಸಿನಿಮಾವಾದ 'ಸಪ್ತ ಸಾಗರದಾಚೆ ಎಲ್ಲೋ– ಸೈಡ್–A'ಯ ನೋಟವಿದು.

ದೃಶ್ಯವೊಂದರ ಹೆಣಿಗೆಯಲ್ಲಿ ಸಾವಧಾನ ತೋರುವ ನಿರ್ದೇಶಕ, ಹೇಮಂತ್. ಹೀಗಾಗಿ ಪ್ರೇಕ್ಷಕನಿಗೂ ಅದನ್ನು ಕಣ್ಣಿಗೆ ಇಳಿಸಿಕೊಳ್ಳುವಾಗ ತಾಳ್ಮೆ ಅಗತ್ಯ. ಈ ನದಿಯ ಹರಿವಿಗೂ ಯಾವುದೇ ಅವಸರವಿಲ್ಲ. ಇಲ್ಲಿ ದೃಶ್ಯಗಳಿಗೂ, ಸಂಗೀತಕ್ಕೂ ಪರಸ್ಪರ ಸ್ಪರ್ಧೆಯಷ್ಟೇ. ಅವುಗಳಲ್ಲಿ ಮಿಂದು ಮೆಲ್ಲನೆ ಹೆಜ್ಜೆ ಹಾಕುವ ಮನು(ರಕ್ಷಿತ್ ಶೆಟ್ಟಿ) ಹಾಗೂ ಪ್ರಿಯಾ(ರುಕ್ಮಿಣಿ ವಸಂತ್) ಈ ನದಿಗೆ ಸೇರುವ ತೊರೆಗಳು. 'ಮನು'ವಿನ ಉಗಮ ಗೂಢ; ಕಾಯಕ–ಚಾಲಕ. 'ಪ್ರಿಯಾ' ಮಧ್ಯಮ ವರ್ಗಕ್ಕೆ ಸೇರಿದ ಸಹಜ ಹುಡುಗಿ. ಈ ಜೋಡಿಯ ಪ್ರೀತಿಯ ಹುಟ್ಟೂ ಗುಟ್ಟು! ಕನಸು ನನಸಾಗಿಸಲು ಹೋಗಿ ಜೈಲು ಸೇರುವ 'ಮನು' ಹಾಗೂ 'ಪ್ರಿಯಾ' ನಡುವಿನ ಗಾಢವಾದ ಪ್ರೀತಿಯ ಪಯಣ, ಮೋಸ, ಪರಿವರ್ತನೆಗಳೇ ಚಿತ್ರದ ಮುಂದಿನ ಕಥೆ. ನದಿ ಒಂದೆರಡು ಇಳಿಜಾರಿನ ತಿರುವುಗಳಲ್ಲಿ ವೇಗ ಪಡೆದರೂ ಮತ್ತೆ ನಿಶ್ಯಬ್ದವಾಗಿ ಹರಿಯುವುದೇ ಅದರ ಗುರಿ. ಸಮುದ್ರ ತಲುಪುತ್ತಲೇ ಕಥೆ ಮತ್ತಷ್ಟು ಬಿಗಿ.

ಸಪ್ತ ಸಾಗರದಾಚೆ ಎಲ್ಲೋ (Side A)

- ರಚನೆ ಮತ್ತು ನಿರ್ದೇಶನ: ಹೇಮಂತ್ ಎಂ. ರಾವ್
- ನಿರ್ಮಾಪಕ: ಪರಂವಃ ಪಿಕ್ಚರ್ಸ್
- ತಾರಾಗಣ: ರಕ್ಷಿತ್ ಶೆಟ್ಟಿ, ರುಕ್ಮಿಣಿ ವಸಂತ್, ರಮೇಶ್ ಇಂದಿರಾ, ಪವಿತ್ರಾ ಲೋಕೇಶ್,ಅವಿನಾಶ್, ಶರತ್ ಲೋಹಿತಾಶ್ವ, ಅಚ್ಯುತ್ ಕುಮಾರ್ ಮುಂತಾದವರು.

'ಸೈಡ್–A' ಮುಂದಿನ ಭಾಗಕ್ಕಿರುವ ಪ್ರವೇಶ. 'ಸೈಡ್–B' ಚಿತ್ರದ ಸೀಕ್ವೆಲ್. ಮೊದಲ ಭಾಗದ ಕಥೆಗೆ 2010 ವೇದಿಕೆಯಾದರೆ, ಅ.20ರಂದು ಬಿಡುಗಡೆಯಾಗಲಿರುವ 'ಸೈಡ್–B' 2020ರಲ್ಲಿ ನಡೆಯುವ ಕಥೆ ಹೊತ್ತಿದೆ. ಮೊದಲ ಭಾಗದಲ್ಲಿರುವ ಕಥೆಯ ಎಳೆ ಬಹಳ ಸರಳ. ಆದರೆ ಅದನ್ನು ಸುದೀರ್ಘವಾಗಿ ಈ ಭಾಗದಲ್ಲಿ ಹೇಮಂತ್ ಪ್ರೇಕ್ಷಕರ ಮುಂದಿಟ್ಟಿದ್ದಾರೆ. ಭಾವನೆಗಳಿಗೆ ಇಲ್ಲಿ ಹೆಚ್ಚಿನ 'ಸ್ಕ್ರೀನ್ ಸ್ಪೇಸ್' ಸಿಕ್ಕಿದೆ. ಇದರ ತೀವ್ರತೆ ಗಾಢವಾಗಿದೆ. ಹೀಗಾಗಿ ಕೆಲ ದೃಶ್ಯಗಳು ಸ್ಕ್ರೀನ್‌ಪ್ಲೇಯಲ್ಲಿ ಅನಗತ್ಯ ಎನಿಸುತ್ತದೆ. ಇವುಗಳನ್ನು ಚೊಕ್ಕವಾಗಿಸಬಹುದಿತ್ತು. ಹೀಗಾಗಿ ಇದು ಅತ್ತ ಎರಡು ಭಾಗಗಳಲ್ಲಿ ಬರಬೇಕಾದ ಕಥೆಯೂ ಅಲ್ಲ, ಇತ್ತ ಒಂದೇ ಭಾಗದಲ್ಲಿ ನಿರ್ದಿಷ್ಟ ಸಮಯದ ಚೌಕಟ್ಟಿನೊಳಗೆ ಹೇಳಿ ಮುಗಿಸಬಹುದಾದ ಕಥೆಯೂ ಅಲ್ಲವೆನಿಸಿಬಿಡುತ್ತದೆ. ಸ್ಕ್ರೀನ್‌ಪ್ಲೇಯಲ್ಲಿ ಒಂದೆರಡು ಕಡೆ ಸಂಭವಿಸುವ ಏಕಾಏಕಿ ಬದಲಾವಣೆಗಳು ಕಥೆಯ ತೀವ್ರತೆಯನ್ನು ಮುಕ್ಕಾಗಿಸಿದೆ. ಹಾಸ್ಯದ ಕೊರತೆ ಕಾಡುತ್ತದೆ.

ನಟರಿಗೆ ಹೇಮಂತ್ ಅವರು ನಡೆಸಿದ ಕಾರ್ಯಾಗಾರದ ಫಲವನ್ನು ತೆರೆಯಲ್ಲಿ ಕಾಣಬಹುದು. ಮನು–ಪ್ರಿಯಾ ಜೋಡಿ ನಡುವಿನ ಕಣ್ಣಿನ ಮಾತುಗಳು, ಬೆರಳ ಸ್ಪರ್ಶದ ಕ್ಷಣಗಳೇ ಇದಕ್ಕೆ ಸಾಕ್ಷ್ಯ. ರುಕ್ಮಿಣಿ ಅವರ ಸಹಜ ನಟನೆ ಅವರ ಪಾತ್ರಕ್ಕೆ ಜೀವತುಂಬಿದೆ. ರಕ್ಷಿತ್ ಶೆಟ್ಟಿ ನಟನೆ ಗಮನಾರ್ಹ. ಕಣ್ಣಿನಲ್ಲೇ ಅವರ ಮಾತುಗಳು ಅಧಿಕ.

ನಟ ರಮೇಶ್ ಇಂದಿರಾ ನಟನೆ ಹಾಗೂ ಪಾತ್ರದ ಕೆತ್ತನೆ ವಿಭಿನ್ನವಾಗಿದೆ. ಉಳಿದಂತೆ ಎಲ್ಲರೂ ತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಚರಣ್ ರಾಜ್ ಸಂಗೀತದ ಎಳೆ ಸಿನಿಮಾದುದ್ದಕ್ಕೂ ಸಮುದ್ರದ ಅಲೆಯಂತೆ ಅಪ್ಪಳಿಸುತ್ತಲೇ ಇರುತ್ತದೆ. 'ಹೋರಾಟ' ಎನ್ನುವ ಭಿನ್ನವಾದ ಎಳೆಯೂ ಇದರೊಳಗಿದೆ. ಅದ್ವೈತ ಗುರುಮೂರ್ತಿ ಛಾಯಾಚಿತ್ರಗ್ರಹಣ ಗಮನ ಸೆಳೆಯುತ್ತದೆ. ಸಿನಿಮಾದುದ್ದಕ್ಕೂ ನೀಲಿ ಬಣ್ಣಕ್ಕೆ ಹಲವು ಆಯಾಮಗಳಿವೆ.

ಕ್ಲೈಮ್ಯಾಕ್ಸ್ ಬಳಿಕ 'ಸೈಡ್–B'ಯ ರಭಸವಾಗಿ ಧುಮ್ಮಿಕ್ಕುವ ತುಣುಕುಗಳಿವೆ. 'ಸುರಭಿ'ಯಾಗಿ ನಟಿ ಚೈತ್ರಾ ಜೆ.ಆಚಾರ್ ಅವರ ಪ್ರವೇಶ ಇಲ್ಲಿದೆ. ಈ ಗ್ಲಿಮ್ಸ್ ಎರಡನೇ ಭಾಗದ ನಿರೀಕ್ಷೆಯನ್ನು ಹೆಚ್ಚಿಸಿವೆ. -ಅಭಿಲಾಷ್ ಪಿ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಸೆಪ್ಟೆಂಬರ್ 1, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷಋತು ತಿಥಿ: ಶ್ರಾವಣ ಕೃಷ್ಣ ದ್ವಿತೀಯ ಗಂ. 23-51 ನಕ್ಷತ್ರ: ಪೂವಾಭಾದ್ರ ಗಂ. 14-56 ಯೋಗ: ಧೃತಿ ಗಂ. 13-09 ಕರಣ: ತೈತಿಲ ಗಂ. 13-32, ಸಿಂಹ ಮಾಸದ 15ನೇ ದಿನ, ಮಳೆನಕ್ಷತ್ರ: ಪೂರ್ವ ಫಲ್ಗುಣಿ 1. ರಾಹುಕಾಲ : ಬೆಳಿಗ್ಗೆ 10-30 – 12-00, ಸೂರ್ಯೋದಯ : 06-23 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 15 ಸಫರ್
ಅದೃಷ್ಟ ಸಂಖ್ಯೆ : 2, 10
ದಿನ ವಿಶೇಷ: ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ

ಮೇಷ: ರಾಜಕೀಯದಲ್ಲಿ ಹೆಚ್ಚಿನ ಪ್ರಭಾವ ಹೊಂದಲು ರಾಜಕೀಯ ಧುರೀಣರ ಕೃಪಾಕಟಾಕ್ಷ ಪಡೆದುಕೊಳ್ಳ ಬೇಕಾಗುವುದು. ಮಗನಿಗೆ ಸದಸ್ಯತ್ವದ ಸಂಸ್ಥೆ ವತಿಯಿಂದ ವಿದೇಶದಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ನೆರವು ಸಿಗುವುದು.

ವೃಷಭ: ನಿಮ್ಮ ವೃತ್ತಿಕ್ಷೇತ್ರದ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನು ಹಿಡಿತಕ್ಕೆ ತೆಗೆದುಕೊಂಡು ಉತ್ಸಾಹದಿಂದ ಕಾರ್ಯ ಪ್ರವೃತ್ತರಾಗುವಿರಿ. ವೃತ್ತಿ ಜೀವನದಲ್ಲಿ ಉತ್ತಮ ಸುಧಾರಣೆ ಕಂಡುಬರಲಿದೆ. ಉದ್ಯೋಗದಲ್ಲಿ ಅನಿಶ್ಚಿತತೆ ದೂರ.

ಮಿಥುನ: ಎಲ್ಲರೊಂದಿಗೆ ಮುಕ್ತವಾಗಿ ಬೆರೆಯುವುದನ್ನು ಅಭ್ಯಾಸ ಮಾಡಿಕೊಳ್ಳಿರಿ. ಸ್ವಂತವಾಗಿ ವ್ಯವಹಾರ ಮಾಡುವವರು, ವ್ಯಾಸಂಗದಲ್ಲಿ ವಿದ್ಯಾರ್ಥಿಗಳು ಪ್ರಗತಿ ಸಾಧಿಸುವರು.

ಕರ್ಕಾಟಕ: ತೆರೆಮರೆಯಲ್ಲಿ ನಡೆಯುತ್ತಿರುವ ನಿಮ್ಮ ವಿರುದ್ಧದ ಸಂಚನ್ನು, ರಾಜಕೀಯ ಚಟುವಟಿಕೆಗಳನ್ನು ಆಪ್ತರೊಬ್ಬರ ಮೂಲಕವಾಗಿ ತಿಳಿದುಕೊಳ್ಳು-ವಿರಿ. ಹೂಡಿಕೆ ವಿಚಾರದಲ್ಲಿ ಯೋಚಿಸಿ ನಿರ್ಧಾರ ಕೈಗೊಳ್ಳುವುದು ಉತ್ತಮ.

ಸಿಂಹ: ವಿದ್ಯಾರ್ಥಿಗಳಿಗೆ ತಮ್ಮ ಶೈಕ್ಷಣಿಕ ವಿಚಾರದಲ್ಲಿ ಎಂದಿಗೂ ಮರೆಯಲಾಗದ ಕಹಿ ಘಟನೆ ನಡೆಯಬಹುದು. ಕಣ್ಣಿನ ದೃಷ್ಟಿ ದೋಷ ಸರಿಪಡಿ-ಸಿಕೊಳ್ಳಲು ವೈದ್ಯರನ್ನು ಭೇಟಿಮಾಡಿ. ಮಕ್ಕಳ ತುಂಟತನದ ಬಗ್ಗೆ ಗಮನವಿರಲಿ.

ಕನ್ಯಾ: ಸೋದರರೊಡನೆ ಅಥವಾ ದಾಯಾದಿಗಳೊಡನೆ ಇದ್ದ ಕಲಹಗಳು ಈ ದಿನಾಂತ್ಯದಲ್ಲಿ ನಿರ್ಮೂಲವಾಗಿ ಶುಭವಾಗಲಿದೆ. ಷೇರು ವ್ಯವಹಾರದಲ್ಲಿ ಹೆಚ್ಚಿನ ಹಣವನ್ನು ಹೂಡಿಕೆ ಮಾಡುವಂತಾಗಲಿದೆ. ಅತಿಯಾದ ಆಲಸ್ಯ ಕಾಡಲಿದೆ.

ತುಲಾ: ಗುರುವಿನ ಮಾರ್ಗದರ್ಶನದಂತೆ ನಡೆಯುವ ಈ ದಿನದ ಕೆಲಸದಲ್ಲಿ ಸರ್ವತೋಮುಖ ಅಭಿವೃದ್ಧಿ ಹೊಂದುವಿರಿ. ರಿಯಲ್ ಎಸ್ಟೇಟ್ ವ್ಯವಹಾರಗಳ ಸಮಸ್ಯೆಯನ್ನು ನಿವಾರಿಸಿಕೊಂಡು, ವರಮಾನ ಹೆಚ್ಚಿಸಿಕೊಳ್ಳುವಿರಿ.

ವೃಶ್ಚಿಕ: ಮನಸ್ಸು ಧ್ಯಾನದತ್ತ ಹರಿಯಲು ಧಾರ್ಮಿಕ ವಿಚಾರಧಾರೆಯಂಥ ಸಮಾರಂಭಗಳ ಆಲಿಕೆಯು ಕಾರಣವಾಗುವುದು. ವಕೀಲೀ ವೃತ್ತಿಯನ್ನು ಅಭ್ಯಾಸಿಸುವವರಿಗೆ ಪಾಪ-ಪ್ರಜ್ಞೆಯು ಕಾಡಲಿದೆ. ಪಿತ್ರಾರ್ಜಿತ ಆಸ್ತಿ ಕೈಸೇರಲಿದೆ.

ಧನು: ಪ್ರಭಾವಿತ ವ್ಯಕ್ತಿಗಳಿಂದ ಸಿಕ್ಕ ಸಹಕಾರ ಈ ಸಮಯದಲ್ಲಿ ಸಹಾಯಕ್ಕೆ ಬರಲಿದೆ. ವಿರೋಧಿಗಳು ರಾಜಿಯಾಗಲು ಬರುವಂಥ ಸನ್ನಿವೇಶಗಳು ನಡೆಯಬಹುದು. ಪತ್ನಿಯ ಆರೋಗ್ಯವು ಸುಧಾರಿಸುವುದು.

ಮಕರ: ಯೋಜನೆಗಳು ಹಾಗೂ ಅವುಗಳ ಬೆಳವಣಿಗೆಗಳ ಬಗ್ಗೆ ಸಂಬಂಧ ಪಟ್ಟವರಲ್ಲಿ ದಿನವಿಡೀ ಚರ್ಚಿಸಿದರೂ ತೀರ್ಮಾನಕ್ಕೆ ಬರುವುದು ಕಷ್ಟಕರ ವಿಚಾರ. ಮೇಲಧಿಕಾರಿಗಳಿಂದ ನೀವು ಅಪೇಕ್ಷಿಸುವ ಸಹಕಾರ ದೊರೆಯಲಿದೆ.

ಕುಂಭ: ವಿದೇಶಿ ವ್ಯವಹಾರಗಳು ಈ ದಿನ ಕೈಗೂಡಲಿದೆ. ಕಲಾವಿದರಿಗೆ ಹಾಗೂ ನಟ ನಟಿಯರಿಗೆ ಉತ್ತಮ ಅವಕಾಶಗಳು ಒದಗಿ ಬರುವುದು. ಸರ್ಕಾರಿ ನೌಕರರಿಗೆ ನಾನಾ ರೀತಿಯಲ್ಲಿ ಅಡ್ಡಿ- ಆತಂಕಗಳು ಕಾಡಬಹುದು.

ಮೀನ: ಬಹಳ ದಿನಗಳಿಂದ ಕಾಯಿಲೆಯಿಂದ ಬಳಲುತ್ತಿರುವವರು ಔಷಧಿಗೆ ಪ್ರತಿಕ್ರಿಯಿಸಿ ಚೇತರಿಕೆಯ ಹಂತಕ್ಕೆ ಹೋಗುವಿರಿ. ಉದ್ಯೋಗಾಕಾಂಕ್ಷಿಗಳಿಗೆ ವಿದ್ಯಾರ್ಹತೆಗೆ ಸರಿಯಾದ ಕೆಲಸಗಳು ದೊರಕುವಲ್ಲಿ ವ್ಯತ್ಯಾಸಗಳಾಗಬಹುದು.

ಪರಿಮಳಯುಕ್ತ ತಂಗಾಳಿಯಂಥ ಮೇಷ್ಟ್ರು

ನುಡಿ ಬೆಳಗು



ಪ್ರೊ.ಎಂ. ಕೃಷ್ಣೇಗೌಡ

ಮಾದಯ್ಯ ಮೇಷ್ಟ್ರು ಅಂತ ಅವರ ಹೆಸರು. ಆ ಹೆಸರು ಹೇಳಿದರೆ ಈಗಲೂ ನಮ್ಮೂರಿನ ನನ್ನ ವಾರಗೆಯ ಹಲವರ ಕಣ್ಣುಗಳಲ್ಲಿ ಒಂದು ಮಿಂಚು ಹಾದುಹೋಗುತ್ತದೆ. ಈಗ್ಗೆ ಐವತ್ತೈದು ವರ್ಷಗಳ ಹಿಂದೆ ನಮ್ಮೂರಿನ ಸರ್ಕಾರಿ ಪ್ರಾಥಮಿಕ ಪಾಠಶಾಲೆಗೆ ಅವರು ಬಂದರು. ಆಗ ನಾನು ಐದನೇ ತರಗತಿ ಓದುತ್ತಿದ್ದೆ. ಸುಮಾರು ಹದಿಮೂರೋ ಹದಿನಾಲ್ಕೋ ವರ್ಷ ನಮ್ಮೂರ ಅದೇ ಶಾಲೆಯಲ್ಲಿ ಮೇಷ್ಟ್ರಾಗಿದ್ದರು. ನಮ್ಮ ಅಪ್ಪ ಅವ್ವರಿಗೆ ನಾವು ಎಂಟು ಜನ ಮಕ್ಕಳು. ಈ ಪೈಕಿ ಕೂಲಿಮಠದಲ್ಲಿ ಪ್ರಾಥಮಿಕ ಪಾಠ ಕಲಿತ ನಮ್ಮ ದೊಡ್ಡಣ್ಣನವರನ್ನು ಹೊರತುಪಡಿಸಿ ಉಳಿದ ಏಳು ಜನರಿಗೂ ಮಾದಯ್ಯ ಮೇಷ್ಟ್ರು ಅಕ್ಷರ ಭಿಕ್ಷೆ ಹಾಕಿದ್ದಾರೆ.

ಆ ಕಾಲಕ್ಕೆ ಮಾದಯ್ಯ ಮೇಷ್ಟ್ರು ಅಂದರೆ ನಮ್ಮ ಹೀರೋ. ಆಗಿನ್ನೂ ಯುವಕರಾಗಿದ್ದ ಮೇಷ್ಟ್ರು ಒಳ್ಳೆಯ ರೂಪವಂತರು, ಪ್ರತಿಭಾವಂತರು. ಒಮ್ಮೆಯೂ ಅವರು ತರಗತಿಯಲ್ಲಿ ಕೂತು ಆಕಳಿಸಿದ್ದು ನನ್ನ ನೆನಪಿನಲ್ಲಿಲ್ಲ. ಅವರ ಪಾಠ ಕೇಳುವುದೇ ಒಂದು ಚಂದದ ಅನುಭೂತಿ ನಮಗೆ. ಪಾಠ ಮಾಡುವಾಗ ಅವರ ಸ್ವಚ್ಛ ಉಡುಗೆ, ಸುಪ್ರಸನ್ನ ಮುಖ, ಮೃದುಹಾಸ, ಸುಖಶ್ರಾವ್ಯ ದನಿ, ಸೊಗಸು ಹಾವಭಾವ -ನನ್ನ ನೆನಪಿನ ಭಿತ್ತಿಯ ಮೇಲೆ ಒಂದಿನಿತೂ ಮಾಸದೆ ಹಾಗೆಹಾಗೇ ಇವೆ.

ಕೆಲವು ದಿನಗಳ ಹಿಂದೆ ಮೊಮ್ಮಗಳ ಮದುವೆಯ ಪತ್ರ ಹಿಡಿದು ಅವರ ಅಳಿಯನ ಜೊತೆ ನಮ್ಮ ಮನೆಗೆ ಬಂದಿದ್ದರು. ಹತ್ತತ್ತಿರ ಎಂಬತ್ತೈದು ತಲುಪಿರುವ ಮಾದಯ್ಯ ಮೇಷ್ಟರ ಹೆಜ್ಜೆ ಈಗ ಒಂದಿಷ್ಟು ನಿಧಾನವಾಗಿದೆ. ಮುಖದ ಆ ಮೃದುಹಾಸ, ದನಿಯ ಮಾರ್ದವತೆ ಒಂದಿಷ್ಟೂ ಮಾಸಿಲ್ಲ. ನಾನು ಕಾಲು ಮಡಚಿ ಕೂತು ಅವರ ಪಾದಗಳಿಗೆ ಹಣೆ ಹಚ್ಚಿ ನಮಸ್ಕಾರ ಮಾಡಿದೆ. ಸಂಕೋಚದ ಮುದ್ದೆಯಾದರು, ವಾತ್ಸಲ್ಯದ ಮಡುವಾದರು ಮೇಷ್ಟ್ರು. ಅವರು ಎರಡೂ ಹಸ್ತಗಳಿಂದ ನನ್ನ ಮೈದಡವುತ್ತಿದ್ದರೆ ಇಬ್ಬರ ಕಣ್ಣುಗಳೂ ನೀರಾಡುತ್ತಿದ್ದವು. ಒಂದಿಷ್ಟು ಹೊತ್ತು ಇಬ್ಬರೂ ಮಾತಾಡಲಿಲ್ಲ. ಆಮೇಲೆ ಹಳೆಯ ನೆನಪುಗಳ ಓಣಿಗಳಲ್ಲಿ ಬಹಳ ಹೊತ್ತು ಸುಖಸಂಚಾರ ಮಾಡಿದೆವು. ಮಾತಿನ ಮಧ್ಯೆ ಅವರು ಹೇಳಿದ್ದು- 'ನನ್ನ ಸೇವಾವಧಿಯುದ್ದಕ್ಕೂ ನನ್ನ ಮಕ್ಕಳಿಗೆ ನಿರ್ವಂಚನೆಯಿಂದ ಪಾಠ ಮಾಡಿದೆ ಕಣಪ್ಪ. ಅದರಿಂದ ಗಳಿಸಿದ ಪ್ರೀತಿ, ಸದ್ಭಾವನೆಗಳೇ ನಾನು ಸಂಪಾದಿಸಿದ ಆಸ್ತಿ. ಇಡೀ ಜನ್ಮ ನಾನು ಕೂತು ತಿಂದರೂ ಆ ಆಸ್ತಿ ಕರಗೋದಿಲ್ಲ ಕಣಪ್ಪ'. ಮೇಷ್ಟ್ರು ನಮ್ಮ ಮನೆಯಿಂದ ಹೊರಡುವಾಗ ಅವರ ಕೈಬರಹದ ಒಂದು ಸಣ್ಣ ನೋಟ್ ಪುಸ್ತಕವನ್ನು ನನ್ನ ಕೈಗಿಟ್ಟು 'ಬಿಡುವಾದಾಗ ಓದಪ್ಪ' ಅಂತ ಹೇಳಿದರು. ಮೊನ್ನೆ ಆ ಪುಸ್ತಕವನ್ನು ತೆರೆದು ಓದಿದೆ. ಅವರ ಬದುಕಿನ ಕೆಲವು ನೆನಪುಗಳನ್ನು ಬರೆದಿದ್ದಾರೆ ಅದರಲ್ಲಿ. ಅದರ ಬಹುಭಾಗ ನಮ್ಮೂರಿನ ನೆನಪುಗಳೇ ಇವೆ. ಅಚ್ಚರಿಯೆಂದರೆ ಅರ್ಧ ಶತಮಾನ ಹಿಂದೆ ಅವರ ವಿದ್ಯಾರ್ಥಿಗಳಾಗಿದ್ದ ನಮ್ಮೂರಿನ ಎಷ್ಟೋ ಮಂದಿಯ ಹೆಸರನ್ನು ಅವರ ಇನಿಷಿಯಲ್ ಸಹಿತ ಬರೆದಿದ್ದಾರೆ. ಆ ಕಾಲದಲ್ಲಿ ನಮ್ಮೂರಿನಲ್ಲಿ ಬದುಕಿದ್ದ ಹಿರಿಯರೆಲ್ಲರ ಹೆಸರುಗಳನ್ನೂ ಒಂದಿಷ್ಟೂ ತಪ್ಪಿಲ್ಲದಂತೆ ಬರೆದಿದ್ದಾರೆ.

ಮಾದಯ್ಯ ಮೇಷ್ಟರ ಶುದ್ಧ ಬದುಕು ನೆನಪಾದಾಗಲೆಲ್ಲಾ ಒಂದು ಪರಿಮಳಯುಕ್ತ ತಂಗಾಳಿ ನನ್ನ ಮೈಯನ್ನು ಹಾದುಹೋದಂತಾಗುತ್ತದೆ ನನಗೆ. ❖

ಪದಬಂಧ 5428

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಹಿತ್ತಿಲಲ್ಲಿ ಒಣ ಹಾಕಿದ ತೆಳುವಾದ ಸೀರೆ (3)
3.ಮುಂದೆ ಬರಲಿರುವ ಕಾಲ (3)
5.ಪುಣ್ಯ ಸ್ಥಳವಿದು (2)
6.ಧಮಕಿ ಹಾಕುತ್ತಿರುವನಲ್ಲಾ ಈ ನೀಚ ವ್ಯಕ್ತಿ! (3)
7.ಇಲ್ಲಿಯೇ ಹಾಜರಾಗಿರುವ ಸಾಮ್ರಾಟ! (4)
8.ಸುಳ್ಳು ನುಡಿಯದ ಸಾವಿತ್ರಿಯ ಪತಿ (4)
10.ಕರಡಿಗಳ ಒಡೆಯನಿಲ್ಲಿ ತಿರುಗಿಹನಲ್ಲಾ? (4)
11.ಚಾವಡಿಯನ್ನೇರಿದ ಪಿಸುಣ (4)
13.ತವರಲ್ಲಿರುವ ಲೋಹ (3)
14.ಭಾರತ ಹೊತ್ತಿರುವ ಒಜ್ಜೆ! (2)
15.ಗಸಗಸೆ ಚಲ್ಲಿದ್ದು ಈ ಹೆಬ್ಬಾಗಿಲ ಬಳಿ! (3)
17.ಭಾವನ ಗುಣ! (3)

ಮೇಲಿಂದ ಕೆಳಕ್ಕೆ
1.ಖರ್ಚು ಕಳೆದು ಉಳಿದುದು (2)
2.ತಾಪತ್ರಯವಿದ್ದಾಗ ಬರೆದ ಓಲೆ (2)
4.ಪ್ರೇಮಿಗಳ ಅಗಲಿಕೆಯ ನೋವು ದೀರ್ಘವಾಗಿದೆಯಲ್ಲಾ! (3)
5.ಸುಖದ ಸುದ್ದಿಯಿದು (6)
6.ಆನೆಗೂ ಆಡಿಗೂ ಇರುವ ವ್ಯತ್ಯಾಸ (6)
7.ಚನ್ನಾಗಿ ಕಡೆಯಲ್ಪಟ್ಟದ್ದು (3)
9.ಶಾಶ್ವತವಿರದೆ ನಾಶವಾಗುವಂಥದ್ದು (3)
12.ಕೋತಿ ಇಲ್ಲಿಗೆ ಬಂದಿದೆ (3)
14.ಅಭಾವ ಕಾಲದಲ್ಲಿ ಆಗಮಿಸಿದ ಅಕ್ಕನ ಗಂಡ (2)
16.ನೀರು ಒಸರುವ ಜಾಗ (2)



5427ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿನೋದ 3.ಗುಮಾನಿ 5.ನರ 6.ರಿಪೇರಿ 7.ಯಮ 9.ಶಿಶಿರ 10.ಹರವಿ 11.ತಟ 13.ಪರಾಗ 15.ಸುರ 16.ಲುಬ್ಧಕ 17.ದಶಮ

ಮೇಲಿಂದ ಕೆಳಕ್ಕೆ:
1.ವಿವರ 2.ದಳ್ಳುರಿ 3.ಗುಜರಿ 4.ನಿಶ್ಚಯ 5.ನಖಶಿಖಾಂತ 8.ಮನೋವಿಕಾರ 12.ಟಪಾಲು 13.ಪದಕ 14.ಗದ್ದದ 15.ಸುಗಮ

ಸುಡೊಕು 5814

		5	6		2			
	3				4	6	8	
6		4		1			5	
	8	3		6				4
1				4				8
2			8		1	5	6	
					3			
4		2		9			3	1
	1		4		6			5

5813 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಷೇರುಪೇಟೆ ವಹಿವಾಟು 256
ಹಿಂದಿನ ಅಂತ್ಯ 65,087 | ಇಂದಿನ ಅಂತ್ಯ 64,831
10:00 12:00 14:00 16:00

ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ 19,347
ಇಂದಿನ ಅಂತ್ಯ 19,253
94
ದಿನದ ಕನಿಷ್ಠ 19,223

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ
ಬೆಂಗಳೂರು
100 ಮೊಟ್ಟೆಗೆ ₹465
12 ಮೊಟ್ಟೆಗೆ ₹65
ಮೈಸೂರು
100 ಮೊಟ್ಟೆಗೆ ₹465

ಖಾದ್ಯ ತೈಲ ಮುಂಬೈ (10 ಕೆಜಿಗೆ)
ಶೇಂಗಾ (ಫಿಲ್ಟರ್ಡ್) ₹1760(1760)
ಸೋಯಾ (ರಿಫೈನ್ಡ್) ₹920(925)
ಸೂರ್ಯಕಾಂತಿ (ರಿಫೈನ್ಡ್) ₹920(925)
ಪಾಮೋಲಿನ್ ₹848(845)

ಎನ್.ಆರ್.ಪುರ ರಬ್ಬರ್
ಆರ್‌ಎಸ್‌ಎಸ್-4 ₹143
ಆರ್‌ಎಸ್‌ಎಸ್-5 ₹136
ಲಾಟ್ ₹122
(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಪುತ್ತೂರು ₹4500-7300
ತಿಪಟೂರು ---
ತುರುವೇಕೆರೆ ₹8800-8800

ವಿನಿಮಯ ದರ
$ ಡಾಲರ್ 82.70
£ ಪೌಂಡ್ 105.04
€ ಯೂರೊ 90.06
¥ ಯೆನ್ (100ಕ್ಕೆ) 57

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)
ದಪ್ಪ ₹2000-2500
ಮಧ್ಯಮ ₹1500-2000
ಸಣ್ಣ ₹1000-1500

ಅದಾನಿ: ₹ 35,708 ಕೋಟಿ ನಷ್ಟ

ನವದೆಹಲಿ (ಪಿಟಿಐ): ಒಸಿಸಿಆರ್‌ಪಿ ವರದಿಯ ಪರಿಣಾಮವಾಗಿ ಅದಾನಿ ಸಮೂಹದ ಕಂಪನಿಗಳ ಷೇರುಗಳ ಮೌಲ್ಯ ಗುರುವಾರ ಇಳಿಕೆ ಕಂಡಿತು. ಷೇರುಪೇಟೆಯಲ್ಲಿ ನೋಂದಾಯಿಸಿಕೊಂಡಿರುವ 10 ಕಂಪನಿಗಳಲ್ಲಿ 9 ಕಂಪನಿಗಳ ಷೇರುಗಳು ನಕಾರಾತ್ಮಕ ಮಟ್ಟದಲ್ಲಿ ವಹಿವಾಟು ಅಂತ್ಯಗೊಂಡಿದ್ದು, ಈ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯದಲ್ಲಿ ಒಟ್ಟು ₹ 35,708 ಕೋಟಿ ಕಡಿಮೆ ಆಗಿದೆ. ಎಸಿಸಿ ಷೇರು ಮಾತ್ರವೇ ಶೇ 0.47ರಷ್ಟು ಹೆಚ್ಚಾಗಿದೆ.



ಬಿಎಸ್‌ಇ ಸೆನ್ಸೆಕ್ಸ್ 256 ಅಂಶ ಇಳಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್, ಎಫ್‌ಎಂಸಿಜಿ, ತೈಲ ಮತ್ತು ಅನಿಲ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಒಳಗಾಗಿದ್ದರಿಂದ ದೇಶದ ಷೇರುಪೇಟೆಗಳಲ್ಲಿ ಗುರುವಾರ ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು.

ಬಿಎಸ್‌ಇ ಸೆನ್ಸೆಕ್ಸ್ 256 ಅಂಶ ಇಳಿಕೆ ಕಂಡರೆ ಎನ್‌ಎಸ್‌ಇ ನಿಫ್ಟಿ 94 ಅಂಶ ಇಳಿಕೆ ಕಂಡಿತು.

ಆಗಸ್ಟ್ ತಿಂಗಳ ವಾಯಿದಾ ವಹಿವಾಟಿನ ಕೊನೆಯ ದಿನವಾದ ಗುರುವಾರ ಅಸ್ಥಿರ ವಹಿವಾಟು ನಡೆಯಿತು ಎಂದು ರೆಲಿಗೇರ್ ಬ್ರೋಕಿಂಗ್‌ನ ಹಿರಿಯ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

31–8–2023

ಜಾವಾ 70/80(ಹೊಸ)	12500-12600
ಜಾವಾ 80/90(ಹೊಸ)	12400-12500
ದಪ್ಪ ಮಧ್ಯಪ್ರದೇಶ(ಹೊಸ)	13100-13200
ದಪ್ಪ ಗುಜರಾತ್(ಹೊಸ)	14200-14300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1770(1770)
ಒಂದು ವಾರದ ಡೆಲಿವರಿ	1775(1775)
ಸೋಯಾ ಕಚ್ಚಾ	872(870)
ಪಾಮ್ ವಾರದ ಡೆಲಿವರಿ	846(841)
ಸೂರ್ಯಕಾಂತಿ ಎಣ್ಣೆ ಕಚ್ಚಾ	850(860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59200 (59,000)
ಬೆಳ್ಳಿ ಕೆ.ಜಿ 74700 (74650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ಅವಧಿ: ಎನ್‌ಎಸ್‌ಒ ಮಾಹಿತಿ

ಜಿಡಿಪಿ ಶೇ 7.8ರಷ್ಟು ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಆರ್ಥಿಕ ಬೆಳವಣಿಗೆ (ಜಿಡಿಪಿ) ದರವು ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ ಶೇ 7.8ರಷ್ಟು ಆಗಿದೆ. ಈ ಮೂಲಕ ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಅರ್ಥ ವ್ಯವಸ್ಥೆ ತನ್ನದು ಎಂಬ ಹೆಗ್ಗಳಿಕೆಯನ್ನು ಭಾರತ ಉಳಿಸಿಕೊಂಡಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ (ಶೇ 13.1) ಬೆಳವಣಿಗೆಯಲ್ಲಿ ಇಳಿಕೆ ಆಗಿದೆ.

ಚೀನಾದ ಜಿಡಿಪಿ ಬೆಳವಣಿಗೆಯು 2023ರ ಏಪ್ರಿಲ್–ಜೂನ್ ಅವಧಿಯಲ್ಲಿ ಶೇ 6.3ರಷ್ಟು ಆಗಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ಕೃಷಿ ವಲಯದ ಬೆಳವಣಿಗೆಯು ಶೇ 2.4 ರಿಂದ ಶೇ 3.5ಕ್ಕೆ ಏರಿಕೆ ಕಂಡಿದೆ. ಆದರೆ, ತಯಾರಿಕಾ ವಲಯದ ಬೆಳವಣಿಗೆಯು ಶೇ 6.1 ರಿಂದ ಶೇ 4.7ಕ್ಕೆ ಇಳಿಕೆ ಕಂಡಿದೆ.

ಹಣಕಾಸು, ರಿಯಲ್ ಎಸ್ಟೇಟ್ ಮತ್ತು ವೃತ್ತಿಪರ ಸೇವೆಗೆ ಸಂಬಂಧಿಸಿದ ವಲಯಗಳ ಬೆಳವಣಿಗೆಯು ಶೇ 8.5 ರಿಂದ ಶೇ 12.2ಕ್ಕೆ ಏರಿಕೆ ಕಂಡಿದೆ.

ಗಣಿಗಾರಿಕೆ ಶೇ 9.5 ರಿಂದ ಶೇ 5.8ಕ್ಕೆ, ವಿದ್ಯುತ್, ಅನಿಲ, ನೀರು ಪೂರೈಕೆ ಮತ್ತು ಇತರ ಸೇವೆಗಳು ಶೇ 14.9 ರಿಂದ ಶೇ 2.9ಕ್ಕೆ ಇಳಿಕೆ ಕಂಡಿವೆ. ನಿರ್ಮಾಣ ವಲಯದ ಬೆಳವಣಿಗೆಯು ಶೇ 16 ರಿಂದ ಶೇ 7.9ಕ್ಕೆ ಇಳಿಕೆ ಆಗಿದೆ.

ಈ ಹಿಂದೆ ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿ ಜಿಡಿಪಿ ಬೆಳವಣಿಗೆ ಶೇ 4.5 ಮತ್ತು ಜನವರಿ–ಮಾರ್ಚ್ ಅವಧಿಯಲ್ಲಿ ಶೇ 6.1ರಷ್ಟು ಆಗಿತ್ತು.

ವಿಶ್ವದ ಪ್ರಮುಖ ಆರ್ಥಿಕತೆಗಳು ಗರಿಷ್ಠ ಹಣದುಬ್ಬರದ ಹಿಡಿತಕ್ಕೆ ಸಿಲುಕಿರುವ ಈ ಸಂದರ್ಭದಲ್ಲಿ ಭಾರತವು ಜಾಗತಿಕ ಅಡೆತಡೆಗಳನ್ನು ಧೈರ್ಯ ಮತ್ತು ಬಲಿಷ್ಠವಾದ ರಾಜಕೀಯ ನಾಯಕತ್ವದಿಂದ ಎದುರಿಸಿದೆ ಎಂದು ಅಸೋಚಾಂ ಪ್ರಧಾನ ಕಾರ್ಯದರ್ಶಿ ದೀಪಕ್ ಸೂದ್ ಹೇಳಿದ್ದಾರೆ.

ಶೇ 6.5ರಷ್ಟು ಬೆಳವಣಿಗೆ: ಭಾರತದ ಆರ್ಥಿಕತೆಯು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 6.5ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಇದೆ ಎಂದು ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಗುರುವಾರ ಹೇಳಿದ್ದಾರೆ.

ಹಣದುಬ್ಬರವು ನಿಯಂತ್ರಣ ಮೀರದಂತೆ ಎಚ್ಚರವಹಿಸುವುದರ ಬಗ್ಗೆ ಆತಂಕ ಪಡಬೇಕಿಲ್ಲ. ಪೂರೈಕೆ ಸುಧಾರಿಸಲು ಮತ್ತು ಬೆಲೆ ನಿಯಂತ್ರಿಸಲು ಕೇಂದ್ರ ಸರ್ಕಾರ ಮತ್ತು ಆರ್‌ಬಿಐ ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳುತ್ತವೆ ಎಂದು ಅವರು ತಿಳಿಸಿದ್ದಾರೆ.

ಹೊಸ ಉತ್ಪನ್ನಗಳು ಮಾರುಕಟ್ಟೆಗೆ ಬರಲಿರುವುದರಿಂದ ಹಾಗೂ ಸರ್ಕಾರ ತೆಗೆದುಕೊಂಡಿರುವ ಕ್ರಮಗಳಿಂದಾಗಿ ಆಹಾರ ಹಣದುಬ್ಬರ ಇಳಿಕೆ ಕಾಣುವ ಸಾಧ್ಯತೆ ಇದೆ. ಹೀಗಿದ್ದರೂ ಆಗಸ್ಟ್‌ನಲ್ಲಿ ಆಗಿರುವ ಮುಂಗಾರು ಮಳೆ ಕೊರತೆಯ ಪರಿಣಾಮವನ್ನು ಗಮನಿಸಬೇಕಿದೆ ಎಂದಿದ್ದಾರೆ.

ವಿತ್ತೀಯ ಕೊರತೆ ಶೇ 33.9

ನವದೆಹಲಿ: ವಿತ್ತೀಯ ಕೊರತೆಯು ಪ್ರಸಕ್ತ ಹಣಕಾಸು ವರ್ಷದ ನಾಲ್ಕು ತಿಂಗಳಲ್ಲಿ 2023–24ರ ಅಂದಾಜಿನ ಶೇ 33.9ರಷ್ಟು ಆಗಿದೆ. ಮೌಲ್ಯದ ಲೆಕ್ಕದಲ್ಲಿ ₹ 6.06 ಲಕ್ಷ ಕೋಟಿ ತಲುಪಿದೆ ಎಂದು ಲೆಕ್ಕಪತ್ರಗಳ ಮಹಾನಿಯಂತ್ರಕರು (ಸಿಜಿಎ) ಬಿಡುಗಡೆ ಮಾಡಿರುವ ವರದಿ ತಿಳಿಸಿದೆ.

2022–23ರ ಇದೇ ಅವಧಿಯಲ್ಲಿ ವಿತ್ತೀಯ ಕೊರತೆಯು ಬಜೆಟ್ ಅಂದಾಜಿನ ಶೇ 20.5ರಷ್ಟು ಇತ್ತು.

2023–24ಕ್ಕೆ ವಿತ್ತೀಯ ಕೊರತೆಯು ಶೇ 5.9ರಷ್ಟು ಆಗುವ ಅಂದಾಜನ್ನು ಸರ್ಕಾರ ಮಾಡಿದೆ. 2022–23ರಲ್ಲಿ ವಿತ್ತೀಯ ಕೊರತೆ ಶೇ 6.4ರಷ್ಟು ಇತ್ತು.

ಮೂಲಸೌಕರ್ಯ: ಹೆಚ್ಚಿದ ಚಟುವಟಿಕೆ

ನವದೆಹಲಿ (ಪಿಟಿಐ): ದೇಶದ ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆಯು ಜುಲೈ ತಿಂಗಳಲ್ಲಿ ಶೇಕಡ 8ರಷ್ಟು ಆಗಿದೆ. ಕಲ್ಲಿದ್ದಲು, ಕಚ್ಚಾತೈಲ ಮತ್ತು ನೈಸರ್ಗಿಕ ಅನಿಲ ಉತ್ಪಾದನಾ ವಲಯಗಳಲ್ಲಿ ದಾಖಲಾದ ಆರೋಗ್ಯಕರ ಬೆಳವಣಿಗೆಯು ಈ ಏರಿಕೆಗೆ ನೆರವಾಗಿದೆ.

ಕಳೆದ ವರ್ಷದ ಜುಲೈ ತಿಂಗಳಿನಲ್ಲಿ ಎಂಟು ವಲಯಗಳ ಬೆಳವಣಿಗೆ ಪ್ರಮಾಣ ಶೇ 4.8ರಷ್ಟು ಇತ್ತು. ಇದಕ್ಕೆ ಹೋಲಿಸಿದರೆ ಶೇ 3.2ರಷ್ಟು ಹೆಚ್ಚಾಗಿದೆ. ಈ ವರ್ಷದ ಜೂನ್‌ನಲ್ಲಿ ಆಗಿದ್ದ ಶೇ 8.3ರಷ್ಟು ಬೆಳವಣಿಗೆ ಹೋಲಿಸಿದರೆ ಜುಲೈನಲ್ಲಿ ಶೇ 0.2ರಷ್ಟು ಇಳಿಕೆ ಕಂಡಿದೆ.

ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಯಗಳ ಬೆಳವಣಿಗೆಯೂ ಹೆಚ್ಚಾಗಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮಾಹಿತಿ ನೀಡಿದೆ.

2022–23ರ ಏಪ್ರಿಲ್–ಜುಲೈ ಅವಧಿಯಲ್ಲಿ ವಲಯಗಳ ಬೆಳವಣಿಗೆಯು ಶೇ 11.5ರಷ್ಟು ಇತ್ತು. ಇದಕ್ಕೆ ಹೋಲಿಸಿದರೆ 2023–24ರ ಇದೇ ಅವಧಿಯಲ್ಲಿ ಶೇ 6.4ಕ್ಕೆ ಇಳಿಕೆ ಕಂಡಿದೆ.

ಈ ವಲಯಗಳು ಕೈಗಾರಿಕಾ ಉತ್ಪಾದನೆ ಸೂಚ್ಯಂಕದಲ್ಲಿ (ಐಐಪಿ) ಶೇ 40.27ರಷ್ಟು ಪಾಲು ಹೊಂದಿವೆ.

ಉಕ್ಕು ಉತ್ಪಾದನೆ ಶೇ 7.5 ರಿಂದ ಶೇ 13.5ಕ್ಕೆ ಏರಿಕೆ ಕಂಡಿದೆ. ನೈಸರ್ಗಿ ಅನಿಲ ಉತ್ಪಾದನೆ ಶೇ 0.3 ರಿಂದ ಶೇ 8.9ಕ್ಕೆ, ಕಲ್ಲಿದ್ದಲು ಉತ್ಪಾದನೆ ಶೇ 11.4 ರಿಂದ ಶೇ 14.9ಕ್ಕೆ ಏರಿಕೆ ಆಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9148525233, 7899235388

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. ರೂ.12,000- 17,000. 8951315839, 9880120052

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366430266, 6366430366

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Wanted

ಬೇಕಾಗಿದ್ದಾರೆ : SSLC, PUC, DEGREE ಯುವಕ ಯುವತಿಯರು 15,500/- to 35,000/-. 8861041526, 7022622706

ಪ್ರವಾಸ

Travel

ಚೈತನ್ಯದಾಯಕ ವಿಶೇಷ ಪ್ರವಾಸಗಳು: ಹೈಮಾಚಲ ಚಾರ್ ಧಾಮ್ 06.10.2023 ರಿಂದ 14 ದಿನಗಳು. ಕುಟ್ರಾಲಂಫಾಲ್ಸ್ ಕನ್ಯಾಕುಮಾರಿ ಟ್ರಿವೇಂಡ್ರಮ್ ಮುನ್ನಾರ್,ಅಲೆಪ್ಪಿ 7 ದಿನಗಳು. ದಾಂಡೇಲಿ,ಸೌದತ್ತಿ ಗೋಕಾಕ್ ಫಾಲ್ಸ್ ಬಿಜಾಪುರ ಬಾದಾಮಿ,ಹಂಪಿ 6 ದಿನಗಳು 21.10.2023 26.10.2023 ರಿಂದ. ಸೋಮನಾಥ್,ದ್ವಾರಕಾ ಮಾತೃಗಯಾ ಉಜ್ಜಯಿನಿ,ಓಂಕಾರೇಶ್ವರ 16.11.2023 30.11.2023 ರಿಂದ 15/10 ದಿನಗಳು. ವಿಜಯವಾಡ,ಭದ್ರಾಚಲಂ ವಾಸವಿಪೆನುಗೊಂಡ ಸಿಂಹಾಚಲಂ 30.10.2023 ರಿಂದ 9 ದಿನಗಳು. ಸಂಪರ್ಕಿಸಿ 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

ಶಿವನಂದಿ ಟ್ರಾವಲ್ಸ್, ಹನುಮಂತನಗರ, ಬೆಂಗಳೂರು. ಕಾಶಿ ಯಾತ್ರ 10ದಿನ 5.10.2023 ದೆಹಲಿ,ಆಗ್ರಾ, ಮಥುರಾ,ನೈಮಿಷಾರಣ್ಯ ಅಯೋಧ್ಯ,ಕಾಶಿ,ಗಯಾ ತ್ರಿವೇಣಿ ಸಂಗಮ. 9036056352, 9481027363.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಕೆಲಸ ಹುಡುಕಾಟ
JOB
ನಿಮ್ಮ ನೇಮಕಾತಿ ಅಗತ್ಯಗಳಿಗೆ ಪೂರಕ ವೇದಿಕೆ
ನಿಮ್ಮ ಕಂಪನಿಗೆ ಸೂಕ್ತವಾದ ಅಭ್ಯರ್ಥಿಗಳನ್ನು ಪಡೆಯಿರಿ...ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿರಿ!
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9886213331 |
+91 9900428036 | +91 9731810277 |
+91 9901641752 | 080-45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಬ್ರಿಟನ್ ರಕ್ಷಣಾ ಕಾರ್ಯದರ್ಶಿ ಬೆನ್ ವ್ಯಾಲೇಸ್ ರಾಜೀನಾಮೆ

ಲಂಡನ್ (ಎಪಿ): ಬ್ರಿಟನ್ ರಕ್ಷಣಾ ಕಾರ್ಯದರ್ಶಿ ಬೆನ್ ವ್ಯಾಲೇಸ್ ಅವರು ಗುರುವಾರ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದರು. ಹೀಗಾಗಿ ಪ್ರಧಾನಿ ರಿಶಿ ಸುನಕ್ ಅವರು ಶೀಘ್ರದಲ್ಲಿಯೇ ಹೊಸ ರಕ್ಷಣಾ ಕಾರ್ಯದರ್ಶಿಯವರನ್ನು ನೇಮಿಸಲಿದ್ದಾರೆ.

ರಷ್ಯಾ– ಉಕ್ರೇನ್ ಯುದ್ಧಕ್ಕೆ ಸಂಬಂಧಿಸಿದ ಬ್ರಿಟನ್ ನಿಲುವಿನಲ್ಲಿ ಪ್ರಧಾನ ಪಾತ್ರ ವಹಿಸಿದ್ದ ವ್ಯಾಲೇಸ್ ಅವರು, ಮುಂದಿನ ಸಂಪುಟ ಪುನರ್ ರಚನೆಗೂ ಮುನ್ನವೇ ಹುದ್ದೆ ತೊರೆಯುವುದಾಗಿ ಕಳೆದ ತಿಂಗಳು ಘೋಷಿಸಿದ್ದರು.

‘ಮುಂದಿನ ದಶಕದಲ್ಲಿ ಜಗತ್ತು ಹೆಚ್ಚು ಅಸುರಕ್ಷಿತ ಮತ್ತು ಅಸ್ಥಿರತೆಯತ್ತ ಸಾಗುವ ಸಾಧ್ಯತೆ ಇದೆ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ‘ನಾನು ಸೇನೆಗೆ ಸೇರಿದಾಗಿನಿಂದಲೂ ದೇಶಕ್ಕಾಗಿ ನನ್ನನ್ನೇ ಅರ್ಪಿಸಿಕೊಂಡಿದ್ದೇನೆ. ಆದರೆ ಇದಕ್ಕೆ ನಾನು ಮತ್ತು ನನ್ನ ಕುಟುಂಬ ಭಾರಿ ಬೆಲೆ ತೆರಬೇಕಾಯಿತು’ ಎಂದು ಹೇಳಿದ್ದಾರೆ.

ಪ್ರಯಾಣಿಕರ ಹೊತ್ತು ತಂದ ಇಂಡಿಗೊ

ಶಿವಮೊಗ್ಗ: ಉದ್ಘಾಟನೆ ಆದ 6 ತಿಂಗಳ ನಂತರ ವಿಮಾನ ಹಾರಾಟ ಆರಂಭ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಗುರುವಾರ ಬೆಳಿಗ್ಗೆ 9.55ಕ್ಕೆ 72 ಪ್ರಯಾಣಿಕರನ್ನು ಹೊತ್ತು ಸಾಗಿದ್ದ ವಿಮಾನವು ಇಲ್ಲಿನ ರಾಷ್ಟ್ರಕವಿ ಕುವೆಂಪು ವಿಮಾನ ನಿಲ್ದಾಣಕ್ಕೆ ಬೆಳಿಗ್ಗೆ 11.05ಕ್ಕೆ ಬಂದಿಳಿಯಿತು.

ಶಿವಮೊಗ್ಗಕ್ಕೆ ಬಂದ ಮೊದಲ ಪ್ರಯಾಣಿಕ ವಿಮಾನ ಇದಾಗಿದ್ದು, ಮಲೆನಾಡಿನಲ್ಲಿ ಲೋಹದ ಹಕ್ಕಿಯ ಕಲರವ ಅಧಿಕೃತವಾಗಿ ಆರಂಭವಾಯಿತು.

ಈ ನಿಲ್ದಾಣವನ್ನು ಪ್ರಧಾನಿ ನರೇಂದ್ರ ಮೋದಿ ಫೆಬ್ರುವರಿ 27ರಂದೇ ಉದ್ಘಾಟಿಸಿದ್ದರು. 6 ತಿಂಗಳ ನಂತರ ಪ್ರಯಾಣಿಕರಿಗೆ ಸೇವೆ ಆರಂಭವಾದಂತಾಗಿದೆ. ಸದ್ಯ ಶಿವಮೊಗ್ಗ-ಬೆಂಗಳೂರು ನಡುವೆ ನಿತ್ಯ ಒಂದು ಬಾರಿ ಇಂಡಿಗೊ ಸಂಸ್ಥೆಯ ಎಟಿಆರ್–72 ವಿಮಾನ ಹಾರಾಟ ನಡೆಸಲಿದೆ.

ಕುವೆಂಪು ವಿಮಾನ ನಿಲ್ದಾಣಕ್ಕೆ ಇಂಡಿಗೋ ಸಂಸ್ಥೆಯ ವಿಮಾನದಲ್ಲಿ ಗುರುವಾರ ಸಚಿವ ಎಂ ಬಿ ಪಾಟೀಲ, ಬಿ ಎಸ್ ಯಡಿಯೂರಪ್ಪ, ಸಂಸದ ಬಿ.ವೈ.ರಾಘವೇಂದ್ರ, ಕೆ ಎಸ್ ಈಶ್ವರಪ್ಪ, ಶಾಸಕ ಆರಗ ಜ್ಞಾನೇಂದ್ರ ಮುಂತಾದವರು ಆಗಮಿಸಿದರು

ವಿಮಾನದಲ್ಲಿ ಕೈಗಾರಿಕೆ ಹಾಗೂ ಮೂಲ ಸೌಕರ್ಯ ಸಚಿವ ಎಂ.ಬಿ. ಪಾಟೀಲ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಸಂಸದ ಬಿ.ವೈ.ರಾಘವೇಂದ್ರ, ಶಾಸಕರಾದ ಆರಗ ಜ್ಞಾನೇಂದ್ರ, ಬೇಳೂರು ಗೋಪಾಲಕೃಷ್ಣ, ಬಿ.ವೈ. ವಿಜಯೇಂದ್ರ, ಎಸ್.ಎನ್. ಚನ್ನಬಸಪ್ಪ, ಭಾರತಿ ಶೆಟ್ಟಿ, ಡಿ.ಎಸ್.ಅರುಣ್, ಮಾಜಿ ಶಾಸಕ ಹರತಾಳು ಹಾಲಪ್ಪ, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಎಸ್.ಸುಂದರೇಶ ಮತ್ತಿತರರು ಪ್ರಯಾಣಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ನೇತೃತ್ವದಲ್ಲಿ ಪ್ರಯಾಣಿಕರನ್ನು ಸ್ವಾಗತಿಸಲಾಯಿತು. ನಂತರ ನಡೆದ ಕಾರ್ಯಕ್ರಮದಲ್ಲಿ ವಿಮಾನ ನಿಲ್ದಾಣದ ವೆಬ್‌ಸೈಟ್‌ಗೆ ಸಚಿವ ಎಂ.ಬಿ.ಪಾಟೀಲ ಚಾಲನೆ ನೀಡಿದರು. ನಿಲ್ದಾಣಕ್ಕೆ ಭೂಮಿ ಕೊಟ್ಟ ರೈತರ ಪೈಕಿ ಇಬ್ಬರನ್ನು ಬಿ.ಎಸ್. ಯಡಿಯೂರಪ್ಪ ಸನ್ಮಾನಿಸಿದರು.

ಸ್ತರಗೋಳದಿಂದ ಸ್ಕೈಡೈವಿಂಗ್: ಭಾರತೀಯ ಮೂಲದ ಸ್ವಾತಿ ಭಾಗಿ

ನ್ಯೂಯಾರ್ಕ್ (ಪಿಟಿಐ): ವಾಯುಮಂಡಲದ ಸ್ತರ ಗೋಳದಿಂದ (ಭೂಮಿಯಿಂದ 12–50 ಕಿ.ಮೀ. ಎತ್ತರದಲ್ಲಿ ವ್ಯಾಪಿಸಿರುವ ವಾಯುಮಂಡಲದ ಎರಡನೇ ಪದರ) ಸ್ಕೈ ಡೈವಿಂಗ್ ಮಾಡಿ ಹೊಸ ವಿಶ್ವದಾಖಲೆ ನಿರ್ಮಿಸಲು ಆಯ್ಕೆಯಾಗಿರುವ ಮೂವರು ಮಹಿಳೆಯರಲ್ಲಿ ಭಾರತೀಯ ಮೂಲದ ಅಮೆರಿಕ ವಿಜ್ಞಾನಿ ಸ್ವಾತಿ ವಾರ್ಷಣೆ ಸಹ ಇದ್ದಾರೆ.

ಇಲಿಯಾನಾ ರೆಡ್ರಿಕ್ವಿಜ್ ಮತ್ತು ದಿಯಾನಾ ವಾಲೆರಿನ್ ಜಿಮೆನೆಝ್ ಐತಿಹಾಸಿಕ ಸ್ಕೈಡೈವಿಂಗ್‌ಗೆ ಸಜ್ಜಾಗಿರುವ ಇನ್ನಿಬ್ಬರು ಮಹಿಳೆಯರು.

ರೈಸಿಂಗ್ ಯುನೈಟೆಡ್ ಎಂಬ ಲಾಭರಹಿತ ಸಂಸ್ಥೆಯು ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕಲೆ ಮತ್ತು ಗಣಿತ ಕ್ಷೇತ್ರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ‘ಹೆರಾ ರೈಸಿಂಗ್ ಇನಿಷಿಯೇಟಿವ್’ ಅಭಿಯಾನ ಆರಂಭಿಸಿ ಮೂವರು ಮಹಿಳೆಯರನ್ನು ಅನ್ವೇಷಣೆಗೆ ಕಳುಹಿಸಲು ಆಯ್ಕೆ ಮಾಡಿದೆ. ಸ್ವಾತಿ 42.5 ಕಿ.ಮೀ. ಎತ್ತರದಿಂದ ಡೈವ್ ಮಾಡಲಿದ್ದಾರೆ.

ಮೂವರು ಮಹಿಳೆಯರು 18 ತಿಂಗಳ ಕಾಲ ಕಠಿಣ ತರಬೇತಿ ಪಡೆಯಲಿದ್ದಾರೆ. ಮೂವರ ಪೈಕಿ ಒಬ್ಬರು ಮಾತ್ರ ಸ್ತರಗೋಳದಿಂದ ಜಿಗಿಯುತ್ತಾರೆ. ಸ್ವಾತಿಗೆ 1200 ಜಂಪ್ ಮಾಡಿರುವ ಅನುಭವ ಇದೆ. ಉಳಿದಿಬ್ಬರು ತಂಡದಲ್ಲಿರುತ್ತಾರೆ ಎಂದು ಸ್ಪೇಸ್ ಡಾಟ್ ಕಾಮ್ ವರದಿ ಮಾಡಿದೆ.

ಪ್ರಿಗೋಷಿನ್: ಅಪಾಯದ ಸುಳಿವಿತ್ತೆ?

ರಾಯಿಟರ್ಸ್: ರಷ್ಯಾದ ವ್ಯಾಗ್ನರ್ ಮುಖ್ಯಸ್ಥ ಯೆವ್ಗೆನಿ ಪ್ರಿಗೋಷಿನ್ ಅವರು ವಿಮಾನ ಅಪಘಾತದಲ್ಲಿ ಮೃತಪಡುವುದಕ್ಕೂ ಕೆಲ ದಿನಗಳು ಮುನ್ನ ಮಾತನಾಡಿದ್ದು ಎನ್ನಲಾದ ವಿಡಿಯೊ ಹರಿದಾಡಿದೆ.

ಆಫ್ರಿಕಾದಲ್ಲಿ ಚಿತ್ರೀಕರಿಸಿದ ವಿಡಿಯೊ ಇದು ಎನ್ನಲಾಗಿದ್ದು, ಪ್ರಿಗೋಷಿನ್ ಅವರು ತಮ್ಮ ಜೀವಕ್ಕೆ ಅಪಾಯ ಎದುರಾಗಿರುವುದಾಗಿ ಹೇಳಿರುವುದು ದಾಖಲಾಗಿದೆ.

‘ನಾನು ಜೀವಂತವಾಗಿದ್ದೇನೆಯೇ ಅಥವಾ ಇಲ್ಲವೇ, ನಾನು ಹೇಗಿದ್ದೇನೆ ಎಂದು ಚರ್ಚೆ ಮಾಡುತ್ತಿರುವವರಿಗಾಗಿ ಹೇಳುವುದೇನೆಂದರೆ, ಸದ್ಯ ನಾನು 2023ರ ಆಗಸ್ಟ್‌ನ ದ್ವಿತೀಯಾರ್ಧದ ವಾರಾಂತ್ಯದಲ್ಲಿ ಆಫ್ರಿಕಾದಲ್ಲಿ ಇದ್ದೇನೆ’ ಎಂದು ಹೇಳಿರುವುದು ವಿಡಿಯೋದಲ್ಲಿದೆ. ವ್ಯಾಗ್ನರ್ ಗುಂಪಿನೊಂದಿಗೆ ನಂಟಿರುವ ‘ಗ್ರೇ ಜೋನ್’ ಎಂಬ ಟೆಲಿಗ್ರಾಮ್ ಚಾನೆಲ್‌ನಲ್ಲಿ ಈ ವಿಡಿಯೊವನ್ನು ಹಂಚಿಕೊಳ್ಳಲಾಗಿದೆ.

‘ನನ್ನ ಸಾವು ಬಯಸುವವರಿಗೆ ಅಥವಾ ನನ್ನ ಖಾಸಗಿ ಜೀವನ, ನಾನು ಎಷ್ಟು ಸಂಪಾದಿಸುತ್ತೇನೆ ಅಥವಾ ಬೇರೆ ವಿಷಯಗಳ ಬಗ್ಗೆ ಚರ್ಚಿಸಲು ಬಯಸುವವರಿಗೆ, ಎಲ್ಲವೂ ಸರಿಯಾಗಿದೆ ಎಂದು ಹೇಳಬಯಸುತ್ತೇನೆ’ ಎನ್ನುತ್ತ ಕೈ ಬೀಸಿರುವುದೂ ವಿಡಿಯೊದಲ್ಲಿದೆ.

ಚಲಿಸುವ ವಾಹನದಲ್ಲಿ ಚಿತ್ರೀಕರಿಸಿರುವ ಈ ವಿಡಿಯೊದ ಸ್ಥಳ ಮತ್ತು ದಿನಾಂಕ ಸ್ಪಷ್ಟವಾಗಿಲ್ಲ. ಆದರೆ ಅವರ ಗುರುತು ಮರೆ ಮಾಚುವ ಬಟ್ಟೆ, ಟೋಪಿ ಹಾಗೂ ಬಲಗೈಯಲ್ಲಿರುವ ಗಡಿಯಾರವು ಆಗಸ್ಟ್ 21ರಂದು ಬಿಡುಗಡೆಯಾದ ವಿಡಿಯೊಗೆ ಹೊಂದಿಕೆಯಾಗುತ್ತದೆ. ಅವರ ವಾರಾಂತ್ಯದ ಉಲ್ಲೇಖವು ಆಗಸ್ಟ್ 19 ಅಥವಾ 20 ಇರಬಹುದು.

ಆಗಸ್ಟ್ 23ರಂದು ಸಂಭವಿಸಿದ ವಿಮಾನ ದುರಂತದಲ್ಲಿ ಪ್ರಿಗೋಷಿನ್ ಮತ್ತು ಅವರ ಅಂಗರಕ್ಷಕರು ಮೃತಪಟ್ಟಿದ್ದರು.

ಆಗಸ್ಟ್‌ನಲ್ಲಿ 7 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ

ತಗ್ಗಿದ ರಷ್ಯಾ ತೈಲ ಆಮದು

ನವದೆಹಲಿ (ರಾಯಿಟರ್ಸ್): ಭಾರತವು ರಷ್ಯಾದಿಂದ ಕಚ್ಚಾತೈಲ ಆಮದು ಮಾಡಿಕೊಳ್ಳುವ ಪ್ರಮಾಣವು ಆಗಸ್ಟ್‌ನಲ್ಲಿ 7 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ. ಆದರೆ, ಸೌದಿ ಅರೇಬಿಯಾದಿಂದ ತೈಲ ಆಮದು ಪ್ರಮಾಣ ಹಲವು ತಿಂಗಳುಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ ಎಂದು ಕೇಪ್ಲರ್ ಮತ್ತು ರಿಫಿನಿಟಿವ್ ಸಂಸ್ಥೆಗಳು ಮಾಹಿತಿ ನೀಡಿವೆ.

ಕೆಲವು ಸಂಸ್ಕರಣಾ ಘಟಕಗಳಲ್ಲಿ ನಿರ್ವಹಣೆ ಕೆಲಸ ಕೈಗೊಂಡಿರುವುದರಿಂದ ಖರೀದಿ ಕಡಿಮೆ ಮಾಡಲಾಗಿದೆ. ಅಲ್ಲದೆ ರಷ್ಯಾವು ನೀಡುರುತ್ತಿರುವ ರಿಯಾಯಿತಿ ಪ್ರಮಾಣವು ಇಳಿಕೆ ಆಗುತ್ತಿರುವುದು ಸಹ ಆಮದು ತಗ್ಗಲು ಕಾರಣ ಎಂದು ಹೇಳಿವೆ.

ಕೆಪ್ಲರ್ ಸಂಸ್ಥೆಯ ಅಂದಾಜಿನ ಪ್ರಕಾರ, ಭಾರತವು ಆಗಸ್ಟ್‌ನಲ್ಲಿ ರಷ್ಯಾದಿಂದ ದಿನಕ್ಕೆ 13.5 ಲಕ್ಷ ಬ್ಯಾರಲ್ ತೈಲ ಆಮದು ಮಾಡಿಕೊಂಡಿದೆ. ಜುಲೈನಲ್ಲಿ 19 ಲಕ್ಷ ಬ್ಯಾರಲ್ ಆಮದು ಮಾಡಿಕೊಂಡಿತ್ತು. ಇದೇ ವೇಳೆ ಸೌದಿ ಅರೇಬಿಯಾದಿಂದ ಆಗಿರುವ ಆಮದು ಪ್ರತಿ ದಿನಕ್ಕೆ 5.22 ಲಕ್ಷ ಬ್ಯಾರಲ್‌ನಿಂದ 8.25 ಲಕ್ಷ ಬ್ಯಾರಲ್‌ಗೆ ಏರಿಕೆ ಕಂಡಿದೆ.

ರಷ್ಯಾ–ಉಕ್ರೇನ್ ಯುದ್ಧ ಶುರುವಾದ ನಂತರದಲ್ಲಿ ಭಾರತವು ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು ದಾಖಲೆಯ ಮಟ್ಟವನ್ನು ತಲುಪಿದೆ. ಭಾರತಕ್ಕೆ ರಷ್ಯಾ ದೇಶವು ಭಾರಿ ಪ್ರಮಾಣದಲ್ಲಿ ರಿಯಾಯಿತಿ ನೀಡಿದ್ದು ಇದಕ್ಕೆ ಕಾರಣ. ಇದೀಗ ರಿಯಾಯಿತಿ ಪ್ರಮಾಣವು ಜೂನ್‌ನಿಂದ ಇಳಿಕೆ ಆಗುತ್ತಿರುವದರಿಂದ ಭಾರತವು ಆಮದು ಮಾಡಿಕೊಳ್ಳುವುದು ಕಡಿಮೆ ಆಗಿದೆ ಎಂದು ತಿಳಿಸಿವೆ.

ರಿಯಾಯಿತಿ ಕಡಿಮೆ ಆಗಿರುವುದರಿಂದ ಇನ್ನೂ ಕೆಲವು ತಿಂಗಳುಗಳವರೆಗೆ ಭಾರತವು ರಷ್ಯಾದಿಂದ ಕಡಿಮೆ ಪ್ರಮಾಣದಲ್ಲಿಯೇ ತೈಲ ಆಮದು ಮಾಡಿಕೊಳ್ಳುವ ಸಾಧ್ಯತೆ ಇದೆ. ಇದರಿಂದಾಗಿ ರಷ್ಯಾದ ತೈಲ ಪೂರೈಕೆದಾರರು ಅನಿವಾರ್ಯವಾಗಿ ರಿಯಾಯಿತಿಯನ್ನು ಹೆಚ್ಚಿಸುವಂತೆ ಆಗಲಿದೆ ಎಂದು ರಿಫಿನಿಟಿವ್ ಸಂಸ್ಥೆಯ ವಿಶ್ಲೇಷಕ ಎಹಸಾನ್ ಉಲ್ ಹಕ್ ಹೇಳಿದ್ದಾರೆ.

ಹಬ್ಬದ ಋತು ಇರುವುದರಿಂದ ಮುಂದಿನ ಎರಡು ತಿಂಗಳುಗಳಲ್ಲಿ ಭಾರತದಲ್ಲಿ ಇಂಧನ ಬೇಡಿಕೆ ಹೆಚ್ಚಾಗುವ ನಿರೀಕ್ಷೆ ಮಾಡಲಾಗಿದೆ. ಇದರಿಂದಾಗಿ ಮಧ್ಯಪ್ರಾಚ್ಯದಿಂದ ತೈಲ ಆಮದು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಹಕ್ ತಿಳಿಸಿದ್ದಾರೆ.

ಇಂದಿನಿಂದ ‘ಜನ ವಿಶ್ವಾಸ ಕಾಯ್ದೆ’ ಜಾರಿ

ನವದೆಹಲಿ(ಪಿಟಿಐ): ಪತ್ರಿಕೆ ಮತ್ತು ಪುಸ್ತಕಗಳ ನೋಂದಣಿ ಕಾಯ್ದೆ (ಪಿಆರ್‌ಪಿ ಕಾಯ್ದೆ) ಉಲ್ಲಂಘಿಸಿದ ಸಂದರ್ಭದಲ್ಲಿ ಪ್ರಕಾಶಕರಿಗೆ ಹಾಗೂ ಮುದ್ರಣಾಲಯಗಳನ್ನು ನಡೆಸುವವರಿಗೆ ಇನ್ನು ಮುಂದೆ ಜೈಲು ವಿಧಿಸಲಾಗುವುದಿಲ್ಲ.

ಹೊಸ ‘ಜನ ವಿಶ್ವಾಸ ಕಾಯ್ದೆ’ಯು ಶುಕ್ರವಾರದಿಂದ ಜಾರಿಗೆ ಬರಲಿದ್ದು, ಈ ಕುರಿತು ಕೇಂದ್ರ ಸರ್ಕಾರ ಗುರುವಾರ ಅಧಿಸೂಚನೆ ಪ್ರಕಟಿಸಿದೆ.

ಈ ಮೊದಲು, ಕಾಯ್ದೆ ಉಲ್ಲಂಘನೆ ಸಂದರ್ಭದಲ್ಲಿ ತಪ್ಪಿತಸ್ಥರಿಗೆ ಕಾಯ್ದೆಯ ಸೆಕ್ಷನ್ 12, 13 ಹಾಗೂ 14ರಡಿ ಜೈಲು ಶಿಕ್ಷೆ ವಿಧಿಸಲಾಗುತ್ತಿತ್ತು. ಕಾಯ್ದೆಯಲ್ಲಿನ ಈ ಅವಕಾಶಗಳನ್ನು ತೆಗೆದು ಹಾಕಲಾಗಿದೆ.

ತಪ್ಪು ಮಾಹಿತಿಗಳಿಂದ ಕೂಡಿದ ಮುದ್ರಣ, ಘೋಷಣಾ ಪತ್ರ ಇಲ್ಲದೆಯೇ ಮುದ್ರಣಾಲಯ ನಡೆಸುವುದು, ತಪ್ಪು ಘೋಷಣಾಪತ್ರ ಹೊಂದಿರುವುದು, ಅಸಮರ್ಪಕವಾಗಿ ಮಾಹಿತಿ ಪ್ರಕಟಿಸುವಂತಹ ನಡೆಗಳಿಗೆ ಇನ್ನು ಮುಂದೆ ಆರು ತಿಂಗಳು ಜೈಲು ಶಿಕ್ಷೆ ವಿಧಿಸಲಾಗುವುದಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಾಯ್ದೆಯ ಉಲ್ಲಂಘನೆಯಂತಹ ಸಂದರ್ಭಗಳಲ್ಲಿ, ನೋಂದಣಿ ಪ್ರಮಾಣಪತ್ರವನ್ನುರದ್ದು ಮತ್ತು ಅಮಾನತು ಮಾಡುವ ಅಧಿಕಾರವನ್ನು ಪ್ರೆಸ್ ರಿಜಿಸ್ಟ್ರಾರ್ ಅವರಿಗೆ ನೀಡುವ ಅವಕಾಶಗಳನ್ನು ಹೊಸ ಕಾಯ್ದೆ ಹೊಂದಿದೆ. ‘ಪತ್ರಿಕೆ ಮತ್ತು ನೋಂದಣಿ ಮೇಲ್ಮನವಿ ಮಂಡಳಿ’ಯ (ಪಿಆರ್‌ಎಬಿ) ಅಧಿಕಾರ ವ್ಯಾಪ್ತಿಯನ್ನು ಸಹ ಈ ಕಾಯ್ದೆಯಡಿ ವಿಸ್ತರಿಸಲಾಗಿದ್ದು, ಪ್ರೆಸ್ ರಿಜಿಸ್ಟ್ರಾರ್ ಅವರನ್ನು ಮಂಡಳಿಯು ಒಳಗೊಂಡಿದೆ.

ಜೊಹಾನಸ್‌ಬರ್ಗ್: ವಲಸಿಗರಿದ್ದ ಕಟ್ಟಡದಲ್ಲಿ ಅವಘಡ

ಅಗ್ನಿ ಅನಾಹುತ: 73 ಮಂದಿ ಸಾವು

ಜೊಹಾನಸ್‌ಬರ್ಗ್(ಪಿಟಿಐ): ದಕ್ಷಿಣ ಆಫ್ರಿಕಾದ ಜೋಹಾನಸ್‌ಬರ್ಗ್‌ನಲ್ಲಿ ಗುರುವಾರ ಬಹುಮಹಡಿ ಕಟ್ಟಡದಲ್ಲಿ ಅಗ್ನಿ ಅನಾಹುತ ಸಂಭವಿಸಿ ಕನಿಷ್ಠ 73 ಮಂದಿ ಮೃತಪಟ್ಟಿದ್ದು, 52 ಮಂದಿ ಗಾಯಗೊಂಡಿದ್ದಾರೆ.

ವಲಸಿಗರು ತಂಗಿದ್ದ ಐದು ಅಂತಸ್ತಿನ ಕಟ್ಟಡದಲ್ಲಿ ಸಂಭವಿಸಿರುವ ಬೆಂಕಿ ಅವಘಡಕ್ಕೆ ನಿಖರ ಕಾರಣ ತಿಳಿದು ಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಅಗ್ನಿ ಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯಾಚರಣೆ ಮುಂದುವರಿಸಿದ್ದು, ಮೃತದೇಹಗಳನ್ನು ಕಟ್ಟಡದಿಂದ ಹೊರ ತೆಗೆಯಲಾಗುತ್ತಿದೆ. ಕಟ್ಟಡದೊಳಗೆ ಸಿಲುಕಿಕೊಂಡಿದ್ದ ಹಲವರನ್ನು ಸುರಕ್ಷಿತವಾಗಿ ಹೊರಗೆ ಕರೆತಂದಿದ್ದೇವೆ. ಇವರಲ್ಲಿ ಹಲವರಿಗೆ ಸುಟ್ಟ ಗಾಯಗಳಾಗಿವೆ’ ಎಂದು ಅಗ್ನಿಶಾಮಕ ದಳದ ವಕ್ತಾರ ರಾಬರ್ಟ್ ಮುಲಾಡ್ಜಿ ತಿಳಿಸಿದ್ದಾರೆ.

ಕಟ್ಟಡ ಹೊತ್ತಿ ಉರಿಯುತ್ತಿರುವ ಮತ್ತು ಬೆಂಕಿ ನಂದಿಸುವ ಕಾರ್ಯಾಚರಣೆಯ ದೃಶ್ಯವಿರುವ ವಿಡಿಯೊವನ್ನು ರಾಬರ್ಟ್ ಅವರು ‘ಎಕ್ಸ್’ (ಟ್ವಿಟರ್) ವೇದಿಕೆಯಲ್ಲಿ ಹಂಚಿಕೊಂಡಿದ್ದಾರೆ. ಮೃತರ ಸಂಖ್ಯೆ ಅಧಿಕವಾಗುವ ಸಾಧ್ಯತೆ ಇದೆ ಎಂದೂ ಅವರು ತಿಳಿಸಿದ್ದಾರೆ.

ಈ ಕಟ್ಟಡವು ಹಿಂದೆ ಅಪರಾಧ ಚಟುವಟಿಕೆಗಳಲ್ಲಿ ನಿರತರಾಗಿದ್ದವರ ತಾಣವಾಗಿತ್ತು, ಬಳಿಕ ಇದರಲ್ಲಿ ವಲಸಿಗರು ಆಶ್ರಯ ಪಡೆದಿದ್ದರು ಎಂದು ವಿವರಿಸಿದ್ದಾರೆ.

ಈ ಕಟ್ಟಡದೊಳಗಿನ ಸಣ್ಣ ಕೋಣೆಗಳಲ್ಲಿ ಹಲವಾರು ಮಂದಿ ವಾಸಿಸುತ್ತಿದ್ದರು ಮತ್ತು ಇದಕ್ಕೆ ವಿದ್ಯುತ್, ನೀರಿನ ಸಂಪರ್ಕವಿರಲಿಲ್ಲ ಎಂದು ಹೇಳಿದ್ದಾರೆ.

ಅಗ್ನಿ ಅನಾಹುತ ಸಂಭವಿಸಿರುವ ಕಟ್ಟಡವೂ ಸೇರಿದಂತೆ ಈ ಪ್ರದೇಶದಲ್ಲಿರುವ ಕಟ್ಟಡಗಳಲ್ಲಿ ದಕ್ಷಿಣ ಆಫ್ರಿಕಾದ ವಿವಿಧೆಡೆಗಳಿಂದ ಉದ್ಯೋಗ ಅರಸಿ ಬಂದಿರುವ ಅಕ್ರಮ ವಲಸಿಗರು ನೆಲೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು	620

ಅಡಿಕೆ
ಬಂಟ್ವಾಳ

ಕೋಕ	12500-25000
ಹೊಸತು	27500-45000
ಹಳತು	46000-48500

ಕಾರ್ಕಳ

ಹೊಸತು	30000-45000
ಹಳತು	40000-48500

ಕುಮಟ

ಚಿಪ್ಪು	23899-34669
ಕೋಕ	19099-33669
ಹಳೆಚಾಲಿ	36811-42069
ಹೊಸಚಾಲಿ	36800-41069

ಸಾಗರ

ಬಿಳಿಗೋಟು	25599-33299
ಚಾಲಿ	33399-39099
ಕೆಂಪುಗೋಟು	28399-36040
ರಾಶಿ	31690-48299
ಸಿಪ್ಪೆಗೋಟು	11561-22899

ಶಿವಮೊಗ್ಗ

ಗೊರಬಲು	23111-37669
ರಾಶಿ	37600-48099
ಸರಕು	50000-78377

ಸಿದ್ದಾಪುರ

ಬಿಳಿಗೋಟು	30669-35908
ಕೋಕ	30480-35819
ಚಾಲಿ	38169-42199
ಕೆಂಪುಗೋಟು	30099-33699
ರಾಶಿ	43599-47809
ತಟ್ಟಿಬೆಟ್ಟೆ	42909-43099

ಶಿರಸಿ

ಬೆಟ್ಟೆ	38099-45099
ಬಿಳಿಗೋಟು	28699-37236
ಚಾಲಿ	37508-42899
ರಾಶಿ	43099-49659

ಯಲ್ಲಾಪುರ

ಬಿಳಿಗೋಟು	29009-36080
ಚಾಲಿ	37799-42499
ಕೋಕ	23009-33699
ಕೆಂಪುಗೋಟು	30109-37342
ರಾಶಿ	47099-55799
ತಟ್ಟಿಬೆಟ್ಟೆ	40109-46800

ಪುತ್ತೂರು

ಕೋಕ	11000-25000
ಹಳತು	34000-35000

ಕುಂದಾಪುರ

ಹಳೆಚಾಲಿ	43500-49000
ಹೊಸಚಾಲಿ	37000-41500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13400	13400	13200	153.35ಸೆಂಟ್ಸ್
ಎಸಿ	7000	6600	6700	
ಆರ್‌ಪಿ	10100	10100	10150	ಲಂಡನ್
ಆರ್‌ಸಿ	5960	238	5900	2735ಡಾಲರ್ಸ್

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಬದಲಿ ಕಂಪನಿಗಳ ಮೂಲಕ ತನ್ನದೇ ಷೇರುಗಳಲ್ಲಿ ಸಮೂಹದಿಂದ ಹೂಡಿಕೆ ಆರೋಪ

ಅದಾನಿ: ಜೆಪಿಸಿ ತನಿಖೆಗೆ ರಾಹುಲ್ ಆಗ್ರಹ

ಪ್ರಜಾವಾಣಿ ವಾರ್ತೆ

ಮುಂಬೈ: ಅದಾನಿ ಸಮೂಹವು ಬದಲಿ ಕಂಪನಿಗಳ ಮೂಲಕ ಹಲವು ವರ್ಷಗಳ ಕಾಲ ತನ್ನದೇ ಷೇರುಗಳಲ್ಲಿ ಹೂಡಿಕೆ ಮಾಡಿತ್ತು ಎಂಬ ಆರೋಪಗಳ ಕುರಿತು ಜಂಟಿ ಸದನ ಸಮಿತಿಯಿಂದ (ಜೆಪಿಸಿ) ತನಿಖೆ ನಡೆಸುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುರುವಾರ ಹೊಸದಾಗಿ ಬೇಡಿಕೆ ಮುಂದಿಟ್ಟಿದ್ದಾರೆ.

'ಇಂಡಿಯಾ' ಮೈತ್ರಿಕೂಟದ ಸಭೆಯಲ್ಲಿ ಪಾಲ್ಗೊಳ್ಳಲು ಇಲ್ಲಿರುವ ರಾಹುಲ್, ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಅದಾನಿ ಸಮೂಹ ಕುರಿತ ಯಾವುದೇ ತನಿಖೆಯನ್ನು ಪ್ರಧಾನಿ ನರೇಂದ್ರ ಮೋದಿ ತಡೆಯುತ್ತಿದ್ದಾರೆ' ಎಂದು ಆರೋಪಿಸಿದರು.

ಅದಾನಿ ಸಮೂಹದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳು ಹಾಗೂ ಉದ್ಯಮಿ ಗೌತಮ್ ಅದಾನಿ ಅವರೊಂದಿಗಿನ ಪ್ರಧಾನಿ ನಂಟಿನ ಬಗ್ಗೆ ನಿರಂತರವಾಗಿ ಪ್ರಶ್ನೆಗಳನ್ನು ಕೇಳುತ್ತಿರುವ ರಾಹುಲ್, 'ಅದಾನಿ ಹೆಸರನ್ನು ಪ್ರಸ್ತಾಪಿಸಿದ ಕೂಡಲೇ ಪ್ರಧಾನಿ ಅವರಿಗೆ ಮುಜುಗರವಾಗುತ್ತದೆ' ಎಂದು ಛೇಡಿಸಿದರು.

'ಭಾರತ ಮತ್ತು ಮೋದಿ ಅವರ ಖ್ಯಾತಿಗೆ ಈಗ ಅಪಾಯ ಎದುರಾಗಿದೆ. ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಜಿ–20 ನಾಯಕರು ಭಾರತಕ್ಕೆ ಬರುತ್ತಿದ್ದಾರೆ. ಹಾಗಾಗಿ, ಶೃಂಗಸಭೆ ಆರಂಭವಾಗುವುದಕ್ಕೂ ಮುನ್ನವೇ ಅದಾನಿ ಕಂಪನಿ ಕುರಿತು ಎದ್ದಿರುವ ಸಂಶಯಗಳನ್ನು ಮೋದಿ ನಿವಾರಿಸಬೇಕು' ಎಂದು ರಾಹುಲ್ ಒತ್ತಾಯಿಸಿದರು.

> **ಒಬ್ಬ ವ್ಯಕ್ತಿಯನ್ನು ಪ್ರಧಾನಿ ನರೇಂದ್ರ ಮೋದಿ ಈ ಮಟ್ಟಿಗೆ ರಕ್ಷಿಸುತ್ತಿರುವುದು ಏಕೆ ಎಂಬುದೇ ನಮ್ಮನ್ನು ಕಾಡುತ್ತಿರುವ ಪ್ರಶ್ನೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

'ಕೋಟ್ಯಂತರ ರೂಪಾಯಿ ಭಾರತದಿಂದ ಹೊರಗೆ ಹೋಗಿ, ಮತ್ತೆ ದೇಶದೊಳಗೆ ಬಂದಿದೆ. ಈ ರೀತಿ ಬಂದ ಹಣವನ್ನು ದೇಶದ ಮೂಲಸೌಕರ್ಯಗಳ ಖರೀದಿಗೆ ಅದಾನಿ ಸಮೂಹ ಬಳಸಿಕೊಂಡಿರುವುದಾಗಿ ವಿಶ್ವದ ಕೆಲ ಪ್ರಸಿದ್ಧ ವಿತ್ತ ಪತ್ರಿಕೆಗಳು ವರದಿ ಮಾಡಿವೆ' ಎಂದು ರಾಹುಲ್ ಹೇಳಿದರು.

'ಈ ಹಣ ಯಾರಿಗೆ ಸೇರಿದ್ದು ಎಂಬ ಪ್ರಶ್ನೆ ಎದುರಾಗಿದೆ. ಇದು ಅದಾನಿ ಅಥವಾ ಬೇರೆಯವರಿಗೆ ಸೇರಿದ ಹಣವೇ' ಎಂದು ಪ್ರಶ್ನಿಸಿದರು.

ಮುಂಬೈನಲ್ಲಿ ನಡೆದ 'ಇಂಡಿಯಾ' ಸಭೆಗೆ ಒಟ್ಟಿಗೆ ಆಗಮಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ

'ಗೌತಮ್ ಅದಾನಿ ಅಣ್ಣ ವಿನೋದ್ ಅದಾನಿ, ನಾಸರ್ ಅಲಿ ಶಬನ್ ಅಹ್ಲಿ ಹಾಗೂ ಚೀನಿ ಪ್ರಜೆ ಚಾಂಗ್ ಚುಂಗ್–ಲಿಂಗ್ ಎಂಬುವವರು ಈ ಎಲ್ಲ ವ್ಯವಹಾರಗಳ ಸೂತ್ರಧಾರರಾಗಿದ್ದಾರೆ' ಎಂದು ಆರೋಪಿಸಿದ ಅವರು, 'ದೇಶದ ಮೂಲಸೌಕರ್ಯಗಳಲ್ಲಿ ಹೂಡಿಕೆ ಮಾಡಲು ವಿದೇಶಿ ಪ್ರಜೆಗಳಿಗೆ ಏಕೆ ಅನುಮತಿ ನೀಡಲಾಯಿತು' ಎಂದು ಪ್ರಶ್ನಿಸಿದರು.

'ಕಂಪನಿಯ ಷೇರುಗಳಲ್ಲಿ ಕೋಟ್ಯಂತರ ರೂಪಾಯಿ ಹೂಡಿಕೆ ಮಾಡಲು ಪ್ರಧಾನಿಗೆ ಆಪ್ತರಾಗಿರುವ ಈ ವ್ಯಕ್ತಿಗೆ (ಗೌತಮ್ ಅದಾನಿ) ಮಾತ್ರ ಏಕೆ ಅವಕಾಶ ನೀಡಲಾಗುತ್ತಿದೆ? ಈ ಬಗ್ಗೆ ಯಾವುದೇ ತನಿಖೆಯಾಗುತ್ತಿಲ್ಲ ಏಕೆ' ಎಂದು ಪ್ರಶ್ನಿಸಿದರು.

'ಅದಾನಿ ಕಂಪನಿಗಳನ್ನು ಆರೋಪ ಮುಕ್ತಗೊಳಿಸಿದ್ದ ಸೆಬಿಯ ಅಧಿಕಾರಿಯೊಬ್ಬರು ಈಗ, ಕಂಪನಿ ಒಡೆತನದ ಸುದ್ದಿ ಚಾನೆಲ್‌ವೊಂದರ ನಿರ್ದೇಶಕ. ಸಮೂಹದ ವಿರುದ್ಧ ತನಿಖೆ ನಡೆಸಿದ್ದ ವ್ಯಕ್ತಿಯೇ ಈಗ ಆ ಕಂಪನಿಯ ಉದ್ಯೋಗಿ. ಪರಿಸ್ಥಿತಿ ಹೀಗಿರುವಾಗ, ತನಿಖೆ ಯಾವ ರೀತಿ ಇರಲಿದೆ ಎಂಬುದನ್ನು ಊಹಿಸಬಹುದು' ಎಂದರು.

'ತನಿಖೆಯಿಂದ ಮಾತ್ರ ಸತ್ಯ ಬಹಿರಂಗ'

ಮುಂಬೈ (ಪಿಟಿಐ): ಅದಾನಿ ಸಮೂಹ ಕುರಿತು ತನಿಖಾ ಪತ್ರಕರ್ತರ ಸಂಘಟನೆಯಾದ 'ಸಂಘಟಿತ ಅಪರಾಧ ಮತ್ತು ಭ್ರಷ್ಟಾಚಾರ ವರದಿ ಯೋಜನೆ' (ಒಸಿಸಿಆರ್‌ಪಿ) ಪ್ರಕಟಿಸಿರುವ ವರದಿಯಲ್ಲಿನ ಆರೋಪಗಳ ಕುರಿತು ಜಂಟಿ ಸಂಸದೀಯ ಸಮಿತಿಯಿಂದ (ಜೆಪಿಸಿ) ನಡೆಸುವ ತನಿಖೆಯಿಂದ ಮಾತ್ರ ಸತ್ಯ ಹೊರಬರಲಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಗುರುವಾರ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅದಾನಿ ಸಮೂಹಕ್ಕೆ ನಂಟಿರುವ ಶೆಲ್ ಕಂಪನಿಗಳಲ್ಲಿನ ಭ್ರಷ್ಟಾಚಾರ ಕುರಿತು ಮತ್ತಷ್ಟು ವಿವರಗಳು ಬಹಿರಂಗಗೊಳ್ಳುತ್ತಿವೆ. ಅದಾನಿ ಸಮೂಹ ಕುರಿತು ದೀರ್ಘಕಾಲ ತನಿಖೆ ನಡೆಸಿದ್ದರೂ, 13 ಬೇನಾಮಿ ಶೆಲ್ ಕಂಪನಿಗಳ ಪೈಕಿ 2 ಕಂಪನಿಗಳ ಮಾಲೀಕತ್ವವನ್ನು ಸೆಬಿ ಪತ್ತೆ ಮಾಡಿರಲಿಲ್ಲ. ಆ ಎರಡು ಕಂಪನಿಗಳ ಮಾಲೀಕತ್ವವೂ ಈಗ ಬಹಿರಂಗವಾಗಿದೆ' ಎಂದು ಆರೋಪಿಸಿದರು.

ಎಎಪಿ ಮನವಿ: ಅದಾನಿ ಕಂಪನಿ ವಿರುದ್ಧ ಕೇಳಿಬಂದಿರುವ ಹೊಸ ಆರೋಪಗಳನ್ನು ಸುಪ್ರೀಂಕೋರ್ಟ್ ಗಂಭೀರವಾಗಿ ಪರಿಗಣಿಸಿ, ಕಂಪನಿ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಆಮ್ ಆದ್ಮಿ ಪಕ್ಷ (ಎಎಪಿ) ನಾಯಕ ಸಂಜಯ್ ಸಿಂಗ್ ಮನವಿ ಮಾಡಿದ್ದಾರೆ.

'ದೇಶದ ಪ್ರಜಾಪ್ರಭುತ್ವ ಸಂವಿಧಾನ ರಕ್ಷಣೆ ಗುರಿ'

ಮುಂಬೈ (ಪಿಟಿಐ): 'ದೇಶದಲ್ಲಿ ಪ್ರಜಾಪ್ರಭುತ್ವ, ಸಂವಿಧಾನವನ್ನು ರಕ್ಷಿಸಲು ನಾವು ಒಂದುಗೂಡಿದ್ದೇವೆ. ಬಿಜೆಪಿಯನ್ನು ಎದುರಿಸಲು ಸಮಾನ ಕಾರ್ಯಕ್ರಮ ರೂಪಿಸಲಿದ್ದೇವೆ' ಎಂದು 'ಇಂಡಿಯಾ' ಮೈತ್ರಿಕೂಟದ ನಾಯಕರು ಗುರುವಾರ ಇಲ್ಲಿ ಘೋಷಿಸಿದರು.

'ಇಂಡಿಯಾ' ನಾಯಕರ ಎರಡು ದಿನದ ಸಭೆ ಇಲ್ಲಿನ ತಾರಾ ಹೋಟೆಲ್‌ನಲ್ಲಿ ಆರಂಭವಾಯಿತು. 'ದೇಶದ ಏಕತೆ, ಸಾರ್ವಭೌಮತೆ ಬಲಪಡಿಸುವುದು ಈಗಿನ ತುರ್ತು ಅಗತ್ಯ' ಎಂದು, ಬಿಹಾರ ಮಾಜಿ ಡಿಸಿಎಂ ಲಾಲು ಪ್ರಸಾದ್ ಹೇಳಿದರು.

ರೈತರ ಕಲ್ಯಾಣ, ನಿರುದ್ಯೋಗ, ಬಡತನ ನಿರ್ಮೂಲನೆ ಸಮಸ್ಯೆಗಳಿಗೆ ಪರಿ ಹಾರ ಒದಗಿಸಲು ಮೋದಿ ಸರ್ಕಾರ ವಿಫಲವಾಗಿದೆ. ಈ ಸರ್ಕಾರದ ವಿರುದ್ಧ ನಾವು ಒಗ್ಗಟ್ಟಿನಿಂದ ಹೋರಾಡಬೇಕಿದೆ ಎಂದು ಅವರು ಪ್ರತಿಪಾದಿಸಿದರು.

ಬಿಹಾರ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರು, 'ನಿತೀಶ್ ಯತ್ನದ ಫಲವಾಗಿ ಮೈತ್ರಿಕೂಟ ರಚನೆ ಆಗಿದ್ದು, ಈಗ ಮೂರನೇ ಸಭೆ ನಡೆಯುತ್ತಿದೆ. ಜನರಿಗೆ ಪರ್ಯಾಯವನ್ನು 'ಇಂಡಿಯಾ' ಮೈತ್ರಿಕೂಟ' ಒದಗಿಸಲಿದೆ ಎಂದರು.

ಪಿಡಿಪಿ ನಾಯಕಿ ಮೆಹಬೂಬಾ ಮುಫ್ತಿ ಅವರು, 'ಯುವಜನರು ದೇಶದ ಶಕ್ತಿ. ನೆಹರೂ ಅವರಿಂದ ಮನಮೋಹನ್ ಸಿಂಗ್‌ವರೆಗೆ ಹಲವು ನಾಯಕರು ಯುವಜನರಿಗೆ ಜೆಎನ್‌ಯು, ಇಸ್ರೊ ಅಂತಹ ಸಂಸ್ಥೆ ಕಟ್ಟಲು ಮಾರ್ಗದರ್ಶನ ನೀಡಿದರು' ಎಂದು ಹೇಳಿದರು.

'ಬಿಜೆಪಿಗೆ ಈಗಾಗಲೇ 'ಇಂಡಿಯಾ ಮೈತ್ರಿಕೂಟದ ಭೀತಿ ಆರಂಭವಾಗಿದೆ. ಇದೇ ಕಾರಣಕ್ಕೆ ಮೈತ್ರಿಕೂಟದ ಹೆಸರನ್ನು ಉಗ್ರ ಸಂಘಟನೆಗಳ ಹೆಸರಿನ ಜೊತೆಗೆ ಸಮೀಕರಿಸಲು ಯತ್ನಿಸುತ್ತಿದೆ' ಎಂದು ಎಎಪಿ ನಾಯಕ ರಾಘವ್ ಛಡ್ಡಾ ಆರೋಪಿಸಿದರು.

'ಇಂಡಿಯಾ' ಎಂಬುದು ಕೇವಲ ಪಕ್ಷಗಳ ಮೈತ್ರಿಯಲ್ಲ, ಚಿಂತನೆಗಳ ಸಂಗಮ. ದೇಶಕ್ಕೆ ಬೇಕಾಗಿರುವ ಪರಿಹಾರವನ್ನು ಈ ಮೈತ್ರಿಯು ಒದಗಿಸಲಿದೆ' ಎಂದು ಆರ್‌ಜೆಡಿ ನಯಕ ಮನೋಜಾ ಝಾ ವ್ಯಾಖ್ಯಾನಿಸಿದರು.

ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರು, ಇಂಡಿಯಾ ಮೈತ್ರಿಕೂಟಕ್ಕೆ ದೊರೆತಿರುವ ಜನರ ಸ್ಪಂದನೆಯು ಈಗಾಗಲೇ ಪ್ರಧಾನಿ ಮತ್ತು ಬಿಜೆಪಿಯಲ್ಲಿ ಭೀತಿ ಮೂಡಿಸಿದೆ ಎಂದು ಅಭಿಪ್ರಾಯಪಟ್ಟರು.

ಎನ್‌ಸಿಪಿ ಕಾರ್ಯಾಧ್ಯಕ್ಷೆ ಸುಪ್ರಿಯಾ ಸುಳೆ ಅವರು, 'ಹಣದುಬ್ಬರ ಮತ್ತು ನಿರುದ್ಯೋಗ ಸಮಸ್ಯೆಗೆ ಕಾರಣವಾಗಿರುವ ಮೋದಿ ಸರ್ಕಾರದ ನೀತಿಗಳಿಂದಾದ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಸವಾಲು ಇಂಡಿಯಾ ಮೈತ್ರಿಕೂಟದ ಮುಂದಿದೆ' ಎಂದರು.

'ಅದಾನಿ ಕಂಪನಿಗಳಲ್ಲಿ ಅಕ್ರಮ ಹೂಡಿಕೆ'

ಒಂದನೇ ಪುಟದಿಂದ

ಈಗ, ಜಾರ್ಜ್ ಸೊರೋಸ್ ಮತ್ತು ರಾಕ್‌ಫೆಲ್ಲರ್ ಬ್ರದರ್ಸ್ ಸ್ಥಾಪಿಸಿರುವ ಒಸಿಸಿಆರ್‌ಪಿ ಈ ಆರೋಪ ಮಾಡಿದೆ.

ಸಮೂಹದ ಕಂಪನಿಗಳ ಷೇರುಗಳ ಬೆಲೆ ಹೆಚ್ಚಿಸುವ ಉದ್ದೇಶದಿಂದ ಅದಾನಿ ಸಮೂಹದ ಪ್ರವರ್ತಕರ ಕುಟುಂಬದ ಪಾಲುದಾರರು ನಿರ್ವಹಣೆ ಮಾಡುತ್ತಿದ್ದ ಎರಡು ನಿಧಿಗಳ ಮೂಲಕ 2013ರಿಂದ 2018ರ ಅವಧಿಯಲ್ಲಿ ಹೂಡಿಕೆ ಮಾಡಲಾಗಿದೆ. ಈ ಅವಧಿಯಲ್ಲಿಯೇ ಅದಾನಿ ಸಮೂಹವು ದೇಶದ ಅತಿದೊಡ್ಡ ಮತ್ತು ಶಕ್ತಿಶಾಲಿ ಉದ್ಯಮವಾಗಿ ಬೆಳೆಯಿತು ಎಂದು ವರದಿಯು ಹೇಳಿದೆ.

ಅದಾನಿ ಸಮೂಹದ ಸಂಸ್ಥಾಪಕ ಗೌತಮ್ ಅದಾನಿ ಮತ್ತು ಅವರ ಅಣ್ಣ ವಿನೋದ್ ಅದಾನಿ ಅವರು ಮಾತ್ರ ಮಾರಿಷಸ್‌ನ ಈ ಎರಡು ನಿಧಿಗಳ ಫಲಾನುಭವಿಗಳು ಎಂದು ವರದಿಯಲ್ಲಿ ವಿವರಿಸಲಾಗಿದೆ.

ಅದಾನಿ ಸಮೂಹವು ಷೇರು ಮಾರುಕಟ್ಟೆಯಲ್ಲಿ ಶಂಕಾಸ್ಪದ ವಹಿವಾಟು ನಡೆಸುತ್ತಿದೆ ಎಂಬುದಕ್ಕೆ ಸಂಬಂಧಿಸಿದ ಸಾಕ್ಷ್ಯಗಳನ್ನು ಸೆಬಿಗೆ 2014ರಲ್ಲಿಯೇ ಸಲ್ಲಿಸಲಾಗಿತ್ತು ಎಂದು ಒಸಿಸಿಆರ್‌ಪಿ ಪತ್ರವೊಂದನ್ನು ಉಲ್ಲೇಖಿಸಿ ಹೇಳಿದೆ.

ಯು.ಕೆ. ಸಿನ್ಹಾ ಅವರು 2014ರಲ್ಲಿ ಸೆಬಿಯ ಅಧ್ಯಕ್ಷರಾಗಿದ್ದರು. ಈಗ ಅವರು, ಅದಾನಿ ಸಮೂಹದ ಮಾಲೀಕತ್ವದಲ್ಲಿರುವ ಎನ್‌ಡಿ ಟಿವಿಯ ನಿರ್ದೇಶಕ ಮತ್ತು ಅಧ್ಯಕ್ಷರಾಗಿದ್ದಾರೆ.

ರಹಸ್ಯ ಹೂಡಿಕೆದಾರರು ಅದಾನಿ ಷೇರುಗಳನ್ನು ಖರೀದಿಸಿರುವ ಮತ್ತು ಮಾರಾಟ ಮಾಡಿರುವ ಎರಡು ಪ್ರಕರಣಗಳು ಪತ್ತೆಯಾಗಿವೆ. ಅದಾನಿ ಸಮೂಹವು ಪಡೆದುಕೊಂಡಿರುವ ವಿವಿಧ ರೀತಿಯ ತೆರಿಗೆ ಪ್ರಯೋಜನಗಳು ಮತ್ತು ಸಮೂಹದ ಆಂತರಿಕ ಇ-ಮೇಲ್‌ಗಳನ್ನು ಪರಿಶೀಲನೆ ನಡೆಸಿದಾಗ ಈ ಅಂಶವು ಬೆಳಕಿಗೆ ಬಂದಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

> **ಈ ವರದಿಗಳು ಅನುಮಾನಾಸ್ಪದ, ಹಾನಿಯುಂಟುಮಾಡುವ ಮತ್ತು ಹಗೆತನದಿಂದ ಕೂಡಿದ್ದು, ವರದಿಯಲ್ಲಿರುವ ಎಲ್ಲ ಆರೋಪಗಳನ್ನು ನಿರಾಕರಿಸುತ್ತೇವೆ**
> **ಅದಾನಿ ಸಮೂಹ**

ಅರಬ್ ಸಂಯುಕ್ತ ಸಂಸ್ಥಾನದ ನಾಸರ್ ಅಲಿ ಶಬಾನ್ ಅಹ್ಲಿ ಮತ್ತು ತೈವಾನ್‌ನ ಚಾಂಗ್ ಚುಂಗ್–ಲಿಂಗ್ ಎನ್ನುವವರು ಮಾರಿಷಸ್ ಮೂಲದ ನಿಧಿಗಳ ಮೂಲಕ ಅದಾನಿ ಸಮೂಹದ ಷೇರುಗಳಲ್ಲಿ ಹಲವು ವರ್ಷಗಳವರೆಗೆ ಸಾವಿರಾರು ಕೋಟಿ ಮೊತ್ತದ ವಹಿವಾಟು ನಡೆಸಿದ್ದಾರೆ. ಮಾರಿಷಸ್ ಮೂಲದ ಈ ನಿಧಿಗಳನ್ನು ವಿನೋದ್ ಅದಾನಿ ಅವರು ನಡೆಸುತ್ತಿರುವ ದುಬೈ ಮೂಲದ ಕಂಪನಿಯು ನಿರ್ವಹಿಸುತ್ತಿದೆ.

ಒಂದೊಮ್ಮೆ ಅಹ್ಲಿ ಮತ್ತು ಚಾಂಗ್ ಅವರು ಅದಾನಿ ಪ್ರವರ್ತಕರ ಪರವಾಗಿ ವಹಿವಾಟು ನಡೆಸಿದ್ದಾರೆ ಎಂದು ಪರಿಗಣಿಸುವುದಾದರೆ, ಅದಾನಿ ಸಮೂಹದಲ್ಲಿ ಈ ಇಬ್ಬರು ಹೊಂದಿರುವ ಷೇರುಪಾಲನ್ನು ಸೇರಿದರೆ ಒಟ್ಟು ಷೇರುಪಾಲು ಶೇ 75ರಷ್ಟನ್ನೂ ದಾಟುತ್ತದೆ.

ಭಾರತದ ಷೇರುಪೇಟೆಯಲ್ಲಿ ನೋಂದಾಯಿಸಲು ಇರುವ ನಿಯಮವನ್ನು ಇದು ಉಲ್ಲಂಘಿಸಿದೆ ಎದು ಹೇಳಿದೆ. ಕನಿಷ್ಠ ಸಾರ್ವಜನಿಕ ಷೇರುಪಾಲು (ಎಂಪಿಎಸ್) ನಿಯಮದ ಪ್ರಕಾರ ಪ್ರವರ್ತಕರು ಕಂಪನಿಯಲ್ಲಿ ಶೇ 75ಕ್ಕಿಂತ ಹೆಚ್ಚಿನ ಷೇರುಪಾಲು ಹೊಂದುವಂತಿಲ್ಲ.

ಅಹ್ಲಿ ಮತ್ತು ಚಾಂಗ್ ಅವರ ಹೂಡಿಕೆಗಳಿಗೆ ಅದಾನಿ ಕುಟುಂಬದಿಂದ ಹಣ ಬಂದಿದೆ ಎನ್ನುವುದಕ್ಕೆ ಯಾವುದೇ ಸಾಕ್ಷ್ಯಗಳಿಲ್ಲ. ಆದರೆ, ಅದಾನಿ ಷೇರುಗಳಲ್ಲಿ ಈ ಇಬ್ಬರು ವಹಿವಾಟು ನಡೆಸಿರುವುದಕ್ಕೆ ಅದಾನಿ ಸಮೂಹದ ಸಹಭಾಗಿತ್ವ ಇದೆ ಎನ್ನಲು ಸಾಕ್ಷ್ಯ ಇದೆ ಎನ್ನುವುದು ತನಿಖೆಯಿಂದ ತಿಳಿದುಬಂದಿದೆ ಎಂದು ಒಸಿಸಿಆರ್‌ಪಿ ವರದಿ ಹೇಳಿದೆ.

ಆರೋಪ ಅಲ್ಲಗಳೆದ ಸಮೂಹ

ಒಂದನೇ ಪುಟದಿಂದ

ದಶಕದ ಹಿಂದೆ ಮುಗಿದಿರುವ ಪ್ರಕರಣಗಳ ಆಧಾರದ ಮೇಲೆ ಈ ಆರೋಪಗಳನ್ನು ಮಾಡಲಾಗುತ್ತಿದೆ. ಷೇರುಗಳ ಬೆಲೆಯನ್ನು ಕೃತಕವಾಗಿ ಹೆಚ್ಚಿಸುವುದು, ಹಣವನ್ನು ವಿದೇಶಕ್ಕೆ ವರ್ಗಾಯಿಸುವುದು ಹಾಗೂ ಎಫ್‌ಪಿಐ (ವಿದೇಶಿ ಬಂಡವಾಳ ಹೂಡಿಕೆ) ಮೂಲಕ ಹೂಡಿಕೆ ಮಾಡುವುದಕ್ಕೆ ಸಂಬಂಧಿಸಿದ ಆರೋಪಗಳ ಕುರಿತು ರೆವಿನ್ಯೂ ಗುಪ್ತದಳ ಮಹಾನಿರ್ದೇಶನಾಲಯವು (ಡಿಆರ್‌ಐ) ಈಗಾಗಲೇ ತನಿಖೆ ನಡೆಸಿದೆ. ಷೇರುಗಳ ಬೆಲೆಯನ್ನು ಅಸಹಜವಾಗಿ ಹೆಚ್ಚಿಸಿಲ್ಲ ಮತ್ತು ವರ್ಗಾವಣೆಗಳು ಅನ್ವಯಿಸುವ ಕಾನೂನಿನ ರೀತಿಯಲ್ಲಿ ನಡೆದಿವೆ ಎನ್ನುವುದನ್ನು ಸ್ವತಂತ್ರ ತನಿಖಾ ಮಂಡಳಿ ಮತ್ತು ಮೇಲ್ಮನವಿ ಪ್ರಾಧಿಕಾರ ದೃಢಪಡಿಸಿವೆ. 2023ರ ಮಾರ್ಚ್‌ನಲ್ಲಿ ಸುಪ್ರೀಂ ಕೋರ್ಟ್ ಸಹ ಕಂಪನಿಯ ಪರವಾಗಿ ತೀರ್ಪು ನೀಡಿದೆ. ಹೀಗಾಗಿ ಈ ಆರೋಪಗಳಿಗೆ ಪ್ರಸ್ತುತತೆಯೇ ಇಲ್ಲ ಎಂದು ಅದಾನಿ ಸಮೂಹವು ಹೇಳಿದೆ.

ಒಸಿಸಿಆರ್‌ಪಿ ವರದಿಯಲ್ಲಿ ಹೆಸರಿಸಿರುವ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಈಗಾಗಲೇ ನಡೆಸುತ್ತಿರುವ ತನಿಖೆಯ ಭಾಗವಾಗಿದ್ದಾರೆ ಎಂದು ಸಮೂಹವು ಹೇಳಿದೆ.

ಸುಪ್ರೀಂ ಕೋರ್ಟ್ ನೇಮಿಸಿರುವ ತಜ್ಞರ ಸಮಿತಿಯ ಪ್ರಕಾರ, ಕನಿಷ್ಠ ಸಾರ್ವಜನಿಕ ಷೇರುಪಾಲು (ಎಂಪಿಎಸ್) ನಿಯಮ ಉಲ್ಲಂಘಿಸಿರುವ ಅಥವಾ ಷೇರು ಬೆಲೆಯಲ್ಲಿ ಅಸಹಜ ಏರಿಕೆ ಮಾಡಿರುವ ಬಗ್ಗೆ ಯಾವುದೇ ಸಾಕ್ಷ್ಯಗಳಿಲ್ಲ ಎಂದೂ ಪ್ರಕಟಣೆಯಲ್ಲಿ ತಿಳಿಸಿದೆ.

ಕಂಪನಿಯ ಷೇರು ಬೆಲೆಗಳನ್ನು ಕುಸಿತ ಕಾಣುವಂತೆ ಮಾಡಿ ಲಾಭ ಮಾಡಿಕೊಳ್ಳುವ ಉದ್ದೇಶದಿಂದ ಇಂತಹ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಈ ಕುರಿತು ವಿವಿಧ ತನಿಖಾ ಸಂಸ್ಥೆಗಳು ಮತ್ತು ಪ್ರಾಧಿಕಾರಗಳು ತನಿಖೆ ನಡೆಸುತ್ತಿವೆ. ಸುಪ್ರೀಂ ಕೋರ್ಟ್ ಮತ್ತು ಸೆಬಿ ಸಹ ವಿಷಯಗಳ ಮೇಲ್ವಿಚಾರಣೆ ನಡೆಸುತ್ತಿದ್ದು, ಸದ್ಯ ನಡೆಯುತ್ತಿರುವ ನಿಯಂತ್ರಣ ಪ್ರಕ್ರಿಯೆಗಳನ್ನು ಗೌರವಿಸುವುದು ಅತ್ಯಗತ್ಯ ಎಂದು ಹೇಳಿದೆ. ಸದ್ಯ ನಡೆಯುತ್ತಿರುವ ಕಾನೂನು ಪ್ರಕ್ರಿಯೆಯಲ್ಲಿ ನಾವು ಸಂಪೂರ್ಣವಾದ ನಂಬಿಕೆ ಹೊಂದಿದ್ದೇವೆ ಎಂದು ತಿಳಿಸಿದೆ.

'ಇಂಡಿಯಾ'ದತ್ತ 9 ಪಕ್ಷಗಳ ಒಲವು

ಪ್ರಜಾವಾಣಿ ವಾರ್ತೆ

ಮುಂಬೈ: ಅಸ್ಸಾಂ ಮತ್ತು ಉತ್ತರಪ್ರದೇಶದ ತಲಾ ಮೂರು ಪಕ್ಷಗಳು ಸೇರಿದಂತೆ ಒಟ್ಟು 9 ಪಕ್ಷಗಳು ಬಿಜೆಪಿ ವಿರೋಧಿ 'ಇಂಡಿಯಾ' ಮೈತ್ರಿಕೂಟದ ಭಾಗವಾಗಲು ಪ್ರಯತ್ನಿಸುತ್ತಿವೆ ಎಂದು ಮೂಲಗಳು ತಿಳಿಸಿವೆ.

ಅಸ್ತಿತ್ವದಲ್ಲಿರುವ ಪಕ್ಷಗಳ ಸಮಾಲೋಚನೆಯ ಬಳಿಕ ಇತರ ಪಕ್ಷಗಳನ್ನು ಮೈತ್ರಿಕೂಟಕ್ಕೆ ಸೇರಿಸಿಕೊಳ್ಳಬೇಕೇ ಬೇಡವೇ ಎಂಬುದನ್ನು ನಿರ್ಧರಿಸಲಾಗುವುದು ಎಂದೂ ಮೂಲಗಳು ಹೇಳಿವೆ.

ಅಸ್ಸಾಂನ ರಾಯ್‌ಜೋರ್ ದಳ, ಅಸ್ಸಾಂ ಜಾತೀಯ ಪರಿಷದ್, ಆಂಚಲಿಕ್ ಗಣ ಮೋರ್ಚಾ, ಉತ್ತರಪ್ರದೇಶದ ಮೂರು ಹಾಗೂ ಪಶ್ಚಿಮ ಬಂಗಾಳದ ಒಂದು ಪಕ್ಷ ಸೇರಿದಂತೆ ಒಟ್ಟು 9 ಪಕ್ಷಗಳು 'ಇಂಡಿಯಾ'ದ ಭಾಗವಾಗಲು ಆಸಕ್ತಿ ತೋರಿವೆ.

ಕೆಲ ದಿನಗಳ ಹಿಂದೆಯಷ್ಟೇ ಇತರ ಪಕ್ಷಗಳು 'ಇಂಡಿಯಾ'ದ ಭಾಗವಾಗಲು ಬಯಸುತ್ತಿವೆ ಎಂದು ಮೈತ್ರಿಕೂಟದ ನಾಯಕರು ಹೇಳಿದ್ದರು.

ಮುಂಬೈನಲ್ಲಿ 'ಇಂಡಿಯಾ' ಮೂರನೇ ಸಭೆ ಶುರುವಾಗುವ ಹಿಂದಿನ ದಿನವಷ್ಟೇ ಶಿವಸೇನಾದ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಮೈತ್ರಿಕೂಟಕ್ಕೆ ಹೆಚ್ಚು ಪಕ್ಷಗಳು ಸೇರ್ಪಡೆಗೊಳ್ಳಲು ಬಯಸುತ್ತಿವೆ ಎಂದು ಹೇಳಿದ್ದರು.

ಹಲವು ಪಕ್ಷಗಳ ಜತೆಗೆ ಸಂಪರ್ಕದಲ್ಲಿರುವ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು, 'ಈ ಕುರಿತು ನಾನೊಬ್ಬನೇ ನಿರ್ಧಾರ ತೆಗೆದುಕೊಳ್ಳಲಾಗದು. ಇತರ ಪಕ್ಷಗಳನ್ನು ಮೈತ್ರಿಕೂಟಕ್ಕೆ ಸೇರಿಸಿಕೊಳ್ಳುವ ಬಗ್ಗೆ ಒಮ್ಮತದ ಮೂಲಕ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ತಿಳಿಸಿದ್ದರು.

ಪಟ್ನಾದಲ್ಲಿ ನಡೆದ 'ಇಂಡಿಯಾ'ದ ಮೊದಲ ಸಭೆಗೆ 15 ಪಕ್ಷಗಳು ಚರ್ಚೆಯಲ್ಲಿ ಪಾಲ್ಗೊಂಡಿದ್ದವು. ಬೆಂಗಳೂರಿನಲ್ಲಿ 2ನೇ ಸಭೆ ನಡೆದಾಗ ಈ ಸಂಖ್ಯೆಯು 26ಕ್ಕೆ ಏರಿತ್ತು. ಮುಂಬೈನಲ್ಲಿ ನಡೆಯುತ್ತಿರುವ ಮೈತ್ರಿಕೂಟದ ಮೂರನೇ ಸಭೆಯಲ್ಲಿ ಭಾರತೀಯ ಜನರ ಮತ್ತು ಕಾರ್ಮಿಕರ ಪಕ್ಷ (ಪಿಡಬ್ಲ್ಯುಪಿ) ಸೇರಿದಂತೆ ಎರಡು ಪಕ್ಷಗಳು ಸೇರ್ಪಡೆಯಾಗಿವೆ.

ಮೂರನೇ ಸಭೆಯಲ್ಲಿ ಪಾಲ್ಗೊಳ್ಳಲು ಗುರುವಾರ ಮುಂಬೈಗೆ ಬಂದಿದ್ದ ಆರ್‌ಎಲ್‌ಡಿ ಮುಖ್ಯಸ್ಥ ಜಯಂತ್ ಚೌಧರಿ ಅವರು, 'ಮುಂದಿನ ದಿನಗಳಲ್ಲಿ ಸಮಾನ ಮನಸ್ಕ ಪಕ್ಷಗಳು ಸೇರುವ ನಿರೀಕ್ಷೆಯಿದೆ' ಎಂದು ಹೇಳಿದ್ದರು.

'ನಮಗೆ ಸ್ವಲ್ಪ ಸಮಯ ಕೊಡಿ. ಸಮಾನ ಮನಸ್ಥಿತಿಯ ಮತ್ತಷ್ಟು ಪಕ್ಷಗಳು ಮತ್ತು ನಾಯಕರು 'ಇಂಡಿಯಾ'ಕ್ಕೆ ಸೇರುವ ನಿರೀಕ್ಷೆ ಇದೆ. ಒಂದೇ ರೀತಿಯ ಸಿದ್ಧಾಂತವನ್ನು ಹೊಂದಿರುವ ಪಕ್ಷಗಳು ದೇಶದಾದ್ಯಂತ ಒಗ್ಗೂಡಲಿವೆ ಎಂಬುದನ್ನು ನಾವು ನಿರೀಕ್ಷಿಸುತ್ತಿದ್ದೇವೆ' ಎಂದೂ ಚೌಧರಿ ಸುದ್ದಿಗಾರರಿಗೆ ತಿಳಿಸಿದ್ದರು.

'ಇಂಡಿಯಾ' ಸಭೆಗೆ ಆಗಮಿಸಿದ್ದ ಸಿಪಿಎಂ ನಾಯಕ ಸೀತಾರಾಂ ಯೆಚೂರಿ, ಆರ್‌ಜೆಡಿ ನಾಯಕ ಲಾಲು ಪ್ರಸಾದ್, ಸಿಪಿಐನ ಡಿ. ರಾಜ, ಬಿಹಾರ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಒಗ್ಗಟ್ಟು ಪ್ರದರ್ಶನ ಪಿಟಿಐ ಚಿತ್ರ

'ಇಂಡಿಯಾ' ಬಲ 28ಕ್ಕೆ

ಮುಂಬೈ (ಪಿಟಿಐ): 'ಇಂಡಿಯಾ' ಮೈತ್ರಿಕೂಟದಲ್ಲಿ ಈಗ 28 ಪಕ್ಷಗಳು ಇವೆ. ಹೊಸದಾಗಿ ಮಹಾರಾಷ್ಟ್ರದ ಪೀಸಂಟ್ಸ್ ಅಂಡ್ ವರ್ಕರ್ಸ್ ಪಾರ್ಟಿ (ಪಿಡಬ್ಲುಪಿ) ಮತ್ತೊಂದು ಪಕ್ಷವು (ಹೆಸರು ಖಚಿತವಾಗಿಲ್ಲ) ಜೊತೆಗೂಡಿವೆ ಎಂದು ಮೂಲಗಳು ತಿಳಿಸಿವೆ.

ಸಾಮಾಜಿಕ ಮಾಧ್ಯಮ ಬಳಕೆಗೆ ಕ್ರಿಯಾ ಯೋಜನೆ

ಮುಂಬೈ: 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮತ್ತು ಬಿಜೆಪಿಯನ್ನು ಸಂಘಟಿತವಾಗಿ ಎದುರಿಸಲು ಸಾಮಾಜಿಕ ಮಾಧ್ಯಮ ಕ್ರಿಯಾ ಯೋಜನೆ ಸಿದ್ಧಪಡಿಸುತ್ತಿವೆ.

ಆಡಳಿತ ಪಕ್ಷದ ವಿರುದ್ಧ ಸಮರ ಸಾರಲು ಎಲ್ಲ ಪಕ್ಷಗಳ ಸಂಪನ್ಮೂಲಗಳನ್ನು ಒಟ್ಟುಗೂಡಿಸುವ ಹಾಗೂ ಒಂದೇ ರೀತಿಯ ಕಂಟೆಂಟ್‌ಗಳನ್ನು ಸಿದ್ಧಪಡಿಸುವ ಕಾರ್ಯವೂ ನಡೆಯಲಿದೆ.

ಈ ಕುರಿತು 'ಇಂಡಿಯಾ' ಮೈತ್ರಿಕೂಟದ ಪಕ್ಷಗಳ ಸಾಮಾಜಿಕ ಮಾಧ್ಯಮ ವಿಭಾಗಗಳ ಸಂಯೋಜಕರು ಮತ್ತು ಮುಖ್ಯಸ್ಥರು ಮುಂಬೈನಲ್ಲಿ ಈ ವಾರಾಂತ್ಯದಲ್ಲಿ ಭೇಟಿಯಾಗಿ ಚರ್ಚಿಸಲಿದ್ದಾರೆ.

ಎಫ್‌ಸಿ ಯುನೈಟೆಡ್ ತಂಡಕ್ಕೆ ಗೆಲುವು

ಬೆಂಗಳೂರು: ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 1–0 ಯಿಂದ ರೂಟ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಯುನೈಟೆಡ್ ತಂಡದ ಚೆಸ್ಟರ್ ಪೌಲ್ ಲಿಂಗ್ಡೊ 14ನೇ ನಿಮಿಷದಲ್ಲಿ ಗೋಲು ದಾಖಲಿಸಿ, ಗೆಲುವಿನ ರೂವಾರಿಯಾದರು.

ಮತ್ತೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು 4–1ರಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಸೋಲಿಸಿತು. ಸ್ಪೋರ್ಟಿಂಗ್ ತಂಡದ ಪರ ಆರಿಫ್ ಶೇಖ್ (19 ಮತ್ತು 45 + 4ನೇ) ಎರಡು ಗೋಲು ಗಳಿಸಿ ಮಿಂಚಿದರು. ಅದೇ ತಂಡದ ಅಪ್ಪು ಆರೋಗ್ಯಸ್ವಾಮಿ (52ನೇ), ನಿರ್ಮಲ್ ಸಿಂಗ್ ಬಿಶ್ತ್ (87ನೇ) ತಲಾ ಒಂದು ಗೋಲು ದಾಖಲಿಸಿದರು. ಆರ್. ಪ್ರದೀಪ್ (4ನೇ) ರೆಬೆಲ್ಸ್ ಪರ ಏಕೈಕ ಗೋಲು ತಂದಿತ್ತರು.

ಜಯರಾಮ್

ಪೀಟರ್ ಲೋಬೊ

ರಣಜಿ: ಮಾಜಿ ಆಟಗಾರರಾದ ಪೀಟರ್, ಜಯರಾಮ್ ನಿಧನ

ಬೆಂಗಳೂರು: ಕರ್ನಾಟಕ ರಣಜಿ ಕ್ರಿಕೆಟ್ ತಂಡದ ಮಾಜಿ ಆಟಗಾರ ಎಚ್. ಜಯರಾಮ್ (72) ಗುರುವಾರ ಬೆಂಗಳೂರಿನಲ್ಲಿ ನಿಧನರಾದರು.

1975–77ರ ಅವಧಿಯಲ್ಲಿ ಅವರು ರಣಜಿ ಪಂದ್ಯಗಳನ್ನು ಆಡಿದ್ದರು. 8 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದರು.

ಪೀಟರ್ ಲೋಬೊ: ರಣಜಿ ತಂಡದ ಇನ್ನೊಬ್ಬ ಮಾಜಿ ಆಟಗಾರ ಪೀಟರ್ ಲೋಬೊ (63) ಬೆಂಗಳೂರಿನಲ್ಲಿ ಗುರುವಾರ ನಿಧನರಾದರು. ಅವರು 1985–86ರ ಅವಧಿಯಲ್ಲಿ ರಣಜಿ ಪಂದ್ಯಗಳನ್ನು ಆಡಿದ್ದರು. ಎರಡು ಪ್ರಥಮ ದರ್ಜೆ ಪಂದ್ಯಗಳನ್ನೂ ಆಡಿದ್ದರು.

ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳಲಿರುವ ಭಾರತ ಹಾಕಿ ತಂಡಗಳಿಗೆ ಗುರುವಾರ ಬೀಳ್ಕೊಡುಗೆ ನೀಡಲಾಯಿತು –ಪ್ರಜಾವಾಣಿ ಚಿತ್ರ

ಚೆನ್ನಾಗಿ ಆಡಿ, ಚಿನ್ನ ಗೆದ್ದು ಬನ್ನಿ...

ಏಷ್ಯನ್ ಕ್ರೀಡಾಕೂಟಕ್ಕೆ ತೆರಳಲಿರುವ ಭಾರತ ಹಾಕಿ ತಂಡಗಳಿಗೆ ಬೀಳ್ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಕಿ ತಾರೆಯರ ಕಲರವ, ಅವರ ಕುಟುಂಬ ಸದಸ್ಯರಿಗೆ ಸನ್ಮಾನ, ಸಂಗೀತದ ವೈಭವ, ನೆರಳು ಬೆಳಕು ಮೂಡಿಸಿದ ಚಿತ್ತಾರ, ಮನರಂಜಿಸಿದ ಕಲಾವಿದರ ನೃತ್ಯ ವೈಭವ, ಗಣ್ಯರಿಂದ ಶುಭಹಾರೈಕೆ...

ಚೀನಾದ ಹಾಂಗ್‌ಝೌನಲ್ಲಿ ನಡೆಯುವ ಏಷ್ಯನ್ ಕ್ರೀಡಾಕೂಟಕ್ಕೆ ತೆರಳಲಿರುವ ಭಾರತ ಪುರುಷ ಮತ್ತು ಮಹಿಳಾ ಹಾಕಿ ತಂಡಗಳಿಗೆ ಹಾಕಿ ಇಂಡಿಯಾ (ಎಚ್‌ಐ) ಗುರುವಾರ ಇಲ್ಲಿ ಆಯೋಜಿಸಿದ್ದ ವರ್ಣರಂಜಿತ ಬೀಳ್ಕೊಡುಗೆ ಸಮಾರಂಭದಲ್ಲಿ ಕಂಡುಬಂದ ದೃಶ್ಯಗಳಿವು.

ಬೆಂಗಳೂರಿನ ಎಸ್‌ಎಐ ಕೇಂದ್ರದಲ್ಲಿ ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿರುವ ಆಟಗಾರರಿಗೆ ಒಂದು ದಿನವನ್ನು ತಮ್ಮ ಕುಟುಂಬ ಸದಸ್ಯರೊಂದಿಗೆ ಕಳೆಯುವ ಅವಕಾಶವನ್ನು ಈ ಕಾರ್ಯಕ್ರಮ ಒದಗಿಸಿಕೊಟ್ಟಿತು. ಆಟಗಾರರ ಶಿಬಿರ ಮತ್ತೆ ಮುಂದುವರಿಯಲಿದ್ದು, ಉಭಯ ತಂಡಗಳು ಸೆ.19ಕ್ಕೆ ಹಾಂಗ್‌ಝೌಗೆ ಪ್ರಯಾಣಿಸಲಿವೆ. ಏಷ್ಯನ್ ಕ್ರೀಡಾಕೂಟ ಸೆ.23 ರಿಂದ ಅ.8ರ ವರೆಗೆ ನಡೆಯಲಿದೆ.

ಏಷ್ಯನ್ ಗೇಮ್ಸ್‌ಗೆ ತಲಾ 18 ಸದಸ್ಯರ ಭಾರತ ಪುರುಷ ಮತ್ತು ಮಹಿಳಾ ತಂಡಗಳನ್ನು ಇದೇ ವೇಳೆ ಪ್ರಕಟಿಸಲಾಯಿತು. ತಂಡದ ಸದಸ್ಯರಿಗೆ ಅವರ ಕುಟುಂಬ ಸದಸ್ಯರ ಸಮ್ಮುಖದಲ್ಲಿ ಸಮವಸ್ತ್ರ ನೀಡಿದ್ದು ವಿಶೇಷ. ಮಹಿಳಾ ತಂಡದ ಎಲ್ಲರ ಕುಟುಂಬ ಸದಸ್ಯರು ಹಾಜರಿದ್ದರೆ, ಪುರುಷರ ತಂಡದ ಕೆಲವರ ಕುಟುಂಬ ಸದಸ್ಯರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

'ಇದು ನಿಜಕ್ಕೂ ಅದ್ಭುತ ಕಾರ್ಯಕ್ರಮ. ಕುಟುಂಬದ ಸದಸ್ಯರನ್ನು ಸೇರಿಸಿಕೊಂಡು ಈ ರೀತಿ ಸ್ಮರಣೀಯ ಬೀಳ್ಕೊಡುಗೆ ನೀಡಿರುವುದು ಏಷ್ಯನ್ ಗೇಮ್ಸ್‌ಗೆ ಮುನ್ನ ನಮಗೆ ಹೆಚ್ಚಿನ ಹುರುಪು ನೀಡಿದೆ' ಎಂದು ನಾಯಕ ಹರ್ಮನ್‌ಪ್ರೀತ್ ಸಿಂಗ್ ಹೇಳಿದರು.

> **ನಮ್ಮ ತಂಡ ಸಮತೋಲನದಿಂದ ಕೂಡಿದ್ದು, ಏಷ್ಯನ್ ಗೇಮ್ಸ್‌ನಲ್ಲಿ ಸಹಜ ಆಟವಾಡುವಲ್ಲಿ ಯಶಸ್ವಿಯಾದರೆ ಚಿನ್ನದ ಪದಕ ಗೆಲ್ಲಬಲ್ಲೆವು.**
> **ಮನ್‌ಪ್ರೀತ್ ಸಿಂಗ್**
> ಮಿಡ್‌ಫೀಲ್ಡರ್

ಏಷ್ಯನ್ ಗೇಮ್ಸ್ ಹಾಕಿ ಟೂರ್ನಿಯಲ್ಲಿ ಅಂಪೈರ್ ಮತ್ತು ತಾಂತ್ರಿಕ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಲು ಆಯ್ಕೆಯಾಗಿರುವ ಭಾರತದ ನಾಲ್ವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಎಚ್‌ಐ ಅಧ್ಯಕ್ಷ ದಿಲೀಪ್ ಟಿರ್ಕೆ ಮಾತನಾಡಿ, 'ಭಾರತದಲ್ಲಿ ಹಾಕಿ ಕ್ರೀಡೆಯ ಬೆಳವಣಿಗೆ ಸರಿಯಾದ ಹಾದಿಯಲ್ಲೇ ಸಾಗುತ್ತಿದ್ದು, ನಾವು ಆಡುತ್ತಿದ್ದ ಕಾಲಕ್ಕೆ ಹೋಲಿಸಿದರೆ ಈಗಿನ ಆಟಗಾರರು ಶ್ರೇಷ್ಠ ಪ್ರದರ್ಶನ ನೀಡುತ್ತಿದ್ದಾರೆ. ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದು ಒಲಿಂಪಿಕ್ಸ್‌ಗೆ ನೇರ ಅರ್ಹತೆ ಪಡೆಯುವ ಗುರಿ ನಮ್ಮದು' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಎಚ್‌ಐ ಪ್ರಧಾನ ಕಾರ್ಯದರ್ಶಿ ಭೋಲಾನಾಥ್ ಸಿಂಗ್, ಒಡಿಶಾ ಕ್ರೀಡಾ ಸಚಿವ ತುಷಾರ್‌ಕಾಂತಿ ಬೆಹೆರಾ, ಹಾಕಿ ಕರ್ನಾಟಕದ ಮಹಾಪ್ರಧಾನ ಕಾರ್ಯದರ್ಶಿ ಎ.ಬಿ.ಸುಬ್ಬಯ್ಯ, ಮಾಜಿ ಆಟಗಾರ ಸಾಬು ವರ್ಕಿ ಅವರು ಪಾಲ್ಗೊಂಡರು.

ಆಕಾಶ್‌ದೀಪ್ ಸಿಂಗ್, ಕಾರ್ತಿ ಸೆಲ್ವಂಗೆ ಕೊಕ್

ಅನುಭವಿ ಸ್ಟ್ರೈಕರ್ ಆಕಾಶ್‌ದೀಪ್ ಸಿಂಗ್ ಮತ್ತು ಯುವ ಆಟಗಾರ ಕಾರ್ತಿ ಸೆಲ್ವಂ ಅವರಿಗೆ ಏಷ್ಯನ್ ಗೇಮ್ಸ್‌ನಲ್ಲಿ ಆಡಲಿರುವ ಭಾರತ ಹಾಕಿ ತಂಡದಲ್ಲಿ ಸ್ಥಾನ ದೊರೆತಿಲ್ಲ. ಈಚೆಗೆ ಚೆನ್ನೈನಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ವೇಳೆ ತಂಡದಲ್ಲಿದ್ದ ಡಿಫೆಂಡರ್ ಜುಗ್ರಾಜ್ ಸಿಂಗ್ ಅವರನ್ನೂ ಕಡೆಗಣಿಸಲಾಗಿದೆ.

ಈ ಮೂವರ ಬದಲು ಸಂಜಯ್, ಲಲಿತ್ ಕುಮಾರ್ ಉಪಾಧ್ಯಾಯ್ ಮತ್ತು ಅಭಿಷೇಕ್ ಅವರಿಗೆ ಸ್ಥಾನ ದೊರೆತಿದೆ. 18 ಸದಸ್ಯರ ತಂಡವು ಇಬ್ಬರು ಗೋಲ್‌ಕೀಪರ್‌ಗಳು, ಐವರು ಮಿಡ್‌ಫೀಲ್ಡರ್‌ಗಳು, ಆರು ಮಂದಿ ಡಿಫೆಂಡರ್‌ಗಳು ಮತ್ತು ಐವರು ಫಾರ್ವರ್ಡ್‌ಗಳನ್ನು ಒಳಗೊಂಡಿದೆ.

ನಿರೀಕ್ಷೆಯಂತೆಯೇ ಡ್ರ್ಯಾಗ್‌ಫ್ಲಿಕ್ಕರ್ ಹರ್ಮನ್‌ಪ್ರೀತ್ ಸಿಂಗ್ ಮತ್ತು ಗೋಲ್‌ಕೀಪರ್ ಸವಿತಾ ಅವರು ಕ್ರಮವಾಗಿ ಪುರುಷರ ಹಾಗೂ ಮಹಿಳೆಯರ ತಂಡಗಳನ್ನು ಮುನ್ನಡೆಸಲಿದ್ದಾರೆ.

ಏಷ್ಯನ್ ಗೇಮ್ಸ್‌ಗೆ ಭಾರತ ತಂಡಗಳು: ಪುರುಷರು: ಹರ್ಮನ್‌ಪ್ರೀತ್ ಸಿಂಗ್ (ನಾಯಕ), ಹಾರ್ದಿಕ್ ಸಿಂಗ್ (ಉಪನಾಯಕ), ಪಿ.ಆರ್.ಶ್ರೀಜೇಶ್, ಕೃಷನ್ ಬಿ. ಪಾಠಕ್, ವರುಣ್ ಕುಮಾರ್, ಅಮಿತ್ ರೋಹಿದಾಸ್, ಜರ್ಮನ್‌ಪ್ರೀತ್ ಸಿಂಗ್, ಸಂಜಯ್, ಸುಮಿತ್, ನೀಲಕಂಠ ಶರ್ಮಾ, ಮನ್‌ಪ್ರೀತ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್, ಶಂಶೇರ್ ಸಿಂಗ್, ಅಭಿಷೇಕ್, ಗುರ್ಜಂತ್ ಸಿಂಗ್, ಮನ್‌ದೀಪ್ ಸಿಂಗ್, ಸುಖ್‌ಜೀತ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ್

ಮಹಿಳೆಯರು: ಸವಿತಾ (ನಾಯಕಿ), ದೀಪ್ ಗ್ರೇಸ್ ಎಕ್ಕಾ (ಉಪನಾಯಕಿ), ಬಿಚು ದೇವಿ ಖರಿಬಮ್, ದೀಪಿಕಾ, ಲಾಲ್‌ರೆಮ್ಸಿಯಾಮಿ, ಮೋನಿಕಾ, ನವನೀತ್ ಕೌರ್, ನೇಹಾ, ನಿಶಾ, ಸೋನಿಕಾ, ಉದಿತಾ, ಇಶಿಕಾ ಚೌಧರಿ, ವಂದನಾ ಕಟಾರಿಯ, ಸಂಗೀತಾ ಕುಮಾರಿ, ವೈಷ್ಣವಿ ವಿಠಲ್ ಫಾಲ್ಕೆ, ನಿಕ್ಕಿ ಪ್ರಧಾನ್, ಸುಶೀಲಾ ಚಾನು, ಸಲೀಮಾ ಟೇಟೆ

ಡುರಾಂಡ್: ಫೈನಲ್‌ಗೆ ಬಾಗನ್

ಕೋಲ್ಕತ್ತ (ಪಿಟಿಐ): ಎಫ್‌ಸಿ ಗೋವಾ ತಂಡವನ್ನು 2–1 ಗೋಲುಗಳಿಂದ ಮಣಿಸಿದ ಮೋಹನ್ ಬಾಗನ್ ತಂಡದವರು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್ ಪ್ರವೇಶಿಸಿದರು.

ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಬಾಗನ್ ತಂಡ, 'ಬದ್ಧ ಎದುರಾಳಿ' ಈಸ್ಟ್ ಬೆಂಗಾಲ್ ವಿರುದ್ಧ ಪೈಪೋಟಿ ನಡೆಸಲಿದೆ. ಕೋಲ್ಕತ್ತದ ಈ ಎರಡು 'ದೈತ್ಯ' ತಂಡಗಳು 2004ರ ಫೈನಲ್‌ನಲ್ಲೂ ಎದುರಾಗಿದ್ದವು. ಆಗ ಈಸ್ಟ್ ಬೆಂಗಾಲ್ 2–1 ರಿಂದ ಗೆದ್ದಿತ್ತು. ಇವೆರಡು ತಂಡಗಳು ತಲಾ 16 ಸಲ ಡುರಾಂಡ್ ಕಪ್ ಗೆದ್ದುಕೊಂಡಿವೆ.

ನೋಅ ಸದೌಯಿ ಅವರು ಸೆಮಿಫೈನಲ್ ಪಂದ್ಯದ 23ನೇ ನಿಮಿಷದಲ್ಲಿ ಗೋಲು ಗಳಿಸಿ ಗೋವಾ ತಂಡಕ್ಕೆ ಮುನ್ನಡೆ ದೊರಕಿಸಿಕೊಟ್ಟರು. 42ನೇ ನಿಮಿಷದಲ್ಲಿ ಪೆನಾಲ್ಟಿ ಶೂಟೌಟ್ ಅವಕಾಶದಲ್ಲಿ ಬಾಗನ್ ತಂಡದ ಜೇಸನ್ ಕಮಿಂಗ್, ಚೆಂಡನ್ನು ಗುರಿ ಸೇರಿಸಿ ಪಂದ್ಯವನ್ನು ಸಮಸ್ಥಿತಿಗೆ ತಂದರು. 61ನೇ ನಿಮಿಷದಲ್ಲಿ ಅರ್ಮಾಂಡೊ ಸಾದಿಕು ಗೆಲುವಿನ ಗೋಲು ತಂದುಕೊಟ್ಟರು. ಸಂದೇಶ್ ಜಿಂಗನ್ ನೀಡಿದ ಪಾಸ್‌ನಲ್ಲಿ ಅಲ್ಬೇನಿಯದ ಆಟಗಾರ ಸಾದಿಕು, ಚೆಂಡನ್ನು ಗುರಿ ಸೇರಿಸುವಲ್ಲಿ ಯಶಸ್ವಿಯಾದರು. ಕಳೆದ ಕೆಲ ಪಂದ್ಯಗಳಲ್ಲಿ ಫಾರ್ಮ್ ಕಂಡುಕೊಳ್ಳಲು ಪರದಾಡಿದ್ದ ಅವರು ಮಹತ್ವದ ಹಣಾಹಣಿಯಲ್ಲಿ ತಂಡದ ನೆರವಿಗೆ ನಿಂತರು.

ಬಾಗನ್ ತಂಡ 2019ರ ಬಳಿಕ ಫೈನಲ್ ಪ್ರವೇಶಿಸಿದ್ದು ಇದೇ ಮೊದಲು. ಆ ವರ್ಷ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಗೋಕುಲಂ ಕೇರಳ ಎದುರು ಪರಾಭವಗೊಂಡಿತ್ತು.

ಫಿಡೆ ಚೆಸ್ ವಿಶ್ವಕಪ್‌ನಲ್ಲಿ ರನ್ನರ್ ಅಪ್ ಆದ ಭಾರತದ ಆರ್. ಪ್ರಜ್ಞಾನಂದ ಅವರು ಗುರುವಾರ ಪ್ರಧಾನಿ ಮೋದಿ ಅವರನ್ನು ಭೇಟಿಯಾದರು. ಈ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಹಾಕಿರುವ ಮೋದಿ 'ನೀವು ಉತ್ಕಟ ಚೆಸ್ ಪ್ರೀತಿ ಮತ್ತು ಪರಿಶ್ರಮಕ್ಕೆ ಅನ್ವರ್ಥದಂತಿದ್ದೀರಿ. ಭಾರತದ ಯುವಶಕ್ತಿ ವಿಶ್ವವನ್ನೇ ಗೆಲ್ಲಬಹುದು ಎಂಬುದನ್ನು ತೋರಿಸಿಕೊಟ್ಟಿದ್ದೀರಿ. ನಿಮ್ಮ ಬಗ್ಗೆ ಹೆಮ್ಮೆಯಿದೆ' ಎಂದಿದ್ದಾರೆ. ಪ್ರಜ್ಞಾನಂದ ಪೋಷಕರೂ ಜೊತೆಗಿದ್ದರು.

ಟಿಟಿ: ರೋಹಿತ್, ತೃಪ್ತಿಗೆ ಪ್ರಶಸ್ತಿ

ಬೆಂಗಳೂರು: ರೋಹಿತ್ ಶಂಕರ್ ಮತ್ತು ತೃಪ್ತಿ ಪುರೋಹಿತ್ ಅವರು ಬೆಳಗಾವಿಯ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ಗುರುವಾರ ಆರಂಭಗೊಂಡ 3ನೇ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 19 ವರ್ಷದೊಳಗಿನವರ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಬಾಲಕರ ಫೈನಲ್ ಪಂದ್ಯದಲ್ಲಿ ರೋಹಿತ್ 5-11, 2-11, 11-3, 9-11, 11-9, 13-11, 11-2 ರಿಂದ ವರುಣ್ ಪಿ. ಕಶ್ಯಪ್ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ರೋಹಿತ್ ಅವರು ಪಿ. ಯಶವಂತ್ ಅವರನ್ನು, ವರುಣ್ ಅವರು ಕೆ.ಜೆ. ಆಕಾಶ್ ಅವರನ್ನು ಸೋಲಿಸಿದ್ದರು.

ಬಾಲಕಿಯರ ಫೈನಲ್ ಪಂದ್ಯದಲ್ಲಿ ತೃಪ್ತಿ 7-11, 11-6, 11-6, 5-11, 11-8, 7-11, 11-8ರಿಂದ ದೇಶ್ನಾ ಎಂ. ವಂಶಿಕಾ ಅವರನ್ನು ಪರಾಭವಗೊಳಿಸಿದರು.

ವೃತ್ತಿಪರ ಕೋರ್ಸ್: ಕ್ರೀಡಾ ಕೋಟಾ ನಿಯಮ ಬದಲು

ಬೆಂಗಳೂರು: ಕ್ರೀಡಾ ಕೋಟಾದ ಮೂಲಕ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಇರುವ ನಿಯಮಗಳನ್ನು ಬದಲಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಕ್ರೀಡಾ ವಿದ್ಯಾರ್ಥಿಗಳು ಸಿಇಟಿಗೆ ಹಾಜರಾಗಬೇಕು. ಪಿಯು ಸೇರಿದಂತೆ ಹಿಂದಿನ ಮೂರು ವರ್ಷಗಳ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿರಬೇಕು. ಎರಡರಲ್ಲಿ ಅತ್ಯುತ್ತಮ ಕ್ರೀಡಾ ಪ್ರದರ್ಶನ ನೀಡಿರಬೇಕು ಎಂದು ಹೊಸ ನಿಯಮಗಳನ್ನು ಅಳವಡಿಸಲು ನಿರ್ಧರಿಸಲಾಗಿದೆ. ಈ ನಿಯಮವನ್ನು 2024–25ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ತರಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಮಾಹಿತಿ ನೀಡಿದರು.

ಕ್ರೀಡಾ ಕೋಟಾದಡಿ ವೈದ್ಯಕೀಯದಲ್ಲಿ ಏಳು, ದಂತ ವೈದ್ಯಕೀಯದಲ್ಲಿ ಐದು ಮತ್ತು ಎಂಜಿನಿಯರಿಂಗ್‌ನಲ್ಲಿ 165 ಸೀಟುಗಳು ಲಭ್ಯವಿವೆ. ಕ್ರೀಡಾ ಕೋಟಾ ಪರಿಗಣಿಸುವಾಗ ಒಲಿಂಪಿಕ್ಸ್ ಅಥವಾ ಪ್ಯಾರಾ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಪಡೆದರೆ ಗರಿಷ್ಠ 100 ಅಂಕ, ಒಲಿಂಪಿಕ್ಸ್ ಅಥವಾ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದರೆ 97 ಅಂಕ ನೀಡಲಾಗುತ್ತದೆ. ವಿಶ್ವಕಪ್, ವಿಶ್ವ ಚಾಂಪಿಯನ್‌ಶಿಪ್, ಏಷ್ಯನ್ ಆಟಗಳು, ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಭಾಗವಹಿಸಿದವರನ್ನೂ ಕೋಟಾದ ಅಡಿ ಪರಿಗಣಿಸಲಾಗುತ್ತಿದೆ.

ಜತೆಗೆ, ಪ್ರಸ್ತುತ 8ರಿಂದ 12ನೇ ತರಗತಿಗಳಲ್ಲಿ ವಿದ್ಯಾರ್ಥಿಗಳು ತೋರಿದ ಕ್ರೀಡಾ ಸಾಧನೆಗಳನ್ನು ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಪರಿಗಣಿಸಲಾಗುತ್ತಿದೆ. 8ನೇ ತರಗತಿ ಇದ್ದಾಗ ಕ್ರೀಡೆಯಲ್ಲಿ ಭಾಗವಹಿಸಿ ಪದಕ ಗೆದ್ದ ವಿದ್ಯಾರ್ಥಿಯನ್ನು ಕ್ರೀಡಾ ಕೋಟಾದಡಿ ಪರಿಗಣಿಸುವುದು ಎಷ್ಟು ಸೂಕ್ತ ಎನ್ನುವ ಚರ್ಚೆಗಳು ನಡೆದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಮಿತಿ ರಚಿಸಿತ್ತು. ಸಮಿತಿ ಶಿಫಾರಸಿನಂತೆ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಅವರು ವಿವರಿಸಿದರು.

ಏಷ್ಯಾ ಕಪ್ ಕ್ರಿಕೆಟ್: ಲಂಕಾ ಶುಭಾರಂಭ, ಸಮರವಿಕ್ರಮ, ಚರಿತ ಅರ್ಧಶತಕ

ಪಥಿರಾಣ ದಾಳಿ: ಬಾಂಗ್ಲಾ ತತ್ತರ

ಶ್ರೀಲಂಕಾ ತಂಡದ ಆಟಗಾರರ ಸಂಭ್ರಮ –ಎಪಿ/ಪಿಟಿಐ ಚಿತ್ರ

ಪಲೇಕೆಲೆ(ಪಿಟಿಐ): ವೇಗಿ ಮಥೀಷ ಪಥಿರಾಣ ಅವರ ಅಮೋಘ ಬೌಲಿಂಗ್ ಬಲದಿಂದ ಶ್ರೀಲಂಕಾ ತಂಡವು ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಬಿ ಗುಂಪಿನ ಪಂದ್ಯದಲ್ಲಿ ಜಯಿಸಿತು.

ಪಲೇಕೆಲೆ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಲಂಕಾ ತಂಡವು 5 ವಿಕೆಟ್‌ಗಳಿಂದ ಬಾಂಗ್ಲಾದೇಶ ಎದುರು ಗೆದ್ದಿತು.

ಟಾಸ್ ಗೆದ್ದ ಬಾಂಗ್ಲಾದೇಶ ಬ್ಯಾಟಿಂಗ್ ಮಾಡಿತು. ಮಥೀಷ (32ಕ್ಕೆ4) ದಾಳಿಯ ಮುಂದೆ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ. 42.4 ಓವರ್‌ಗಳಲ್ಲಿ 164 ರನ್ ಗಳಿಸಿ ಆಲೌಟ್ ಆಯಿತು.

ನಜ್ಮುಲ್ ಹುಸೇನ್ ಶಾಂತೊ (89; 122ಎ, 4X7) ಏಕಾಂಗಿ ಹೋರಾಟದ ಬಲದಿಂದ ಬಾಂಗ್ಲಾ ತಂಡವು ಈ ಮೊತ್ತ ಗಳಿಸಲು ಸಾಧ್ಯವಾಯಿತು. ರಜಿತಾ ಹಾಕಿದ ಐದನೇ ಓವರ್‌ನಲ್ಲಿ ಶಾಂತೊ ಅವರ ಕ್ಯಾಚ್ ಕೈಚೆಲ್ಲಿದ ಶನಾಕ ಜೀವದಾನ ನೀಡಿದರು. ಅದನ್ನು ಶಾಂತೊ ಸಮರ್ಥವಾಗಿ ಬಳಸಿಕೊಂಡರು.

ಕಳೆದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಮಿಂಚಿದ್ದ ಮಥೀಷ ತಮ್ಮ ತವರಿನ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದರು. ಬಾಂಗ್ಲಾ ತಂಡದ ಮಧ್ಯಮ ಕ್ರಮಾಂಕದ ಬ್ಯಾಟರ್ ಶಕೀಬ್ ಅಲ್ ಹುಸೇನ್, ಮುಷ್ಫಿಕುರ್ ರಹೀಂ, ತಸ್ಕಿನ್ ಅಹಮದ್ ಮತ್ತು ಮುಸ್ತಫಿಜುರ್ ರೆಹಮಾನ್ ವಿಕೆಟ್‌ಗಳನ್ನು ತಮ್ಮದಾಗಿಸಿಕೊಂಡರು.

ಸಾಧಾರಣ ಗುರಿ ಬೆನ್ನಟ್ಟಿದ ಶ್ರೀಲಂಕೆಗೆ ಸುಲಭ ಜಯ ಒಲಿಯಲಿಲ್ಲ. ಆರಂಭದಲ್ಲಿಯೇ ಆಘಾತ ಅನುಭವಿಸಿತು. ಹತ್ತು ಓವರ್ ಮುಗಿಯುವುದರೊಳಗೆ 43 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಮಧ್ಯಮ ಕ್ರಮಾಂಕದ ಬ್ಯಾಟರ್ ಸದೀರ ಸಮರವಿಕ್ರಮ (54; 77ಎ, 4X6) ಮತ್ತು ಚರಿತ ಅಸಲಂಕಾ (ಅಜೇಯ 62; 92ಎ, 4X6, 6X1) ತಾಳ್ಮೆಯಿಂದ ಬ್ಯಾಟಿಂಗ್ ಮಾಡಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಇವರಿಬ್ಬರೂ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 78 ರನ್ ಸೇರಿಸಿದರು.

ಏಷ್ಯಾ ಕಪ್ 2023

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 42.4 ಓವರ್‌ಗಳಲ್ಲಿ 164 (ನಜ್ಮುಲ್ ಹುಸೇನ್ ಶಾಂತೊ 89, ತೌಹಿದ್ ಹೃದಯ್ 20, ಮೊಹಮ್ಮದ್ ನೈಮ್ 16, ಮಹೀಷ ತೀಕ್ಷಣ 19ಕ್ಕೆ2, ಮತೀಷಾ ಪಥಿರಾಣ 32ಕ್ಕೆ4) **ಶ್ರೀಲಂಕಾ:** 39 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 165 (ಸದೀರ ಸಮರವಿಕ್ರಮ 54, ಚರಿತ ಅಸಲಂಕಾ ಔಟಾಗದೆ 62, ಶಕೀಬ್ ಅಲ್ ಹಸನ್ 29ಕ್ಕೆ2)

ಫಲಿತಾಂಶ: ಶ್ರೀಲಂಕಾ ತಂಡಕ್ಕೆ 5 ವಿಕೆಟ್‌ಗಳ ಜಯ.

2ನೇ ಸುತ್ತಿನಲ್ಲೇ ರೂಡ್ ನಿರ್ಗಮನ

ಅಮೆರಿಕ ಓಪನ್ ಟೆನಿಸ್: ಮೂರನೇ ಸುತ್ತಿಗೆ ಜೊಕೊವಿಚ್, ಶ್ವಾಂಟೆಕ್ ಲಗ್ಗೆ

ಸರ್ಬಿಯಾದ ನೊವಾಕ್ ಜೊಕೊವಿಚ್ –ಯುಎಸ್ ಓಪನ್ ಟೆನಿಸ್ 'ಎಕ್ಸ್' ಚಿತ್ರ

ನ್ಯೂಯಾರ್ಕ್ (ಎಪಿ): ಕಳೆದ ವರ್ಷದ ರನ್ನರ್ ಅಪ್ ಕ್ಯಾಸ್ಪರ್ ರೂಡ್, ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಚೀನಾದ ಝಾಂಗ್ ಝಿಹೆನ್ ಎದುರು ಬುಧವಾರ ಅನಿರೀಕ್ಷಿತ ಆಘಾತ ಅನುಭವಿಸಿದರು. ಏಳನೇ ಶ್ರೇಯಾಂಕದ ಸ್ಟಿಫಾನೊಸ್ ಸಿಸಿಪಸ್ ಕೂಡ ಅಚ್ಚರಿಯ ಸೋಲಿನೊಡನೆ ಹೊರಬಿದ್ದರು.

ಆದರೆ ಎರಡನೇ ಶ್ರೇಯಾಂಕದ ನೊವಾಕ್ ಜೊಕೊವಿಚ್, ಮಹಿಳೆಯರ ವಿಭಾಗದ ಹಾಲಿ ಚಾಂಪಿಯನ್ ಇಗಾ ಶ್ವಾಂಟೆಕ್ ಎದುರಾಳಿಗಳನ್ನು ನೇರ ಸೆಟ್‌ಗಳಲ್ಲಿ ಸದೆಬಡಿದರು. ಟೂರ್ನಿ ಆರಂಭವಾದ ಮೇಲೆ ನ್ಯೂಯಾರ್ಕ್‌ನಲ್ಲಿ ಬುಧವಾರ ಅತಿ ಹೆಚ್ಚು ಬಿಸಿಲು ಇದ್ದು ಆಟಗಾರರು ಎದುರಾಳಿಗಳ ಜೊತೆ 29 ಡಿಗ್ರಿ ಸೆಲ್ಷಿಯಸ್ ಝಳವನ್ನೂ ಎದುರಿಸ-ಬೇಕಾಯಿತು.

26 ವರ್ಷದ ಝಾಂಗ್ ಅವರ ಬಿರುಸಿನ ಫೋರ್‌ಹ್ಯಾಂಡ್ ಹೊಡೆತಗಳಿಗೆ ನಾರ್ವೆಯ ಆಟಗಾರ ರೂಡ್ ಬಳಿ ಉತ್ತರವಿರಲಿಲ್ಲ. ವಿಶ್ವ ಕ್ರಮಾಂಕದಲ್ಲಿ 67ನೇ ಸ್ಥಾನದಲ್ಲಿರುವ ಚೀನಾದ ಆಟಗಾರ 6–4, 5–7 6–2, 0–6, 6–2 ರಿಂದ ಐದನೇ ಶ್ರೇಯಾಂಕದ ಆಟಗಾರನ ಮೇಲೆ ಜಯಗಳಿಸಿದರು.

ಈ ಟೂರ್ನಿಯಲ್ಲಿ ಝಾಂಗ್ ಎರಡನೇ ಸಲ ಐದು ಸೆಟ್‌ಗಳ ಗೆಲುವನ್ನು ಪಡೆದಂತಾಗಿದೆ. ಸೋಮವಾರ ಮೊದಲ ಸುತ್ತಿನ ಪಂದ್ಯದಲ್ಲಿ ನಾಲ್ಕೂವರೆ ಗಂಟೆಗಳ ಸೆಣಸಾಡಿ ಜೆ.ಜೆ. ವೋಲ್ಫ್ ಅವರನ್ನು ಮಣಿಸಿದ್ದರು.

ಕಳೆದ ಜೂನ್‌ನಲ್ಲಿ ಫ್ರೆಂಚ್ ಓಪನ್ ಮೂರನೇ ಸುತ್ತಿನಲ್ಲಿ ಝಾಂಗ್, ಇದೇ ಎದುರಾಳಿಗೆ (ರೂಡ್) ಮಣಿದಿದ್ದರು. ರೂಡ್ ಕೊನೆಯ ಆರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ಪೈಕಿ ಮೂರರಲ್ಲಿ ಫೈನಲ್ ತಲುಪಿದ್ದಾರೆ. ರೂಡ್, ಕಳೆದ ವರ್ಷದ ಫೈನಲ್‌ನಲ್ಲಿ ಕಾರ್ಲೋಸ್ ಅಲ್ಕರಾಜ್‌ಗೆ ಸೋತಿದ್ದರು. ದಿನದ ಇನ್ನೊಂದು ಅಚ್ಚರಿಯ ಫಲಿತಾಂಶದಲ್ಲಿ ವಿಶ್ವದ 128ನೇ ಕ್ರಮಾಂಕದ ಆಟಗಾರ ಡೊಮಿನಿಕ್ ಸ್ಟ್ರಿಕರ್, ಏಳನೇ ಶ್ರೇಯಾಂಕದ ಸ್ಟಿಫಾನೋಸ್ ಸಿಸಿಪಸ್ ಅವರನ್ನು ಹೊರದೂಡಿದರು. ಅರ್ಹತಾ ಸುತ್ತಿನಿಂದ ಬಂದಿದ್ದ ಸ್ವಿಜರ್ಲೆಂಡ್‌ನ ಸ್ಟ್ರಿಕರ್ 7–5, 6–7 (2), 6–7 (5), 7–6 (6), 6–3 ರಿಂದ ಜಯ ಗಳಿಸಿ ಮೂರನೇ ಸುತ್ತಿಗೆ ಮುನ್ನಡೆದರು.

ಆಸ್ಟ್ರೇಲಿಯಾ ಓಪನ್, ಫ್ರೆಂಚ್ ಓಪನ್ ಟೂರ್ನಿಗಳಲ್ಲಿ ಫೈನಲ್ ತಲುಪಿರುವ ಗ್ರೀಸ್‌ನ ಆಟಗಾರ ಸಿಸಿಪಸ್, ಫ್ಲಷಿಂಗ್ ಮಿಡೊದಲ್ಲಿ ಎಂದೂ ಮೂರನೇ ಸುತ್ತಿಗಿಂತ ಆಚೆ ಹೋಗಿಲ್ಲ. ನಾಲ್ಕನೇ ಶ್ರೇಯಾಂಕದ ಹೋಲ್ಗರ್ ರೂನ್ (ಡೆನ್ಮಾರ್ಕ್) ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದಾರೆ.

ಎರಡನೇ ಶ್ರೇಯಾಂಕದ ನೊವಾಕ್ ಜೊಕೊವಿಚ್ ಎರಡನೇ ಸುತ್ತಿನಲ್ಲಿ 6–4, 6–1, 6–1 ರಿಂದ 76ನೇ ಕ್ರಮಾಂಕದ ಬೆರ್ನಾಬೆ ಝಪಟಾ ಮಿರಾಲೆಸ್ (ಸ್ಪೇನ್) ಅವರಿಂದ ಹೋರಾಟ ಎದುರಿಸಲಿಲ್ಲ. 36 ವರ್ಷದ ಜೊಕೊ, 24ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಯತ್ನ-ದಲ್ಲಿದ್ದಾರೆ. ವಿಶ್ವದ 6ನೇ ಕ್ರಮಾಂಕದ ಜಾನಿಕ್ ಸಿನ್ನರ್ (ಇಟಲಿ) 6-4, 6-2, 6-4ರಿಂದ ಸ್ವದೇಶದ ಲೊರೆಂಜೊ ಸೊನೆಗೊ ಅವರನ್ನು ಮಣಿಸಿ ಮೂರನೇ ಸುತ್ತಿಗೆ ಮುನ್ನಡೆದರು.

ವೋಜ್ನಿಯಾಕಿ ಶುಭಾರಂಭ: ಮೂರೂವರೆ ವರ್ಷಗಳ ದೀರ್ಘ ಅವಧಿ ಬಳಿಕ ನಿವೃತ್ತಿ ತೊರೆದು ಆಡಲು ಇಳಿದಿರುವ ಕರೋಲಿನ್ ವೋಜ್ನಿಯಾಕಿ ಫ್ಲಷಿಂಗ್ ಮಿಡೊದಲ್ಲಿ ಅತ್ಯುತ್ತಮ ರೀತಿ ಪುನರಾಗಮನ ಮಾಡಿದರು. ಅವರು ಬುಧವಾರ ರಾತ್ರಿ 7–5, 7–6 (5) ರಿಂದ ಎರಡು ಬಾರಿಯ ವಿಂಬಲ್ಡನ್ ಚಾಂಪಿಯನ್ ಪೆಟ್ರಾ ಕ್ವಿಟೋವಾ ಅವರನ್ನು ಸೋಲಿಸಿದರು.

ಡೆನ್ಮಾರ್ಕ್‌ನ 33 ವರ್ಷದ ಆಟಗಾರ್ತಿ 2018ರ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದು, ಕ್ರಮೇಣ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಸ್ಥಾನಕ್ಕೂ ಏರಿದ್ದರು. ಅವರು ಮುಂದಿನ ಸುತ್ತಿನಲ್ಲಿ 2021ರ ಆಸ್ಟ್ರೇಲಿಯಾ ಓಪನ್ ಫೈನಲಿಸ್ಟ್ ಜೆನಿಫರ್ ಬ್ರಾಡಿ ಎದುರು ಆಡಲಿದ್ದಾರೆ.

ಗಾಫ್ ಮುನ್ನಡೆ: ಉತ್ತಮ ಲಯದಲ್ಲಿರುವ ಅಮೆರಿಕದ ಕೊಕೊ ಗಾಫ್ ಕಳೆದ 14 ಪಂದ್ಯಗಳಲ್ಲಿ 13ನೇ ಜಯ ದಾಖಲಿಸಿದರು. ಅವರು ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ನಡೆದ ಎರಡನೇ ಸುತ್ತಿನಲ್ಲಿ 6–2, 6–3 ರಿಂದ 16 ವರ್ಷದ ಆಟಗಾರ್ತಿ, ರಷ್ಯಾದ ಮಿರಾ ಆಂಡ್ರೀವಾ ಅವರನ್ನು 6–2, 6–3 ರಿಂದ ಸೋಲಿಸಿದರು. 19ರ ಹರೆಯದ ಗಾಫ್ ಇಲ್ಲಿ ಆರನೇ ಶ್ರೇಯಾಂಕ ಪಡೆದಿದ್ದಾರೆ.

ಅವರು ಮುಂದಿನ ಸುತ್ತಿನಲ್ಲಿ 32ನೇ ಕ್ರಮಾಂಕದ ಎಲಿಸ್ ಮೆರ್ಟೆನ್ಸ್ ಎದುರು ಆಡಲಿದ್ದಾರೆ. ಕ್ವಾರ್ಟರ್‌ಫೈ-ನಲ್ ತಲುಪಿದಲ್ಲಿ ಅವರಿಗೆ ಹಾಲಿ ಚಾಂಪಿಯನ್ ಇಗಾ ಶ್ವಾಂಟೆಕ್ ಎದುರಾಗುವ ಸಂಭವವಿದೆ.

ಅಗ್ರ ಶ್ರೇಯಾಂಕದ ಶ್ವಾಂಟೆಕ್ (ಪೋಲೆಂಡ್) ಲೂಯಿಸ್ ಆರ್ಮ್‌ಸ್ಟ್ರಾಂಗ್ ಸ್ಟೇಡಿಯಂನಲ್ಲಿ 6–3, 6–4 ರಿಂದ ಆಸ್ಟ್ರೇಲಿಯಾದ ಡೇರಿಯಾ ಸೆವಿಲ್ಲೆ ಅವರನ್ನು ಸುಲಭವಾಗಿ ಸೋಲಿಸಿದರು.

ಬಿಸಿಸಿಐಗೆ ₹ 6 ಸಾವಿರ ಕೋಟಿ

ತವರಿನ ಸರಣಿಗಳ ಮಾಧ್ಯಮ ಹಕ್ಕು ವಯಕಾಮ್ ತೆಕ್ಕೆಗೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡವು ತವರಿನಲ್ಲಿ ಆಡುವ ಸರಣಿಗಳ ಪ್ರಸಾರ ಹಕ್ಕು ಗಳನ್ನು ವಯಕಾಮ್ 18 ಸಂಸ್ಥೆಯು ₹ 6 ಸಾವಿರ ಕೋಟಿಗೆ ಖರೀದಿಸಿದೆ.

ಟೆಲಿವಿಷನ್ ಮತ್ತು ಡಿಜಿಟಲ್ ಮಾಧ್ಯಮಗಳ ಹಕ್ಕುಗಳನ್ನು ತನ್ನ ಬುಟ್ಟಿಗೆ ಹಾಕಿಕೊಂಡಿರುವ ವಯಕಾಮ್ ಸಂಸ್ಥೆಯು ಪಾರಮ್ಯ ಮೆರೆದಿದೆ. ಈ ಹಾದಿಯಲ್ಲಿ ದಿಗ್ಗಜ ಸಂಸ್ಥೆಗಳಾದ ಸ್ಟಾರ್ ಇಂಡಿಯಾ ಹಾಗೂ ಸೋನಿಯನ್ನು ಹಿಂದಿಕ್ಕಿದೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಟಿ.ವಿ. ಹಾಗೂ ಡಿಜಿಟಲ್ ಮಾಧ್ಯಮಗಳಿಗೆ ಪ್ರತ್ಯೇಕವಾಗಿ ಇ–ಬಿಡ್ ಆಹ್ವಾನಿಸಿತ್ತು. ತ್ರಿಕೋನ ಸ್ಪರ್ಧೆಯಲ್ಲಿ ವಯಕಾಮ್ ಮೇಲುಗೈ ಸಾಧಿಸಿತು.

ಮುಂದಿನ ಐದು ವರ್ಷಗಳಲ್ಲಿ ಭಾರತ ತಂಡವು ತವರಿನಲ್ಲಿ 88 ಅಂತ-ರರಾಷ್ಟ್ರೀಯ ಪಂದ್ಯಗಳನ್ನು ಆಡಲಿದೆ. ಅದರಲ್ಲಿ 25 ಟೆಸ್ಟ್, 27 ಏಕದಿನ ಮತ್ತು 36 ಟಿ20 ಪಂದ್ಯಗಳಿವೆ. ಇದರಲ್ಲಿ ಆಸ್ಟ್ರೇಲಿಯಾ 21 ಹಾಗೂ ಇಂಗ್ಲೆಂಡ್ 18 ಪಂದ್ಯಗಳಲ್ಲಿ ಆಡಲಿದೆ. ನ್ಯೂಜಿಲೆಂಡ್ 11, ದಕ್ಷಿಣ ಆಫ್ರಿಕಾ 10, ವೆಸ್ಟ್ ಇಂಡೀಸ್ 10, ಅಫ್ಗಾನಿಸ್ತಾನ 7, ಶ್ರೀಲಂಕಾ 6 ಹಾಗೂ ಬಾಂಗ್ಲಾದೇಶ 5 ಪಂದ್ಯಗಳಲ್ಲಿ ಆಡಲಿದೆ. ಇದರಲ್ಲಿ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ಆಡುವ ಪಂದ್ಯಗಳಿಗೆ ಹೆಚ್ಚು ಆದಾಯದ ನಿರೀಕ್ಷೆ ಇದೆ.

ಪ್ರತಿಯೊಂದು ಪಂದ್ಯದ ಮೌಲ್ಯವು ₹ 67.76 ಕೋಟಿ ಆಗಲಿದೆ. ಕಳೆದ ಐದು ವರ್ಷಗಳ ಅವಧಿಯಲ್ಲಿ ಪಂದ್ಯವೊಂದಕ್ಕೆ ₹ 60 ಕೋಟಿ ಲಭಿಸಿತ್ತು. ಈ ಬಾರಿ ₹ 7.76 ಕೋಟಿ ಹೆಚ್ಚು ಲಾಭವಾಗಿದೆ.

'ವಯಕಾಮ್ 18 ಸಂಸ್ಥೆಯು ಡಿಜಿಟಲ್ ಮಾಧ್ಯಮ ಹಕ್ಕುಗಳಿಗಾಗಿ ಅಂದಾಜು ₹ 3101 ಕೋಟಿ ಹಾಗೂ ಟಿ.ವಿ. ಹಕ್ಕುಗಳಿಗೆ ₹ 2862 ಕೋಟಿಗೆ ಖರೀದಿಸಿದೆ. ಹೋದ ಬಾರಿ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಡಿಜಿಟಲ್ ಪ್ರಸಾರ ಹಕ್ಕುಗಳನ್ನು ₹ 26 ಸಾವಿರ ಕೋಟಿಗೆ ವಯಕಾಮ್ ಖರೀದಿಸಿತ್ತು' ಎಂದು ಮೂಲಗಳು ತಿಳಿಸಿವೆ.

ಸೆಪ್ಟೆಂಬರ್ 22ರಿಂದ 2028ರ ಮಾರ್ಚ್ 31ರವರೆಗೆ ನಡೆಯಲಿರುವ ತವರಿನ ಪಂದ್ಯಗಳನ್ನು ವಯಕಾಮ್ ತನ್ನ ವಾಹಿನಿ ಮತ್ತು ಆ್ಯಪ್ ಮೂಲಕ ನೇರಪ್ರಸಾರ ಮಾಡಲಿದೆ.

'ಬಿಡ್ ಜಯಿಸಿದ ವಯಕಾಮ್ ಸಂಸ್ಥೆಗೆ ಅಭಿನಂದನೆಗಳು. ಟಿ.ವಿ. ಹಾಗೂ ಡಿಜಿಟಲ್ ಎರಡೂ ಮಾಧ್ಯಮಗಳ ಹಕ್ಕುಗಳು ಮುಂದಿನ ಐದು ವರ್ಷಗಳ ಅವಧಿಗೆ ವಯಕಾಮ್ ಸಂಸ್ಥೆಗೆ ದಕ್ಕಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಟ್ವೀಟ್ (ಎಕ್ಸ್) ಮಾಡಿದ್ದಾರೆ.

ಟಿಟಿ: ಯಶಸ್ವಿನಿಗೆ ಕಂಚಿನ ಪದಕ

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರು ಕ್ರೊವೇಷ್ಯಾದ-ಲ್ಲಿ ನಡೆದ ವಿಶ್ವ ಯೂತ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕಂಚಿನ ಪದಕ ಗೆದ್ದುಕೊಂಡರು.

ವಿಶ್ವ ಯೂತ್ ರ‍್ಯಾಂಕಿಂಗ್‌ನಲ್ಲಿ 18ನೇ ಸ್ಥಾನದಲ್ಲಿರುವ ಅವರು ಸೆಮಿಫೈನಲ್‌ನ ಪಂದ್ಯದಲ್ಲಿ 2–3 ರಿಂದ ಚೆಂಗ್ ಪಸ್‌ಯುವಾನ್ ಎದುರು ಸೋತರು.

ಸರೆ ಪರ ಆಡಲಿರುವ ಸುದರ್ಶನ್

ಲಂಡನ್ (ಪಿಟಿಐ): ತಮಿಳುನಾಡು ತಂಡದ ಆರಂಭಿಕ ಬ್ಯಾಟರ್ ಬಿ. ಸಾಯಿ ಸುದರ್ಶನ್ ಅವರು ಇಂಗ್ಲೆಂಡ್‌ನ ಕೌಂಟಿ ಕ್ರಿಕೆಟ್ ಚಾಂಪಿಯನ್‌ಷಿಪ್‌ನ-ಲ್ಲಿ ಈ ಋತುವಿನ ಇನ್ನುಳಿದ ಅವಧಿಗೆ ಆಡಲು ಸರೆ ಕ್ಲಬ್ ತಂಡದ ಪರ ಒಪ್ಪಂದ ಮಾಡಿಕೊಂಡಿದ್ದಾರೆ.

21 ವರ್ಷದ ಸುದರ್ಶನ್ ಅವರು ತಮಿಳುನಾಡು ಪರ ಎಂಟು ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದು, 42.71ರ ಸರಾಸರಿಯಲ್ಲಿ 598 ರನ್‌ಗಳನ್ನು ಕಲೆಹಾಕಿದ್ದಾರೆ. ಒಂದು ಅರ್ಧಶತಕ ಮತ್ತು ಎರಡು ಶತಕಗಳನ್ನು ಗಳಿಸಿದ್ದಾರೆ.

ಐಪಿಎಲ್‌ನಲ್ಲಿ ಕಳೆದ ಕೆಲ ಋತುಗಳಿಂದ ಗುಜರಾತ್ ಟೈಟನ್ಸ್ ಪರ ಆಡುತ್ತಿರುವ ಅವರು 13 ಪಂದ್ಯಗಳಿಂದ 507 ರನ್‌ಗಳನ್ನು ಪೇರಿಸಿದ್ದಾರೆ. ಈಚೆಗೆ ನಡೆದಿದ್ದ ಎಮರ್ಜಿಂಗ್ ಏಷ್ಯಾ ಕಪ್ ಟೂರ್ನಿಯಲ್ಲಿ ಅವರು ಭಾರತ 'ಎ' ತಂಡಕ್ಕೆ ಪದಾರ್ಪಣೆ ಮಾಡಿದ್ದರು.

ಪ್ರತಿಷ್ಠೆಯ ಭಾವ ನನ್ನಲ್ಲಿ ಇಲ್ಲ: ಮೊಹಮ್ಮದ್ ಶಮಿ

ಪಲೇಕೆಲೆ, ಶ್ರೀಲಂಕಾ (ಪಿಟಿಐ): ಭಾರತ ತಂಡದ ಅನುಭವಿ ವೇಗದ ಬೌಲರ್ ಮೊಹಮ್ಮದ್ ಶಮಿ ಏಷ್ಯಾ ಕಪ್ ಟೂರ್ನಿಯಲ್ಲಿ ಕಣಕ್ಕಿಳಿಯಲು ಸಿದ್ಧರಾಗಿದ್ದಾರೆ.

ಶನಿವಾರ ನಡೆಯಲಿರುವ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಅವರು ಮತ್ತು ವೇಗಿ ಜಸ್‌ಪ್ರೀತ್ ಬೂಮ್ರಾ ಆಡಲಿದ್ದಾರೆ. ಸುಮಾರು ಒಂದು ವರ್ಷದ ನಂತರ ಇಬ್ಬರೂ ಜೊತೆಯಾಗಿ ಕಣಕ್ಕಿಳಿಯುತ್ತಿರುವುದು ವಿಶೇಷ. ಬೂಮ್ರಾ ಗಾಯದ ಸಮಸ್ಯೆಯಿಂದಾಗಿ 11 ತಿಂಗಳು ಕ್ರಿಕೆಟ್‌ನಿಂದ ದೂರವುಳಿದಿದ್ದರು. ಮತ್ತೊಬ್ಬ ವೇಗಿ ಮೊಹಮ್ಮದ್ ಸಿರಾಜ್ ಕೂಡ ಅವರೊಂದಿಗೆ ಜೊತೆಗೂಡಲಿದ್ದಾರೆ.

'ಇನಿಂಗ್ಸ್‌ನ ಆರಂಭಿಕ ಅಥವಾ ಕೊನೆಯ ಹಂತದ ಓವರ್‌ಗಳನ್ನು ಬೌಲಿಂಗ್ ಮಾಡಲು ನನಗೆ ಯಾವುದೇ ಸಮಸ್ಯೆ ಇಲ್ಲ. ಪ್ರತಿಷ್ಠೆಯ ಭಾವವೂ ನನ್ನಲ್ಲಿ ಇಲ್ಲ. ಚೆಂಡು ಹೊಸದಿರಲಿ ಅಥವಾ ಹಳೆಯದಾಗಿರಲಿ ತಂಡಕ್ಕೆ ಉಪಯುಕ್ತವಾಗುವಂತೆ ಬೌಲಿಂಗ್ ಮಾಡುವುದು ನನ್ನ ಗುರಿ' ಎಂದು ಶಮಿ ಸ್ಟಾರ್ ಸ್ಪೋರ್ಟ್ಸ್ ವಾಹಿನಿಯಲ್ಲಿ ಹೇಳಿದ್ದಾರೆ.

90 ಪಂದ್ಯಗಳನ್ನು ಆಡಿರುವ ಶಮಿ 162 ವಿಕೆಟ್‌ಗಳನ್ನು ಗಳಿಸಿದ್ದಾರೆ. 5.60 ಸರಾಸರಿ ಹೊಂದಿದ್ದಾರೆ.

'ಬಿಳಿಚೆಂಡು ಮತ್ತು ಕೆಂಪು ಚೆಂಡು ಕುರಿತು ಬಹಳಷ್ಟು ಚರ್ಚೆಗಳು ನಡೆಯುತ್ತಿವೆ. ಯಾವುದೇ ಚೆಂಡಾಗಿರಲಿ ಬೌಲಿಂಗ್ ಕಷ್ಟವೇನಲ್ಲ. ಸರಿಯಾದ ಕೌಶಲದೊಂದಿಗೆ ಬೌಲಿಂಗ್ ಮಾಡಿ ಶೇ 100 ಫಲಿತಾಂಶ ಗಳಿಸುವುದು ಗುರಿ' ಎಂದು ಶಮಿ ಹೇಳಿದ್ದಾರೆ.

ಮೈಸೂರು ರೇಸ್

ಟಚ್ ಆಫ್ ಗ್ರೇ ಗೆಲ್ಲುವ ನಿರೀಕ್ಷೆ

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಮಲ್ಟಿ ಮಿಲಿಯನ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟಚ್ ಆಫ್ ಗ್ರೇ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮೆಗಾ ಸಕ್ಸಸ್ 1, ನ್ಯಾಚುರಲ್ ಪ್ಲೈ 6, ಆರ್ಮಮೆಂಟ್ 2
2ನೇ ರೇಸ್: ಸೂಪರ್ ರಫಿಯನ್ 4, ಎಕ್ಸ್‌ಟ್ರಾಆರ್ಡಿನರಿ 8, ಚಿಸಾಕ್ಸ್ 12
3ನೇ ರೇಸ್: ಸರ್ ಕ್ಯಾಲ್ಕ್ಯುಲಸ್ 7, ಬ್ರ್ಯಾಕ್‌ಸ್ಟನ್ 8, ಟ್ರಸ್ಟ್ ಬಾಂಡ್ 2
4ನೇ ರೇಸ್: ಪಾಲಿಶ್ಡ್ ಗರ್ಲ್ 8, ಸ್ಟಾರ್ ಗರ್ಲ್ 4, ಗ್ಯಾಲಕ್ಟಿಕಲ್ 11
5ನೇ ರೇಸ್: ಟಚ್ ಆಫ್ ಗ್ರೇ 1, ನೆಜಿಯಾ 10, ಗಲಹಡ್ 2
6ನೇ ರೇಸ್: ಸ್ಟಾರ್ ಅಜೀಮ್ 2, ಫಿಯರ್ಲೆಸ್ ಜೋಯಿ 3, ಪೆಟ್ಟೀಸ್ ಬಾಯ್ಸ್ 9
7ನೇ ರೇಸ್: ಐ ದಿ ಮೈಂಡ್ 2, ಯಾಸ್ಮಿನ್ ಫ್ರಮ್ ಯಾರ್ಕ್ 1, ಫೆಸೆಟ್ಸ್ ಆಫ್ ಲೈಫ್ 3

ಉತ್ತಮ ಬೆಟ್: ಸೂಪರ್ ರಫಿಯನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

WORLD'S NO.1 22 YEARS IN A ROW** MOTORCYCLE & SCOOTER COMPANY | INDIA'S FIRST 5 YEAR WARRANTY* *Conditions apply | Hero 112 MILLION MADE OF TRUST

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or CALL TOLL-FREE 1800 266 0018 or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. **As per cumulative dispatch numbers till March 2023. ##Highest sales for any 2 Wheeler Corporate Entity in the world for Calendar Year 2022 - Data source: DNA Consult & Advisory's report Assessment of Global Two Wheelers Market (CY22). Available at select dealerships. For more details please visit your nearest authorised Hero outlet. *Terms and Conditions apply.

BENGALURU - HOSUR ROAD: RT KRISHNA HERO - 9289923177. **JIGANI:** RT KRISHNA HERO - 8762860999. **BYATARAYANAPURA:** BIMAL HERO - 9289922863. **RT Nagar:** Bimal Hero - 9535327710. **Doddaballapur:** Bimal Hero - 9742202125. **RAJAJI NAGAR:** MAX HERO - 9289923023. **BANASWADI:** BHAGATH HERO - 9289922738. **HOSKOTE:** BHAGATH HERO - 8884600051. **K R PURAM:** BHAGATH HERO - 7829488706. **LALBAGH ROAD:** PRAKASH HERO - 9289922117. **PEENYA:** SAI HERO - 9289922830. **BANASHANKARI:** SAI HERO - 9289922476. **JP NAGAR:** SAI HERO - 99002 36280. **MARATHALLI:** VAAYURATHA HERO - 9289923811. **MAGADI ROAD:** POORNA HERO - 9289923212. **KAMAKSHIPALYA:** POORNA MOTORS - 9606922534. **TUMKUR:** SAI HERO - 9289922986. B.H.ROAD - SAI HERO - 7022752841. **TIPTUR:** SAI HERO - 9164840456. **KUNIGAL:** SAI HERO - 7022752858. **SHIMOGA:** MYTHRI HERO - 9289922635. SREE KARTHIK HERO - 9289922509. **CHICKMAGALUR:** NAYANA HERO - 9289922120. **SAGAR:** PRAJWAL HERO - 9289922399. **UDUPI:** SHAKTI HERO - 9821696225. **MANGALORE:** TRIBHUVAN HERO - 9289923203. WEST COAST HERO - 9289922606. **CHITRADURGA:** MAHESH HERO - 9289922126. **DAVANAGERE:** RUTVI HERO - 9289923174. PRAKASHA HERO - 9289922501. **MYSORE:** DYUTHI MYSORE HERO (B.M.HOSPITAL) - 9289922475. SHAH MYSORE HERO (NAZARBAD CITY) - 9289922518. **NANJANGUD :** DYUTHI HERO - 9742885252. **HASSAN:** VENKATESHWARA HERO - 9289922121. **CHAMARAJNAGAR:** YEPIYES HERO - 9289922828. **MANDYA:** DAYANAND HERO - 9289922123. **BELGAUM:** NAGSHANTI HERO - 9289922502 NAGSHANTI - 2 UNIT - 9289923173. **CHIKODI:** SHREE RENUKA MOTORS - 9289922884. **GOKAK:** CHINMAY HERO - 9289922673. **YADGIR:** SRI VENKATESH HERO - 9289922875. **BIDAR:** KAILASH HERO - 9289922124. **BASAVA KALYANA:** AKASH HERO - 9449337211. **GULBARGA:** SRI VENKATESH HERO - 9289922118. **BELLARY:** ANNAPOORNA HERO - 9289922125. **KOPPAL:** VIJAYA HERO - 9289922985. **SINDHANUR:** ANAND HERO - 9289922943. **HOSPET:** ANNAPOOORNA AUTOMOTIVES - 9289923165. **RAICHUR:** SRI VENKKATESHWARA HERO - 9289922944. **HAVERI:** BAHADDUR DESAI HERO - 9289922977. **SIRSI:** SHAKTI HERO - 9289922391. **HUBLI:** CHADHA HERO - 9289922119. **GADAG:** CHADHA HERO - 8050041033. BELLAD HERO - 9289922565. **DHARWAD:** BELLAD HERO - 9686204480. **BAGALKOT:** CHINMAY HERO - 9289923049. **MUDHOL:** KUMAR HERO - 9289922633. **BIJAPUR:** VIJAY HERO - 9289922122. **SINDAGI:** JOGUR MOTORS - 9289922964.

L&K | SAATCHI & SAATCHI